
# ಬೆಳ್ಳಿ ಮೋಡ

ತ್ರಿವೇಣಿ



894.814 308 3
TRI N87
ಗ್ರಂಥ ಸ್ವಾಮ್ಯ ವಿಭಾಗ

# ಬೆಳ್ಳಿ ಮೋಡ

★

ತ್ರಿವೇಣಿ

★

ತ್ರಿವೇಣಿ ಪಬ್ಲಿಕೇಷನ್ಸ್
ಚಾಮರಾಜಪುರಂ : : ಮೈಸೂರು-4
ದೂರವಾಣಿ : 20985

BELLI MODA-a social novel by Triveni, Published by Triveni Publications, Chamarajapuram, Mysore-4.

Second edition of Triveni Publications : 1987.

Copy Right

ಮೀರಾ ಹರೀಶ್ ಕುಮಾರ್

1152, ಚಾಮರಾಜಪುರಂ, ಮೈಸೂರು-4

ಮುದ್ರಕರು :

ಗುರು ಪ್ರಿಂಟರ್ಸ್, ಮೈಸೂರು-4

# ಬೆಳ್ಳಿಮೋಡ

ಮೋಹನ ಬಸ್ಸಿನಿಂದಿಳಿದ ಕೂಡಲೇ ನಾಲ್ಕಾರು ಕೂಲಿಗಳು ಅವನನ್ನು ಮುತ್ತಿಕೊಂಡರು.

"ಎಲ್ಲಿಗೆ ಹೋಗಬೇಕು, ನಿಮ್ಮ ಸಾಮಾನು ಯಾವುದು—ನಾಲ್ಕಾಣೆ ಕೊಡಿ ಸಾಕು...."

ಮೋಹನನಿಗೆ ಬಸ್ಸಿನ ಪ್ರಯಾಣ ಬೇಸರವನ್ನುಂಟುಮಾಡಿತ್ತು. ಹಿಂದಿನ ದಿನ ಮೈಸೂರಿನಿಂದ ಕಡೂರಿಗೆ ಪ್ರಯಾಣ ಮಾಡಿ, ಅಲ್ಲಿಂದ ಚಿಕ್ಕಮಗ ಳೂರಿಗೆ ಹೊರಡುವ ಬಸ್ಸು ಹಿಡಿದು ಚಿಕ್ಕಮಗಳೂರಿಗೆ ಬಂದಿದ್ದ. ಅವನಿಗೆ ಕಡೂರು, ಚಿಕ್ಕಮಗಳೂರು ಎರಡೂ ಹೊಸ ಊರುಗಳಾಗಿದ್ದವು. ಅದ ರಲ್ಲೂ ಬಸ್ಸಿನ ಪ್ರಯಾಣವನ್ನು ಅವನು ಯಾವತ್ತೂ ಮಾಡಿರಲಿಲ್ಲ. ಬಸ್ಸಿ ನಲ್ಲಿ ಕುಳಿತು ಎರಡು ಮೈಲಿ ಹೋಗುವುದರೊಳಗೆ ಅವನಿಗೆ ಹೊಟ್ಟೆ ತೊಳಸಿ ವಾಂತಿಯಾಗಿ ಬಿಡುತ್ತಿತ್ತು. ಆದುದರಿಂದಲೇ ಅವನು ಬಸ್ಸಿನ ಪ್ರಯಾಣವೆಂದರೆ ತುಂಬಾ ಹೆದರಿಕೊಳ್ಳುತ್ತಿದ್ದ. ಆದರೆ ಈಗ ನಿರ್ವಾಹ ವಿಲ್ಲದೇ ಅವನು ಕಡೂರಿನಿಂದ ಚಿಕ್ಕಮಗಳೂರಿಗೆ ಪ್ರಯಾಣ ಮಾಡಲೇ ಬೇಕಿತ್ತು. ಕಡೂರಿನಲ್ಲಿ ಬಸ್ಸು ಹತ್ತಿ ಕಿಟಕಿಯ ಬಳಿ ಇದ್ದ ಜಾಗವನ್ನು ಆಕ್ರ ಮಿಸಿಕೊಂಡಿದ್ದ. ಹೊಟ್ಟೆ ತೊಳಸಿದಾಗಲೆಲ್ಲಾ ಮೋಹನ ತಲೆಯನ್ನು ಕಿಟಕಿ ಯಿಂದಾಚೆ ಇರಿಸುತ್ತಿದ್ದ. ಅವನ ಕಷ್ಟ ನೋಡಲಾರದೇ ಸಹ ಪ್ರಯಾಣಿಕ ನೊಬ್ಬ ತನ್ನಲ್ಲಿದ್ದ ಬಣ್ಣ ಕಟ್ಟಿದ ಅಡಿಕೆಪುಡಿಯ ಸೀಸೆಯನ್ನು ತೆಗೆದು "ಇದನ್ನು ಬಾಯಿಯಲ್ಲಿ ಹಾಕಿಕೊಂಡಿರಿ ಸಾರ್. ಅಷ್ಟೊಂದು ಸಂಕಟವಿರು ವುದಿಲ್ಲ" ಎಂದಿದ್ದ.

ಮೋಹನ ಅಡಿಕೆಯನ್ನು ಯಾವಾಗಲೂ ಬಾಯಿಗೆ ಹಾಕಿಕೊಂಡವನಲ್ಲ. ಆದರೆ ಈಗ ಸಂಕಟ ತಡೆಯಲಾರದೇ ಅಡಿಕೆ ಪುಡಿಯನ್ನು ಬಾಯಿಗೆ ಎರಚಿ ಕೊಂಡಿದ್ದ. ಅಡಿಕೆಯ ನೀರನ್ನು ನುಂಗಿದಂತೆ ಅವನ ಸಂಕಟವೂ ಸ್ವಲ್ಪ ಕಡಿಮೆಯಾಗಿತ್ತು. ಅವನಿಗೆ ಊರು ಸಿಕ್ಕಿದರೆ ಸಾಕು ಎನಿಸಿಬಿಟ್ಟಿತ್ತು. ಆದರೂ ಅವನ ಕಣ್ಣುಗಳು ನಿಸರ್ಗ ಸೌಂದರ್ಯವನ್ನು ಹೀರಿಕೊಳ್ಳುತ್ತಿ ದ್ದವು. ಹಸಿರು ಮರಗಳ ನಡುವೆಯಿದ್ದ ಕೆಂಪು ಧೂಳಿನ ರಸ್ತೆ ಕ್ರಮೇಣ ಮೇಲೆ ಮೇಲೇರುತ್ತಿದ್ದುದನ್ನು ಅವನು ಗಮನಿಸಿದ್ದ. ಊರಿನ್ನೂ ನಾಲ್ಕಾರು ಫರ್ಲಾಂಗಿರುವಾಗಲೇ ಕಾಫಿ ಬೀಜವನ್ನು ಶುಚಿಮಾಡುವ ಕಟ್ಟಡವನ್ನು ನೋಡಿ

"ಸಧ್ಯ!" ಎಂದು ನಿಟ್ಟುಸಿರುಬಿಟ್ಟಿದ್ದ.

ಅಂಗಡಿಯ ಸಾಲುಗಳ ನಡುವೆ ಹಾದು ಬಸ್ಸು ತನ್ನ ಸ್ಥಳವಲ್ಲಿ ಹೋಗಿ

ನಿಂತುಕೊಂಡಿತು. ಮೋಹನ ಕೆಳಗಿಳಿದು ಸರಾಗವಾಗಿ ಉಸಿರಾಡುವುದಕ್ಕೆ ಮುಂಚೆಯೇ ಕೂಲಿಗಳ ತಗಾದೆ ಪ್ರಾರಂಭವಾಯಿತು, ಮೋಹನ ರೇಗಿ ಹೇಳಿದ.

"ಸಾಮಾನು ಯಾವುದು ಇಲ್ಲ. ಸುಮ್ಮನೆ ಗದ್ದಲ ಮಾಡಬೇಡಿ. ಇರುವ ಚಿಕ್ಕ ಸೂಟುಕೇಸನ್ನು ನಾನೇ ಹಿಡಿದುಕೊಳ್ಳುತ್ತೇನೆ."

"ಎರಡೇ ಆಣೆ ಕೊಟ್ಟು ಬಿಡಿ ಸ್ವಾಮಿ, ತಂದು ಕೊಡುತ್ತೇನೆ, ಎಲ್ಲಿಗೆ ಹೋಗಬೇಕು?"

"ಸದಾಶಿವರಾಯರ ಕಾಫಿ ಪ್ಲಾಂಟೇಷನ್ನಿಗೆ ಹೋಗಬೇಕು. ಇಲ್ಲಿಂದ ಎಷ್ಟು ಮೈಲಿ ಇದೆ ಅದು?"

"ಸುಮಾರು ಏಳೆಂಟು ಮೈಲಿಗಳಾಗಬಹುದು. ಟ್ಯಾಕ್ಸಿ ಮಾಡಿಕೊಂಡು ಹೋದರೆ ಅನುಕೂಲ."

ಮೋಹನ ಸಪ್ಪೆ ದನಿಯಿಂದ "ಅಷ್ಟೊಂದು ದೂರ ಇದೆಯೇ!" ನಾನೆಲ್ಲೋ ಒಂದೆರಡು ಮೈಲಿಗಳಾಗಬಹುದೂಂತಿದ್ದೆ. ಇನ್ನು ಪುನಃ ಹಾಳು ಕಾರಿನಲ್ಲಿ ಕುಳಿತುಕೊಳ್ಳಬೇಕಲ್ಲಾ" ಎಂದ,

"ಜಟಕ ಬೇಕಾದರೂ ಮಾಡಿಕೋಡು ಹೋಗಬಹುದು" ಎಂದ ಕೂಲಿ ಯುವನು.

"ಎಲ್ಲಾ ಒಂದೇ. ಜಟಕಾದಲ್ಲಿ ಗಂಟೆಗಟ್ಟಲೇ ಕುಲುಕಾಡಿಕೊಂಡು ಹೋಗೋಕೆ ಬದಲಾಗಿ ಟ್ಯಾಕ್ಸಿಯಲ್ಲಿ ಹೋಗುವುದೇ ವಾಸಿ" ಎಂದು ಮೋಹನ ನಿರ್ಧರಿಸಿದ.

ಮೋಹನ ಟ್ಯಾಕ್ಸಿಯನ್ನು ಗೊತ್ತು ಮಾಡಿಕೊಂಡ.

'ವಾಪಸ್ಸು ಬರುವವರೆವಿಗೂ ಅಲ್ಲೇ ಇರಬೇಕೆ ಹೇಗೆ?" ಎಂದು ಡ್ರೈವರ್ ಕೇಳಿದ.

"ನನ್ನ ಅಲ್ಲಿ ಬಿಟ್ಟರೆ ಸಾಕು. ನಾನು ಈ ದಿವಸ ಅಲ್ಲೀ ಇರಬಹುದು" ಎಂದ ಮೋಹನ.

ಶ್ರೀಮಂತರ ಮನೆಗೆ ಹೋಗುವಾಗ ಪ್ರಯಾಣದಿಂದ ಕೊಳೆಯಾಗಿದ್ದ ಬಟ್ಟೆಗಳನ್ನೇ ಹಾಕಿಕೊಂಡು ಹೋಗುವುದೆ? ಮೋಹನ ಜಿಗುಪ್ಸೆಯಿಂದ ತನ್ನ ಬಿಳಿಯ ಶರಾಯಿಯನ್ನು ನೋಡಿಕೊಂಡ. ಬಿಳಿಯ ಶರಾಯಿ ಮಾಸಲು ಕೆಂಪು ಬಣ್ಣಕ್ಕೆ ತಿರುಗಿತ್ತು. ಮೋಹನ ಹಿಂದೆ ಮುಂದೆ ನೋಡುತ್ತಾ ನಿಂತಿರುವುದನ್ನು ನೋಡಿ ಡ್ರೈವರ್ "ಕಾರು ಹತ್ತಿ ಸ್ವಾಮಿ" ಎಂದ.

"ಬಟ್ಟೆಯೆಲ್ಲಾ ಕೊಳೆಯಾಗಿದೆ. ಇಲ್ಲಿ ಎಲ್ಲಾದರೂ ಬೇರೆ ಬಟ್ಟೆ ಹಾಕಿ

ಕೊಳ್ಳುವುದು ಸಾಧ್ಯವಾದರೆ...."

ಟ್ಯಾಕ್ಸಿಯವನು ನಕ್ಕು "ಎಸ್ಟೇಟಿನದಾರಿ ಹೇಗಿದೇಂತ ನಿಮಗೆ ಗೊತ್ತಿಲ್ಲ. ನೀವು ಅಲ್ಲಿಗೆ ಸೇರುವಷ್ಟರಲ್ಲಿ ಕೆಂಪು ಧೂಳಿನ ಸ್ನಾನವಾಗಿರುತ್ತದೆ.." ಎಂದ.

"ಹಾಗಾದರೆ ರಸ್ತೆ ಚೆನ್ನಾಗಿಲ್ಲವೇ ?" ಮೋಹನ ಆತಂಕದಿಂದ ಕೇಳಿದ.

"ಇದೆ ಸುಮಾರಾಗಿ. ಆದರೆ ಬೇರೆ ಬಟ್ಟೆಗಳನ್ನು ಹಾಕಿಕೊಂಡರೆ ಹಾಳಾಗುತ್ತವೆ."

ಮೋಹನ ಬಟ್ಟೆ ಬದಲಿಸುವ ಯೋಚನೆಯನ್ನು ಬಿಟ್ಟುಕೊಟ್ಟ. ಟ್ಯಾಕ್ಸಿಯವನು ಮೋಹನನ ಪೆಟ್ಟಿಗೆಯನ್ನು ತೆಗೆದು ಕಾರಿನಲ್ಲಿರಿಸಿದ.

"ಕಾಫಿ ಕುಡಿದುಕೊಂಡು ಬರ್ತಿನಿ" ಎನ್ನುತ್ತಾ ಮೋಹನ ಬಸ್‌ಸ್ಟಾಂಡಿನಲ್ಲಿಯೇ ಇದ್ದ ಹೋಟಲಿನೊಳಗೆ ಹೋದ.

ಹೋಟೆಲಿನ ಕಾಫಿ ಗಂಟಲಿನೊಳಗೆ ಬಿದ್ದ ಕೂಡಲೇ ಮೋಹನನಿಗೆ ಹೊಟ್ಟೆ ತೊಳಸಿದಂತಾಯಿತು.

"ಎಂಥಾ ಕಾಫಿಯಯ್ಯಾ ಇದು" ಚಿಕ್ಕಮಗಳೂರಿನವರಿಗೆ ಕಾಫಿ ಬೆಳೆಯೋದು ಗೊತ್ತೇ ಹೊರತು ಮಾಡುವುದು ಗೊತ್ತಿಲ್ಲಾಂತ ತೋರುತ್ತದೆ" ಎಂದು ಮೋಹನ ಮಾಣಿಯ ಮೇಲೆ ರೇಗಿದ. ಮಾಣಿ ಬದಲು ಹೇಳದೆ ಸುಮ್ಮನೆ ನಕ್ಕ. ಪ್ರಯಾಣದಿಂದ ಬೇಸರಗೊಂಡಿದ್ದ ಮೋಹನ ನೀರುಕಾಫಿಯಿಂದಾಗಿ ಮತ್ತಷ್ಟು ಬೇಸರಗೊಂಡವನಾಗಿ ಹೊಟೆಲಿನಿಂದ ಹೊರಗೆಬಂದ.

ಬೀಡಿ ಸೇದುತ್ತ ಕುಳಿತಿದ್ದ ಡ್ರೈವರ್ ಎದ್ದು ನಿಂತು ಬೀಡಿಯನ್ನು ಎಸೆದ. ಮೋಹನ ಕಾರಿನಲ್ಲಿ ಕುಳಿತ. ಕಾರು ಹೊರಟಿತು. ಅಂಗಡಿಯ ಸಾಲುಗಳು ದೂರವಾದವು.

ಊರಿನಿಂದ ಎರಡು ಮೈಲಿ ಹೊರಗೆ ಬರುತ್ತಲೇ ಜನರ ಗುಂಪು ಕರಗತೊಡಗಿತ್ತು.

"ಗಿರಿಗೆ ಹೋಗುವುದಿಲ್ಲವೇ ಸಾರ್?"

ಮೋಹನ ಎಚ್ಚೆತ್ತು "ಯಾವ ಗಿರಿ ?" ಎಂದ,

"ಅದೇ ಎದುರಿಗೆ ಕಾಣಿಸುತ್ತಿದೆಯಲ್ಲಾ ಮುಳ್ಳಯ್ಯನಗಿರಿ."

"ಅದನ್ನೇನು ನೋಡುವುದು? ಬೆಟ್ಟ ಇಲ್ಲಿಂದಾನೇ ಕಾಣಿಸುತ್ತಿದೆ, ನನಗೆ ಅಷ್ಟು ಸಾಕು."

ಮೋಹನನ ಮಾತು ಕೇಳಿ ಡ್ರೈವರ್ ನಕ್ಕ.

"ಹಾಗಾದರೆ ನೀವು ಗಿರಿ ನೋಡೋಕೆ ಬಂದವರಲ್ಲ."

"ನಮ್ಮೂರಲ್ಲೂ ಗಿರೀ ಅಲ್ಲ ಬೆಟ್ಟ ಇದೆಯಲ್ಲಾ. ಅದನ್ನು ನೋಡೋಕೆ ಇಲ್ಲಿಯವರೆವಿಗೆ ಬರಬೇಕೆ ?"

"ನಿಮ್ಮೂರಿನಲ್ಲಿರೋದು ಚಾಮುಂಡಿ ಬೆಟ್ಟ ಅಲ್ಲವೇ ? ನಮ್ಮೂರಲ್ಲಿ ಗಿರಿಯು ಮುಂದೆ ಅದು ಸಮುದ್ರದ ಮುಂದೆ ನದಿ ಇದ್ದ ಹಾಗೆ ಇದೆ. ಗಿರೀಗೂ ಅದಕ್ಕೂ ಎಲ್ಲಿಯ ಹೋಲಿಕೆ ?"

ಡ್ರೈವರನ ಸ್ವಾಭಿಮಾನವನ್ನು ಮೋಹನ ಮೆಚ್ಚಿಕೊಂಡ. ಅವನ ತಲೆ, ಬಟ್ಟೆಯ ಮೇಲೆ ಕೆಂಪು ಧೂಳು ದಟ್ಟವಾಗಿ ಕವಿಯುತೊಡಗಿತ್ತು.

ನಾಲ್ಕೈದು ಮೈಲಿಗಳು ಕಳೆಯುತ್ತಲೇ ಕಾಫಿಯ ತೋಟಗಳು ಒಂದೊಂದಾಗಿ ಸಿಕ್ಕತೊಡಗಿದವು.

"ಇದು ಶಿವನಂಜೇಗೌಡರ ತೋಟ. ಇದು ಮರಿಮಲ್ಲಪ್ಪನವರ ತೋಟ...." ಎಂದು ಡ್ರೈವರ್ ತೋಟಗಳ ಪರಿಚಯ ಮೋಹನನಿಗೆ ಮಾಡಿಕೊಟ್ಟ.

ಮೋಹನನಿಗೆ ತೊ ಟಗಳಲ್ಲಿ ಆಸಕ್ತಿಯಿರಲಿಲ್ಲ.

ಎಂದಿಗೆ ಅವರ ಮನೆ ಸೇರಿ ಬಿಸಿನೀರಿನಲ್ಲಿ ಸ್ನಾನ ಮಾಡಿ ವಿಶ್ರಾಂತಿ ತೆಗೆದುಕೊಂಡೇನೋ ಎಂದವನ ಮನಸ್ಸು ಬಯಸುತ್ತಿತ್ತು. ಬೆಟ್ಟದ ಮೇಲೇರಿ ಹೋಗುತ್ತಿದ್ದ ಹಾವಿನ ಮೈಯಿನಂತಹ ವಕ್ರ ನೀಳ ದಾರಿಯೆಲ್ಲಾಗಲಿ, ಎದುರಿಗೆ ನಿಂತಿದ್ದ ಧೀರ, ಗಂಭೀರ, ಅಚಲ ಗಿರಿಯಲ್ಲಾಗಲಿ, ಗಿರಿಯ ಕೊರಕಲುಗಳಿಂದ ಧುಮುಕಿ ಬಂಡೆಗಳ ಸಂದಿನಲ್ಲಿ ಮಾಯವಾಗುತ್ತಿದ್ದ ಝುರಿಗಳಲ್ಲಾಗಲೀ ಹಸಿರು ಪೀತಾಂಬರವನ್ನುಟ್ಟು ನಿಂತಿದ್ದ ವನದೇವಿಯಲ್ಲಾಗಲಿ ಅವನ ನೋಟ ನಾಟಲಿಲ್ಲ.

ಸೌಂದರ್ಯಕ್ಕೆ ಚಿತ್ತವನ್ನು ಸೂರೆಗೊಡದ ಜ್ಞಾನಿಯಂತೆ ಮೋಹನ ಧೂಳಿನ ಬಿರುಗಾಳಿಗೆ ಅಂಜಿ ಮೂಗಿಗೆ ಕರವಸ್ತ್ರವನ್ನು ಬಿಗಿಯಾಗಿ ಹಿಡಿದು ಸೀಟಿಗೊರಗಿ ಕುಳಿತಿದ್ದ. ತನ್ನ ಮುಂದಿದ್ದ ಕನ್ನಡಿಯಲ್ಲಿ ಮೋಹನನ ಮುಖಭಾವವನ್ನು ಗುರುತಿಸಿದ ಡ್ರೈವರ್ ಅವನಿಗೆ ಧೈರ್ಯ ಕೊಡುವವನಂತೆ ಹೇಳಿದ.

'ಬೆಳ್ಳಿಮೋಡ' ಇನ್ನು ಎರಡು ಮೈಲಿ ಇದೆ. ಅಷ್ಟೆ.

"ನನಗೀಗ ಧೂಳಿನ ಮೋಡ ತಡೆಯುವುದೇ ಕಷ್ಟವಾಗಿದೆ." ಡ್ರೈವರ್ ಗಟ್ಟಿಯಾಗಿ ನಕ್ಕು "ಈ ಸುತ್ತಿನಲ್ಲಿ 'ಬೆಳ್ಳಿಮೋಡ' ದಂತಹ ತೋಟ ಬೇರೊಂದಿಲ್ಲ. ತೋಟ ಅಂದರೆ ಸದಾಶಿವರಾಯರ ತೋಟ. ಒಂದಲ್ಲ....

ನೂರ ಎಂಬತ್ತು ಎಕರೆ ಇದೆ ಸ್ವಾಮಿ. ತೋಟದಲ್ಲೇ ಅರಮನೆ ಅಂತಹ ಮನೆ ಕಟ್ಟಿಸಿದ್ದಾರೆ. ಅವರು ನಿಮಗೆ ಏನಾಗಬೇಕು ಸ್ವಾಮಿ ?"

"ನಮಗೆ ಏನೂ ಆಗಬೇಕಾಗಿಲ್ಲ. ಅವರೂ ನಮ್ಮ ಜನ ಅಷ್ಟೆ. ಅವರಿಂದ ಏನೋ ಸ್ವಲ್ಪ ಸಹಾಯ ಆಗಬೇಕಾಗಿತ್ತು. ನಮ್ಮ ತಂದೆಯ ಸ್ನೇಹಿತರೊಬ್ಬರಿಗೆ ಸದಾಶಿವರಾಯರು ಸ್ನೇಹಿತರಂತೆ. ಅವರು ಒಂದು ಕಾಗದ ಬರೆದು ನನ್ನ ಕೈಗೆ ಕೊಟ್ಟಿದ್ದಾರೆ..." ಮೋಹನ ವಾಕ್ಯವನ್ನು ಪೂರ್ಣಗೊಳಿಸದೇ ಬೇಸರದಿಂದ ಹಿಂದಕ್ಕೊರಗಿದ.

ತಾನು ಬಂದ ಕಾರ್ಯ ನೆರವೇರಿದರೆ ಎಷ್ಟು ಸೊಗಸು! ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಾ. ಸ್ಕಾಲರ್‌ಷಿಪ್ಪಿನಲ್ಲಿ ವ್ಯಾಸಂಗ ಪೂರಯಿಸಿ ಸ್ವದೇಶಕ್ಕೆ ಹಿಂತಿರುಗಿ ಕೈತುಂಬ ಸಂಬಳ ಬರುವ ಕೆಲಸ ಹಿಡಿದು........

"ನೋಡಿ ಸ್ವಾಮಿ, ಇಲ್ಲಿಂದಲೇ ಸದಾಶಿವರಾಯರ ತೋಟ ಪ್ರಾರಂಭವಾಗಿದೆ. ಈ ತೋಟದಲ್ಲಿ ಅವರು ರೂಪಾಯಿ ಚೆಲ್ಲಿ ಚಿನ್ನ ಬೆಳೆಯುತ್ತಿದ್ದಾರೆ. ಕೆಲವರು ಹೇಳ್ತಾರೆ—ಮಲೆಯಾಳದಿಂದ ಯಾವನೋ ಮಂತ್ರವಾದಿ ಬಂದು ಅವರಿಗೆ ಕಾಫಿ ಹಣ್ಣಿನೊಳಗಿದ್ದ ಬೀಜಗಳನ್ನೆಲ್ಲಾ ಚಿನ್ನ, ಕೆಂಪು, ವಜ್ರ. ಪಚ್ಚೆಗಳನ್ನಾಗಿ ಮಾಡುವುದು ಹೇಗೆ ಎಂದು ಹೇಳಿಕೊಟ್ಟ. ಅದರಿಂದಾನೇ ಅವರು ಅಷ್ಟೊಂದು ಶ್ರೀಮಂತರಾಗಿರೋದೂಂತ."

ಅವನ ಮಾತು ಕೇಳಿ ಮೋಹನ ನಕ್ಕ.

"ಯಾಕೆ ಸ್ವಾಮಿ ನಗ್ತಿರಿ? ನನ್ನ ಮಾತಿನಲ್ಲಿ ನಂಬಿಕೆ ಇಲ್ಲವಾ?"

"ಜನಗಳ ನಂಬಿಕೆ ನೋಡಿ ನಗು ಬಂತು. ಸರಿಯಪ್ಪ, ಜನ ಇನ್ನೇನು ಹೇಳ್ತಾರೆ?"

ಮೋಹನನ ದನಿಯಲ್ಲಿ ಕುಹಕವಿತ್ತು. ಕುಹಕವನ್ನು ಗಮನಿಸದ ಡ್ರೈವರ್ ಮತ್ತೆ ಉತ್ಸಾಹದಿಂದ ಮುಂದುವರಿಸಿದ.

"ಸದಾಶಿವರಾಯರು ತಾವು ಮಂತ್ರವಾದಿಯಿಂದ ಕಲಿತ ವಿದ್ಯೆಯನ್ನು ಈಗ ತಮ್ಮ ಮಗಳಿಗೆ ಹೇಳಿಕೊಟ್ಟಿದ್ದಾರಂತೆ. ಈಗ ಆ ಹುಡುಗಿಯೂ...."

"ಆದೇಕೆ ಮಗನಿಗೂ ಹೇಳಿಕೊಡೋದು?"

"ಮಗ ಇದ್ದಿದ್ದರೆ ಮಗಳಿಗೆ ಯಾಕೆ ಹೇಳಿಕೊಡುತ್ತಿದ್ದರು? ಇರೋದು ಒಂದು ಹುಡುಗಿ. ಆ ಹುಡುಗೀನ ಮದುವೆ ಮಾಡಿಕೊಳ್ಳುವವನ ಅದೃಷ್ಟವೇ ಅದೃಷ್ಟ...."

"ಇನ್ನೂ ಮದುವೆ ಆಗಿಲ್ಲವೇನು ಆ ಹುಡುಗೀಗೆ?" ಮೋಹನ ಕುತೂ

ಹಲದಿಂದ ಮುಂದೆ ಬಾಗಿ ಕೇಳಿದ.

"ಇನ್ನೂ ಇಲ್ಲ. ಚಿಕ್ಕಮಗಳೂರಿನ ಕಾನ್ವೆಂಟಿನಲ್ಲಿ ಬಿಟ್ಟು ಓದಿಸು ತ್ತಿದ್ದರು. ಅಲ್ಲಿಯ ಓದು ಮುಗಿಯಿತೂಂತ ಕಾಣುತ್ತೆ. ಈಗ ಆ ಹುಡುಗಿಯೂ ತೋಟದ ಮನೆಯಲ್ಲಿಯೇ ಇದ್ದಾಳೆ."

"ಅಂತೂ ಅವರ ಮನೆಯ ವಿಷಯ ಚೆನ್ನಾಗಿ ತಿಳಿದುಕೊಂಡಿದೀಯ" ಎಂದು ನಕ್ಕ ಮೋಹನ.

"ಐವತ್ತು ವರ್ಷದಿಂದ ಈ ಊರಿನಲ್ಲೇ ಇದೀನಿ, ನನಗೆ ಗೊತ್ತಿಲ್ಲವಾ? ಈ ಚಿಕ್ಕಮಗಳೂರಿನ ಸುತ್ತಮುತ್ತಲಿನಲ್ಲಿ ನಾನು ತಿಳಿಯದವರು ಯಾರೂ ಇಲ್ಲ" ಎಂದು ಡ್ರೈವರ್ ಸ್ವಲ್ಪ ಹೆಮ್ಮೆಯಿಂದಲೇ ಹೇಳಿಕೊಂಡ.

"ಸದಾಶಿವರಾಯರು ಮುದುಕರಾಗಿ ಕೈಲಾಗದವರ ಹಾಗಾದ ಮೇಲೆ ಅವರ ತೋಟ ನೋಡಿಕೊಳ್ಳುವರು ಯಾರೋ ?"

"ಮಗಳಿದ್ದಾಳಲ್ಲಾ "

"ಸರಿ ಮದುವೆ ಆದ ಮೇಲೆ ಈ ಕಾಡಿನಲ್ಲಿ ಅವಳು ಕೂತಿರುತಾಳೆಯೇ? ಗಂಡನ್ನ ಕಟ್ಟಿಕೊಂಡು ಹೋಗುತ್ತಾಳೆ."

"ಅಯ್ಯೋ ಅದೇನು ಹೇಳ್ತೀರಿ—ಅಪ್ಪನ ಹಾಗೇ ಆ ಹುಡುಗೀಗೂ ತೋಟದ ಹುಚ್ಚು. ಅದು ರಕ್ತಗತವಾಗಿ ಬಂದುಬಿಟ್ಟಿದೆ. ಯಾವಾಗ ನೋಡಲಿ ಕೈಲಿ ಕತ್ತಿ ಹಿಡಿದುಕೊಂಡು ತೋಟದಲ್ಲಿ ತಿರುಗಾಡುತ್ತಾಳೇಂತ ಎಲ್ಲರೂ ಹೇಳುತ್ತಾರೆ."

"ಚಾಮುಂಡೇಶ್ವರಿ ಅಪರಾವತಾರ ಅನ್ನು." ಮೋಹನ ನಗೆಯಾಡಿದ.

"ಹಾಗಲ್ಲ. ತೋಟದ ಮನೇಲಿ ಹುಟ್ಟಿ, ತೋಟದ ಗಾಳಿ ಕುಡಿದು, ಗಿರಿಯ ಝರಿಯ ನೀರು ಕುಡಿದು ಬೆಳೆದ ಹುಡುಗಿ ಅವಳು. ಅವರಿಗೆ ಗಿರಿಯೇ ನೆರಳು ಕೊಡುವ ತಾಯಿಯಾದರೆ, ತೋಟವೇ ತಂದು ಹಾಕುವ ತಂದೆ. ಅಮ್ಮನ್ನ ಕಂಡರೆ ಇರುವ ಪ್ರೀತಿ ಗಿರಿಯಲ್ಲಿದೆ. ಅಪ್ಪನಲ್ಲಿರುವ ವಾತ್ಸಲ್ಯ ತೋಟದಲ್ಲಿದೆ."

"ನಿಮ್ಮ ಚಿಕ್ಕಮಗಳೂರಿನವರಿಗೆಲ್ಲಾ ನಿನ್ನಷ್ಟು ಚೆನ್ನಾಗಿ ಮಾತನಾಡೋದಕ್ಕೆ ಬರುತ್ತದಾ? ನಾನು ಏನೋಂತಿದ್ದೆ. ನಿನ್ನ ಕಾರಿನಲ್ಲೂ ಅವರ ಮನೆಯವರು ಯಾವಾಗಲಾದರೂ...."

"ನನ್ನ ಕಾರಿನಲ್ಲಿ ಅವರು ಯಾಕೆ ಬರ್ತಾರೆ? ಸದಾಶಿವರಾಯರ ಹತ್ತಿರ ಸೊಗಸಾದ ಕಾರಿದೆ. ಡ್ರೈವರಿದ್ದಾನೆ....ನೋಡಿ ಅಲ್ಲಿ ಬೋರ್ಡು ಕಾಣಿಸು ತ್ತದಲ್ಲಾ ಅದೇ 'ಬೆಳ್ಳಿ ಮೋಡ'...."

ಮೋಹನ ಬಗ್ಗಿ ಕಣ್ಣುಗಳನ್ನು ಕಿರಿದುಗೊಳಿಸಿ ದೂರದಲ್ಲಿದ್ದ ಬಿಳಿಯ ಬೋರ್ಡಿನ ಕಡೆ ನೋಡಿದ.

ಹಸಿರು ಹೆಬ್ಬಾಗಿಲಿಗೆ ಬಿಳಿಯ ತೋರಣದಂತೆ ಅಲಂಕಾರ ಪ್ರಾಯವಾಗಿದ್ದ ಬೋರ್ಡಿನ ಮೇಲೆ ಕಪ್ಪು ಅಕ್ಷರಗಳಲ್ಲಿ ಕೆತ್ತಿದ್ದರು–''ಬೆಳ್ಳಿಮೋಡ"

'ಸೊಗಸಾದ ಹೆಸರು' ಎಂದುಕೊಂಡ ಮೋಹನ.

ಹೆಬ್ಬಾಗಿಲನ್ನು ದಾಟಿದ ಕೂಡಲೇ ಪಚ್ಚೆ ತುರಾಯಿಯ ನಡುವೆ ಕಂಗೊಳಿಸುವ ವಜ್ರಮಣಿಯಂತಿದ್ದ ಭವ್ಯವಾದ ಮಹಲು ಮೋಹನನ ಕಣ್ಣಿಗೆ ಬಿತ್ತು.

ಮನೆಯ ಹಿಂಭಾಗದಲ್ಲಿ ಬೆಂಗಾವಲಾಗಿ, ರಕ್ಷಾದೇವತೆಯಂತೆ ನಿಂತಿತ್ತು ಧೀರ, ಗಂಭೀರ, ಅಚಲ ಮುಳ್ಳಯ್ಯನಗಿರಿ. ಗಿರಿಯ ಎದೆಯನ್ನೊರಗಿ ಮಲಗಿತ್ತು ಮನೆ.

ಮನೆಯ ಮೆಟ್ಟಿಲಿನ ಬಳಿ ಕಾರು ನಿಂತಿತು. ಕಾರನ್ನು ನಿಲ್ಲಿಸಿ ಡ್ರೈವರ್ ಎರಡು ಬಾರಿ ಹಾರ್ನ್ ಮಾಡಿದ. ಕೂಡಲೇ ಮನೆಯೊಳಗಿಂದ ಸುಮಾರು ವಯಸ್ಸಾಗಿದ್ದ ವ್ಯಕ್ತಿಯೊಬ್ಬರು ಹೊರಗೆ ಬಂದು ಮೇಲು ಮೆಟ್ಟಿಲಿನ ಮೇಲೆ ನಿಂತು ''ಯಾರು?" ಎಂದರು.

ಮೋಹನನ ಪರವಾಗಿ ಡ್ರೈವರ್ ತಾನೇ ಹೇಳಿದ.

"ಯಾರೋ ರಾಯರನ್ನ ಹುಡುಕಿಕೊಂಡು ಬಂದಿದಾರೆ."

"ರಾಯರು ಬಿತ್ತನೆಗೆ ಬೀಜ ತರೋಕೆ ಬಾಳೆಹೊನ್ನೂರಿಗೆ ಹೋಗಿದಾರೆ." ಮೋಹನನಿಗೆ ಕುಸಿದು ಬೀಳುವಂತಾಯಿತು.

"ಅಮ್ಮಾವರು ?"

"ನಾಳೆ ಬಟವಾಡೆಇದೆ. ಆದುದರಿಂದ ಅಮ್ಮಾವರು ಬ್ಯಾಂಕಿನಿಂದ ದುಡ್ಡು ತರೋಕೆ ಚಿಕ್ಕಮಗಳೂರಿಗೆ ಹೋಗಿದಾರೆ."

"ಯಾವಾಗ ಬರ್‍ತಾರೆ ? ಕುಗ್ಗಿದ ದನಿಯಿಂದ ಕೇಳಿದ ಮೋಹನ.

"ಅಮ್ಮಾವರು ಇವತ್ತು ಸಂಜೆಗೆ ಬರಬಹುದು."

"ರಾಯರು"

"ರಾಯರದ್ದು ಯಾವುದೂ ಹೇಳೋಕಾಗೋದಿಲ್ಲ" ಎನ್ನುತ್ತಾ ಆತ ಮೋಹನನ ಕೈಲ್ಲಿದ್ದ ಪೆಟ್ಟಿಗೆಯ ಕಡೆ ನೋಡಿ

"ಪರವಾಗಿಲ್ಲ. ಚಿಕ್ಕಮ್ಮಾವರಿದಾರೆ ಒಳಗೆ ಬನ್ನಿ. ರಾಯರೂ ನಾಳೆಯ ದಿವಸ ಬರಬಹುದೂಂತ ಕಾಣುತ್ತೆ. ನೀವು ಎಲ್ಲಿಂದ ಬಂದಿರಿ ?"

"ಮೈಸೂರಿನಿಂದ ಬಂದೆ. ಒಂದು ಕಾಗದ ಹಾಕಿ ಬಂದಿದ್ದರೆ ಚೆನ್ನಾಗಿತ್ತು.

ನಿಮ್ಮ ರಾಯರ ಸ್ನೇಹಿತರು ತಮ್ಮಯ್ಯನವರು ನನ್ನ ಇಲ್ಲಿಗೆ ಕಳಿಸಿದಾರೆ...."

"ಒಳಗೆ ಬನ್ನಿ" ಎಂದು ಆತ ಮೋಹನನನ್ನು ಮತ್ತಷ್ಟು ಸಂಭ್ರಮದಿಂದ ಸ್ವಾಗತಿಸಿದ.

"ರಾಯರು, ಅಮ್ಮಾವರು ಯಾರೂ ಇಲ್ಲಾಂತೀರಿ. ವೃಥಾ ಯಾಕೆ ನಾನು ನಿಲ್ಲಲಿ...." ಎಂದು ಅಳುಕುತ್ತಾ ಕೇಳಿದ ಮೋಹನ.

"ಆದರೇನಂತೆ? ಚಿಕ್ಕಮ್ಮಾವರಿದಾರೆ ಬನ್ನಿ. ಅವರೊಬ್ಬರು ಇದ್ದರೆ ರಾಯರು, ಅಮ್ಮಾವರು ಇಬ್ಬರೂ ಇದ್ದ ಹಾಗೆ ನಮಗೆಲ್ಲ."

"ಅವರಿಗೇ ಹೇಳಿಬಿಟ್ಟು ನಾನು ಹೊರಟುಬಿಡ್ತೀನಿ. ನಾಳೆಯೋ, ನಾಡಿದ್ದೋ ಮತ್ತೆ ಬರುತ್ತೀನಿ."

ಆತ ಹೊರಗೆ ಬಂದ ಕೆಲಸದ ಹುಡುಗಿಯ ಕಡೆ ತಿರುಗಿ "ಚಿಕ್ಕಮ್ಮಾವರು ಎಲ್ಲೇ ನಂಜಿ? ಸ್ವಲ್ಪ ಅವರನ್ನ ಕರಿ" ಎಂದರು.

"ಅವರು ತ್ವಾಟದ ಕಡೆ ಹೋದರು."

"ಊಟಕ್ಕೂ ಬಂದಿಲ್ಲವೇ?"

"ಇಲ್ಲ. ಬೆಳಿಗ್ಗೆ ಕತ್ತಿ ಹಿಡ್ಕೊಂಡು ಹೋದೋರು ಇನ್ನೂ ಈ ಕಡೆ ಬಂದೇ ಇಲ್ಲ."

"ಇದೊಂದು ಹುಚ್ಚು ಹುಡುಗಿ" ಎಂದಾತ ಅಕ್ಕರೆಯಿಂದ ಚಿಕ್ಕಮ್ಮಾವರನ್ನು ಬೈದುಕೊಂಡು

"ನಂಜೀ, ಅವರನ್ನ ಕರೆದುಕೊಂಡು ಬಾ" ಎಂದರು.

"ಬೇಡ. ನಾವೇ ಅವರಿರುವ ಜಾಗಕ್ಕೆ ಹೋಗೋಣ" ಎಂದ ಮೋಹನ.

"ನೀವು ಪ್ರಯಾಣದ ಆಯಾಸದಿಂದ ಬಳಲಿದೀರಿ."

"ಚಿಂತೆಯಿಲ್ಲ" ಎಂದು ಮೋಹನ ಡ್ರೈವರನ ಕಡೆ ತಿರುಗಿ "ಸ್ವಲ್ಪ ಇರು. ನಾನೂ ಬಂದುಬಿಡುತ್ತೇನೆ" ಎಂದು ಹೇಳಿ ಅವರೊಡನೆ ಹೊರಟ.

"ತಾವು ಯಾರೋ ತಿಳಿಯಲಿಲ್ಲವಲ್ಲಾ?" ಎಂದ ಮೋಹನ.

"ನಾನು ಇಲ್ಲಿ ರೈಟರಾಗಿದ್ದೇನೆ. ಲೆಖ್ಖ, ಪತ್ರದ ಜವಾಬ್ದಾರಿಯೆಲ್ಲಾ ನನ್ನದೇ. ನಾನೂ ಇಲ್ಲಿ ಇಪ್ಪತ್ತು ವರ್ಷದಿಂದ ಇದೀನಿ. ನಾನು ಇಲ್ಲಿಗೆ ಬಂದ ಎರಡು ವರ್ಷದ ಮೇಲೆ ಇಂದಿರ ಹುಟ್ಟಿದಳು."

"ಇಂದಿರ ಯಾರು?"

"ಚಿಕ್ಕಮ್ಮಾವ್ರು. ನಾನೂ ಅವರ ಮನೆಯವರಲ್ಲಿ ಒಬ್ಬನಾಗಿ ಹೋಗಿದ್ದೇನೆ. ಇದೇ ನೋಡಿ ಋಣಾನುಬಂಧ...."ಎನ್ನುತ್ತಾ ಅವರು ನಲ್ಲಿಯೊಂದ

ರಿಂದ ನೀರು ಹಿಡಿಯುತ್ತಾ ನಿಂತಿದ್ದ ಕೂಲಿಯ ಹೆಂಗಸೊಬ್ಬಳನ್ನು ತುಳುವಿನಲ್ಲಿ ಕೇಳಿದರು.

"ಅಮ್ಮ ಎಲ್ಲಿ?"

ಆಕೆ ಕೈತೋರಿಸಿದಳು. ಪುಟ್ಟಯ್ಯ ಸಲೀಸಾಗಿ ದಿಬ್ಬಗಳನ್ನು ಹತ್ತಿ ಇಳಿದು ಮುಂದುವರಿಯುತ್ತಿದ್ದರು. ಮೋಹನ ಒದ್ದಾಡುತ್ತಾ, ಬೆವರು ಸುರಿಸುತ್ತಾ ಆಗಾಗ್ಗೆ ಜಾರಿ ಬೀಳುತ್ತಾ ಅವರನ್ನು ಹಿಂಬಾಲಿಸುತ್ತಿದ್ದ. ಆತ ಮೋಹನನ ಕಷ್ಟವನ್ನು ನೋಡಿ ನಕ್ಕು

"ನನ್ನ ಕೈಹಿಡಿದುಕೊಳ್ಳಿ" ಎಂದರು.

"ಬೇಡ" ಎಂದ ಮೋಹನ ಅಪಮಾನಿತನಂತೆ.

"ನೀವೆಲ್ಲ ಬಯಲು ಸೀಮೆಯವರು. ಸರ್ಕಾರದವರು ನಿಮಗಾಗಿ ಮಾಡಿಸಿದ ಟಾರು ರಸ್ತೆಗಳ ಮೇಲೆ ಓಡಾಡುವುದು ಅಭ್ಯಾಸವಾಗಿ ಹೋಗಿದೆ. ಸುಖಪಡೋಕೆ ಹುಟ್ಟಿರೋರೂಂದ್ರೆ ನೀವು ಬಯಲು ಸೀಮೆಯವರು...." ಎಂದು ಅವರು ಹೇಳುತ್ತಿರುವಷ್ಟರಲ್ಲಿ ದಿಣ್ಣೆಯೊಂದನ್ನು ಏರುವುದರಲ್ಲಿದ್ದ ಮೋಹನ ಹಿಂದಕ್ಕೆ ಜಾರಿದ. ಬೀಳುವುದರಲ್ಲಿದ್ದ ಮೋಹನನನ್ನು ಪುಟ್ಟಯ್ಯನವರು ಬಿಗಿಯಾಗಿ ಹಿಡಿದುಕೊಂಡು

"ಹುಷಾರಾಗಿ ಬನ್ನಿ. ನಿಮಗೆ ಇದೆಲ್ಲಾ ಅಭ್ಯಾಸವಿಲ್ಲ ಆದರೂ ನೋಡಿ, ನಮ್ಮ ಇಂದಿರನ ಹಾಗೆ ಹತ್ತಿ ಇಳಿದು ಮಾಡೋಕೆ ಯಾರ ಕೈಲೂ ಸಾಧ್ಯವಿಲ್ಲ. ಮಗುವಾಗಿದ್ದಾಗಿನಿಂದಲೂ ಅಷ್ಟೆ—ತೋಟ ಅವಳು ಹೊಕ್ಕಿಬಿಟ್ಟಳೂಂದರೆ ನೀರಿನಲ್ಲಿ ಮೀನು ಬಿಟ್ಟ ಹಾಗೆ ಆಗಿಬಿಡುತ್ತಿತ್ತು. ಅವಳನ್ನ ಮನೆಗೆ ಹಿಡಿದುಕೊಂಡು ಬರುವ ಹೊತ್ತಿಗೆ ಎಲ್ಲರಿಗೂ ಸಾಕಾಗಿಬಿಡುತ್ತಿತ್ತು. ಜಿಂಕೆಮರಿ ಹಾಗೆ ಓಡಾಡಿ ಬಿಡುತ್ತಾಳೆ. ಲೋ ಚೋಮಾ, ಅಮ್ಮಾ ಎಲ್ಲೋ?"

"ಸ್ಪ್ರೇ ಮಾಡೋ ಕಡೆ ಇದಾರೆ."

ರೋಡ್ ಎಂಜಿನ್ನಿನಂತೆ ಸದ್ದು ಬರುತ್ತಿದ್ದ ಕಡೆ ಪುಟ್ಟಯ್ಯನವರು ತಿರುಗಿದರು. ಅಲ್ಲಿಯೇ ನಲ್ಲಿಯೊಂದನ್ನು ನಿಲ್ಲಿಸುತ್ತಿದ್ದ ಕೂಲಿಯೊಬ್ಬನ ಕಡೆ ನೋಡಿ ಪುಟ್ಟಯ್ಯ

"ಯಾಕೋ ನೀರು ನಿಲ್ಲಿಸಿಬಿಟ್ಟಿದೀಯಾ?" ಎಂದರು.

"ಚಿಕ್ಕಮ್ಮ ಹೇಳಿದರು—'ಇವತ್ತು ಮಳೆ ಬರುವ ಹಾಗಿದೆ. ಟ್ಯಾಂಕಿನಲ್ಲಿರೋ ನೀರನ್ನೆಲ್ಲಾ ಸುಮ್ಮನೆ ಖರ್ಚುಮಾಡಬೇಡಾಂತ'; ಅದಕ್ಕೆ ನಿಲ್ಲಿಸಿಬಿಟ್ಟೆ."

ಚಿಕ್ಕಮ್ಮನವರ ಅಪ್ಪಣೆ ಇಲ್ಲದೆ ಈ ತೋಟದಲ್ಲಿ ಗಾಳಿಯೂ ಬೀಸುವುದಿಲ್ಲವೇನೋ ಎಂದುಕೊಂಡ ಮೋಹನ.

ಸ್ವಲ್ಪ ತಗ್ಗಾಗಿದ್ದ ಜಾಗದಿಂದ ಅವರು ದಿಬ್ಬವೊಂದನ್ನು ಹತ್ತಿದರು. ಅವರಿಗೆ ಸುಮಾರು ಅರ್ಧ ಫರ್ಲಾಂಗು ದೂರದಲ್ಲಿ ರೋಡ್ ಎಂಜಿನ್ನಿನಂತಹ ಯಂತ್ರವೊಂದು ಸದ್ದು ಮಾಡುತ್ತಾ ನಿಂತಿತ್ತು. ಅದರೊಳಗೆ ಖಾಕಿ ಚಡ್ಡಿ, ಶರಟು, ಒಂದು ಹರಕಲು ಹ್ಯಾಟು ಧರಿಸಿದ್ದ ವ್ಯಕ್ತಿಯೊಬ್ಬ ನಿಂತಿದ್ದ. ಅದರ ಹಿಂಭಾಗದಲ್ಲಿದ್ದ ಏಳು ರಬ್ಬರಿನ ಕೊಳವಿಗಳನ್ನು ಏಳು ಜನ ಕೈಲಿ ಹಿಡಿದು ಕಾಫಿ ಗಿಡಗಳಿಗೆ ಅದರೊಳಗಿನಿಂದ ಬರುತ್ತಿದ್ದ ದಿಪಾಲು, ಮೈಲುತುತ್ತ, ಸುಣ್ಣ, ಸಲ್ಫರ್ ಮಿಶ್ರಿತವಾಗಿದ್ದ ನೀರನ್ನು ಚಿಮುಕಿಸುತ್ತಿದ್ದರು.

"ಏನೋ ಕೆಲಸ ಮಾಡಿಸುತ್ತಿರುವ ಹಾಗಿದೆ. ನಾನು ಬಂದು ತೊಂದರೆ ಕೊಟ್ಟ ಹಾಗಾಯಿತು" ಎಂದ ಮೋಹನ.

"ಏನಿಲ್ಲ. ಟ್ರ್ಯಾಕ್ಟರಿನಿಂದ ಸುಣ್ಣದ ನೀರನ್ನು ಗಿಡಗಳಿಗೆ ಹಾಕಿಸುತ್ತಿದ್ದಾರೆ. ಇಲ್ಲದಿದ್ದರೆ 'ಬೋರರ್' ಬಂದು ಬಿಡುತ್ತದೆ. ಪ್ರತಿಯೊಂದು ಕಾಫಿ ಎಲೆಗೂ ಆ ನೀರು ಬೀಳಬೇಕು. ಈ ಕೆಲಸ ಬಲೆ ಕಷ್ಟ ಸ್ವಾಮಿ. ಆದರೆ ಕಷ್ಟ ಪಟ್ಟಷ್ಟೂ ಫಲವೂ ಇದೆ" ಎಂದರು ಪುಟ್ಟಯ್ಯ.

ಸಣ್ಣ ದಿಣ್ಣೆಯೊಂದರ ಮೇಲೆ ಹೊಂಗೆಯ ಮರದ ನೆರಳಿನಲ್ಲಿ ಬರುತ್ತಿದ್ದವರಿಗೆ ಬೆನ್ನು ತಿರುಗಿಸಿ ಸುಮಾರು ಐದು ಅಡಿ ಎತ್ತರದ ಹುಡುಗಿಯೊಬ್ಬಳು ನಿಂತಿದ್ದಳು. ಅವಳುಟ್ಟಿದ್ದ ಅಗ್ಗದ ಬಿಳಿಯ ನೂಲಿನ ಸೀರೆಯ ಸೆರಗು ಗಾಳಿಯಲ್ಲಿ ಹಾರಾಡುತ್ತಿತ್ತು. ಅವಳ ಸುತ್ತಮುತ್ತಲೂ ಕೆಲಸ ಮಾಡುತ್ತಿದ್ದ ಕೂಲಿಯ ಹೆಂಗಸರ ಸೀರೆಗಳಷ್ಟೇ ಅವಳ ಸೀರೆಯೂ ಅಗ್ಗವಾಗಿತ್ತು. ಆದರೂ ಆಕೆಯೇ 'ಚಿಕ್ಕಮ್ಮಾವರು' ಇರಬಹುದೆಂದು ಮೋಹನ ತಿಳಿದ. ಅದಕ್ಕೆ ಕಾರಣ ಅವಳ ಸೀರೆ ಮಂಜಿನ ಹನಿಯಂತೆ ಶುಭ್ರವಾಗಿತ್ತು. ಅವಳು ಧರಿಸಿದ್ದ ರವಿಕೆ ದೂರಕ್ಕೆ ಕಾಣುವ ಬೆಟ್ಟದ ಬಣ್ಣವಿತ್ತು. ತಿಳಿ ಮುಗಿಲ ಬಣ್ಣದ ಕೈಮಗ್ಗದ ಬಟ್ಟೆಯ ರವಿಕೆ ಅಗ್ಗವಾದುದಾದರೂ ಆ ಸೀರೆಗೆ ತುಂಬಾ ಹೊಂದಿಕೆಯಾಗಿತ್ತು. ನೀಳವಾದ, ದಪ್ಪ ಜಡೆಯ ತುದಿ ಅವಳ ಮೊಳಕಾಲಿನ ಬಳಿ ಒಮ್ಮೊಮ್ಮೆ ಆಟವಾಡುತ್ತಾ ಮತ್ತೊಮ್ಮೆ ಮೌನವಾಗಿ ಮಲಗಿತ್ತು.

ಅವಳ ಸುತ್ತಲೂ ಸೊಂಟದೆತ್ತರ ಬೆಳೆದಿದ್ದ, ಪಚ್ಚೆಯ ಛತ್ರಿಗಳಂತಿದ್ದ ಕುಣಿಯುವ ನವಿಲಿನ ಕೆದರಿದ ಗರಿಗಳಂತಿದ್ದ ಕಾಫಿಯ ಗಿಡಗಳು ಅತ್ತಿ, ಹೊಂಗೆ, ಬಸರಿ, ನೇರಳೆ, ಹಾಲವಾಣ, ಸಿಲ್ವರ್ ಮರಗಳ ನೆರಳಿನಲ್ಲಿ,

ಸೂರ್ಯನ ತೀಕ್ಷ್ಣ ಕಿರಣಗಳಿಂದ ದೂರವಾಗಿ, ತಾಯಿಯ ಮಡಿಲಿನಲ್ಲಿ ನಿಶ್ಚಿಂತೆಯಿಂದ ಆಟವಾಡುವ ಮಗುವಿನಂತೆ ಹಾಯಾಗಿ ಪವಡಿಸಿದ್ದವು. ಅಷ್ಟೇನೂ ಎತ್ತರವಿಲ್ಲದ, ಹರಡಿಕೊಂಡು ಬೆಳೆದಿದ್ದ ಒಂದೊಂದು ಸಣ್ಣ ರೆಂಬೆಯಲ್ಲೂ ಹಸಿರು ಕಾಯಿಗಳು ಮೂಡಿದ್ದವು. ಬೆಟ್ಟದ ಮೇಲಿಂದ ಬೀಸಿ ಬರುವ ಹೊಸ ಗಾಳಿಯನ್ನು ಕುಡಿದು ಬೆಟ್ಟದಲ್ಲಿ ಹುಟ್ಟಿ ಹರಿಯುವ ಝರಿಗಳ ನಿರ್ಮಲ ನೀರನ್ನುಂಡು ಗಿಡಗಳು ಪುಷ್ಟಿಯಾಗಿ, ಆರೋಗ್ಯವಾಗಿ ಬೆಳೆದಿದ್ದವು.

ನೀಲಿಯಾಗಿ ಕಾಣುತ್ತಿದ್ದ ಗಿರಿಯ ಹಿನ್ನೆಲೆ, ಆಕಾಶದಲ್ಲಿ ತೇಲುತ್ತಿದ್ದ ಬಿಳಿ, ನೀಲಿ ಮೋಡಗಳ ತುಂಡುಗಳು, ಹಸಿರು ಮೆತ್ತೆ ಇವುಗಳ ನಡುವೆ ಶುಭ್ರ ವಸ್ತ್ರಧಾರಿಣಿಯಾಗಿ ನಿಂತಿದ್ದ. ನೀಳ ಜಡೆಯ ಹುಡುಗಿಯನ್ನು ನೋಡಿದ ಕೂಡಲೇ ಮೋಹನನಿಗೆ ವಿರಾಗಿಣಿಯೊಬ್ಬಳು ತಪಸ್ಸಿಗಾಗಿ ಗಿರಿ, ವನಗಳ ಆಶ್ರಯ ಪಡೆದಿರುವಂತೆ ತೋರಿತು.

ಟ್ರ್ಯಾಕ್ಟರಿನಲ್ಲಿದ್ದ ಖಾಕಿ ಚಡ್ಡಿಯವನು ಮೋಹನ, ಪುಟ್ಟಯ್ಯನನ್ನು ನೋಡುತ್ತಲೇ ಆಕೆಯ ಕಡೆ ತಿರುಗಿ ಏನೋ ಹೇಳಿದ. ಅವನ ಮಾತು ಕೇಳಿ ಅವಳು ನಾಲ್ಕು ಹೆಜ್ಜೆ ಮುಂದೆ ಬಂದು ತಿರುಗಿದಳು.

ಇಂದಿರ ಬಲಗೈಯನ್ನು ಬಿಸಿಲಿಗೆ ಮರೆಯಾಗಿ ಹಿಡಿದು, ಎಡಗೈಲಿ ಕತ್ತಿ ಹಿಡಿದಿದ್ದಂತೆಯೇ ಮತ್ತೆ ಎರಡು ಹೆಜ್ಜೆ ಮುಂದೆ ಬಂದಳು.

ಅವಳ ಮುಖವನ್ನು ನೋಡಿದ ಕೂಡಲೇ ಮೋಹನನಿಗೆ ಕೊಂಚ ನಿರಾಶೆಯಾಯಿತು. ಶ್ಯಾಮಲ ವರ್ಣದ ಅತಿ ಸಾಮಾನ್ಯ ರೂಪಿನ ಹುಡುಗಿ ಅಂತಹ ನೀಳ ಜಡೆಯ ಸುಂದರವಾದ ವೈಕಟ್ಟಿನ ಒಡತಿಯಾಗಿದ್ದಿರ ಬಹುದು ಎಂದವನು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಅವಳ ಹಿಂಭಾವವನ್ನು ನೋಡಿ ಮೆಚ್ಚುಗೆಯಿಂದ ಅವನ ಕಾಲುಗಳಿಗೆ ಬಲ ಬಂದಂತಾಗಿ ಚುರುಕು ಬಂದಿತ್ತು. ಆದರೆ ಯಾವಾಗ ಅವನಿಗೆ ಅವಳ ಮುಖ ದರ್ಶನವಾಯಿತೋ ಮೋಹನನ ಕಾಲುಗಳು ಅಲ್ಲೇ ಒಂದೇ ಒಂದು ಕ್ಷಣ ತಡೆದವು.

"ಅಯ್ಯೋ ಇವಳೇನೇ?" ಎಂಬ ತಾತ್ಸಾರಪೂರಿತ ಉದ್ಗಾರವೊಂದು, ಕೊಂಚ ನಿರಾಶೆಯೊಡನೆ ಅಸ್ಫುಟವಾಗಿ ಹೊರಬಿತ್ತು. ಗಿರಿಯ ಉಬ್ಬು ತಗ್ಗುಗಳನ್ನು ಹತ್ತಿ ಬಂದಿದ್ದ ಮೋಹನ, ಈಗ ತೀರ ಬಲಗುಂದಿದವನಂತಾದ. ಇದುವರೆವಿಗೂ ಇದ್ದ ಉತ್ಸಾಹ ಇದ್ದಕ್ಕಿದ್ದಂತೆಯೇ ಮರೆಯಾಯಿತು.

"ಯಾಕೆ ಸ್ವಾಮಿ, ತೀರಾ ಸೋತುಬಿಟ್ಟಿರಾ?" ಪುಟ್ಟಯ್ಯ ಕೇಳಿದರು.

"ಛೀ, ಛೀ" ಎಂದ ಮೋಹನ.

ಇಂದಿರ ಗಿರಿಯ ಅಧಿದೇವತೆಯಂತೆ ದಿಣ್ಣೆಯ ಮೇಲೆ ನಿಂತು ಮೋಹನ, ಪುಟ್ಟಯ್ಯನ ಕಡೆ ನೋಡಿದಳು. ಎಡಗೈಲಿ ಕತ್ತಿ ಹಿಡಿದು ಸೌಮ್ಯಳಾಗಿ ನಿಂತಿದ್ದ ಚಾಮುಂಡಾಂಬಿಕೆ.

ಪುಟ್ಟಯ್ಯ ಇಂದಿರನನ್ನು ಕೀಟಲೆ ಮಾಡುತ್ತಾ "ಕಷ್ಟಪಟ್ಟು ಬೆಟ್ಟಹತ್ತಿ ದರೇನೇ ದೇವಿಯ ದರ್ಶನವಾಗುವುದು" ಎಂದರು.

ಇಂದಿರ ಹೊಸಬರ ಎದುರಿಗೆ ಎಂತಹ ಹುಡುಗಾಟ ಎನ್ನುವಂತೆ ಅವರ ಎದುರಿಗೆ ಬಂದಳು.

"ಇವರು ರಾಯರನ್ನು ನೋಡೋಕೆ ಬಂದಿದಾರೆ...."

ತೃಪ್ತಿ, ಶಾಂತಿ, ಗಾಂಭೀರ್ಯದ ಕೊಳಗಳಂತಿದ್ದ ಕಣ್ಣುಗಳನ್ನರಳಿಸಿ ಮೆಲುವಾಗಿ ನಕ್ಕು ಇಂದಿರ ಹೇಳಿದಳು.

"ನೀವು ಬರ್‍ತೀರಿ ಎಂದು ನಮಗೆ ತಿಳಿದಿತ್ತು."

ಮೋಹನ ಆಶ್ಚರ್ಯಗೊಂಡು ಕೇಳಿದ "ಹೇಗೆ ತಿಳೀತು?"

ನಿಮ್ಮ ತಂದೆಯ ಗೆಳೆಯರು ನಮ್ಮ ತಂದೆಗೆ ಕಾಗದ ಬರೆದಿದ್ದರು. ಈ ದಿನ ಬೆಳಗ್ಗೆ ಅವರು ಅನಿವಾರ್ಯವಾಗಿ ಬಾಳೆ ಹೊನ್ನೂರಿಗೆ ಹೋಗಬೇಕಾ ಯಿತು. ನಿಮ್ಮ ಕ್ಷಮೆ ಕೇಳಲು ಹೇಳಿದಾರೆ, ನನಗೆ."

"ಯಾವಾಗ ಬರಬಹುದು?"

"ಎರಡು ಮೂರು ದಿನಗಳಾಗಬಹುದು."

"ಹಾಗಾದರೆ.." ಮೋಹನ ಮುಂದುವರಿಸುವಷ್ಟರಲ್ಲಿ ಇಂದಿರ ಹೇಳಿದಳು

"ನಿಮ್ಮ ಸತ್ಕಾರ ನನ್ನ ಪಾಲಿಗೆ ಸೇರಿದೆ. ಅವರು ಬರುವವರೆವಿಗೂ ನೀವು ಇಲ್ಲಿರಬೇಕೆಂದು ಅವರು ಕೇಳಿಕೊಂಡಿದಾರೆ. ನಡೆಯಿರಿ ಮನೆಗೆ ಹೋಗೋಣ."

ಅವಳ ಮಾತಿನಲ್ಲಿ ಕಾಪಟ್ಯವಿರಲಿಲ್ಲ, ಅತೀ ವಿನಯವಿರಲಿಲ್ಲ. ಕ್ಲುಪ್ತ ವಾಗಿ ಆಡಬೇಕಾಗಿದ್ದ ನಾಲ್ಕು ಮಾತುಗಳಿಂದ ಮನೆಗೆ ಬಂದಿದ್ದ ಅತಿಥಿ ಯನ್ನು ಇಂದಿರ ಸ್ವಾಗತಿಸಿದಳು.

ಮೋಹನನಿಗೆ ಏನು ಹೇಳಬೇಕೋ ತಿಳಿಯದಾಯಿತು. ಅವನು ಕೊಂಚ ಆತಂಕದಿಂದ, ಗಡಿಬಿಡಿಯಿಂದ ಅವಳ ಕಡೆ ನೋಡಿದ. ಅವನ ಹೃದಯದ ಲ್ಲಾಗುತ್ತಿದ್ದ ಹೋರಾಟವನ್ನು ನೆಟ್ಟ ನೋಟದಿಂದ ಇಂದಿರ ನೋಡು ತ್ತಿದ್ದಳು. ಅವಳ ನೋಟದಲ್ಲಿ ಸಂಕೋಚ, ಲಜ್ಜೆ, ವೈಯ್ಯಾರ ಯಾವುದೂ ಇರಲಿಲ್ಲ. ಮಗುವಿನ ಮುಗ್ಧ ನೋಟ, ಜ್ಞಾನಿಯ ಧೀರ ನೋಟದೆದುರು

ಮೋಹನ ಕೊಂಚ ಅಧೀರನಾದ. ಗಿರಿಯ ಗಾಳಿಯಂತೆ ಪರಿಶುದ್ಧವಾಗಿದ್ದ ಅವಳ ನೇರನೋಟ ಅವನ ಅಂತರಂಗವನ್ನು ಕೆದಕಿದಂತಾಯಿತು. ಅವಳ ಸರಳ, ಸಹಜವಾದ ಮಾತಿನೆದುರು ಮೋಹನನಿಗೆ ತಾನು ವೇಷಧರಿಸಿ ಬಂದಿರುವ ನಾಟಕದ ಪಾತ್ರಧಾರಿಯಂತೆ ಭಾಸವಾಯಿತು.

ಇಂದಿರ ಪುಟ್ಟಯ್ಯನವರ ಕಡೆ ತಿರುಗಿ "ನೀವಿಲ್ಲಿರಿ. ನಾನು ಹೋಗುತ್ತೇನೆ" ಎನ್ನುತ್ತಾ ಎರಡು ಹಜ್ಜೆ ಮುಂದೆ ಬಂದಳು. ಅಷ್ಟರಲ್ಲಿಯೇ ಅವಳ ನೋಟ ಸ್ವಲ್ಪ ದೂರವಾಗಿ ಒಣಗಿ ನಿಂತಿದ್ದ ಕಾಫಿ ಸಸಿಯೊಂದರ ಮೇಲೆ ಬಿತ್ತು. ಇಂದಿರ ಅದರ ಬಳಿಗೆ ಹೋಗಿ ಒಣಗಿ ನಿಂತಿದ್ದ ಗಿಡವನ್ನು ಮಣ್ಣಿನಿಂದ ಕಿತ್ತು, ಬೇರು ಮೇಲೆ ಮಾಡಿ ಮತ್ತೆ ನೆಟ್ಟು

"ಸಾಂಬಾ, ಈ ಸಂಕೇತ ನೆನಪಿರಲಿ, ನಾಳೆಯೇ ಇಲ್ಲಿ ಬೇರೊಂದು ಹೊಸ ಸಸಿ ತಂದು ನೆಟ್ಟುಬಿಡು" ಎಂದಳು.

"ಆಗಲಿ."

ಕಾಫಿ ಗಿಡಗಳ ನಡುವೆ ಇದ್ದ ಕಾಲುದಾರಿಯಲ್ಲಿ ಇಂದಿರ ನಡೆದಳು. ಮೋಹನ ಹಿಂಬಾಲಿಸಿದ. ಉಬ್ಬು, ತಗ್ಗುಗಳು ಬಂದಾಗ ಮಾತ್ರ ಇಂದಿರ ಹಿಂತಿರುಗಿ ಮೋಹನನನ್ನು ಎಚ್ಚರಿಸುತ್ತಿದ್ದಳು.

"ಹುಷಾರಾಗಿ ಬನ್ನಿ."

ಮನೆಯ ಮುಂದೆ ಡ್ರೈವರ್ ಅಸಹನೆಯಿಂದ ತಿರುಗಾಡುತ್ತಿದ್ದ. ಮೋಹನನ ಮುಖವನ್ನು ಕಂಡ ಕೂಡಲೇ ಅವನು

"ಏನು ಸ್ವಾಮಿ ಎಷ್ಟು ಹೊತ್ತುಮಾಡಿದಿರಿ?" ಎಂದ.

ಅವನ ಮಾತು ಕೇಳಿ ಇಂದಿರ ತಲೆ ಎತ್ತಿ ನೋಡಿದಳು. ಡ್ರೈವರ್ ಕೊಂಚ ದನಿ ಇಳಿಸಿ

"ನಮಸ್ಕಾರ ತಾಯಿ ಬುದ್ಧಿಯೋರು ಬಹಳ ಕಾಯಿಸಿ ಬಿಟ್ರು" ಎಂದ.

"ಪರವಾಗಿಲ್ಲ ನೀವೂ ಇಲ್ಲೇ ಊಟ ಮಾಡಿಕೊಂಡು ಒಂದುಗಳಿಗೆ ಸುಧಾರಿಸಿಕೊಂಡು ಹೋಗಿ" ಎಂದು ಇಂದಿರ ಸತ್ಕರಿಸಿದಳು.

ಹಸಿವಿನಿಂದ ಕಂಗಾಲಾಗಿದ್ದ ಡ್ರೈವರನ ಮುಖ ಅವಳ ಮಾತು ಕೇಳಿ ಅರಳಿತು. ಅವನು ಪೂರ್ತಿ ಮೆತ್ತಗಾಗಿ

"ತುಂಬಾ ತೊಂದರೆ ತಮಗೆ" ಎಂದ.

ಇಂದಿರ ಕೆಲಸದ ಹುಡುಗಿಯ ಕಡೆ ತಿರುಗಿ "ನಿಂಗೀ. ಡ್ರೈವರ್‌ಗೆ ಕೈ ಕಾಲು ತೊಳೆದುಕೊಳ್ಳಲು ನೀರು ಕೊಡು" ಎಂದು ಹೇಳಿ ಮೋಹನನ ಕಡೆ

ತಿರುಗಿ "ಬನ್ನಿ" ಎಂದಳು.

ಮೋಹನ ತಲೆ ಎತ್ತಿ ಮಹಲಿನ ಮೇಲೆ ಕಪ್ಪು ಅಕ್ಷರಗಳಲ್ಲಿ ಬರೆದಿದ್ದ ಮನೆಯ ಹೆಸರನ್ನು ಓದುತ್ತಿದ್ದ. "ಮಿನುಗು ತಾರೆ."

"ಮನೆಯ ಹೆಸರು ತುಂಬಾ ಚೆನ್ನಾಗಿದೆ" ಎಂದ ಮೋಹನ. ಇಂದಿರ ಮನೆಯ ಮೇಲಿದ್ದ ದೊಡ್ಡ ದೀಪವೊಂದರ ಕಡೆ ಕೈ ತೋರಿಸಿ

"ರಾತ್ರಿಯ ಹೊತ್ತಿನಲ್ಲಿ ಗಿರಿಯ ಮೇಲೆ ಈ ದೀಪವೊಂದು ಮಾತ್ರ ಕಡು ಕತ್ತಲಿನಲ್ಲಿ ಮಿನುಗುತಾರೆಯಂತೆ ಹೊಳೆಯುತ್ತಿರುತ್ತದೆ. ಆ ದೀಪ ಈ ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲಾ ಕಾಣಿಸುತ್ತದೆ. ಆದುದರಿಂದಲೇ ಈ ಹೆಸರು ಮನೆಗೆ" ಎಂದಳು.

ಇಂದಿರ ಒಳಗೆ ಹೋದಳು. ಮೋಹನ ಸೂಟುಕೇಸನ್ನು ಬಿಚ್ಚಿ ತನಗೆ ಬೇಕಾದ ಬಟ್ಟೆಗಳನ್ನೂ ಸೋಪನ್ನೂ ಕೈಗೆ ತೆಗೆದುಕೊಂಡ.

ಇಂದಿರ ಮುಂದೆ ಬಂದು "ಬನ್ನಿ ಸ್ನಾನ ಮಾಡುವಿರಂತೆ" ಎಂದಳು.

ಸ್ನಾನ ಊಟ ಮುಗಿಯುವ ವೇಳೆಗೆ ಕೊಠಡಿಯೊಂದರಲ್ಲಿ ಶುಭ್ರವಾದ ಹಾಸಿಗೆಯನ್ನು ಹಾಸಿ ಸಿದ್ಧಗೊಳಿಸಲಾಗಿತ್ತು.

"ಪ್ರಯಾಣದ ಆಯಾಸ ತುಂಬಾ ಇರಬಹುದು. ನಿದ್ದೆಮಾಡಿ" ಎಂದು ಇಂದಿರ ಉಪಚರಿಸಿ ಹೊರಗೆ ಹೋದಳು.

ಮೋಹನ ಹಾಸಿಗೆಯ ಮೇಲೆ ಉರುಳಿಕೊಂಡ. ಪ್ರಯಾಣದಿಂದ ಆಯಾಸವಾಗಿದ್ದರೂ ಮೋಹನನಿಗೆ ನಿದ್ದೆ ಬರಲಿಲ್ಲ ಅವರ ಮನೆಯ ಅಂದ ಚೆಂದವನ್ನೂ, ಶ್ರೀಮಂತಿಕೆಯನ್ನೂ ನೋಡಿ ನಿದ್ದೆ ದೂರವಾಗಿತ್ತು. ಸಾಲ ದುದಕ್ಕೆ ತಾನು ಬಂದ ಕೆಲಸವೇನಾಗುವುದೋ ಎಂಬ ಆತಂಕದಿಂದ ಮೋಹನ ಒದ್ದಾಡುತ್ತಿದ್ದ

ದಾರಿಯುದ್ದಕ್ಕೂ ಡ್ರೈವರನಿಂದ ಮೊದಲ್ಗೊಂಡು ಪುಟ್ಟಯ್ಯನವರೆವಿಗೆ ಇಂದಿರೆಯ ಬಗೆಗೆ ಮಾತುಗಳನ್ನು ಕೇಳಿ ಮೋಹನ ಅವಳ ಚಿತ್ರವೊಂದನ್ನು ತಾನೇ ಮನಸ್ಸಿನಲ್ಲಿ ಚಿತ್ರಿಸಿಕೊಂಡಿದ್ದ.

ಇಂದಿರ ಲಾವಣ್ಯದ ಗಣಿಯಾಗಿರಬಹುದೆಂದೂ, ಆಕೆ ತನ್ನ ಸೌಂದರ್ಯ ದಿಂದ ಎಲ್ಲರನ್ನೂ ಆಳುತ್ತಿರಬಹುದೆಂದೂ ಮೋಹನ ಭಾವಿಸಿದ್ದ. ಆದರೆ ತನ್ನ ಕಲ್ಪನಾ ಸುಂದರಿಯೊಡನೆ ಇಂದಿರೆಯನ್ನು ಹೋಲಿಸಿ ನೋಡಿದಾಗ ಆಕೆ ತೀರ ಸಾಮಾನ್ಯಳು ಎಂದವನಿಗೆ ತೋರಿತು.

ಬಹುಶಃ ವ್ಯಕ್ತಿಗಿಂತಲೂ ವ್ಯಕ್ತಿತ್ವಕ್ಕೇ ಹೆಚ್ಚು ಮನ್ನಣೆ ಇದೆಯೇನೋ"

ಆಕೆಯ ವ್ಯಕ್ತಿತ್ವ ? ಅದರ ಬಗೆಗೆ ತಾನು ಸಂಪೂರ್ಣ ಅಜ್ಞ ಎಂದು ಮೋಹನ ಒಪ್ಪಿಕೊಂಡ. ಅಂತರಂಗದಾಳದಲ್ಲಿ ನಿರಾಸೆಯ ಸುಳಿಯೊಂದು ತಿರುಗುತ್ತಿತ್ತು.

ಪ್ರಯಾಣದ ಆಯಾಸದಿಂದಾಗಿ ಮೋಹನನಿಗೆ ಯಾವಾಗಲೋ ನಿದ್ದೆ ಬಂದಿತ್ತು. ಅವನಿಗೆ ಎಚ್ಚರವಾಗುವ ವೇಳೆಗೆ ಸಂಜೆ ಐದು ಗಂಟೆಯಾಗಿತ್ತು. ಮೋಹನ ಎದ್ದು ಹೊರಗೆ ಬಂದಾಗ ನಡುವಯಸ್ಸಿನ ಮಹಿಳೆಯೊಬ್ಬರು ಪುಟ್ಟಯ್ಯನೊಡನೆ ಮಾತನಾಡುತ್ತಾ ನಿಂತಿದ್ದರು.

ಪುಟ್ಟಯ್ಯ ಮೋಹನನನ್ನು ಕಂಡೊಡನೆ

"ನಿದ್ದೆ ಚೆನ್ನಾಗಿ ಬಂತಾ?" ಎಂದು ವಿಚಾರಿಸಿದರು.

"ಹೂಂ."

"ಇವರು ದೊಡ್ಡಮ್ಮಾವ್ರು."

ಇಂದಿರೆಯಿಂದ ಮೋಹನನ ಸಮಾಚಾರವನ್ನು ತಿಳಿದಿದ್ದ ಆಕೆ ಹೆಚ್ಚು ಕುತೂಹಲವನ್ನು ತೋರದೆ ಮೃದುವಾಗಿ

"ಇವರು ಊರಿನಲ್ಲಿ ಇಲ್ಲದೇ ಇರುವುದರಿಂದ ತಮಗೆ ತುಂಬಾ ತೊಂದರೆಯಾಗುತ್ತಿದೆಯೇನೋ?" ಎಂದರು.

"ಹಾಗೇನಿಲ್ಲ. ಇನ್ನೂ ನನ್ನಿಂದ...." ಎಂದು ಮೋಹನ ಹೇಳುವಷ್ಟರಲ್ಲಿ ಆಕೆ

"ನಮಗೆ ತೊಂದರೆಯೇ ಇಲ್ಲ. ಈ ರೀತಿಯ ತೊಂದರೆ ಅನುಭವಿಸೋಕೆ ನಾವು ಯಾವಾಗಲೂ ತಯಾರು" ಎಂದರು.

ಆಕೆ ಹಾಗೆ ಮಾತನಾಡುವಾಗ ಮೋಹನನನ್ನು ಪರೀಕ್ಷಿಸುವವರಂತೆ ನೋಡಿದರು. ಮೋಹನ ಆಕೆಯ ನೋಟದೆದುರು ಸಂಕೋಚಗೊಂಡ.

ಇಂದಿರ ತಿಂಡಿಯ ತಟ್ಟೆಯನ್ನು ತಂದಾಗ ತಾಯಿ ಆಕೆಯ ಕಡೆ ತಿರುಗಿದರು. ಮೋಹನ ನಿಟ್ಟುಸಿರಿನೊಡನೆ ತಿಂಡಿಯ ತಟ್ಟೆಯನ್ನು ಕೈಗೆತ್ತಿಕೊಂಡ.

"ಸದಾಶಿವರಾಯರು ಯಾವತ್ತು ಬರುತ್ತಾರೆ?"

"ನಾಳೆ ಅಥವಾ ನಾಡಿದ್ದರಲ್ಲಿ ಬರಬಹುದು."

"ಹಾಗಾದರೆ ನಾನಿವತ್ತು ಸಂಜೆ ಚಿಕ್ಕಮಗಳೂರಿಗೆ ಹೋಗುತ್ತೇನೆ. ಅಲ್ಲಿ ನನ್ನ ಸ್ನೇಹಿತನ ಮನೆಯಿದೆ. ನಾಳೆ ಪುನಃ...."

"ಯಾಕೆ ಇಲ್ಲಿ ತಮಗೆ ಏನಾನರೂ ಅನಾನುಕೂಲವಿದೆಯೇ"

ಲಲಿತಮ್ಮನ ಪ್ರಶ್ನೆ ಚಾವಟಿಯಂತೆ ಮೋಹನನ ಮೇಲೆ ಬಂದು ಎರಗಿತು. ಮೋಹನ ಕೆಂಪಾಗಿ ತೊದಲಿದ.

"ಹಾಗೇನಿಲ್ಲ. ತಮಗೆ...."

ಒಳಬಾಗಿಲಿನಲ್ಲಿ ಇಂದಿರ ನಸುನಗುತ್ತಾ ನಿಂತಿದ್ದಳು. ಮೋಹನನ ತೊಳಲಾಟ ನೋಡಿ ಅವಳಿಗೆ ನಗು ಬಂದಿತ್ತು. ಆಕೆ ನಗುತ್ತಿದ್ದುದು ಬಹಳ ಅಪರೂಪವಾಗಿತ್ತು. ವಯಸ್ಸಿಗೆ ಮೀರಿದ ಗಾಂಭೀರ್ಯದಿಂದ ಅವಳ ಮುಖ ಬಣ್ಣದ ಚಿಟ್ಟೆಯ ಚಂಚಲತೆಯಿಂದ ದೂರವಾಗಿತ್ತು. ಹೂವಿಂದ ಹೂವಿಗೆ ಹಾರುವ ಚಿಟ್ಟೆಯನ್ನು ಹಿಡಿಯಲು ತವಕಿಸುವ ಎಳೆಯ ಬಾಲಕನ ಪುಟ್ಟ ಕೈ ಗಂಭೀರ ಸಾಗರದೆದುರು ನಿಶ್ಚಲವಾಗುವಂತೆ, ಮೋಹನ ಅವಳ ಎದುರಿಗೆ ಮೌನಿಯಾಗುತ್ತಿದ್ದ. ಈ ಹುಡುಗಿಯೊಡನೆ ಹುಡುಗಾಟ, ಸಲಿಗೆ, ಸ್ನೇಹ ಯಾವುದೂ ಸಾಧ್ಯವಿಲ್ಲವೆಂದು ಮೋಹನನಿಗೆ ಮನವರಿಕೆಯಾಯಿತು. ಇಂದಿರ ಮೆಲುವಾಗಿ ನಗುತ್ತಿರುವುದನ್ನು ನೋಡಿ ಮೋಹನ

'ಓಹೋ, ಈಕೆಗೆ ನಗಲು ಸಹಾ ಬರುತ್ತದೆ' ಎಂದುಕೊಂಡ.

ತಾಯಿ, ಮಗಳ ಉಪಚಾರದೊಡನೆ ಮೋಹನ ತಿಂಡಿ ತಿಂದ. ಇಂದಿರ ಹೆಚ್ಚು ಮಾತನಾಡದಿದ್ದರೂ ಹೆಚ್ಚು ಉಪಚಾರ ಮಾಡಿದವಳು ಅವಳೇ ಎಂದು ಮೋಹನ ಭಾವಿಸಿದ. ಲಲಿತಮ್ಮ ಮೋಹನನ ಮನೆಯವರ ಯೋಗಕ್ಷೇಮ ವಿಚಾರಿಸಿದರು.

"ನಿಮ್ಮ ತಂದೆ ತಾಯಿ ಆರೋಗ್ಯವೇ?"

"ಹೂಂ."

"ಒಡಹುಟ್ಟಿದವರು ಎಷ್ಟು ಮಂದಿ?"

"ನಾನೇ ದೊಡ್ಡವನು. ನನಗೆ ನಾಲ್ಕು ಜನ ತಮ್ಮಂದಿರು, ಮೂರು ಜನ ತಂಗಿಯರು ಇದ್ದಾರೆ.

"ಎಲ್ಲರೂ ಓದುತ್ತಿದ್ದಾರೇನೊ?"

"ಹೂಂ."

"ತಂಗಿಯರಲ್ಲಿ ಯಾರಿಗಾದರೂ ಮದುವೆ ಆಗಿದೆಯೆ?"

"ಒಬ್ಬಳಿಗೆ ಮಾತ್ರ ಆಗಿದೆ. ಉಳಿದವರಿಬ್ಬರು ಇನ್ನೂ ಚಿಕ್ಕವರು."

"ತಂದೆ ಇನ್ನೂ ಕೆಲಸದಲ್ಲಿದ್ದಾರೋ ಅಥವಾ ರಿಟೈರಾಗಿದ್ದಾರೊ?"

"ಇನ್ನೂ ಕೆಲಸದಲ್ಲಿದ್ದಾರೆ. ರಿಟೈರಾಗೋದಕ್ಕೆ ಇನ್ನೂ ನಾಲ್ಕು ವರ್ಷ ಬೇಕು."

ಲಲಿತಮ್ಮ ಮೃದುವಾಗಿ ನಕ್ಕು "ಸೊಸೇನ ಮನೆಗೆ ತರುವ ಯೋಚನೆ ಮಾಡಿದ್ದಾರೆಯೇನೋ?" ಎಂದರು.

ಮೋಹನ ನಾಚಿದ. ಇಂದಿರ ಅಲ್ಲಿರದಿದ್ದರೆ ಅವನು ಅಷ್ಟು ನಾಚುತ್ತಿರಲಿಲ್ಲವೇನೊ?

"ಇಲ್ಲ. ನನಗೀಗಲೇ ಮದುವೆಯಾಗುವ ಮನಸ್ಸಿಲ್ಲ."

"ಹಾಗಂದರೇನು? ವಿದ್ಯಾಭ್ಯಾಸ ಮುಗಿದಿದೆ. ಮದುವೆಯಾಗಿ ಹೆಂಡತೀನ ಮನೆಗೆ ಕರೆದುಕೊಂಡು ಬಂದರೆ...."

ಮೋಹನ ಕೊಂಚ ಆವೇಶದಿಂದಲೇ "ಇಲ್ಲ. ನಾನು ಅಮೆರಿಕಾಗೆ ಹೋಗಿ ವ್ಯಾಸಂಗ ಮುಗಿಸಿದ ಹೊರತು ಮದುವೆಯಾಗಬಾರದೆಂದು ಮನಸ್ಸು ಮಾಡಿದ್ದೇನೆ" ಎಂದ.

"ಇಲ್ಲಿ ಕಲಿಸದೇ ಇರುವ ವಿದ್ಯಾನ ಅಮೆರಿಕ ಕಲಿಸಿಕೊಡುತ್ತದೆಯೇನು?"

"ಹೂಂ. ಅದರಲ್ಲಿ ಸಂಶಯವೇ ಇಲ್ಲ. ನಾಗರೀಕತೆ, ವಿಜ್ಞಾನ, ಹಣ ಎಲ್ಲ ವಿಷಯಗಳಲ್ಲೂ ಅಮೆರಿಕಾ ಬಹಳ ಮುಂದಿದೆ...." ಮೋಹನ ತಾನು ಅಮೆರಿಕಾದಲ್ಲೇ ಹುಟ್ಟಿ ಬೆಳೆದವನಂತೆ ಮಾತನಾಡಿದ.

ಲಲಿತಮ್ಮ ನಗುತ್ತಾ "ಮಾತಿನಲ್ಲಿ ನಿಮಗೆ ತಿಂಡಿ ಸೇರಿತೋ ಇಲ್ಲವೋ ತಿಳಿಯಲಿಲ್ಲ, ಇಂದಿರಾ, ಅವರಿಗೆ...."

"ನನಗಿನ್ನೇನೂ ಬೇಡಿ. ಸಾಕು" ಎಂದ ಮೋಹನ.

ಮೋಹನ ಕೈತೊಳೆದುಕೊಂಡು ಹೊರಗೆ ಹೊರಟ. ಲಲಿತಮ್ಮ ಅಲ್ಲಿಂದೇ ವರಾಂಡದಲ್ಲಿ ನಿಂತಿದ್ದ ಪುಟ್ಟಯ್ಯನಿಗೆ

"ನಮ್ಮ ಎಸ್ಟೇಟನ್ನೆಲ್ಲಾ ತೋರಿಸಿಕೊಂಡು ಬನ್ನಿ" ಎಂದರು.

ಪುಟ್ಟಯ್ಯ ನಗುತ್ತಾ "ಅವರು ಹಸಿದ ಹೊಟ್ಟೇಲೇ ಎಸ್ಟೇಟನ್ನ ನೋಡಿದರು" ಎಂದರು.

ಆಕೆ ವಿಸ್ಮಯದಿಂದ "ಯಾವಾಗ ?" ಎಂದರು.

"ಬೆಳಿಗ್ಗೆ ಇಂದಿರಾನ ನೋಡಬೇಕಾದರೆ ಒಂದು ಪ್ರದಕ್ಷಿಣೆ ಬರಬೇಕಾಯಿತು."

"ಎಲ್ಲಿದ್ದಳು ಇಂದಿರಾ?"

"ಅವಳೆಲ್ಲಿರುತ್ತಾಳೆ? ಮನೆಗಿಂತಲೂ ಅವಳು ಇರುವುದೇ ತೋಟದಲ್ಲಿ"

"ಇಂದಿರಾ, ಇಂದಿರಾ" ಲಲಿತಮ್ಮ ಕೂಗಿದರು.

ಕೈಲೊಂದು ಕತ್ತಿ ಹಿಡಿದು ಇಂದಿರ ತಾಯಿಯ ಎದುರಿಗೆ ಬಂದಳು.

"ಹೊರಟೆಯಾ ತೋಟಕ್ಕೆ ?"

"ಹೂಂ. ಆ ನೀರಿನ ಟ್ಯಾಂಕ್ ಹತ್ತಿರ ಇರುವ ಗಿಡಗಳಿಗೆ ನೆರಳು ಬಹಳ

ಆಗಿಹೋಗಿದೆ. ಆದುದರಿಂದ ಅಲ್ಲಿ ಗಿಡಗಳು ಅಷ್ಟು ಸೊಂಪಾಗಿಯೂ ಬೆಳೆದಿಲ್ಲ, ಕಾಯಿಯೂ ಕಟ್ಟಿಲ್ಲ. ಆದುದರಿಂದ ಅಲ್ಲಿ ನಿಂತು ಆ ಬಸರಿ, ಹೊಂಗೆ ಮರದ ಕೆಲವು ರೆಂಬೆಗಳನ್ನು ಕಡಿಸಿ ಬರುತ್ತೇನೆ."

"ಹಾಗೆ ಈರುಳ್ಳಿ ಹಾಕಿಸಿತ್ತಲ್ಲಾ ಅದೇನಾಗಿದೆ ನೋಡಿಕೊಂಡು ಬಾ."

"ಆಗಲಮ್ಮ" ಎನ್ನುತ್ತಾ ಇಂದಿರ ಕಾಲಿಗೆ ಚಪ್ಪಲಿ ಮೆಟ್ಟಿದಳು. ಪುಟ್ಟಯ್ಯ ಮೋಹನನ ಕಡೆ ತಿರುಗಿ "ಬನ್ನಿ; ನಾವೂ ಒಂದು ಸುತ್ತು ಹಾಕಿಕೊಂಡು ಬರೋಣ. ಮನೆಯಲ್ಲಿ ಕುಳಿತೇನು ಮಾಡುವುದು?" ಎಂದರು.

ಮೋಹನನೂ ಉತ್ಸಾಹದಿಂದ "ನಡೆಯಿರಿ" ಎಂದ.

ಮೋಹನ, ಇಂದಿರ, ಪುಟ್ಟಯ್ಯ ಮೂವರೂ ಜೊತೆಯಾಗಿ ಹೊರಟುದನ್ನು ನೋಡುತ್ತಾ ಲಲಿತಮ್ಮ ಅಲ್ಲಿಯೇ ನಿಂತರು. ಯಾವುದೋ ಆಸೆಯು ಹೊಂಬೆಳಕು ಅವರ ಕಣ್ಣುಗಳಲ್ಲಿ ಮಿನುಗಿ ಮಾಯವಾಯಿತು. ಅವರು ಕಣ್ಣು ಮರೆಯಾಗುವವರೆಗೆ ಆಕೆ ಅಲ್ಲಿಯೇ ನಿಂತಿದ್ದು ನಂತರ ಒಳಗೆ ಹೋದರು.

ದಾರಿಯುದ್ದಕ್ಕೂ ಬೆಳೆದಿದ್ದ ಕಾಫಿ ಗಿಡಗಳ ಅನವಶ್ಯಕವಾದ ರೆಂಬೆಗಳನ್ನು ಕತ್ತಿಯಿಂದ ಸವರುತ್ತಾ ಇಂದಿರಾ ಸಾಗಿದ್ದಳು. ಪುಟ್ಟಯ್ಯನ ಕೈಯಲ್ಲಿ ಕತ್ತಿಯಿದ್ದರೂ ಅವನು ಗಿಡಗಳ ತಂಟೆಗೆ ಹೋಗದೆ ಮೋಹನನನ್ನು ಮಾತನಾಡಿಸುತ್ತ ನಡೆದಿದ್ದ. ಸ್ವಭಾವತಃ ಮಾತುಗಾರನಾದ, ಹರಟೆಪ್ರಿಯನಾದ ಮೋಹನ ಇಂದಿರಳೆದುರಿಗೆ ಮೌನವಾಗಿರುತ್ತಿದ್ದ. ಅವನಿಗೆ ಹುಡುಗಿಯರೊಡನೆ ಮಾತನಾಡುವುದು ಹೊಸದೇನಾಗಿರಲಿಲ್ಲ. ಕಾಲೇಜಿನಲ್ಲಿ ತನ್ನ ಸಹಪಾಠಿಗಳನ್ನು ಮಾತನಾಡಿಸಿ ಅಭ್ಯಾಸವಾಗಿತ್ತು. ಆದರೂ ಇಂದಿರನನ್ನು ಸಲಿಗೆಯಿಂದ ಮಾತನಾಡಿಸುವುದು ಅವನಿಗೆ ಸಾಧ್ಯವಿರಲಿಲ್ಲ. ಅವಳ ಗಾಂಭೀರ್ಯ, ಕ್ಲುಪ್ತ ಮಾತುಕತೆ, ಯಾವಾಗಲು ಒಂಟಿಯಾಗಿರಲು ಬಯಸುವ ಸ್ವಭಾವ ಇವುಗಳನ್ನು ನೋಡಿ ಅವನು ಅವಳೊಡನೆ ಸಲಿಗೆಯಿಂದ ಮಾತನಾಡಲು ಹಿಂಜರಿದಿದ್ದ. ಆದರೂ ಜೊತೆಯಲ್ಲಿ ಬರುವಾಗ ಒಂದು ಸಲವೂ ಮಾತಾಡಿಸದಿರುವುದು ಚೆನ್ನಾಗಿರುವುದಿಲ್ಲವೆಂದು ತಿಳಿದು ಮೋಹನ ಕೇಳಿದ.

"ಗಿಡದ ಚಿಗುರನ್ನೆಲ್ಲಾ ಹೀಗೆ ಕಡಿದುಬಿಡುತ್ತೀರಲ್ಲಾ ಗಿಡ ಒಣಗಿ ಹೋಗುವುದಿಲ್ಲವೇ?"

ಇಂದಿರ ಅವನ ಕಡೆ ತಿರುಗದೇ ಉದ್ದವಾಗಿ ಬೆಳೆದುಕೊಂಡು ಹೋಗಿದ್ದ ಸಣ್ಣ ರೆಂಬೆಗಳನ್ನು ಕತ್ತಿಯಿಂದ ಸವರುತ್ತಾ

"ಕಾಫಿ ಗಿಡ ಉದ್ದವಾಗಿ ಬೆಳೆಯಬಾರದು. ಅಗಲವಾಗಿ, ಛತ್ರಿಯಂತೆ

ಹರಡಿಕೊಂಡು ಬೆಳೆದ ಗಿಡದಲ್ಲಿ ಬೆಳೆ ಹೆಚ್ಚು. ಹೀಗೆ ಉದ್ದವಾಗಿ ಗಿಡವನ್ನು ಬೆಳೆಯುಗೊಟ್ಟರೆ ಚಿಗುರುರೆಂಬೆಗಳು ಗಿಡನ ಸಾರವನ್ನೆಲ್ಲಾ ಹೀರಿಬಿಡುತ್ತವೆ. ಆದುದರಿಂದ ನಾವು ಕತ್ತರಿಸಿಬಿಡುತ್ತೇವೆ. ಗಿಡ ಒಣಗುವುದಿಲ್ಲ" ಎಂದಳು.

ಪುಟ್ಟಯ್ಯ ನಸ್ಯತೀಡುತ್ತಾ "ಕಾಫಿ ಗಿಡಗಳು. ನಮ್ಮ ಚೋಮನ ಹಾಗೆ ಅಡ್ಡಡ್ಡವಾಗಿಬೆಳೆಯಬೇಕು. ಕಳ್ಳುಕುಡಿದು ಕುಡಿದು ಅವನುಹ್ಯಾಗೆ ಹೊಟ್ಟೆ ಬೆಳೆಸಿದಾನೇಂತೀರಿ. ಅವನಂತಹ ಹೊಟ್ಟೆಯನ್ನು ನೀವು ಹುಡುಕಿದರೂ ನೋಡಲಾರಿರಿ. ಈ ಸುತ್ತಮುತ್ತಲಿನಲ್ಲೇ ಅವನ ಹೊಟ್ಟೆಯಂತಹದು ಮರ ಬೇರೊಂದಿಲ್ಲ. ಅವನನ್ನು ಕರೆದು ನಿಮಗೆ ತೋರಿಸುತ್ತೇನೆ. ತಾಳಿ" ಎನ್ನುತ್ತಾ ಪುಟ್ಟಯ್ಯ "ಚೋಮಾ, ಚೋಮಾ" ಎಂದು ಕೂಗಿದರು.

ಸ್ವಲ್ಪ ದೂರದಲ್ಲಿಯೇ ಗಿಡಗಳ ಗುಂಪಿನ ಹತ್ತಿರ ಕುಳಿತು ಕೆಲಸಮಾಡು ತ್ತಿದ್ದ ಹಲವರ ಪೈಕಿ ಒಬ್ಬ ಎದ್ದು ನಿಂತು

"ಏನು?" ಎಂದ.

"ಸ್ವಲ್ಪ ಬಾ ಇಲ್ಲಿ."

ಚೋಮ ಆನೆಯಂತೆ ಹೆಜ್ಜೆ ಹಾಕುತ್ತಾ ಬಂದ. ಹೆಜ್ಜೆ ಹೆಜ್ಜೆಗೂ ಅವನ ಹೊಟ್ಟೆ ಅದುರುತ್ತಿತ್ತು. ಬೊಜ್ಜಿನ ಭಾರಕ್ಕೆ ಅವನ ಬೆನ್ನು ಬಗ್ಗಿ ಹೋಗಿತ್ತು. ಆತುರದಿಂದ ಬರುವಾಗ ಚೋಮ ಕಲ್ಲೊಂದನ್ನು ಎಡವಿದ.

"ನಿಧಾನವಾಗಿ ಬಾ. ಆತುರವೇನಿಲ್ಲ" ಎನ್ನುತ್ತಾ ಪುಟ್ಟಯ್ಯ ಮೋಹನನ ಕಡೆ ತಿರುಗಿ

"ಪಾಪ! ಅವನಿಗೆ ನೆಲ ಕಾಣೋದಿಲ್ಲ. ಅವನಿಗೂ ನೆಲಕ್ಕೂ ನಡುವೆ ಹೊಟ್ಟೆ ಪರದೆಯ ಹಾಗೆ ಬಂದುಬಿಟ್ಟಿದೆ" ಎಂದರು.

ಚೋಮ ಹತ್ತಿರ ಬರುತ್ತಲೇ ಪುಟ್ಟಯ್ಯ ಮೋಹನನಿಗೆ "ಈಗಲೇ ಕಣ್ಣು ತುಂಬಾ ನೋಡಿಬಿಡಿ. ಮುಂದೆ ನಿಮಗೆ ಇಂತಹದನ್ನು ನೋಡಬೇಕೆಂದರೂ ಸಿಗೋದಿಲ್ಲ" ಎಂದರು.

ಸಂದರ್ಭವನ್ನರಿಯದ ಚೋಮ ಅಲ್ಲಿಯೇ ನಿಂತಿರುವುದನ್ನು ನೋಡಿ ಇಂದಿರ ಕನಿಕರದಿಂದ

"ಏನಿಲ್ಲ, ನಿನ್ನ ಕೆಲಸ ಮಾಡು ಹೋಗು" ಎಂದಳು.

ಚೋಮ ಮತ್ತೆ ತನ್ನ ಕೆಲಸಕ್ಕೆ ಹೊರಟುಹೋದ. ಇಂದಿರ ಕೊಂಚ ಬೇಸರದಿಂದ

"ಇದೆಂತಹ ತಮಾಷಿ ನಿಮ್ಮದು. ಚೆನ್ನಿಲ್ಲ" ಎಂದಳು.

"ನೋಡು ಅಮ್ಮಯ್ಯಾ, ನಮ್ಮ ಮೋಹನರಾಯರಿಗೆ ಇಂತಹ ವಸ್ತು ಎಲ್ಲಿ ಸಿಕ್ಕಬೇಕು ಹೇಳು. ನಮ್ಮೂರಿಗೆ ಬಂದಿರುವಾಗ ನಮ್ಮಲ್ಲಿರುವ ಅಪ ರೂಪದ ವಸ್ತುಗಳನ್ನು ಅವರಿಗೆ ತೋರಿಸುವುದು ನಮ್ಮ ಕರ್ತವ್ಯ ಅಲ್ಲವೇ?"

ಇಂದಿರ ನಸುನಕ್ಕು "ಹಾಗಾದರೆ ನಾನೂ ಅವರಿಗೆ ಒಂದು ಅಪರೂಪದ ವಸ್ತು ತೋರಿಸಲೇ? ನನ್ನ ದೃಷ್ಟಿಯಲ್ಲಿ ಅದಂತೂ ಬಹಳ ಅದ್ವಿತೀಯ ವಾದುದು" ಎಂದಳು.

ಅವಳು ತನ್ನ ಬಿಗುವನ್ನು ಕಳಚಿ ಹಾಕಿದುದನ್ನು ನೋಡಿ ಪುಟ್ಟಯ್ಯನಿಗೆ ಅಪಾರ ಆನಂದವಾಯಿತು. ಆತ ಕೆಂಪನೆಯ ಹಲ್ಲುಗಳೆಲ್ಲಾ ಕಾಣುವಂತೆನಕ್ಕು

"ತೋರಿಸು ತಾಯಿ" ಎಂದರು.

"ನಿಮಗಿಂತ ಇಲ್ಲಿ ವಿಚಿತ್ರವಾಗಿರುವವರು ಯಾರಿದಾರೆ? ಎಲ್ಲರೂ ಬಾಯಿಂದ ಅನ್ನ ಊಟ ಮಾಡಿದರೆ ನೀವು ಮೂಗಿನಿಂದ ನಶ್ಯ ಮುಕ್ಕಿ ಹೊಟ್ಟೆ ತುಂಬಿಸಿಕೊಳ್ಳುತ್ತೀರಿ."

ಇಂದಿರ ಸೇಡು ತೀರಿಸಿಕೊಳ್ಳುವವಳಂತೆ ಹೇಳಿದಳು. ಮೋಹನ ನಗುತ್ತಾ ನಿಂತಿದ್ದ. ಪುಟ್ಟಯ್ಯ ಮತ್ತೊಮ್ಮೆ ಮೂಗಿಗೆ ನಶ್ಯ ತುಂಬಿಕೊಂಡು

"ತಾಯೀ, ಇದರ ಸವಿ ನನಗೆ ಗೊತ್ತು. ನಿನಗೇನು ಗೊತ್ತಿದೆ ಹೇಳು? ಒಂದು ಸಲ ನೀನು ಹಾಕಿಕೊಂಡು ನೋಡು—ಆಮೇಲೆ ನಶ್ಯ ಹಾಕಿಕೊಳ್ಳು ವುದರಲ್ಲಿ ನನ್ನೂ ಮೀರಿಸಿಬಿಡುತ್ತೀಯ" ಎಂದರು.

"ನನಗೆ ಬೇಡೀಪ್ಪ. ಅದೆಲ್ಲಾ ನಿಮಗೇ ಇರಲಿ" ಎಂದಳು ಇಂದಿರ.

"ಮೋಹನರಾಯರೇ, ನಿಮಗೆ ಮತ್ತೊಂದು ಅಪೂರ್ವವಾದ ವಸ್ತು ತೋರಿಸಲೇನು?"

"ಹೂಂ. ತೋರಿಸಿ. ಎಲ್ಲವನ್ನೂ ನೋಡಿಕೊಂಡು ಹೊರಡುವುದು ವಾಸಿ"

ಪುಟ್ಟಯ್ಯ ವಿಶ್ವಾಸದಿಂದ ಇಂದಿರೆಯ ಕಡೆ ನೋಡುತ್ತಾ

"ನಮ್ಮ ಬೆಳ್ಳಿಮೋಡದ ಮಿನುಗುತಾರೆಯೆಂದರೆ ಈ ಹುಡುಗಿ ನೋಡಿ" ಎಂದರು.

"ಸಾಕು ನಿಮ್ಮ ಹುಡುಗಾಟ" ಎಂದು ಇಂದಿರ ಪುಟ್ಟಯ್ಯನನ್ನು ಗದರಿಸಿ ದರೂ ಅವಳ ಮುಖ ನಸುಕೆಂಪಾಗಿತ್ತು.

ಅತಿ ಸಾಮಾನ್ಯ ರೂಪಿನ ಇಂದಿರ ಆ ಗಳಿಗೆಯಲ್ಲಿ ಕಡು ಬೆಡಗಿನ ರಾಣಿ ಯಂತೆ ಮೋಹನನ ಕಣ್ಣಿಗೆ ಕಂಡಳು.

ಇಂದಿರ ನಾಚಿದುದನ್ನು ನೋಡಿ ಪುಟ್ಟಯ್ಯ ಅಪ್ರತಿಭನಾದ. ಅವಳ

ವರ್ತನೆ ಅವನಿಗೆ ತೀರ ಹೊಸದಾಗಿತ್ತು. ಅವಳ ಒಡ್ಡಾಟವನ್ನು ನೋಡಿ ಪುಟ್ಟಯ್ಯ ಮತ್ತೊಂದು ಮಾತು ಸೇರಿಸಿದ.

"ಮಿನುಗುತಾರೆ ಅವಳಾದರೆ ಮೋಡ ನಾನು."

ಒಂದು ಗಳಿಗೆಯ ಹಿಂದೆ ಅವರನ್ನು ಆವರಿಸಿದ್ದ ಗಾಂಭೀರ್ಯದ ಮುಸುಕು ಪುಟ್ಟಯ್ಯನ ಮಾತಿನಿಂದಾಗಿ ಹರಿದು ನಗುವಿಗೆಡೆ ಕೊಟ್ಟಿತು.

ಅಲ್ಲಿಂದ ಅವರು ನೀರಿನ ಟ್ಯಾಂಕಿನ ಬಳಿ ನಡೆದರು. ಅಲ್ಲಿ ಒತ್ತಾಗಿ ಬೆಳೆದಿದ್ದ ಹೊಂಗೆ, ಹಾಲವಾಣ, ಬಸರಿ ಮರಗಳ ಯಾವ ಯಾವ ರೆಂಬೆಗಳನ್ನು ಕಡಿಯಬೇಕೆಂದು ಪುಟ್ಟಯ್ಯನಿಗೂ, ಇಂದಿರೆಗೂ ಚರ್ಚೆಯಾಯಿತು

"ಹೀಗೆ ಗಿಡಗಳ ಮೇಲೆ ನೆರಳು ಕವಿದುಕೊಂಡರೆ ಗಿಡ ಹೆಂಗೆ ಬೆಳೆದಾತು? ಅದಕ್ಕೇ ಗಿಡಗಳೆಲ್ಲಾ ಕರಕಲಾಗಿ ಹೋಗಿವೆ" ಎನ್ನುತ್ತಾ ಪುಟ್ಟಯ್ಯ ಆಳುಗಳಿಗೆ, ನೆರಳು ಕೊಡುತ್ತಿದ್ದ ಮರಗಳ ಕೆಲವು ರೆಂಬೆಗಳನ್ನು ಕಡಿಯಲು ಹೇಳಿದರು. ಆಳುಗಳು ಮರಗಳನ್ನು ಹತ್ತಿ ಕಡಿಯಲು ಮೊದಲುಮಾಡುತ್ತಲೇ ಪುಟ್ಟಯ್ಯ ಇಂದಿರನಿಗೆ

"ನಾವು ಹೋಗೋಣ ಅಮ್ಮಯ್ಯ. ನಾಳೆ ಬೆಳಿಗ್ಗೆ ಬಂದು ಸರಿಯಾಗಿ ಕಡಿದಿದಾರೋ ಇಲ್ಲವೋಂತ ನೋಡಿದರಾಯಿತು. ಇಲ್ಲೇ ನಿಂತರೆ ರಾಯರಿಗೂ ಬೇಸರವಾದೀತು" ಎಂದ.

"ನನಗೇನೂ ಬೇಜಾರಿಲ್ಲ" ಎಂದ ಮೋಹನ ಆತುರದಿಂದ.

"ಬೇಜಾರಾದರೆ ತಾನೇ ನೀವು ಬಾಯಿಬಿಟ್ಟು ಹೇಳೋದು ಸಾಧ್ಯವೇ? ಬನ್ನಿ ನಾವು ಹೋಗೋಣ" ಎನ್ನುತ್ತಾ ಪುಟ್ಟಯ್ಯ ಮುಂದುವರಿದ.

"ನಾನಿಲ್ಲೇ ಇರ್ತೀನಿ. ನೀವು ಹೋಗಿ" ಎಂದಳು ಇಂದಿರ. ಹೋದರೆ ಹೇಗೋ, ನಿಂತರೆ ಹೇಗೋ ಎಂದು ಮೋಹನನ ಮನಸ್ಸು ಹೊಯ್ದಾಡಿತು.

ಕಾಫಿ ಗಿಡಗಳ ಮೇಲೆ ಸಣ್ಣ ಕೊಂಬೆಯೊಂದು ಬಿದ್ದುದನ್ನು ನೋಡಿ ಇಂದಿರ ಕತ್ತೆತ್ತಿ ಗದರಿಸಿದಳು.

"ಸ್ವಲ್ಪ ಹುಷಾರಾಗಿ ಕಡಿಯೋ, ಸಿಕ್ಕಿಸಿಕ್ಕಿದಕಡೆ ಕೊಂಬೆ ಬೀಳಿಸಬೇಡ"

ಅವಳು ತನ್ನ ಕೆಲಸದಲ್ಲಿ ಮಗ್ನಳಾಗಿದ್ದಂತೆ ತೋರಿತು. ಹುಡುಗಿಯೊಡನೆ ಒಬ್ಬನೇ ನಿಲ್ಲುವುದಕ್ಕಿಂತ ಪುಟ್ಟಯ್ಯನೊಡನೆ ತಾನು ಹೋಗುವುದೇ ಸರಿಯೆಂದು ಮೋಹನನಿಗೆ ತೋರಿತು. ಅವನೂ ಪುಟ್ಟಯ್ಯನನ್ನು ಹಿಂಬಾಲಿಸಿದ. ಮೋಹನ ಮರೆಯಾದ ಕೂಡಲೆ ಇಂದಿರ ಕಣ್ಣು ಹೊರಳಿಸಿ ಸುತ್ತಲೂ ನೋಡಿದಳು.

ಮಾರನೆಯ ದಿನ ಬೆಳಿಗ್ಗೆ ಸುಮಾರು ಹತ್ತು ಗಂಟೆಯ ಸಮಯದಲ್ಲಿ 'ಮಿನುಗುತಾರೆ'ಯ ಮುಂದೆ ಕಾರಿನ ಸದ್ದಾಗುತ್ತಲೇ ಪುಟ್ಟಯ್ಯ ಸಂಭ್ರಮದಿಂದ

"ರಾಯರು ಬಂದರು" ಎನ್ನುತ್ತಾ ಮುಂಬಾಲಿಗೆ ಓಡಿಹೋದ. ಲಲಿತಮ್ಮ ಆತುರದಿಂದ ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಹೊರಗೆ ಬಂದರು. ಹಳೆಯ ಮಾಸಪತ್ರಿಕೆಯೊಂದನ್ನು ಓದುತ್ತಿದ್ದ ಮೋಹನ ಪತ್ರಿಕೆ ಕೆಳಗಿಟ್ಟು ಎದ್ದು ನಿಂತ. ಎಲ್ಲರಂತೆ ಹೊರಗೆ ಹೋಗಿ ಅವರನ್ನು ಸ್ವಾಗತಿಸು ವಷ್ಟು ಪರಿಚಯ ಅವನಿಗಿರಲಿಲ್ಲ. ತಾನೊಬ್ಬ ಒಳಗೆ ಉಳಿದರೆ ಹೇಗೆ ಎಂದು ಯೋಚಿಸುತ್ತಾ ಮೋಹನ ನಿಂತಲ್ಲಿಯೇ ನಿಂತಿದ್ದ.

"ಬೆಳ್ಳಿಮೋಡ"ದ ಧಣಿಯನ್ನು ಕಾಣುವುದಕ್ಕಿಂತ ಮುಂಚೆಯೇ ಅವರ ಗಡುಸಾದ ಧ್ವನಿ ಮೋಹನನಿಗೆ ತೇಲಿ ಬಂತು.

"ಇಂದಿರ ಎಲ್ಲಿ ?"

ಮನೆಗೆ ಬಂದ ಕೂಡಲೇ ತಂದೆ ಕೇಳಿದ ಮೊದಲ ಪ್ರಶ್ನೆಯದು.

ಪುಟ್ಟಯ್ಯ ಉತ್ತರ ಕೊಟ್ಟರು "ತೋಟಕ್ಕೆ ಹೋಗಿದ್ದಾಳೆ."

"ಇಂದಿರ ಹುಷಾರಾಗಿದಾಳೆ ತಾನೆ ?"

ಮಗಳನ್ನಗಲಿ ಹಲವಾರು ವರ್ಷಗಳಾಗಿರುವಂತೆ ತಂದೆ ಮಗಳ ಯೋಗ ಕ್ಷೇಮ ವಿಚಾರಿಸಿದರು.

"ಹೂಂ. ನಿಮ್ಮ ಸ್ನೇಹಿತರು....ಅವರ...."

ಓ ! ಆ ಹುಡುಗ ಬಂದಿದಾನೇನು ? ಎಲ್ಲಿ...." ಎನ್ನುತ್ತಾ ರಾಯರು ಗಡಿಬಿಡಿಯಿಂದ ಒಳಗೆ ಬಂದರು. ಅವರನ್ನು ಹಿಂಬಾಲಿಸಿ ಪುಟ್ಟಯ್ಯ, ಲಲಿತಮ್ಮ ಒಳಗೆ ಬಂದರು. ಮೋಹನ ಎರಡು ಹೆಜ್ಜೆ ಮುಂದೆ ಬಂದು ಕೈ ನೀಡಿದ. ಅವನ ನೀಡಿದ ಕೈಯನ್ನು ತಮ್ಮ ದೊಡ್ಡ ಹಿಡಿಯಲ್ಲಿ ಬಿಗಿಯಾಗಿ ಹಿಡಿದು ಸದಾಶಿವರಾಯರು.

"ಕ್ಷಮಿಸಿ ಮೋಹನರಾವ್. ಬಂದಾಗ ನಾನಿರೋದಿಕ್ಕೆ ಸಾಧ್ಯವಾಗಲಿಲ್ಲ. ಆದರೆ ತಮಗೆ ಯಾವುದೂ ತೊಂದರೆಯಾಗಲಿಲ್ಲವಷ್ಟೆ ?" ಎಂದರು.

"ಅವರು ಬಂದಾಗ ನಾನು ಇರಲಿಲ್ಲ" ಲಲಿತಮ್ಮ ಹೇಳಿದರು. ರಾಯರು ಸರಕ್ಕನೆ ಹೆಂಡತಿಯ ಕಡೆ ತಿರುಗಿ

"ಯಾಕೆ ? ಕಾರಣ ಏನು ?" ಎಂದರು.

"ನಾನು ಚಿಕ್ಕಮಗಳೂರಿಗೆ ಹೋಗಿದ್ದೆ. ಇಂದಿರ ಇದ್ದಳು...."

ಇಂದಿರೆಯ ಹೆಸರು ಕೇಳಿದ ಕೂಡಲೇ ಆತನ ಮುಖ ಹತ್ತು ವರ್ಷ ಕಡಿಮೆ ವಯಸ್ಸಿನದಾಯಿತು.

"ಪುಟ್ಟಯ್ಯ ಇಂದಿರಾಗೆ ನಾನು ಬಂದಿದೀನೀಂತ ಹೇಳಿ ಕಳಿಸಿ. ನೀವು ಬಂದದ್ದು ಬಹಳ ಸಂತೋಷ ಮೋಹನರಾವ್. ಏನು ಮಾಡಲಿ, ನಾನು ಹೋಗಲೇಬೇಕಾಗಿ ಬಂತು...."

"ಪರವಾಗಿಲ್ಲ ನನಗೆ ಯಾವುದಕ್ಕೂ ತೊಂದರೆಯಾಗಲಿಲ್ಲ."

"ಲೋ ಬೋರಾ. ನನ್ನ ಸೂಟ್‌ಕೇಸ್ ಒಳಗಿಡು, ನಂಜೀ ಸ್ನಾನಕ್ಕೆ ನೀರು ತೋಡಲೀಂತ ಹೇಳು...."

ಸದಾಶಿವರಾಯರು ಮಾತನಾಡುತ್ತಾ ಅತ್ತಿಂದಿತ್ತ ಓಡಾಡುತ್ತಾ ಟೈ ಗಂಟನ್ನು ಬಿಚ್ಚಿದರು.

ಅವರ ತಲೆಯ ಮುಂಭಾಗ ಪಟ್ಟೆಗಟ್ಟಿತ್ತು. ತಲೆಯ ಹಿಂಭಾಗದಲ್ಲಿದ್ದ ಕೂದಲು ಸ್ವಲ್ಪ ಬಿಳಿದಾಗತೊಡಗಿತ್ತು. ಸುಮಾರು ಐವತ್ತೆರಡು ವರ್ಷ ವಯಸ್ಸಿನ ರಾಯರು ತಮ್ಮ ನಿಲುವು, ಚಟುವಟಿಕೆಗಳಿಂದಾಗಿ ಇನ್ನು ಎಳೆಯ ವಯಸ್ಸಿನವರಂತೆ ಕಾಣುತ್ತಿದ್ದರು. ಸ್ವಲ್ಪ ಕಿರಿದಾಗಿ ಕೆಂಪಗಿದ್ದ ಕಣ್ಣುಗಳಲ್ಲಿ ವ್ಯವಹಾರ ಕುಶಲತೆ, ಜಾಣ್ಮೆ, ದರ್ಪ ಅಡಕವಾಗಿದ್ದವು.

"ತಮ್ಮಯ್ಯನವರು ಬರಲಿಲ್ಲವೇ ?"

"ಏನೋ ಬರೋಕಾಗಲಿಲ್ಲ, 'ನೀನು ಹೋಗು ನಾನು ಕಾಗದ ಕೊಡುತ್ತೇನೆ" ಎಂದರು. ಕಾಗದ ಕೊಟ್ಟಿದಾರೆ...."

"ಇರಲಿ ಸ್ನಾನ ಆದಮೇಲೆ ನೋಡುತ್ತೇನೆ."

ನಂಜಿ ಬಂದು "ನೀರು ತೋಡಿದೆ" ಎಂದಳು.

ರಾಯರು ಗಡಿಬಿಡಿಯಿಂದ ಎದ್ದು "ಈಗ ಬಂದುಬಿಟ್ಟೆ" ಎನ್ನುತ್ತಾ ಒಳ ಬಾಗಿಲಿನ ಪರದೆ ಸರಿಸಿ ಮಾಯವಾದರು. ಅವರು ಸ್ನಾನ ಮಾಡಿ ಹೊರಗೆ ಬರುವಷ್ಟರಲ್ಲಿ ಮೋಹನ ತನ್ನ ಸೂಟುಕೇಸಿನಿಂದ ತಮ್ಮಯ್ಯನವರು ಬರೆದು ಕೊಟ್ಟಿದ್ದ ಕಾಗದವನ್ನು ಹೊರಗೆ ತೆಗೆದುಕೊಂಡ.

ಸದಾಶಿವರಾಯರು ಸ್ನಾನ ಮಾಡಿ ಶುಭ್ರ ಬಟ್ಟೆಗಳನ್ನು ಧರಿಸಿ ಸಿಗಾರನ್ನು ಬಾಯಲ್ಲಿ ಕಚ್ಚಿಕೊಂಡೇ ಹೊರಗೆ ಬಂದರು.

"ಕಾಗದ ತಗೊಳ್ಳಿ."

"ಪುಟ್ಟಯ್ಯ, ನನ್ನ ಕನ್ನಡಕ ತಂದು ಕೊಡಿ."

ಆತ ತಂದುಕೊಟ್ಟ ಕನ್ನಡಕ ಹಾಕಿಕೊಂಡು ರಾಯರು ಕವರನ್ನು ಒಡೆದು

ಕಾಗದವನ್ನು ಓದಿದರು. ಕಾಗದವನ್ನು ಓದಿ ಮುಗಿಸಿ

"ಎಲ್ಲಾ ಸರಿ. ಆದರೆ ಯಾವುದೂ ಈಗಲೇ ಹೇಳುವಂತಿಲ್ಲ...."

"ನೀವು ರೆಕಮೆಂಡ್ ಮಾಡೋಕೆ ಆಗುವುದಿಲ್ಲವೇ?"

"ಮಾಡಬಹುದು ಆದರೆ ನಾನೊಬ್ಬನೆ ಮಾಡಿದರೆ ಏನು ಪ್ರಯೋಜನ? ಉಳಿದ ಹತ್ತು ಜನ ಒಪ್ಪಬೇಕಲ್ಲವೆ? ನೋಡೋಣ. ನನ್ನ ಪ್ರಯತ್ನ ನಾನು ಮಾಡುತ್ತೇನೆ ಆದರೆ ನೀವು ಯಾವ ಆಸೆಯನ್ನು ಇಟ್ಟುಕೊಳ್ಳಬೇಡಿ. ಆಮೇಲೆ ನಿರಾಶೆಯಾಗಬೇಕಾದೀತು."

ಮೋಹನ ನಿರಾಶೆಗೊಂಡ. ಅವನ ಮುಖ ಕಳೆಗುಂದಿದುದನ್ನು ನೋಡಿ ರಾಯರು "ಅಷ್ಟೊಂದು ನಿರಾಶರಾಗಬೇಡಿ. ನೋಡೋಣ" ಎಂದರು.

"ಕಮಿಟಿಯ ಮೀಟಿಂಗು ಪುನಃ ಯಾವಾಗ ಇದೆ?"

ಇನ್ನು ಹದಿನೈದು ದಿನಗಳಲ್ಲಿ ಯಾವುದೂ ಇತ್ಯರ್ಥವಾಗಬಹುದೂಂತ ತೋರುತ್ತದೆ."

ಮೋಹನ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದು ನಂತರ ತಲೆ ಎತ್ತಿ ವಿಷಾದದಿಂದ ನಕ್ಕು,

"ಇನ್ನೇನು ನಾನು ಬಂದ ಕೆಲಸವಾಯಿತು ಇನ್ನು ಹೊರಡಬಹುದಲ್ಲ?" ಎಂದ.

ರಾಯರು ನಕ್ಕು "ನೀವು ಬಂದ ಕೆಲಸ ಆಗಲಿಲ್ಲವಲ್ಲಾ" ಎಂದರು.

"ನಾನು ಇಲ್ಲಿದ್ದು ಏನು ಮಾಡಬೇಕು? ಕಮಿಟಿಯ ತೀರ್ಮಾನವನ್ನು ನೀವು ನನಗೆ ಕಾಗದದ ಮೂಲಕ ತಿಳಿಸಿದರೆ ಸಾಕು. ಮಧ್ಯಾಹ್ನ ನಾನು ಊರಿಗೆ ಹೊರಟು ಬಿಡುತ್ತೇನೆ."

"ನಮ್ಮ ತೋಟವೆಲ್ಲಾ ನೋಡಿಕೊಂಡು ನಿಧಾನವಾಗಿ ಹೋಗಬಹುದು"

"ಎಲ್ಲಾ ನೋಡಾಗಿದೆ" ಎನ್ನುತ್ತಾ ಮೋಹನ ಎದ್ದು ನಿಂತ.

ಇಂದಿರ ಹೊರಬಾಗಿಲಿನಿಂದ"ಅಣ್ಣಾ"ಎಂದು ಕೂಗುತ್ತಾ ಒಳಗೆ ಬಂದಳು

ರಾಯರು ಸ್ನೇಹದಿಂದ ''ಬಿಸಿಲಿನಲ್ಲಿ ಅಲೆದಾಡೋಕೆ ಪ್ರಾರಂಭ ಮಾಡಿದೆಯಾ? ಅಮ್ಮನಿಗೆ ಹೇಳು— ಮೋಹನರಾಯರು ಮಧ್ಯಾಹ್ನ ಊರಿಗೆ ಹೊರಡುತ್ತಾರಂತೆ ಅಂತ, ಹಾಗೇ ಡ್ರೈವರಿಗೆ ಅದನ್ನು ತಿಳಿಸು...."

''ಛೇ ಶ್ರಮಗೇಕೆ ವೃಥಾ ಶ್ರಮ? ಇಲ್ಲಿಂದ ಬಸ್ಸು ಸಿಗುತ್ತದೆಯಲ್ಲವೇ?"

''ಹಳ್ಳಿಗಳಿಗೆ ಹೋಗಿಬರುವ ಬಸ್ಸುಗಳೇನೋ ಸಿಕ್ಕುತ್ತವೆ. ಆದರೆ ಕಾರಿರುವಾಗ ಯಾಕೆ ಈ ಶ್ರಮ ?"

ಮೋಹನ ನಿರುತ್ತರನಾದ, ಇಂದಿರ ಅವನ ಮುಖದ ಮೇಲೆ ಒಡೆದು ಮೂಡಿದ ನಿರಾಶೆಯನ್ನು ಗಮನಿಸಿದಳು. ಅವನ ಚೆಲುವಾದ ನಗುಮುಖ ಈಗ ಬಾಡಿಹೋಗಿತ್ತು. ಇಂದಿರ ತಂದೆಯ ಕಡೆ ಪ್ರಶ್ನಾರ್ಥಕವಾಗಿ ನೋಡಿ ಒಳಗೆ ಹೋದಳು.

ಲಲಿತಮ್ಮ ಅಡಿಗೆ ಮನೆಯಲ್ಲಿ ಕೆಲಸದವಳಿಗೆ ಸಹಾಯ ಮಾಡುತ್ತಿದ್ದರು.

"ಅಮ್ಮಾ, ಮೋಹನರಾಯರು ಹೊರಟುಬಿಡುತ್ತಾರಂತೆ."

ಆಕೆ ಚಕಿತರಾಗಿ ಕೇಳಿದರು "ಇಷ್ಟು ಬೇಗ ?"

"ಹೂಂ. ಅವರು ಬಂದ ಕೆಲಸ ಆಗಲಿಲ್ಲವೇನೋ. ತುಂಬಾ ಮನಸ್ಸಿಗೆ ಹಚ್ಚಿಕೊಂಡಿರುವ ಹಾಗಿದೆ."

"ಇನ್ನೆರಡು ದಿನವಿದ್ದೇ ಹೋಗಬಹುದಲ್ಲಾ."

"ಸುಮ್ಮನೆ ಇಲ್ಲಿರೋಕೆ ಅವರೇನು ಮನೆ ಅಳಿಯ ಕೆಟ್ಟುಹೋದರೇ ?" ಎಂದಳು ಇಂದಿರ ತಮಾಷೆಗಾಗಿ,

ಲಲಿತಮ್ಮ ಮಾತನಾಡಲಿಲ್ಲ. ದೂರದ ಯೋಚನೆಯಲ್ಲಿ ಅವರ ಮನಸ್ಸು ಐಕ್ಯವಾಗಿತ್ತು. ಮೋಹನನ ಚೆಲುವಾದ ಮುಖವನ್ನು ಅವರು ನೆನೆಯುತ್ತಿದ್ದರು.

ಎಲ್ಲರ ಕಣ್ಮನಗಳನ್ನು ಸೆರೆ ಹಿಡಿಯುವಂತಹ ನಿಲುವು. ವಯಸ್ಕರಲ್ಲಿ ತಾಯ್ತನವನ್ನು ಚಿಮ್ಮಿಸುವ ಮುದ್ದು ಮುಖ, ಯುವತಿಯರಲ್ಲಿ ಬಯಕೆಯನ್ನೂ, ಮೋಹವನ್ನು ಮೂಡಿಸುವ ಮುಗುಳ್ನಗೆ,—ಒಟ್ಟಿನಲ್ಲಿ ಮರುಳುಗೊಳಿಸುವ ಆಕರ್ಷಕ ವ್ಯಕ್ತಿ....

ಇವನಿಗಿಂತಲೂ ಒಳ್ಳೆಯ ವರ ಇಂದಿರೆಗೆ ದೊರೆಯಲು ಸಾಧ್ಯವೇ ? ಹುಡುಗ ವಿದ್ಯಾವಂತನಾಗಿರುವುದರಿಂದಲೇ ಅವನ ಐಶ್ವರ್ಯವನ್ನು ಕುರಿತು ತಾವು ಯೋಚಿಸಬೇಕಾದುದಿಲ್ಲ. ಸಾಲದುದಕ್ಕೆ ಲಕ್ಷ್ಮಿ ತಮ್ಮ ಮೇಲೆ ಪೂರ್ಣ ಕಟಾಕ್ಷ ಬೀರಿದ್ದಾಳೆ, ಇಂದಿರ ತಮ್ಮ ಒಬ್ಬಳೇ ಮಗಳು. ಒಂದಲ್ಲ ಒಂದು ದಿನ ತಮ್ಮೆಲ್ಲ ಐಶ್ವರ್ಯಕ್ಕೂ ಅವಳೇ ಉತ್ತರಾಧಿಕಾರಿಣಿ. ಆದುದರಿಂದ ಅವಳ ಗಂಡನಾಗುವವನು ಬಡವನಾದರೇನಂತೆ ?

ಮೋಹನನ ಚೆಲುವಿನೊಡನೆ ಇಂದಿರೆಯನ್ನು ಹೋಲಿಸಿದರೆ ಅಜಗಜಾಂತರವಾಗಬಹುದು. ತನ್ನ ತಾಯಿಯ ಕಣ್ಣುಗಳಿಗೇನೋ ಇಂದಿರ ಯಾವಾಗಲೂ ಅಪ್ಸರೆ, ಸುರಸುಂದರಿ, ಮುದ್ದು ಮಗಳು. ಆದರೆ ತಾಯ್ತನದ ಪರೆ ಕಳಚಿ ನೋಡುವ ಕಣ್ಣುಗಳಿಗೆ ಇಂದರ ಅತಿ ಸಾಮಾನ್ಯ ಹುಡುಗಿ. ನಾಲ್ಕು ಜನರಿರುವಾಗ ಸುಲಭವಾಗಿ ಬೆರೆತುಹೋಗುವಂತಹ, ಗಮನಿಸದೇ ಇರಬಹುದಾದ

ಸಾಮಾನ್ಯ ರೂಪು ಅವಳದು. ಅಂತಹ ಹುಡುಗಿಯನ್ನು ಮೋಹನ ಒಪ್ಪುವನೇ ? ಆದರೆ ರೂಪಕ್ಕೆ ಅಷ್ಟೊಂದು ಬೆಲೆ ಕೊಡಬೇಕೇ ? ಮನಸ್ಸನ್ನು ಮರುಳುಗೊಳಿಸುವ ಸೌಂದರ್ಯ ಇಂದಿರೆಗಿಲ್ಲದಿರಬಹುದು. ಆದರೆ ಅವಳು ಉಳಿದ ಯಾವುದರಲ್ಲಿ ಕಡಿಮೆಯಾಗಿದ್ದಾಳೆ ? ತಮ್ಮ ಯಜಮಾನರು ಮನಸ್ಸು ಮಾಡಿದರೆ ಮೋಹನ ತಮ್ಮ ಅಳಿಯನಾಗಬಹುದು. ಹೌದು. ಯಾಕಾಗಬಾರದು ?

ಲಲಿತಮ್ಮ ತಮ್ಮ ಯೋಚನೆಗಳಲ್ಲಿ ಮೈಮರೆತಿದ್ದಾಗ ಸದಾಶಿವರಾಯರು ಒಳಗೆ ಬಂದರು. ಗಂಡನನ್ನು ನೋಡಿ ಲಲಿತಮ್ಮ ತಮ್ಮ ಯೋಚನೆಗಳನ್ನು ಕೊಡವಿ ಎದ್ದರು.

"ಮೋಹನರಾಯರು ಇವತ್ತು ಊರಿಗೆ ಹೊರಡುತ್ತಾರಂತೆ."

"ಹೂಂ" ಎಂದರು ಲಲಿತಮ್ಮ.

"ಅಡಿಗೆ ಸ್ವಲ್ಪ ಬೇಗ ಆಗಲಿ."

"ಅವರು ಬಂದ ಕೆಲಸ ಏನಾಯಿತು ?"

"ಮುಕ್ಕಾಲುಪಾಲು ಈಗ ಅವರನ್ನು ಕಳಿಸೋದು ಸಾಧ್ಯವಾಗಲಾರದು. ಒಂದು ವಿಧದಿಂದ ಈ ಬಾರಿ ಯಾರನ್ನು ಕಳಿಸೋದು ಎಂದು ಆಗಲೇ ತೀರ್ಮಾನವಾಗಿ ಹೋಗಿದೆ. ಅದನ್ನು ಕೇಳಿ ಅತ ತುಂಬಾ ಇಳಿದು ಹೋಗಿದಾರೆ."

ಲಲಿತಮ್ಮ ಸಮಾಧಾನದಿಂದ "ದೇವರು ಯಾವುದು ಮಾಡಿದರೂ ಒಳ್ಳೆಯದಕ್ಕೇ ಮಾಡ್ತಾನೆ" ಎಂದರು.

ರಾಯರು ನಕ್ಕು "ಈ ವೇದಾಂತ ಎಲ್ಲರೂ ಪಾಲಿಸುವ ಹಾಗಿದ್ದರೆ ಮನುಷ್ಯನಿಗೆ ನಿರಾಶೆ ಎನ್ನುವುದೇ ಇರುವುದಿಲ್ಲ" ಎಂದರು.

ಲಲಿತಮ್ಮ ಒಂದು ಸಲ ಸುತ್ತಲೂ ನೋಡಿ ಮೆಲ್ಲಗೆ ಹೇಳಿದರು.

"ನೀವು ಮನಸ್ಸು ಮಾಡಿದರೆ ಮೋಹನರಾಯರನ್ನು ಅಮೆರಿಕಾಗೆ ಕಳುಹಿಸಬಹುದು' ಎಂದರು.

"ಸಾಧ್ಯವಿಲ್ಲ ಲಲಿತೂ. ಕಮಿಟಿಯಲ್ಲಿ ನಾನೊಬ್ಬ ಹೇಳಿದರೆ ಏನಾದೀತು? ಉಳಿದವರು ಒಪ್ಪಬೇಡವೇ ?"

"ನಿಮ್ಮ ಕಮಿಟಿ ಹಾಳಾಗಲಿ. ನಾವೇ ಯಾಕೆ ಸ್ವಂತ ಖರ್ಚಿನಿಂದ ಅವರನ್ನು ಕಳಿಸಬಾರದು ?"

ರಾಯರು ಕ್ಷಣಕಾಲ ಚಕಿತರಾದರು.

"ಏನು ! ನಾವೇ ? ಅವರೇನು ನನ್ನ ಮಗನೇ ? ಅಳಿಯನೇ ?"

"ಮಗಸಲ್ಲ. ಆದರೆ ಅಳಿಯನ್ನ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ ವೇನು ? ಯೋಚನೆ ಮಾಡಿ. ಹುಡುಗ ಲಕ್ಷಣವಾಗಿದಾನೆ. ವಿದ್ಯಾವಂತ. ಅವರನ್ನು ನಮ್ಮ ಅಳಿಯನ್ನ ಮಾಡಿಕೊಂಡು ಯಾಕೆ ಕಳಿಸಬಾರದು ?"

ಲಲಿತಮ್ಮ ಆತುರದಿಂದ ಗಂಡನ ಮುಖವನ್ನು ನೋಡಿದರು. ರಾಯರು ಕ್ಷಣಕಾಲ ಸುಮ್ಮನಿದ್ದು "ಆಗೋದಿಲ್ಲ" ಎಂದರು.

"ಯಾಕೆ ? ನಮ್ಮ ಇಂದಿರಾಗೆ ಆತ ತಕ್ಕ ವರನಲ್ಲವೇ ?"

"ನೀನು ದುಡುಕುತ್ತಿದೀಯಾ ಲಲಿತಾ. ಆತನ, ನಮ್ಮ ಪರಿಚಯ ಈಗ ತಾನೇ ಆಗಿದೆ.ಮುಖ ನೋಡಿ ಮರುಳಾಗಬಾರದು. ನನಗೇನೋ ಆತನನ್ನ ನನ್ನ ಅಳಿಯನನ್ನಾಗಿ ಮಾಡಿಕೊಳ್ಳುವುದು ಸ್ವಲ್ಪವೂ ಇಷ್ಟವಿಲ್ಲ.

"ಯಾಕೆ ?"

"ನಮ್ಮ ಇಂದಿರಾಗೆ ಆತ ತಕ್ಕ ಗಂಡನಲ್ಲ."

ತಾನು ಸೂಚಿಸಿದ ವರ ಗಂಡನ ಮನಸ್ಸಿಗೆ ಒಪ್ಪಿಗೆಯಾಗಿಲ್ಲವೆಂದು ತಿಳಿದು ಲಲಿತಮ್ಮ ಕೊಂಚ ಅಸಮಾಧಾನದಿಂದ

"ನಿಮ್ಮ ಮಗಳು ಸರ್ವಗುಣಸಂಪನ್ನೆಯೇನೋ ?" ಎಂದರು.

"ಅವಳು ನಿನ್ನ ಮಗಳೂ ಅಲ್ಲವೇ" ಎನ್ನುತ್ತಾ ರಾಯರು ನಕ್ಕರು.

ಲಲಿತಮ್ಮ ನಸುನಕ್ಕು "ನನಗೇನೋ ಹುಡುಗ ತುಂಬಾ ಒಪ್ಪಿಗೆ" ಎಂದರು.

"ಆದರೆ ನನಗೆ ಒಪ್ಪಿಗೆಯಿಲ್ಲ."

"ಮಾಡಿಕೊಳ್ಳೋರು ನೀವಲ್ಲ. ನಿಮ್ಮ ಮಗಳು."

"ಇದೇ ಮಾತು ನಿನಗೂ ಅನ್ವಯಿಸುತ್ತದೆ" ಎಂದರು ರಾಯರು.

ಗಂಡ, ಹೆಂಡತಿ ಇಬ್ಬರೂ ಮತ್ತೆ ನಕ್ಕರು. ಬಾಗಿಲಿನಲ್ಲಿ ನೆರಳು ಕಾಣಿಸಿತು. ಇಬ್ಬರೂ ತಟ್ಟನೆ ಮಾತು ನಿಲ್ಲಿಸಿದರು. ಎಡಗೈಲೊಂದು ಕತ್ತಿ ಹಿಡಿದು ಇಂದಿರ ಒಳಗೆ ಬಂದಳು.

"ಎಲ್ಲಿಗೆ ಹೋಗ್ತೀಯಾ ? ತೋಟಕ್ಕೆ ?"

"ಹೂಂ."

"ಇನ್ನೇನು ಊಟದ ಸಮಯವಾಯಿತು. ಪುಟ್ಟಯ್ಯ ತೋಟದ ಕಡೆ ಹೋಗಿದಾರೆ. ನೀನೇನೂ ಹೋಗೋದು ಬೇಕಿಲ್ಲ. ಮೋಹನರಾಯರು ಊರಿಗೆ ಹೊರಡ್ತಾರೆ. ಎಲೆ ಹಾಕೋವಂತೆ" ಎಂದರು ತಾಯಿ.

ಇಂದಿರ ಆಶ್ಚರ್ಯದಿಂದ ಕಣ್ಣರಳಿಸಿ ತಾಯಿಯ ಕಡೆ ನೋಡಿದಳು. ತಾಯಿಯ ಈ ಪರಿ ಅವಳಿಗೆ ಹೊಸದಾಗಿತ್ತು. ಅವಳು ಪ್ರಶ್ನಾರ್ಥಕವಾಗಿ

ರಾಯರ ಕಡೆ ನೋಡಿದರು.ಅವರು ಮಾತನಾಡದೇ ನಕ್ಕುಎದ್ದು ಹೋದರು.

ರಾಯರು ಹೊರಗೆ ಹೋದೊಡನೆ ಲಲಿತಮ್ಮ ಮಗಳ ಬಳಿಗೆ ಬಂದು "ಇಂದಿರಾ, ಸರಿಯಾಗಿ ತಲೆ ಬಾಚಿಕೊಂಡು ಯಾವುದಾದರೂ ಹೊಸ ಸೀರೆ ಉಟ್ಟುಕೋ" ಎಂದರು.

"ತಲೆ ಬಾಚಿಕೊಂಡಿದೀನಿ."

"ಏನು ಬಾಚಿಕೊಂಡಿದೀಯೋ ? ಹಿಂದೆಲ್ಲಾ ಕೋಳಿಪುಕ್ಕ ನಿಂತ ಹಾಗಿದೆ ಕೂದಲು. ಸೀರೇನೂ ಬದಲಾಯಿಸಿಬಿಡು. ನಿನ್ನ ನೀಲಿ ಧರ್ಮಾವರದ ಸೀರೆ...."

"ತಲೆ ಬೇಕಾದರೆ ಬಾಚಿಕೊಳ್ಳುತ್ತೇನೆ. ಸೀರೆ ಮಾತ್ರ ಬದಲಾಯಿಸೋದಿಲ್ಲ" ಎಂದಳು ಇಂದರ ಖಂಡಿತವಾಗಿ.

ಮಗಳೂ ಹಠದಲ್ಲಿ ತಮಗಿಂತ ಕಡಿಮೆಯೇನಿಲ್ಲ ಎಂದುಕೊಂಡರು ತಾಯಿ. ಮಗಳು ಮತ್ತೊಮ್ಮೆ ತಲೆಬಾಚಿಕೊಂಡು ಬರಲು ಬಿಂದಿಗೆಯ ಎರಡು ಹೂವುಗಳನ್ನು ಲಲಿತಮ್ಮ ಅವಳ ಮುಡಿಗೇರಿಸಿದರು.

ರಾಯರು, ಮೋಹನ, ಪುಟ್ಟಯ್ಯ ಮೂವರೂ ಒಟ್ಟಿಗೆ ಊಟಕ್ಕೆ ಕುಳಿತರು. ಲಲಿತಮ್ಮ ಅಡಿಗೆ ಮನೆಯಲ್ಲಿದ್ದುಕೊಂಡು ಮಗಳಿಗೆ ತುಪ್ಪ, ನೀರು ಬಡಿಸಲು ಹೇಳುತ್ತಿದ್ದರು. ಅದೇಕೋ ತಾಯಿಯ ವರ್ತನೆ ಇಂದಿರಳಿಗೆ ತುಂಬಾ ವಿಚಿತ್ರವಾಗಿ ತೋರುತ್ತಿತ್ತು. ಆದರೂ ಅವಳು ಬದಲು ಹೇಳದೆ ತಾಯಿ ಹೇಳಿದಂತೆ ಕೇಳುತ್ತಿದ್ದಳು.

ಊಟ ಮುಗಿಯಿತು. ಡ್ರೈವರು ಮನೆಯ ಮುಂದೆ ಕಾರನ್ನು ತಂದು ನಿಲ್ಲಿಸಿದ. ಮೋಹನ ಎಲ್ಲರಿಂದಲೂ ಬೀಳ್ಕೊಂಡ.

ಅವನ ಬಾಡಿದ ಮುಖವನ್ನು ನೋಡಿ ರಾಯರು ಹೇಳಿದರು.

"ನಾನು ಮತ್ತೊಮ್ಮೆ ಪ್ರಯತ್ನಿಸುತ್ತೇನೆ. ಆದರೆ ನೀವು ಯಾವ ಆಸೆಯನ್ನೂ ಇಟ್ಟುಕೊಂಡಿರಬೇಡಿ. ಇಲ್ಲದಿದ್ದರೆ ಮತ್ತೊಮ್ಮೆ ನಿರಾಶೆಯನ್ನು ಎದುರಿಸಬೇಕಾಗುತ್ತದೆ."

ಮೋಹನ ಎಲ್ಲರಿಗೂ ಕೈಮುಗಿದು ಹೊರಟುಹೋದ. ಕಾರು ಕಣ್ಮರೆಯಾದ ಕೂಡಲೇ ಇಂದಿರ ಕೈಲಿ ಕತ್ತಿ ಹಿಡಿದು, ಕಾಲಿಗೆ ಚಪ್ಪಲಿ ಮೆಟ್ಟಿ ನಿಂತಳು. ಮಗಳು ತೋಟಕ್ಕೆ ಹೊರಟಿದುದನ್ನು ನೋಡಿ ರಾಯರು "ನಾನೂ ಬರ್ತೀನಿ. ನಡಿ ಎಂದರು."

ತಂದೆ, ಮಗಳು ಉತ್ಸಾಹದಿಂದ ತೋಟದ ಕಡೆ ಹೊರಟರು.

ಲಲಿತಮ್ಮ ತಂದೆ, ಮಗಳಲ್ಲಿ ನೆಲೆಸಿದ್ದ ಶಾಂತಿಯನ್ನು ಕಂಡು ಕುಪಿತರಾದರು. ಯಾವುದೋ ಯೋಚನೆಯೊಂದರಿಂದ ತಾವು ಬೇಯುತ್ತಿದ್ದರೂ ಅವರಿಬ್ಬರೂ ನಿರಾತಂಕವಾಗಿರುವುದನ್ನು ನೋಡಿದಾಗ ಅವರಿಗೆ ಕೆಡುಕೆನಿಸಿತು.

"ಮಗಳಿಗೆ ಮದುವೆ ಮಾಡೋಕೆ ನನಗಿರುವಷ್ಟು ಆತುರ ಇವರಿಗಿಲ್ಲ. ಗಂಡಸರೇ ಹೀಗೆ" ಎಂದುಕೊಂಡು ಆಕೆ ಸುಮ್ಮನಾದರು.

ಲಲಿತಮ್ಮನದು ತುಂಬಾ ಹಠದ ಸ್ವಭಾವ. ಯಾವುದಾದರೂ ಒಂದು ಆಲೋಚನೆ ಅವರ ಮನಸ್ಸಿಗೆ ಬಂದರೆ ಅದನ್ನು ಸಾಧಿಸುವವರೆಗೂ ಆಕೆಗೆ ಶಾಂತಿಯಿರುತ್ತಿರಲಿಲ್ಲ. ಮೋಹನನನ್ನು ನೋಡಿದಾಗಿನಿಂದಲೂ ಇಂದಿರಳಿಗೆ ಅವನೇ ತಕ್ಕ ವರ ಎಂದು ಅವರು ನಿಶ್ಚಯಿಸಿಬಿಟ್ಟಿದ್ದರು. ಆದರೆ ಯಜಮಾನರು ತಮ್ಮ ಆಸೆಯ ದೀಪಕ್ಕೆ ಪ್ರೋತ್ಸಾಹದ ತೈಲವನ್ನೆರೆಯದೆ ತಟಸ್ಥರಾಗಿರುವುದನ್ನು ನೋಡಿ ಲಲಿತಮ್ಮನಿಗೆ ಕೊಂಚ ವ್ಯಥೆಯಾಯಿತು. ಮತ್ತೆ ಯಾವಾಗಲಾದರೂ ಅವರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರಾಯಿತು ಎಂದುಕೊಂಡು ಲಲಿತಮ್ಮ ಇದ್ದುದರಲ್ಲಿ ಸಮಾಧಾನವನ್ನು ತಂದುಕೊಂಡರು.

ಮೋಹನ ಬಂದು ಹೋದ ನಾಲ್ಕು ದಿನಗಳಲ್ಲೇ ಅವರಿಗೆ ಗಂಡನೊಡನೆ ಸ್ವತಂತ್ರವಾಗಿ ಮಾತನಾಡುವ ಅವಕಾಶ ಸಿಕ್ಕಿತು.

ಚಿಕ್ಕಮಗಳೂರಿನಲ್ಲಿದ್ದ ಇಂದಿರಳ ಗೆಳತಿ ಸಾವಿತ್ರಿ ತನ್ನ ತಮ್ಮನಿಗೆ ಚೌಲವೆಂದು ಹೇಳಿ ಇಂದಿರೆಯನ್ನು ಕರೆಯಲು ಬಂದಳು. ಇಂದಿರಳೊಡನೆ ಯಾವುದೋ ಕೆಲಸದ ಮೇಲೆ ಪುಟ್ಟಯ್ಯನೂ ಹೋಗಬೇಕಾಗಿ ಬಂತು.

ಇಂದಿರ ಬೆಳಗ್ಗೆ ಐದು ಗಂಟೆಗೆ ಎದ್ದು ಸ್ನಾನ ಮುಗಿಸಿ ಜಡೆ ಹೆಣೆದುಕೊಂಡಳು. ನಸುಗೆಂಪಿನ ಧರ್ಮಾವರದ ಸೀರೆಗೆ ದಟ್ಟಕೆಂಪಿನ ಅಂಚು ಸೆರಗಿದ್ದ ಸೀರೆಯನ್ನು ಉಟ್ಟು, ಬಿಳಿ ಸಿಲ್ಕಿನ ರವಿಕೆ ತೊಟ್ಟು, ಕಾರಿನ ಒಂದು ಬಾಗಿಲನ್ನು ಅರ್ಧ ತೆಗೆದು ಪುಟ್ಟಯ್ಯನಿಗಾಗಿ ಕಾಯುತ್ತಾ ನಿಂತಿದ್ದ ಇಂದಿರಳನ್ನು ಲಲಿತಮ್ಮ ಮೆಟ್ಟಲಿನ ಮೇಲೆ ನಿಂತು ಕಣ್ತುಂಬ ನೋಡಿದರು.

ಗಿರಿಯ ಮೇಲಿನಿಂದ ಬೀಸುತ್ತಿದ್ದ ಶುಭ್ರವಾದ ತಂಗಾಳಿ ಅವಳ ಸೀರೆಯ ನಿರಿಗಳಿಗೆ, ಹಣೆಯ ಮುಂಗುರುಳಿಗೆ ಜೀವವನ್ನು ಕೊಟ್ಟಿತ್ತು. ಆರೋಗ್ಯದಿಂದ ತುಂಬಿಕೊಂಡಿದ್ದ ಅವಳ ಮುಖಕ್ಕೆ ಎಳೆಬಿಸಿಲು ಒಂದು ಬಗೆಯ ಅಪೂರ್ವ ಸೌಂದರ್ಯವನ್ನು ಕೊಟ್ಟಿತ್ತು.

ಇಂದಿರ ಸುಂದರಿಯಲ್ಲ, ನಿಜ. ಆದರೆ ಅವಳ ದೇಹದ ಮಾಟ ಬೇಲೂರಿನ

ಶಿಲಾಬಾಲಿಕೆಯರನ್ನು ನೆನಪಿಗೆ ತರುತ್ತಿತ್ತು. ಅವಳ ಹೃದಯದಲ್ಲಿದ್ದ ಸ್ನೇಹದ ಕಡಲಿಗೆ ಮೇರೆಯೇ ಇರಲಿಲ್ಲ.

ಮೋಹನ ಪಟ್ಟಣದಲ್ಲಿ ಎಂತೆಂತಹ ಬೆಡಗಿಯರನ್ನು ನೋಡಿದ್ದಾನೋ ? ಅವನು ಇಂದಿರೆಯನ್ನು ಒಪ್ಪುವನೋ ಇಲ್ಲವೋ ಎಂದು ತಾಯಿಯ ಹೃದಯ ಒಂದು ಗಳಿಗೆ ಶಂಕಿಸಿತು. ಆದರೂ ಯಾವುದೋ ಅವ್ಯಕ್ತ ಭರವಸೆಯಿಂದ ಅವರ ಮನಸ್ಸು ಗಟ್ಟಿಯಾಯಿತು.

"ಉಡುಗೊರೆ ಇಟ್ಟುಕೊಂಡಿದೀಯಾ ?" ಲಲಿತಮ್ಮ ಕೂಗಿ ಕೇಳಿದರು.

ಎದಿರು ದಿಕ್ಕಿನಿಂದ ಗಾಳಿ ಬೀಸುತ್ತಿದ್ದುದರಿಂದ ಇಂದಿರ ತಲೆ ಅಲುಗಿಸಿ ಕೈಲಿ ಹಿಡಿದಿದ್ದ ಚೀಲವನ್ನು ತಾಯಿಗೆ ತೋರಿಸಿದಳು.

ರಾಯರು ಹೇಳಿದ ಕೆಲಸವನ್ನೆಲ್ಲಾ ಮುಗಿಸಿ ಪುಟ್ಟಯ್ಯ ಹೊರಗೆ ಬಂದ.

"ಹೋಗ್ಬಿಟ್ಟು ಬರ್ತೀರಾ ? ನೀವು ಒಂದು ಗಳಿಗೆ ಕಾದಿದ್ದರೂ ಚಿಂತೆಯಿಲ್ಲ. ಇಂದಿರೆಯ ಜೊತೇನೇ ಬನ್ನಿ" ಎಂದರು ಲಲಿತಮ್ಮ.

ಕಾರು ಕಣ್ಮರೆಯಾದ ಕೂಡಲೇ ಲಲಿತಮ್ಮ ಏನೋ ಬಹಳ ದೊಡ್ಡ ಕೆಲಸ ಮಾಡಿದವರಂತೆ ಉಸಿರುಗೆರೆದು ಒಳಗೆ ಹೋದರು. ಸದಾಶಿವರಾಯರು ಕನ್ನಡಿಯೆದುರಿಗೆ ಕುಳಿತು ಮುಖಕ್ಕೆ ಸೋಪು ಹಚ್ಚಿಕೊಂಡಿದ್ದರು, ಲಲಿತಮ್ಮ ಅವರ ಹತ್ತಿರದಲ್ಲಿಯೇ ಕುಳಿತು

"ಮತ್ತೆ...." ಎಂದು ಪ್ರಾರಂಭ ಮಾಡಿದರು.

"ಅದೇನು ಹೇಳ್ತೀಯೋ ಹೇಳಿಬಿಡು. ನೀನು ಇಲ್ಲಿಗೆ ಬಂದು ಕುಳಿತಾಗಲೇ ಏನೋ ಸಮಾಚಾರವಿದೆ ಎಂದುಕೊಂಡೆ."

"ಏನಾದರೂ ಸಮಾಚಾರವಿದ್ದರೇ ನಿಮ್ಮ ಹತ್ತಿರ ಬರಬೇಕೇನೋ ? ಇಲ್ಲದಿದ್ದರೆ ಬರಲೇ ಬಾರದೇ ?"

"ನೀನು ಮಾಡುವುದೇನೋ ಹಾಗೇನೇ" ಎನ್ನುತ್ತಾ ರಾಯರು ಲಲಿತಮ್ಮನ ಕಡೆ ತಿರುಗಿ "ಅದೇನು ಹಾಗೆ ನನ್ನ ನೋಡುತ್ತೀಯಾ?" ಎಂದರು.

"ನಿಮ್ಮ ಮುಖಕ್ಕೆ ಮೀಸೆ ಇದ್ದರೆ ಹೇಗೆ ಕಾಣಬಹುದು. ಎಂದು ಯೋಚಿಸುತ್ತಿದೆ."

ನನ್ನ ಮೀಸೇನ ನೀನೇ ಇಟ್ಟು ಕೊಂಡಿದೀಯಲ್ಲಾ ಸಾಕು. ನಮ್ಮಿಬ್ಬರಲ್ಲಿ ಯಾರಿಗಾದರೂ ಒಬ್ಬರಿಗೆ ಮೀಸೆ ಇರಬೇಕು. ನಿನಗಿದೆ. ನನಗಿಲ್ಲ."

"ಸಾಕು ಸುಮ್ಮನಿರಿ. ನಾನು ಗಂಡುಬೀರಿ ಎಂದು ತೆಗಳೋಕೆ ಶುರು ಮಾಡಬೇಡಿ" ಎಂದು ಲಲಿತಮ್ಮ ರೇಗಿಕೊಂಡರು.

"ನಾನು ಯಾರಿಗೆ ಹೆದರದಿದ್ದರೂ ನಿನಗೆ ಹೆದರಿಕೊಳ್ಳಬೇಕಾಗಿದೆ" ಎಂದರು ರಾಯರು ನಗುತ್ತಾ.

ಲಲಿತಮ್ಮ ಕೊರಳು ಕೊಂಕಿಸಿ "ಚೆನ್ನಾಗಿ ಜ್ಞಾಪಿಸಿಕೊಳ್ಳಿ. ನನಗೊಬ್ಬಳಿಗೆ ಮಾತ್ರ ಹೆದರುತ್ತೀರೋ ? ಈ ಮನೇಲಿ ನಿಮ್ಮನ್ನು ಹೆದರಿಸೋರು ಬೇರೆ ಯಾರೂ ಇಲ್ಲವೇ ?" ಎಂದರು.

ರಾಯರು ಮೃದುವಾಗಿ ನಕ್ಕು "ನಿನಗಿಂತ ಇಂದಿರೆಗೆ ಹೆಚ್ಚು ಹೆದರುತ್ತೀನಿ" ಎಂದರು.

"ಇಂದಿರೆಗೆ ಮದುವೆ ಮಾಡುವುದಿಲ್ಲವೇನು ?"

ಲಲಿತಮ್ಮ ಯಾವ ಮಾತನ್ನಾಡಲು ಬಂದು ಕುಳಿತಿರುವರೆಂಬುದು ರಾಯರಿಗೆ ಕೂಡಲೇ ತಿಳಿಯಿತು. ಅವರು ಕೊಂಚ ಬಿಗುವಿನಿಂದ

"ಮಾಡಿದರಾಯಿತು" ಎಂದರು.

"ಮುದುಕಿಯಾದ ಮೇಲೆ ಮಾಡ್ತೀರಾ ? ಯಾವ ಯಾವ ವಯಸ್ಸಿನಲ್ಲಿ ಏನೇನು ಮಾಡಬೇಕೊ ಅದನ್ನು ಮಾಡಿದರೆ ಚೆನ್ನ."

"ಈ ವಯಸ್ಸಿನಲ್ಲಿ ನಿನಗೇನು ಮಾಡಲು ಆಸೆ."

"ಮೊಮ್ಮಗನನ್ನು ಎತ್ತಿಕೊಳ್ಳೋಕೆ ಆಸೆಯಿದೆ."

"ನಿಜ ಹೇಳು ಲಲಿತಾ—ನಿನಗೆ ಮೊಮ್ಮಗನ್ನ ಎತ್ತಿಕೊಳ್ಳೋಕೆ ಆಸೆಯಾಗಿದೆಯೋ ಅಥವಾ ಮಗನ್ನೋ?"

"ಸಧ್ಯ ಸುಮ್ಮನಿರಿ ಇಂದಿರೆಯ ಮದುವೆ ವಿಷಯ ಹೇಳಿ."

"ಮಾಡೋಣ ಅದಕ್ಕೇನಂತೆ" ರಾಯರು ಮಾತು ಆರಿಸಲು ಪ್ರಯತ್ನಿಸಿದರು.

"ಮೋಹನರಾಯರೇ ಯಾಕಾಗಬಾರದೂಂತ ?"

"ನಿಜ ಹೇಳಬೇಕೆಂದರೆ ನನಗೇನೋ ಇಂದಿರಾನ ಆ ಹುಡುಗನಿಗೆ ಕೊಡೋಕೆ ಇಷ್ಟವಿಲ್ಲ."

"ಯಾಕೆ ಮೋಹನ ಚೆನ್ನಾಗಿಲ್ಲವೇ ? ವಿದ್ಯೆ ಇಲ್ಲವೇ ?"

"ನಾನು ಹಾಗೆ ಹೇಳಲಿಲ್ಲ. ಆದರೂ ಅವನು ಇಂದಿರೆಗೆ ತಕ್ಕವನಲ್ಲ ಎಂದು ನನ್ನ ಭಾವನೆ."

"ಮದುವೆ ಮಾಡಿಕೊಳ್ಳುವವಳು ಇಂದಿರೆಯೇ ಹೊರತು ನಾವೇನಲ್ಲ. ಅವಳನ್ನೊಂದು ಮಾತು ಕೇಳಿ ನೋಡೋಣ. ಅವಳೊಪ್ಪಿಕೊಂಡರೆ ಮುಂದಿನ ಪ್ರಯತ್ನ ಮಾಡೋಣ."

"ಅವಳೊಪ್ಪದಿದ್ದರೆ ?"

"ಇಲ್ಲಿಗೆ ಈ ವಿಷಯ ಬಿಟ್ಟುಬಿಡೋಣ. ಅವಳೊಪ್ಪಿದರೆ ?"

"ಅವಳೊಪ್ಪಿದರೆ—? ಹೂಂ ಆಗ ಯೋಚಿಸ್ತಿನಿ" ಎಂದರು ರಾಯರು. ಲಲಿತಮ್ಮ ಮನಸ್ಸಿನಲ್ಲಿ

'ಒಂದು ಪಕ್ಷ ಅವಳೊಪ್ಪದಿದ್ದರೆ ಏನು ಮಾಡೋದು? ನಾನು ಹೇಳಿದರೆ ಒಪ್ಪಿಕೋತಾಳೆಯೇ ಊಹೂಂ. ಅವಳು ಹಠದಲ್ಲಿ ನನಗಿಂತಲೂ ಒಂದು ಕೈ ಮೇಲು. ಆದರೆ....ಒಪ್ಪದೇ ಏನು ಮಾಡ್ತಾಳೆ' ಎಂದುಕೊಂಡರು.

ತಾಯಿ, ತಂದೆ ಇಬ್ಬರೂ ಮಗಳ ಮೇಲೆ ಭಾರ ಹಾಕಿ ನಿಶ್ಚಿಂತರಾದರು. ಸಂಜೆಯ ಆರತಕ್ಷತೆ, ಊಟ ಮುಗಿಸಿಕೊಂಡು ಇಂದಿರ ರಾತ್ರಿ ಮನೆಗೆ ಬಂದಾಗ ಹತ್ತು ಗಂಟೆಯಾಗಿತ್ತು. ಪುಟ್ಟಯ್ಯ ಅವಳ ಜೊತೆಯಲ್ಲಿ ಹೋಗಿರುವನೆಂಬ ಸಮಾಧಾನವಿದ್ದರೂ ಅವಳು ಬರುವವರೆವಿಗೆ ಲಲಿತಮ್ಮ, ರಾಯರು, ವರಾಂಡ ಬಿಟ್ಟು ಕದಲಲಿಲ್ಲ.

'ಯಾಕೆ ಇಷ್ಟು ಹೊತ್ತು ಮಾಡಿದಳೋ? ಬೇಗ ಹೊರಟು ಬರಬಾರದೇ' ಎಂದು ಲಲಿತಮ್ಮ ತಮ್ಮಲಿಯೇ ಗೊಣಗಿಕೊಂಡರು.

ಕಾರಿನ ದೀಪ ಬಹು ದೂರದಲ್ಲಿ ಒಮ್ಮೆ ಕಾಣಿಸಿಕೊಂಡು ಮತ್ತೊಮ್ಮೆ ಹಸಿರು ಮರಗಳ ನಡುವೆ ಮರೆಯಾದಾಗ ಲಲಿತಮ್ಮ ಸಮಾಧಾನದಿಂದ ಉಸಿರುಗರೆದು

"ನಮ್ಮ ಕಾರೇ ಇರಬೇಕು" ಎಂದರು.

"ಯಾವುದಾದರೂ ಬಸ್ಸಿರಬಹುದು" ಎಂದರು ರಾಯರು. ಕಾರು ಮನೆಯ ಮುಂದೆ ಬಂದು ನಿಲ್ಲುವುದೇ ತಡ ರಾಯರು ಕೇಳಿದರು.

"ಯಾಕೆ ಇಷ್ಟು ಹೊತ್ತು ?"

ಇಂದಿರ ಕೀಟಲೆಯಿಂದ ಪುಟ್ಟಯ್ಯನ ಕಡೆ ನೋಡುತ್ತಾ "ಇವರು ಚಿಕ್ಕಮಗಳೂರಿನಲ್ಲಿರುವ ನಶ್ಯವನ್ನೆಲ್ಲಾ ಕೊಂಡುಕೊಂಡು ಅದೂ ಸಾಲದೆ ಬೆಂಗಳೂರಿಗೆ ಹೊರಟಿದ್ದರು. ನಾನು ಬಲವಂತ ಮಾಡಿ ಕರೆದುಕೊಂಡು ಬರಬೇಕಾದರೆ ಸಾಕಾಗಿಹೋಯಿತು." ಎಂದಳು.

"ಅವರ ಮನೆ ಊಟ ಮುಗಿಯುವುದೇ ತುಂಬಾ ಹೊತ್ತಾಯಿತು" ಎಂದ ಪುಟ್ಟಯ್ಯ.

ರಾಯರ ಮನೆಯಲ್ಲಿ ಅಷ್ಟು ವರ್ಷಗಳಿಂದ ಇದ್ದರೂ ರಾಯರ ಎದುರಿಗೆ ಹುಡುಗಾಟವಾಡಲು ಅವನು ಹಿಂಜರಿಯುತ್ತಿದ್ದ. ಅವನ ಹುಡುಗಾಟ, ಸಲಿಗೆ

ಎಲ್ಲಾ ಇಂದಿರನ ಎದುರಿಗೆ ಮಾತ್ರ.

ಲಲಿತಮ್ಮ ಮಗಳು ಒಳಗೆ ಬಂದೊಡನೆ "ಊಟ ಬಹಳ ಜೋರೇನೋ?" ಎಂದರು.

"ಹೂಂ. ನನಗಂತೂ ಸಾಕಾಗಿ ಹೋಯಿತು. ಸಾವಿತ್ರಿಗೆ ನಾನಿವತ್ತು ಹೋಗುವುದು ಇಷ್ಟವೇ ಇರಲಿಲ್ಲ."

ಲಲಿತಮ್ಮ ಮಗಳನ್ನು ದಿಟ್ಟಿಸಿ ನೋಡಿದರು. ಅವಳ ಕಣ್ಣುಗಳು ಆಯಾಸ, ನಿದ್ದೆಯಿಂದ ಭಾರವಾಗಿದ್ದವು. ತಮ್ಮ ಮನಸ್ಸಿನಲ್ಲಿರುವ ವಿಷಯವನ್ನು ಆಗಲೇ ಕೇಳಿಬಿಡಲೇ ಎಂದುಕೊಂಡಿದ್ದವರು ಅವಳ ನಿದ್ದೆಗಣ್ಣುಗಳನ್ನು ನೋಡಿ 'ನಾಳೆ ಕೇಳಿದರಾಯಿತು' ಎಂದುಕೊಂಡರು.

"ಚೋಮನಿಗೆ ಕಿತ್ತಳೇ ಗಿಡಗಳಿಗೆ ಗೊಬ್ಬರ ಹಾಕೋಕೆ ಹೇಳಿದ್ದೆ. ಹಾಕಿದನೋ ಇಲ್ಲವೋ ತಿಳಿಯಲಿಲ್ಲ" ಎಂದಳು ಇಂದಿರ ಆತಂಕದಿಂದ.

ಒಂದು ಕ್ಷಣ ಲಲಿತಮ್ಮನಿಗೆ ಮಗಳ ಮೇಲೆ ಸಿಟ್ಟು ಬಂತು. ತಾವು ಅವಳ ಮದುವೆಯ ಯೋಚನೆಯನ್ನು ಮನಸ್ಸಿಗೆ ಹತ್ತಿಸಿಕೊಂಡು ಬೇಯುತ್ತಿರುವಾಗ, ಮಗಳು ಕಿತ್ತಳೆ ಗಿಡಗಳಿಗೆ ಗೊಬ್ಬರ ಹಾಕುವ ವಿಷಯವನ್ನು ಯೋಚಿಸುತ್ತಿದ್ದಾಳೆ!

ತಮ್ಮ ಯೋಚನೆಗೂ, ಅವಳ ಯೋಚನೆಗೂ ಎಷ್ಟು ಅಜಗಜಾಂತರ!

"ಹೂಂ ಮಲಗಿಕೋ ಹೋಗು" ಎಂದರು ಲಲಿತಮ್ಮ.

ಇಂದಿರ ತಲೆಯಲ್ಲಿ ಮುಡಿದಿದ್ದ ಹೂವನ್ನು ತೆಗೆಯಲು ಹೊರಟಳು. ಹೂವು ತೆಗೆಯಲು ಅವಳು ಹಿಂಸೆ ಪಡುತ್ತಿರುವುದನ್ನು ನೋಡಿ ಲಲಿತಮ್ಮ

"ಬಾರೇ ಇಲ್ಲಿ. ನಾನು ತೆಗೀತೀನಿ. ನೀನು ಒರಟೊರಟಾಗಿ ತೆಗೆಯೋಕೆ ಹೋಗಿ ಅನ್ಯಾಯವಾಗಿ ಒಂದು ಹಿಡಿ ಕೂದಲು ಕೀಳ್ತೀಯ"

ಎನ್ನುತ್ತಾ ಅವಳ ಬಳಿಗೆ ಬಂದು ಹೂವನ್ನು ಗೋಜಾಗಿದ್ದ ಕೂದಲಿನ ಸೆರೆಯಿಂದ ನಯವಾಗಿ ಬಿಡಿಸಿದರು.

* * * *

ಮಾರನೆಯ ದಿನ ರಾತ್ರಿ ಊಟವಾದ ಮೇಲೆ ತಾಯಿ, ತಂದೆ, ಮಗಳು ಮಹಡಿಯ ಮೇಲಿದ್ದ ಬಿಸಿಲು ಮಂಚದ ಮೇಲೆ ಕುರ್ಚಿಗಳನ್ನು ಹಾಕಿಕೊಂಡು ಕುಳಿತರು. ಬೆಳದಿಂಗಳ ರಾತ್ರಿಯಲ್ಲಿ ಮಹಡಿಯ ಮೇಲೆ ನಿಂತು, ಶುಭ್ರಕಾಂತಿಯಲ್ಲಿ ಮಿಂದು ಮದುವಣಗಿತ್ತಿಯಂತೆ ನಿಂತಿರುವ ಗಿರಿ, ತೋಟಗಳನ್ನು ನೋಡುವುದೆಂದರೆ ಇಂದಿರೆಗೆ ಹಬ್ಬ.

ಮುಳ್ಳಯ್ಯನಗಿರಿ ತಲೆ ಎತ್ತಿ ಚಂದ್ರನನ್ನು ದರ್ಪದಿಂದ ನೋಡಿ"ನೋಡು ನನ್ನ ದೇಹವೆಷ್ಟು ಅಗಾಧವಾಗಿದೆ. ನನ್ನ ಮೈಗೆಲ್ಲಾ ನೀನು ಬೆಳದಿಂಗಳು ಚಿಮುಕಿಸಬಲ್ಲೆಯಾ?" ಎಂದು ಕೇಳುತ್ತಿರುವಂತಿತ್ತು. ಅದಕ್ಕೆ ಉತ್ತರವಾಗಿ ಚಂದ್ರ ನಗುತ್ತಾ ತನ್ನಲ್ಲಿದ್ದ ಕಾಂತಿಯನ್ನೆಲ್ಲಾ ಗಿರಿಯ ಮೇಲೆ ಎರಚಿ "ಸಾಕೇ ? ನಿನಗೆ ಕೊಟ್ಟಷ್ಟೂ ನನ್ನಲ್ಲಿದೆ. ನಿನ್ನಂತಹವರು ಎಷ್ಟು ಜನ ಬಂದರೂ ನನ್ನಲ್ಲಿರುವ ಕಾಂತಿ ಕೊಡಬಲ್ಲೆ" ಎನ್ನುತ್ತಿದ್ದ ಹಾಗಿತ್ತು.

ಇಂದಿರ ಗಿರಿಗೆ ಎದುರಾಗಿ ಕುರ್ಚಿಹಾಕಿಕೊಂಡಿದ್ದಳು. ಅಲ್ಲೊಂದು ಇಲ್ಲೊಂದು ನರಿಯ, ಹಂದಿಯ ಕೂಗು ಆಗಾಗ್ಗೆ ಕೇಳಿಬರುತ್ತಿತ್ತು. ಹಂದಿಯ ಕೂಗು ಕೇಳಿ ಇಂದಿರ ಹೇಳಿದಳು.

"ನೋಡಮ್ಮ, ಈಗ ನಾಲ್ಕು ದಿನದ ಕೆಳಗೆ ನಾನು ತೋಟಕ್ಕೆ ಹೋರಟಾಗ ಒಂದು ಹಂದಿ ಸಿಕ್ಕಿತ್ತು. ಪುಟ್ಟಯ್ಯ ಒಂದು ಸಲ ಹುಲಿಯ ಹಾಗೆ ಗರ್ಜನೆ ಮಾಡಿದರು. ಪಾಪ! ಅದು ಹುಲಿ ಬಂತೇನೋ ಎಂದು ಹೆದರಿಕೊಂಡು ಓಡಿಹೋಯಿತು" ಎಂದಳು.

ಲಲಿತಮ್ಮ,ರಾಯರು ಬೇರಾವುದೋ ಯೋಚನೆಯಲ್ಲಿ ಮಗ್ನರಾಗಿದ್ದಂತೆ ತೋರಿತು. ರಾಯರು ಬಾಯಿಬಿಡದಿರಲು ಲಲಿತಮ್ಮನೇ ಹೇಳಿದರು.

"ಇಲ್ಲಿರುವವರೆಗೆ ತೋಟ, ಹಂದಿ ಅಂತ ಆಯಿತು. ಇನ್ನೆಷ್ಟು ದಿನ ಹೀಗೇನೇ ನೋಡೋಣ."

"ಹಾಗಂದರೆ ?" ತಾಯಿಯ ಮಾತು ಅರ್ಥವಾಗದೇ ಇಂದಿರ ಕೇಳಿದಳು.

"ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋದ ಮೇಲೆ ಏನು ಮಾಡ್ತೀಯ ? ನಿನ್ನ ಗಂಡನಿಗೆ ಯಾವ ಪಟ್ಟಣದಲ್ಲಿ ಕೆಲಸವಿರುತ್ತದೋ ಏನೋ ?"

ಇಂದಿರ ತನ್ನ ಮದುವೆಯ ಸುದ್ದಿಯನ್ನು ಮೊದಲ ಬಾರಿಗೆ ಕೇಳಿದಳು. ಕೂಡಲೇ ಎಲ್ಲ ಹುಡುಗಿಯರಂತೆ ಸಿಡುಕಿನಿಂದ

"ನಾನು ಮದುವೇನೇ ಆಗೋದಿಲ್ಲ" ಎಂದಳು.

"ಹೀಗೇ ಇರ್ತೀಯೇನು ?"

"ಹೂಂ."

"ಕೇಳಿದಿರಾ ಇಂದಿರೆಯ ಮಾತನ್ನು ? ಇರೋಳೊಬ್ಬಳು ಮಗಳು. ಅವಳೂ ಸನ್ಯಾಸಿನಿಯಾಗಿಯೇ ಉಳಿಯುತ್ತಾಳಂತೆ."

ರಾಯರು ಮೃದುವಾಗಿ ನಕ್ಕು "ಅವಳು ಸನ್ಯಾಸಿನಿಯಾಗೋ ಪಕ್ಷಕ್ಕೆ

ನಾವು ಯಾಕೆ ಈ ತೋಟ ಕಟ್ಟಿಕೊಂಡು ಕೂಲಿಯವರೊಡನೆ ಹೊಡೆ ದಾಡಿಕೊಂಡಿರಬೇಕು ? ಒಂದು ಜೋಪಡಿಯಾದರೆ ಸಾಕು" ಎಂದರು.

ಇಂದಿರೆಯ ನಾಲಿಗೆ ಉಡುಗಿತು.

ಹಾಗಾದರೆ ತಂದೆ ತನಗಾಗಿ ಇದನ್ನೆಲ್ಲಾ ಕಟ್ಟಿಕೊಂಡು ಒದ್ದಾಡ್ತಿ ದಾರೇನು ? ತನಗೆ ಅದುವರೆವಿಗೂ ಈ ಯೋಚನೆ ಬಂದೇ ಇರಲಿಲ್ಲ. ನಿಜ, ಅವರು ತಾನೇ ಯಾರಿಗಾಗಿ ಹಣ ಕೂಡಿಡಬೇಕು ? ಕೇವಲ ತಮಗಾಗಿ ಮಾತ್ರವೇ ? ಇರಲಾರದು. ಅವರ ಆಲೋಚನೆ ಬಹಳ ದೂರದವರೆವಿಗೆ ಹೋಗಿದೆ. ತನಗಾಗಿ, ತನ್ನ ಮಕ್ಕಳಿಗಾಗಿ, ಮೊಮ್ಮಕ್ಕಳಿಗಾಗಿ....

ತನಗಾಗಲೇ ಮದುವೆ ಮಾಡಿಕೊಳ್ಳುವಷ್ಟು ವಯಸ್ಸಾಗಿದೆ! ಪುಟ್ಟಯ್ಯನ ಹೆಗಲ ಮೇಲೆ ಕುಳಿತು ಸವಾರಿ ಮಾಡುತ್ತಾ ತೋಟದಲ್ಲಿ ತಿರುಗಾಡು ತ್ತಿದ್ದುದು ತನಗಿನ್ನೂ ಚೆನ್ನಾಗಿ ನೆನಪಿದೆ. ಈಗಲೇ ತಾನು ವಧು !

"ನನಗೇನೋ ಈಗಲೇ ಮದುವೆ ಮಾಡಿಕೊಳ್ಳೋಕೆ ಇಷ್ಟವಿಲ್ಲ" ಎಂದಳು ಇಂದಿರಾ

"ಮುದುಕಿಯಾದ ಮೇಲೆ ಮಾಡಿಕೊಳ್ಳುತ್ತೀಯಾ ?"

ರಾಯರು ನಡುವೆ ಬಾಯಿ ಹಾಕಿ ಹೇಳಿದರು "ನೋಡಮ್ಮ ಇಂದಿರ, ಈಗ ನಿನ್ನ ಮದುವೆಯ ಮಾತು ಯಾಕೆ ಬಂತೂಂದರೆ ಒಂದು ವರ ನಮ್ಮ ಕಣ್ಣಿಗೆ ಬಂದಿದೆ. ಈ ಹುಡುಗ ನಿನಗೂ ಒಪ್ಪಿಗೆಯಾದರೆ ನಾವು ಮದು ವೆಯ ಸಿದ್ಧತೆ ಮಾಡೋಣಾಂತ...."

"ಹುಡುಗನ ಮನೆಯವರು ಒಪ್ಪಬೇಡವೇ ?"

"ಎರಡೂ ಕಡೆಯಿಂದ ಒಪ್ಪಿಗೆಯಾದ ಮೇಲೆ ತಾನೇ ಮದುವೆ. ಮೊನ್ನೆ ಬಂದಿದ್ದರಲ್ಲಾ ಮೋಹನರಾವ್ ಅವರನ್ನ ಅಂದಾಜಿನಲ್ಲಿಟ್ಟುಕೊಂಡಿದೇವೆ.."

ಇಂದಿರ ತಲೆ ತಗ್ಗಿಸಿದಳು.

ಮೋಹನನ ಚೆಲುವಾದ ಮುಖ ಬೆಳದಿಂಗಳಿನಲ್ಲಿ ತೇಲಿಕೊಂಡು ಅವಳ ಬಳಿಗೆ ಬಂದಂತಾಯಿತು. ಎಷ್ಟು ಸುರೂಪಿ ಅವನು! ಅದುವರೆವಿಗೂ ಪುರುಷ ರೆಂದರೆ ವಿಮುಖವಾಗಿಯೇ ಇರುತ್ತಿದ್ದ ಮನಸ್ಸು ಮೋಹನನ್ನು ನೋಡಿದ ದಿನ ವೇಗವಾಗಿ ಮಿಡಿದಿತ್ತು. ಮಧುರ ಯೋಚನೆಗಳಿಂದ ಬಹು ದೂರವಿದ್ದ ಮನಸ್ಸು ಮೋಹನನ ಸಾಮೀಪ್ಯದಿಂದ ಪುಲಕಿತವಾಗಿತ್ತು.

ಆ ಬೆಳಿಗ್ಗೆ ತೋಟದಲ್ಲಿ ಪುಟ್ಟಯ್ಯ, ಮೋಹನನೊಡನೆ ತಿರುಗಾಡುತ್ತಿ ದ್ದಾಗ—ಮೋಹನನ ಶುಭ್ರ ಹಣೆಯ ಮೇಲೆ ಕಪ್ಪು ಮೋಡದಂತೆ ಕವಿದು

ಬಂದಿದ್ದ ಮುಂಗುರುಳನ್ನು ಹಿಂದಕ್ಕೆ ತಳ್ಳುವ ಆಸೆಯಾಗಿತ್ತು ಇಂದಿರೆಗೆ. ದಿಬ್ಬವೊಂದನ್ನು ಏರಿ ಆಯಾಸಗೊಂಡಿದ್ದಾಗ ತನ್ನ ಬಳಿಯೇ ನಿಂತಿದ್ದ ಮೋಹನನನ್ನ ಒರಗಿ ನಿಲ್ಲುವ ಆಸೆಯಾಗಿತ್ತು ಅವಳಿಗೆ. ಅವಳ ಮನಸ್ಸು ಅಲ್ಲಿಂದ ಮುಂದೆ ಹೋಗಿರಲಿಲ್ಲ. ಅದೇ ತಾನೆ ಯೌವನದಲ್ಲಿ ಪದಾರ್ಪಣ ಮಾಡಿದ್ದ ಹುಡುಗಿಗೆ ಚೆಲುವಾಗಿದ್ದ ತರುಣನೊಬ್ಬನನ್ನು ನೋಡಿದಾಗ ಉಂಟಾಗುವ ಹಗುರವಾದ ಮಧುರ ಭಾವನೆಗಳು, ಮೆಚ್ಚುಗೆ ಉದಯ ವಾಗಿ ಹೃದಯ ಮೃದುವಾಗಿತ್ತು.

ಆದರೆ ಇಂದಿರ ಸಾಮಾನ್ಯವಾಗಿ ತನ್ನ ಭಾವನೆಗಳನ್ನು ಪ್ರದರ್ಶಿಸುತ್ತಿರ ಲಿಲ್ಲ. ಅವಳ ಹೃದಯ ಆಮೆಯ ಚಿಪ್ಪಿನಂತೆ.

ಮಾತನಾಡದೇ ತಲೆ ತಗ್ಗಿಸಿ ಕುಳಿತಿದ್ದ ಮಗಳನ್ನು ತಾಯಿ, ತಂದೆ ನೋಡಿದರು.

"ಏನು ಹೇಳ್ತೀಯಾ ಇಂದಿರಾ ?"

ಇಂದಿರ ತಲೆ ಎತ್ತಿ ತಾಯಿಯ ಕಡೆ ನೋಡಿ "ನನ್ನ ಒಪ್ಪಿಗೆ ಸಿಕ್ಕಿದರೆ ಆಯಿತೆ ?" ಎಂದಳು.

"ಮೊದಲು ನಿನ್ನೊಪ್ಪಿಗೆ ಪಡೆದು ಆಮೇಲೆ ಮುಂದಿನ ಯತ್ನ ಮಾಡು ತ್ತೀವಿ" ಎಂದರು ರಾಯರು

"ನನಗೆ ಈಗಲೇ ಯಾವುದೂ ಹೇಳೋದಿಕ್ಕೆ ಆಗೋದಿಲ್ಲ. ನನಗೆ ಯೋಚನೆ ಮಾಡಿ ಹೇಳುವುದಕ್ಕೆ ಅವಕಾಶ ಕೊಡಿ."

ತಂದೆಗೆ ಮಗಳ ಮಾತು ಮೆಚ್ಚುಗೆಯಾಯಿತು.

"ಹಾಗೇ ಮಾಡು" ಎಂದರಾತ.

"ಅದರಲ್ಲಿ ಯೋಚನೆ ಮಾಡುವುದು ಏನಿದೇ ? ನಾವೆಲ್ಲಾ ಹೀಗೆ ಯೋಚನೆ ಮಾಡಿದೆವೇ ? ತಂದೆ ಯಾರನ್ನು ಕರ್‍ಕೊಂಡು ಬಂದರೋ ಅವರನ್ನ ಕಣ್ಣೆತ್ತಿ ನೋಡದೆ ತಾಳಿ ಕಟ್ಟಿಸಿಕೊಳ್ಳಲಿಲ್ಲವೇ ?"

''ಅದರ ಫಲ ಈಗ ನಾನು ಅನುಭವಿಸುತ್ತಿದೀನಿ" ಎಂದರು ರಾಯರು ಸಂಸಾರದಲ್ಲಿ ಸೋತವರಂತೆ.

ಇಂದಿರ ನಕ್ಕು ''ಒಳ್ಳೆ ಮಾತನಾಡಿದೆ ಅಣ್ಣಾ" ಎಂದಳು.

ಇಂದಿರ ಚಂದ್ರನ ಕಡೆ ನೋಡಿದಳು. ರಾಯರು ಲಲಿತಮ್ಮನ ಕಡೆ ನೋಡಿ ದರು. ಆಕೆ ಭೂಮಿಯ ಮೇಲೆ ನಾಟಿದ್ದ ಕಣ್ಣುಗಳನ್ನು ಮೇಲಕ್ಕೆತ್ತಲಿಲ್ಲ. ''ನಾನು ಮಲಕ್ಕೋತೀನಿ" ಎನ್ನುತ್ತಾ ಇಂದಿರ ಎದ್ದು ಹೋದಳು.

ಆದರೆ ಹಾಸಿಗೆಯ ಮೇಲೆ ಮಲಗಿ ಎಷ್ಟು ಹೊತ್ತಾದರೂ ಅವಳಿಗೆ ನಿದ್ದೆ ಬರಲಿಲ್ಲ. ತನ್ನ ಜೀವನದಲ್ಲಿ ಮೊದಲಬಾರಿ ಕೇಳಿದ ಮದುವೆಯ ಪ್ರಶ್ನೆ ಅವಳ ನಿದ್ದೆಯನ್ನು ದೂರಮಾಡಿತ್ತು.

ಮೋಹನನ ಮೋಹಗೊಳಿಸುವ ಸ್ವರೂಪ ಅವಳ ಕಣ್ಣುಗಳಿಗೆ ತುಂಬಾ ಹಿತವನ್ನುಂಟು ಮಾಡಿತ್ತು. ತೋಟಗಳಲ್ಲಿ ಅವನೊಡನೆ ತಿರುಗಾಡುವಾಗ ಮೋಹನನ ಮೇಲೆ ನಾಟಿದ್ದ ಕಣ್ಣುಗಳನ್ನು ಮತ್ತೊಂದು ಕಡೆ ತಿರುಗಿಸಲು ಇಂದಿರೆಗೆ ಬಹಳ ಕಷ್ಟವಾಗುತ್ತಿತ್ತು. ಆದರೆ ಅವಳ ನೋಟದಲ್ಲಿ ಯಾವ ಕೀಳು ಭಾವನೆಯೂ ಇರಲಿಲ್ಲ. ಬೆಳದಿಂಗಳ ಕಾಂತಿಗೆ ಮೈಯೊಡ್ಡಿ ನಿಂತಿರುವ ಗಿರಿಯನ್ನು ನೋಡುತ್ತಾ ಮೈಮರೆಯುವಂತೆ, ಮಧುರವಾದ ವಾಸನೆಯಿಂದ ಆಕರ್ಷಿತಳಾಗಿ ಬಿಳಿಯ ಹೂವುಗಳ ಸಿಂಗಾರ ಪಡೆದಿರುವ ಹಸಿರು ಕಾಫಿಯ ಗಿಡಗಳನ್ನು ನೋಡುತ್ತಾ ತನ್ಮಯಳಾಗುವಂತೆ, ಮೋಹನನನ್ನು ನೋಡಿ ಇಂದಿರಾ ಮೈಮರೆಯುತ್ತಿದ್ದಳು. ಅವನನ್ನು ನೋಡುವುದರಿಂದ ಅವಳ ಕಣ್ಮನಗಳಿಗೆ ಹಬ್ಬವಾಗುತ್ತಿತ್ತು.

ಅವನನ್ನೇ ಪತಿಯನ್ನಾಗಿ ಪಡೆದರೆ ಹೇಗೆ ?

ತುಂಬಾ ಚೆಲುವಾಗಿರುವ ಹೆಂಡತಿ ಗಂಡನಿಗೆ ಶತ್ರುವಂತೆ. ಹಾಗೆಯೇ ಸುಂದರನಾದ ಪತಿಯೂ ಹೆಂಡತಿಗೆ ಶತ್ರುವಾಗಬೇಕೆ ? ಇತರ ಹುಡುಗಿಯರು ಅವನಿಂದ ಆಕರ್ಷಿತರಾದರೆ ? ಆತನ ಮುಖವೇನೋ ಮುದ್ದಾಗಿದೆ. ಆದರೆ ಮನಸ್ಸೂ ಅಷ್ಟೇ ಸುಂದರವಾಗಿದೆ ಎಂದು ಹೇಗೆ ಗೊತ್ತು ?

ಮಾರನೆಯ ದಿನ ಮತ್ತೆ ದಂಪತಿಗಳು ಅವಳನ್ನು ಪ್ರಶ್ನಿಸಿದರು. ಇಂದಿರೆಗೆ ಏನು ಉತ್ತರ ಕೊಡಬೇಕೋ ತಿಳಿಯದಾಯಿತು. ಅವಳು ಮುಖ ಕೆಳಗೆ ಮಾಡಿ ಸೋತ ದನಿಯಲ್ಲಿ "ಏನು ಉತ್ತರ ಕೊಡಬೇಕೋ ತಿಳಿಯೋದಿಲ್ಲ ಅಣ್ಣಾ. ನಿನ್ನ ಅಭಿಪ್ರಾಯವೇನು ?" ಎಂದಳು.

"ನಿಜವಾಗಿ ಹೇಳಬೇಕೆಂದರೆ ನಾನು ಅವನನ್ನು ಒಪ್ಪಿಕೊಂಡಿಲ್ಲ. ಈ ಆಲೋಚನೆ ನಿನ್ನ ಅಮ್ಮನದು. ನನಗೆ ಈ ಸಂಬಂಧ ಇಷ್ಟವಿಲ್ಲ."

ಇಂದಿರ ಆಶ್ಚರ್ಯದಿಂದ ಹುಬ್ಬೆತ್ತಿ "ಯಾಕೆ ?" ಎಂದಳು.

"ನನಗೆ ಕಾರಣ ಗೊತ್ತಿಲ್ಲ. ಆದರೆ ಮುಂದೆ ನೀನು ಸುಖವಾಗಿರುವುದು ನನಗೆ ಮುಖ್ಯ. ನೀನಾಗಿಯೇ ಅವನನ್ನು ಮೆಚ್ಚಿ ಒಪ್ಪಿಕೊಂಡರೆ ನಾನು ಅದಕ್ಕೆ ಅಡ್ಡಿ ಮಾಡೋದಿಲ್ಲ. ಆದರೆ ನೀನು ಅವನನ್ನು ಮದುವೆ ಮಾಡಿಕೋಂತಾನೂ ನಾನು ಹೇಳೋದಿಲ್ಲ."

"ಎಲ್ಲಾನೂ ನನಗೇ ಬಿಟ್ಟರೆ ಉತ್ತರ ಕೊಡೋಕೆ ಕಷ್ಟವಾಗುತ್ತೆ. ನೀನೇನು ಹೇಳ್ತೀಯಾ ?"

ರಾಯರು ನಕ್ಕು "ನೀನು ಅವನಿಗೆ ತುಂಬಾ ಒಳ್ಳೆಯವಳು" ಎಂದರು.

"ಪಾಪ! ಆತ ನಿಮ್ಮ ತಲೆಯ ಮೇಲೆ ಕಲ್ಲು ಹಾಕಿದರೇನು ?" ಲಲಿತಮ್ಮ ಮೂದಲಿಸಿದರು.

"ಹಾಗಲ್ಲ. ಆತನ ಬಗ್ಗೆ ನನಗಿರುವ ಅಭಿಪ್ರಾಯಕ್ಕೆ ಏನೂ ಕಾರಣ ಇಲ್ಲ. ಕೆಲವರನ್ನು ಮೊದಲ ನೋಟಕ್ಕೇ ಇಷ್ಟಪಡ್ತೀವಿ. ಮತ್ತೆ ಕೆಲವರನ್ನ ಮೊದಲ ನೋಟಕ್ಕೆ ಇಷ್ಟಪಡೋದಿಲ್ಲ. ಅದಕ್ಕೆ ಕಾರಣ ಏನೂಂತ ತಿಳಿಯೋದಿಲ್ಲ."

"ಹುಡುಗ ಮನ್ಮಥನ ಹಾಗಿದ್ದಾನೆ." ಲಲಿತಮ್ಮ ಹೇಳಿದರು.

"ಒಪ್ಪಿಕೊಂಡೆ."

"ವಿದ್ಯಾವಂತ."

"ಅಲ್ಲಾಂದವರು ಯಾರು ?"

"ಮತ್ತೆ ನೀವು ಯಾಕೆ ಒಪ್ಪಿಕೋಬಾರದು ?"

"ಮದುವೆ ಮಾಡಿಕೊಳ್ಳುವವನು ನಾನಲ್ಲ. ಇಂದಿರಾ. ಅವಳೊಪ್ಪಿದರೆ ಆಯಿತು."

ಇಂದಿರ ಅಸಹಾಯಕಳಾಗಿ ತಾಯಿಯ ಕಡೆ ನೋಡಿದಳು. ಮಗಳಿಗೆ ಬದಲಾಗಿ ಲಲಿತಮ್ಮ ತಾವೇ ಉತ್ತರ ಕೊಟ್ಟರು.

"ನಿಧಾನವಾಗಿ ಯೋಚನೆ ಮಾಡು."

ಇಂದಿರ ಭಾರವಾದ ಹೃದಯ ಹೊತ್ತು ಹೊರಗೆ ಹೋದಳು. ತಾಯಿ ಮಗಳನ್ನು ಹಿಂಬಾಲಿಸಿದರು.

ಮಾರನೆಯ ದಿನ ಲಲಿತಮ್ಮ ಸಂಭ್ರಮದಿಂದ ರಾಯರ ಬಳಿಗೆ ಬಂದು "ಇಂದಿರಾ ಒಪ್ಪಿದಾಳೆ" ಎಂದರು.

"ನೀನು ಅವಳಿಗೆ ಏನೂ ಹೇಳಿ ಕೊಡಲಿಲ್ಲ ತಾನೇ ?" ರಾಯರು ಸಂಶಯದಿಂದ ಹೆಂಡತಿಯ ಮುಖವನ್ನು ನೋಡಿದರು.

"ಅವಳಿಗೆ ಅಷ್ಟೂ ತಿಳಿಯುವುದಿಲ್ಲವೇ ?"

"ತುಂಬು ತಾರುಣ್ಯ, ಸುಂದರವಾದ ಮುಖ ಮೆಚ್ಚಿಕೊಳ್ಳುವ ವಯಸ್ಸು ಅವಳದು. ಇಂದಿರಾನ ಕರಿ."

ಲಲಿತಮ್ಮ ಮಗಳನ್ನು ಕೂಗಿದರು. ಇಂದಿರ ಸಂತೋಷದಿಂದ ತಂದೆಯ

ಬಳಿಗೆ ಬಂದಳು.

"ಅವನನ್ನು ಒಪ್ಪಿಕೊಂಡಿದ್ದೀಯಾ ?"

"ಹೂಂ."

"ಆಮೇಲೆ ನಿನ್ನ ಆಯ್ಕೆಗಾಗಿ ಪಶ್ಚಾತ್ತಾಪ ಪಡಬಾರದು."

"ಇಲ್ಲ" ಇಂದಿರ ಧೃಡಸ್ವರದಿಂದ ಹೇಳಿದಳು.

ರಾಯರಿಗೆ ಮಗಳ ಮುಖ ನೋಡಿ ತೃಪ್ತಿಯಾಯಿತು. ಅವಳು ತನ್ನ ಆಯ್ಕೆಯ ಬಗ್ಗೆ ಸಂಪೂರ್ಣ ಭರವಸೆ, ತೃಪ್ತಿಯನ್ನು ಹೊಂದಿದ್ದಂತೆ ತೋರಿತು.

ಲಲಿತಮ್ಮ ಸಡಗರದಿಂದ "ಕಾಗದ ಬರೆದು ಅವರ ಅಭಿಪ್ರಾಯ ಏನೂಂತ ತಿಳ್ಕೋತೀರಾ ?" ಎಂದರು.

"ನಾನು ಕಾಗದ ಬರೆಯೋದಿಲ್ಲ."

ಲಲಿತಮ್ಮನಿಗೆ ನಿರಾಶೆಯಾಯಿತು. ಅವರು ಸೋತ ದನಿಯಲ್ಲಿ ''ಕಣ್ಣಾ ಮುಚ್ಚಾಲೆ ಆಡಬೇಡಿ" ಎಂದರು.

''ಇಲ್ಲವೇ ಮಹರಾಯ್ತಿ. ನಾಳೆ ನಾಡಿದ್ದರಲ್ಲಿ ನಾನೇ ಕಾರಿನಲ್ಲಿ ಮೈಸೂರಿಗೆ ಹೋಗಿ ಬರುತ್ತೇನೆ. ಅವನು ಹುಡುಗಿಯನ್ನು ಒಪ್ಪಿಸಿರುವುದಾದರೆ ಅವನ ತಾಯಿ, ತಂದೆಯನ್ನು ಜೊತೆಯಲ್ಲಿಯೇ ಕರೆದುಕೊಂಡು ಬರ್‍ತಿನಿ. ಸಾಧ್ಯವಾದರೆ ಮೋಹನ...." ಎನ್ನುತ್ತಾ ರಾಯರು ಮಗಳ ಕಡೆ ತಿರುಗಿದರು.

ಆದರೆ ಇಂದಿರ ಅಲ್ಲಿರಲಿಲ್ಲ. ಅವಳಾಗಲೇ ಅಡಿಗೆಯ ಮನೆಗೆ ಓಡಿ ಹೋಗಿದ್ದಳು.

* * * *

ಮೈಸೂರಿನಿಂದ ಬಂದ ಟೆಲಿಗ್ರಾಮನ್ನು ಒಡೆಯುವುದಕ್ಕೆ ಮುಂಚೆಯೇ ರಾಯರು ಹೋಗಿದ್ದ ಕೆಲಸವೇನಾಗಿರಬಹುದು ಎಂದು ಲಲಿತಮ್ಮ ಊಹಿಸಿದ್ದರು. ಟೆಲಿಗ್ರಾಮನ್ನು ಕೈಲಿ ಹಿಡಿದು

''ಇಂದಿರ" ಎಂದು ಕೂಗಿದರು.

ಇಂದಿರ ಅದೇ ತಾನೆ ತೋಟ ಸುತ್ತಿ ಬಂದಿದ್ದವಳಾದುದರಿಂದ ಆಯಾಸಗೊಂಡು ಆರಾಮ ಕುರ್ಚಿಯನ್ನೊರಗಿ ಕುಳಿತಿದ್ದಳು.

''ನಿಮ್ಮಣ್ಣ ಟೆಲಿಗ್ರಾಮ್ ಮಾಡಿದಾರೆ ಮೈಸೂರಿಂದ."

ಇಂದಿರ ಮುಖದಲ್ಲಿ ಯಾವ ವಿಧವಾದ ಭಾವವನ್ನೂ ಪ್ರದರ್ಶಿಸದೆ ಒರಗಿದ್ದಂತೆಯೇ ಕೈ ನೀಡಿ ಟೆಲಿಗ್ರಾಮನ್ನು ಒಡೆದು ಅದರಲ್ಲಿದ್ದುದನ್ನು

ಮೊದಲು ತಾನೋದಿಕೊಂಡಳು.

"ಏನು ಬರೆದಿದಾರೆ ?" ಲಲಿತಮ್ಮನಿಗಾಗಲೇ ಆತುರ.

"ನಾಳೆ ಕಾರಿನಲ್ಲಿ ಅವರನ್ನೆಲ್ಲಾ ಕರ್‍ಕೊಂಡು ಬರ್‍ತಾರಂತೆ."

ಹಾಗಾದ್ರೆ ಅವರು ಹೋದ ಕೆಲಸ ಹಣ್ಣಾಗಿರಬೇಕು. ನೀನು ಪುಣ್ಯ ಮಾಡಿದ್ದೆ ಮನ್ಮಥನಂತಹ ಹುಡುಗನ ಕೈ ಹಿಡಿಯೋಕೆ."

"ಸಾಕು ಬಿಡಮ್ಮ" ಎಂದಳು ಇಂದಿರ ನಸುಮುನಿದು.

"ಆಗಲೇ ಜಂಭ ತನ್ನ ಗಂಡ ಚೆನ್ನಾಗಿದಾನೇಂತ."

"ಗಂಡನಾದ ಕಾಲಕ್ಕೆ ನೋಡಿಕೊಳ್ಳೋಣ" ಎಂದಳು ಇಂದಿರ.

"ಥೂ ಅದ್ಯಾಕೆ ಹಾಗೆ ಮಾತನಾಡ್ತೀಯ ? ಇವತ್ತಿಗಲ್ಲದಿದ್ದರೆ ನಾಳೆ ಗಾದರೂ ಅವನು ನಿನ್ನ ಗಂಡನೇ."

ಸುದ್ದಿ ಕೇಳಿ ಇಂದಿರಳಿಗೆ ಒಳಗೊಳಗೇ ಸಂತೋಷವಾಗಿತ್ತು. ಹರ್ಷದಲೆ ಗಳು ಹೃದಯ ಸರೋವರದಿಂದ ಉಕ್ಕುಕ್ಕಿ ಮುಖದ ಮೇಲೆ ನಸುನಗೆ ಯಾಗಿ ಸುಳಿಯಲು ಯತ್ನಿಸುತ್ತಿದ್ದವು. ಯಾವಾಗಲೂ ಗಂಭೀರವಾಗಿಯೇ ಇರುತ್ತಿದ್ದ ಅವಳ ಮುಖ ಈಗ ಕೊಂಚ ವಿಕಸಿತವಾಗಿತ್ತು. ಮುಖದ ಮೇಲೆ ತಾನೇತಾನಾಗಿ ಮೆರೆದಾಡಲು ಪ್ರಯತ್ನಿಸುತ್ತಿದ್ದ ಹೃದಯದ ಪ್ರಫುಲ್ಲತೆಯನ್ನು ಇಂದಿರ ಮತ್ತೆ ಅದುಮಿ ಅಂತರಂಗದಾಳಕ್ಕೆ ತಳ್ಳುತ್ತಿ ದ್ದಳು. ಆದರೆ ಅವಳ ಪ್ರಯತ್ನ ಸಾಕಷ್ಟು ಯಶಸ್ವಿಯಾಗಿರಲಿಲ್ಲ.

ತಾಯಿಗೆ ಮಗಳ ಮುಖಭಾವವನ್ನು ನೋಡುತ್ತಾ ನಿಂತುಕೊಳ್ಳಲು ಸಮಯವಿರಲಿಲ್ಲ. ಅವರಾಗಲೇ 'ಪುಟ್ಟಯ್ಯ' ಎಂದು ಕೂಗುತ್ತಾ ಹೊರಗೆ ಹೋಗಿದ್ದರು. ಇದ್ದ ಒಬ್ಬಳೇ ಮಗಳ ಮದುವೆಯ ಕನಸು ಕಾಣುತ್ತಿದ್ದ ಸಂಭ್ರಮ ನನಸಾಗುವ ಹೊತ್ತು ಸಮೀಪಿಸಿದ್ದರಿಂದ ಆಕೆ ಹರ್ಷದ ಹೊನ ಲಾಗಿ ಮನೆಯಲ್ಲೆಲ್ಲಾ ಹರಿದಾಡಿದರು.

ಇಂದಿರ ಸ್ವಲ್ಪ ಹೊತ್ತು ಟೆಲಿಗ್ರಾಮನ್ನೇ ಕೈಲಿ ಹಿಡಿದು ನೋಡುತ್ತಾ ಕುಳಿತಳು. ನಂತರ ನಿಧಾನವಾಗಿ ಅದನ್ನು ಮಡಿಸಿ ಮೇಜಿನ ಮೇಲಿರಿಸಿ ಎದ್ದು ನಿಂತಳು. ಅಷ್ಟರಲ್ಲಿ ಲಲಿತಮ್ಮ ಒಳಗೆ ಬಂದು

"ಮತ್ತೆ ತೋಟಕ್ಕೆ ಹೊರಟೆಯಾ ?" ಎಂದರು.

"ಇಲ್ಲ. ಯಾಕೋ ನಿದ್ದೆ ಬರುವ ಹಾಗಿದೆ. ಮಲಗಿಕೋತೀನಿ" ಎಂದಳು ಇಂದಿರ.

ಮಗಳ ಆಲಸ್ಯ ಕಂಡು ತಾಯಿ ಒಂದು ಗಳಿಗೆ ಕುಪಿತರಾಗಿದ್ದರು.ಆದರೆ

ಅದನ್ನೇ ದೊಡ್ಡದನ್ನಾಗಿ ಮಾಡಲು ಅವರಿಗೆ ಬಿಡುವಿರಲಿಲ್ಲ. ಆದುದರಿಂದ ಅವರು ಅವಳ ಆಲಸ್ಯವನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ ಸಂಭ್ರಮ ದಿಂದ ಪುಟ್ಟಯ್ಯನನ್ನು ಕರೆಯುತ್ತಾ ಹೋದರು.

*    *    *    *

ಮನೆಯ ಮುಂದೆ ಕಾರು ನಿಂತಾಗ ಇಂದಿರೆಯ ಹೊರತಾಗಿ ಉಳಿದವರು ಹೊರಗೆ ಬಂದು ನಿಂತರು. ಪುಟ್ಟಯ್ಯ ಸಂತೋಷದಿಂದ ಹಲ್ಲು ಕಿರಿಯುತ್ತ,

"ಮೋಹನರಾಯರೂ ಮತ್ತೆ ಬಂದಿದಾರಮ್ಮಾ. ಇಂದಿರಮ್ಮನ್ನ ನೋಡೋ ಸಲುವಾಗಿ" ಎಂದ.

ಮೋಹನನ ತಾಯಿ ಗೌರಮ್ಮನ ಮುಖವನ್ನು ಕಂಡೊಡನೆ ಲಲಿತಮ್ಮ ಗೌರವದಿಂದ ಕಾರಿನ ಬಳಿ ಹೋಗಿ,

"ಬನ್ನಿ" ಎಂದು ಸ್ವಾಗತಿಸಿದರು.

ಮೋಹನ ಮೊದಲನೆಯ ಸಲ 'ಮಿನುಗುತಾರೆ'ಗೆ ಅಪರಿಚಿತನಾಗಿ ಬಂದಿದ್ದ. ಆದರೆ ಈ ಬಾರಿ ಭಾವೀ ಅಳಿಯನಾಗಿ ಬಂದಿದ್ದ. ಪುಟ್ಟಯ್ಯ ಹಿಂದಿನ ಆದರದೊಡನೆ ಗೌರವವನ್ನು ಬೆರೆಸಿ ಮೋಹನನನ್ನು ಮಾತನಾಡಿಸಿದ, ಅವರೊಡನೆ ಮೋಹನನ ತಂದೆ ಸುಬ್ಬಣ್ಣ, ತಂಗಿಯೊಬ್ಬಳು—ಕಮಲ—ಬಂದಿದ್ದರು.

ಸುಬ್ಬಣ್ಣನವರಿಗೆ ರಾಯರ ಆದರೋಪಚಾರಗಳಲ್ಲಿ ಅಷ್ಟಾಗಿ ಗಮನ ವಿರಲಿಲ್ಲ. ಅವರ ಗಮನವೆಲ್ಲಾ ರಾಯರ ಮಹಲು, ಕಾಫಿ ತೋಟಗಳ ಕಡೆ ಹರಿದು—"ಇವರಿಗೆ ಒಟ್ಟು ಎಷ್ಟು ಆಸ್ತಿಯಿರಬಹುದು" ಎಂದು ಸ್ಥೂಲ ವಾಗಿ ಲೆಕ್ಕಾಚಾರ ಹಾಕುತ್ತಿತ್ತು.

ಗೌರಮ್ಮನವರಿಗೆ ಹುಡುಗಿಯನ್ನು ನೋಡುವ ಕುತೂಹಲ ಅಪರಿಮಿತ ವಾಗಿತ್ತು.ಯಾಕೆಂದರೆ ಮೋಹನ ಅಂತಿಂತಹ ಹುಡುಗಿಯನ್ನುಒಪ್ಪುವವನಲ್ಲ ವೆಂಬುದು ಅವರಿಗೆ ತಿಳಿದಿತ್ತು. ಎಂತಹ ಚೆಲುವೆಯನ್ನೋ ಆತ ಮದುವೆ ಯಾಗಲು ನಿರಾಕರಿಸಿದ್ದ.ಆದರೆ ಈಗ ಹೆಚ್ಚು ಪರೀಕ್ಷೆಗೆ ಹೋಗದೆ ಹುಡು ಗಿಯನ್ನು ಒಪ್ಪಿರಬೇಕಾದರೆ ಆಕೆ ನಿಜವಾಗಿಯೂ ಸುಂದರಳಾಗಿರಬೇಕು.

ಕಾಫಿ ಉಪಹಾರವಾದ ನಂತರ ಇಂದಿರ ಅವರ ಕಣ್ಣಿಗೆ ಬಿದ್ದಳು.ಇಂದಿರ ಆಡಂಬರವಿಲ್ಲದೆ ಎಂದಿನಂತೆ ಸರಳ ಉಡುಪಿನಲ್ಲಿದ್ದಳು. ಮಗಳಿಗೆ ಶೃಂಗಾರ ಮಾಡುವ ವಿಷಯದಲ್ಲಿ ತಾಯಿ ಸೋತಿದ್ದರು. ಆಕೆಯ ಎಲ್ಲಾ ಒತ್ತಾಯ ವನ್ನೂ ಇಂದಿರ ಒತ್ತರಿಸಿ ಹಾಕಿ ಎಂದಿನಂತೆ ಸಾಧಾರಣವಾದುದೊಂದು ತಿಳಿ ಗೆಂಪಿನ ನೂಲಿನ ಸೀರೆಯನ್ನುಟ್ಟು ಅದಕ್ಕೊಪ್ಪುವ ಕೈಮಗ್ಗದ ಕೆಂಪುಚುಕ್ಕೆ

ಗಳಿದ್ದ ರವಿಕೆಯನ್ನು ತೊಟ್ಟಿದ್ದಳು.

"ನನ್ನ ನಿಜವಾದ ಬಣ್ಣಾನ ಅವರಿಂದ ಮುಚ್ಚಿಡೋದು ನನಗಿಷ್ಟವಿಲ್ಲ" ಎಂದು ಹೇಳಿ ಪೌಡರನ್ನು ಸಹ ದೂರವಿರಿಸಿದ್ದಳು.

ಆರೋಗ್ಯ, ಯೌವನದ ಸಂಪತ್ತಿನಿಂದಾಗಿ ಇಂದಿರ ಗೌರಮ್ಮನ ಕಣ್ಣಿಗೆ ಹಿತವಾಗಿ ಕಂಡರೂ 'ಹುಡುಗಿ ರೂಪವತಿಯಲ್ಲ' ಎಂಬ ಸತ್ಯಾಂಶ ಮೊದಲ ನೋಟಕ್ಕೇ ಆಕೆಗೆ ತಿಳಿಯಿತು.

ಮಾಲತಿ, ಕುಮುದಿನಿಯರಂತಹ ಹುಡುಗಿಯರನ್ನು ಬೇಡವೆಂದ ಮೋಹನ ಇಂದಿರಳಲ್ಲಿ ಕಂಡ ಸೌಂದರ್ಯವಾದರೂ ಯಾವುದು ಎಂಬುದು ಆಕೆಗೆ ಅರ್ಥವಾಗಲಿಲ್ಲ.

ಹುಡುಗಿ ವಧೂ ಪರೀಕ್ಷೆಗೊಳಗಾದ ಇತರ ಹುಡುಗಿಯರಂತೆ ನಾಚಲಿಲ್ಲ. ಯಾರಾದರೂ ಪರಿಚಯದವರು ಬಂದರೆ ಸಹಜವಾಗಿ ವರ್ತಿಸುವಂತೆ ವರ್ತಿಸುತ್ತಿದ್ದಳು. ಇಂದಿರ ಸಂಕೋಚವಿಲ್ಲದೆ ಮಾತನಾಡಿದುದನ್ನು ನೋಡಿ ಗೌರಮ್ಮನಿಗೆ 'ಈಕೆ ದಿಟ್ಟೆ' ಎನಿಸಿತು.

ಮಗ ಒಪ್ಪಿಕೊಂಡಾಕೆಯನ್ನು ತಾನು ಬೇಡವೆನ್ನುವುದರಲ್ಲಿ ಯಾವ ಅರ್ಥವೂ ಇಲ್ಲವೆಂಬುದು ವ್ಯವಹಾರ ಚತುರೆಯಾದ ಆಕೆಗೆ ತಿಳಿದಿತ್ತು. ಸುಬ್ಬಣ್ಣನವರಿಗೆ ಹುಡುಗಿಯ ರೂಪ ಮುಖ್ಯವಾಗಿರಲಿಲ್ಲ. ಆಕೆಯನ್ನು ಸೊಸೆಯಾಗಿ ತಂದುಕೊಳ್ಳುವುದರಿಂದ ತಮಗೆ ಲಾಭವಿದೆ ಎಂಬುದನ್ನು ಮಾತ್ರ ಯೋಚಿಸಿದ್ದರು.

ಮೈಸೂರಿನಲ್ಲಿಯೇ ಇಂದಿರ, ಮೋಹನರ ಜಾತಕವನ್ನು ತೋರಿಸಿದ್ದಾಗಿತ್ತು. ಶಾಸ್ತ್ರಿಗಳು ಇಬ್ಬರ ಜಾತಕವನ್ನೂ ಪರಿಶೀಲಿಸಿ 'ಈ ಹುಡುಗನಿಗಾಗಿಯೇ ಈ ಹುಡುಗಿ ಹುಟ್ಟಿದ್ದಾಳೆ.' ಎಂದು ತಿಳಿಸಿದರು.

ಮೋಹನನನ್ನು ರಾಯರು ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶ ವ್ಯಾಸಂಗಕ್ಕೆ ಕಳುಹಿಸುವುದಾಗಿ ತಿಳಿಸಿದ್ದರು. ಸಧ್ಯಕ್ಕೆ ಅವರ ಮುಂದಿದ್ದ ಪ್ರಶ್ನೆ—ಮದುವೆ ಮಾಡಿ ವಿದೇಶಕ್ಕೆ ಕಳುಹಿಸುವುದೇ ಅಥವಾ ವಿದೇಶ ವ್ಯಾಸಂಗ ಮುಗಿಸಿ ಬಂದ ಮೇಲೆ ಮಾಡುವುದೇ ಎನ್ನುವುದು—ಮಾತ್ರ ನಿರ್ಧಾರವಾಗಿರಲಿಲ್ಲ.

ರಾಯರಿಗೆ, ಲಲಿತಮ್ಮನಿಗೆ ಮಾತ್ರ ಮದುವೆ ಮುಗಿಸಿಯೇ ಮೋಹನನನ್ನು ವಿದೇಶಕ್ಕೆ ಕಳುಹಿಸಬೇಕೆಂಬ ಆಸೆಯಿತ್ತು. ಸುಬ್ಬಣ್ಣ, ಗೌರಮ್ಮನವರು ಜವಾಬ್ದಾರಿಯನ್ನೆಲ್ಲಾ ಮಗನ ಮೇಲೆ ಹಾಕಿ ನಿಶ್ಚಿಂತರಾದರು.

ಈಗ ಮಾತ್ರ ಮೋಹನನಿಗೆ ಏನು ಉತ್ತರ ಕೊಡಬೇಕೋ ತಿಳಿಯದಾಯಿತು. ಅವನು ಎರಡುಬಾರಿ ಇಂದಿರಳ ಕಡೆ ನೋಡಿದ. ಆದರೆ ಇಂದಿರಳಿಂದ

ಅವನಿಗೆ ಯಾವ ಸಹಾಯವೂ ಬರಲಿಲ್ಲ. ಮೋಹನ ಅವಳ ಕಡೆ ನೋಡಿದಾಗ ಇಂದಿರ ಕಮಲಳ ಕೈಲಿ ಮಾತನಾಡುತ್ತಿದ್ದಳು,

"ನೀವು ಏನು ಹೇಳ್ತೀರಿ ಮೋಹನರಾವ್ ? ನಮಗೇನೋ ಮದುವೆ ಮುಗಿಸಿ ಕಳುಹಿಸುವ ಅಪೇಕ್ಷೆಯಿದೆ. ಆದರೆ ನಿಮಗೆ ಯಾವ ರೀತಿಯಲ್ಲೂ ತೊಂದರೆಯಾಗಬಾರದು. ಯೋಚನೆ ಮಾಡಿ ಹೇಳಿ" ಎಂದರು ರಾಯರು.

ಮೋಹನ ಧೈರ್ಯಮಾಡಿ ಹೇಳಿದ "ನಾನು ಇಂದಿರನ ಜೊತೆ ಮಾತನಾಡಿ ಯಾವುದನ್ನೂ ತಿಳಿಸುತ್ತೇನೆ."

ಮೋಹನ ತನ್ನ ಹೆಸರು ಹೇಳಿದಾಗ ಇಂದಿರ ನಸುನಾಚಿದಳು. ಮದುವೆಯಾಗದಿದ್ದರೂ ತಾವಿಬ್ಬರೂ ಸಮೀಪದ ಬಂಧುಗಳು ಎಂಬುದರ ಅನುಭವ ಆಗ ಆಕೆಗಾಯಿತು. ಮೋಹನನ ಜೀವನದಲ್ಲಿ ತನ್ನ ಪಾತ್ರ ಎಷ್ಟೊಂದು ಮಹತ್ವನಾದುದು ಎಂದು ಇಂದಿರ ಆಶ್ಚರ್ಯಗೊಂಡಳು. ಇನ್ನು ಮೇಲೆ ಅವನೇನು ಮಾಡಿದರೂ ತನ್ನನ್ನು ಕೇಳಬೇಕು, ತನ್ನ ಸಲಹೆ ಪಡೆಯಬೇಕು! ಎಷ್ಟೊಂದು ವಿಚಿತ್ರ !

ಪುಟ್ಟಯ್ಯಬಾಯಿ ಅಗಲವಾಗಿ ತೆಗೆದು ನಕ್ಕು "ಚಿಕ್ಕಮ್ಮಾವರಿಂದ ಹುಕುಂ ಬರದೆ ಪುಟ್ಟರಾಯರು ಇನ್ನು ಮೇಲೆ ಏನೂ ಮಾಡುವ ಹಾಗಿಲ್ಲ" ಎಂದ.

ಎಲ್ಲರೂ ನಕ್ಕರು.

ಊಟವಾದ ಮೇಲೆ ವಿಶ್ರಾಂತಿ ಪಡೆದುದ್ದಾಯಿತು. ಸಂಜೆಯ ಸೂರ್ಯ ಇಳಿಮುಖನಾದಾಗ ಮೋಹನ ಇಂದಿರಳೊಡನೆ ತೋಟದ ಕಡೆ ಹೊರಟ. ಹಿರಿಯರು ಬಾಗಿಲಿನಲ್ಲಿ ನಿಂತು ಮದುವೆಯಾಗದ ಕಿರಿಯ ಜೋಡಿಯನ್ನು ಕಣ್ಣು ತುಂಬಾ ನೋಡುತ್ತಾ ನಿಂತರು.

ತೋಟದಲ್ಲಿ ತಿರುಗಾಡುವುದು ಅವರಿಗೆ ಒಂದು ನೆಪವಾಗಿತ್ತು. ಮೋಹನ ಇಂದಿರೆಯ ಸಲಹೆಯನ್ನು ಪಡೆಯುವುದು ಅವರ ಸುತ್ತಾಟದ ಮುಖ್ಯ ಉದ್ದೇಶವಾಗಿತ್ತು. ಒಂದು ರೂಮಿನಲ್ಲಿ ಕುಳಿತು ವ್ಯಾಪಾರಿಗಳಂತೆ ಮಾತನಾಡುವುದಕ್ಕಿಂತ ಸಂಜೆಯ ಹೊಂಬಿಸಲಿನಲ್ಲಿ ತಿರುಗಾಡುತ್ತಾ ಅವಳ ಸಲಹೆ ಪಡೆಯುವುದು ಚೆನ್ನ ಎನಿಸಿತು ಮೋಹನನಿಗೆ. ಅವಳು ತನ್ನ ಅಪೇಕ್ಷೆಯನ್ನು ನಿರ್ಭಯವಾಗಿ ರಾಯರ ಮುಂದಿಟ್ಟ. ರಾಯರು ಮೊದಲು ಚಕಿತರಾದರು. ನಂತರ ನಸುನಕ್ಕು 'ಆಗಲಿ' ಎಂದರು. ಲಲಿತಮ್ಮನವರಿಗಂತೂ ಅಳಿಯ ದೇವರ ಸುಂದರ ರೂಪೊಂದರ ಹೊರತಾಗಿ ಬೇರೆ ಯಾವುದೂ ಕಾಣಿಸುತ್ತಿರಲಿಲ್ಲ. ಅವರು ಮಗಳಿಗೆ,

"ಇಂದಿರಾ, ಮೋಹನ ನಿನ್ನ ಜೊತೆ ತಿರುಗಾಡಬೇಕೆಂದಿದಾರೆ" ಎಂದರು

"ಇದೇನು ಮೊದಲನೇ ಸಲವಲ್ಲ. ಎರಡನೇ ಸಲ."

"ಆಗ ಪುಟ್ಟಯ್ಯ ಇದ್ದ" ಲಲಿತಮ್ಮ ರೇಗಿಸಿದರು.

"ಈಗಲೂ ಬರಲಿ. ಯಾರು ಬೇಡಾಂದವರು?" ಎಂದಳು ಇಂದಿರ.

ಸಂಜೆ ಮಾತ್ರ ತಾಯಿ ಹೇಳಿದಂತೆ ಇಂದಿರ ಕೇಳಲೇಬೇಕಾಯಿತು. ತಾಯಿ ಬೀರುವಿನಿಂದ ಆರಿಸಿ ತೆಗೆದುಕೊಟ್ಟ ಎಳೆ ಹಳದಿ ಬಣ್ಣದ ಹಸಿರಂಚಿನ ಸಿಲ್ಕಿನ ಸೀರೆಯುಟ್ಟು ದಟ್ಟ ಹಸುರಿನ ರವಿಕೆ ತೊಟ್ಟು ಇಂದಿರ ಹೊರಟಳು. ಹೊರಟು ನಿಂತಿದ್ದ ಮಗಳಿಗೆ ತಾಯಿ ಬಲವಂತದಿಂದ ಮುತ್ತಿನ ಜುಮುಕಿಯನ್ನು ಹಾಕಿದರು. ಇಂದಿರ ಎಂದಿನಂತೆಯೇ ಕೈಲೊಂದು ಕತ್ತಿ ಹಿಡಿದಳು. ಅದನ್ನು ನೋಡಿ ಮೋಹನ ನಕ್ಕು

"ಹಾಗಾದರೆ ನಾನೂ ಒಂದು ಕತ್ತಿ ತಗೊಳ್ಳಲೇನು ?" ಎಂದ.

ಅವನ ಮಾತು ಕೇಳಿ ಪುಟ್ಟಯ್ಯ ಬಿದ್ದು ಬಿದ್ದು ನಕ್ಕ, ಇಂದಿರ ನಗು ಅಡಗಿಸಿಕೊಂಡಳು.

"ಪುಟ್ಟರಾಯರು ದಿಬ್ಬ, ಏರಿ ಹತ್ತುವಾಗ ಹುಷಾರಾಗಿ ನೋಡಿಕೋ ಇಂದಿರಮ್ಮ" ಎಂದ ಪುಟ್ಟಯ್ಯ.

ಹಸಿರು ಗಿಡಗಳ ನಡುವೆ ಇಂದಿರ, ಮೋಹನ ಮರೆಯಾದರು.

ಇಂದಿರ ಮಾತನಾಡದೇ ಆಗಾಗ್ಗೆ ಕಾಫಿ ಗಿಡಗಳ ಬೇಡವಾದ ಕೊಂಬೆಗಳನ್ನು ಕತ್ತಿಯಿಂದ ಸವರುತ್ತಾ ನಡೆದಿದ್ದಳು. ಮೊದಲ ಸಲ ಅತಿಥಿಯಾಗಿ ಬಂದಿದ್ದ ವ್ಯಕ್ತಿ ಈ ದಿನ ಭಾವಿ ಪತಿಯಾಗಿ ಅವಳೊಡನಿದ್ದ. ಮೋಹನನೂ ಬಹಳ ಹೊತ್ತು ಮಾತನಾಡಲಿಲ್ಲ. ಬೆಟ್ಟದ ಏರು ತಗ್ಗುಗಳಲ್ಲಿ ಅಭ್ಯಾಸವಿಲ್ಲದ ಮೋಹನ ಆಗಾಗ್ಗೆ ಜಾರುತ್ತಿದ್ದ. ಒಂದು ಸಲ ಜಾರಿ ಬೀಳುವುದರಲ್ಲಿದ್ದ ಮೋಹನ ಇಂದಿರೆಯ ತೋಳನ್ನು ಬಿಗಿಯಾಗಿ ಹಿಡಿದು ನಿಂತ. ಮೋಹನ ತೋಳು ಹಿಡಿದು ತನ್ನ ಕಡೆ ಸ್ವಲ್ಪ ಎಳೆದ ಕೂಡಲೇ ಇಂದಿರ ಒಂದು ಕೈಯಿಂದ ಅವನನ್ನು ಹಿಡಿದು ನಿಲ್ಲಿಸಿದಳು. ಮೋಹನ ಸ್ಥಿರವಾಗಿ ನಿಂತ ಮೇಲೂ ಇಂದಿರಳ ತೋಳನ್ನು ಬಿಡಲಿಲ್ಲ.

ಇಂದಿರ ತುಟಿ ಕಚ್ಚುತ್ತಾ ಹತ್ತಿರದಲ್ಲಿಯೇ ಇದ್ದ ಮರದ ಬುಡವೊಂದನ್ನು ಕೆತ್ತುತ್ತಾ ನಿಂತಿದ್ದಳು. ಮೈ ಕಾವೇರಿ ಮುಖ ಕೆಂಪಾಗಿತ್ತು. ಮೋಹನ ಮತ್ತಷ್ಟು ಸಲಿಗೆ ವಹಿಸುವ ಆಸೆಯಿಂದ ಇಂದಿರಳನ್ನು ಹತ್ತಿರಕ್ಕೆಳೆದುಕೊಂಡ. ಇಂದಿರ ಕತ್ತೆತ್ತಿ ಅವನ ಕಡೆ ನೋಡಿದಳು. ಮೋಹನನಿಗೆ ಚಾವಟಿಯಿಂದ

ಹೊಡೆದಂತಾಯಿತು, ಕೂಡಲೇ ಅವಳ ಕೈ ಬಿಟ್ಟ.

ಇಂದಿರಳಿಗೆ ನಿರಾಶೆಯಾಯಿತು. ಅವಳ ಕಣ್ಣುಗಳು ಮೋಹನನ ಕಣ್ಣುಗಳನ್ನು ಸಂಧಿಸಿದ ಕೂಡಲೇ ಮೋಹನ ತಪ್ಪು ಮಾಡಿದವನಂತೆ ಅವಳ ಕೈ ಬಿಟ್ಟಿದ್ದ. ಯಾಕೆ ? ಆ ವಿಸ್ತಾರವಾದ ಎದೆಯಲ್ಲಿ ಲಜ್ಜೆಯಿಂದ ಕೆಂಪೇರಿದ್ದ ಮುಖವನ್ನು ಹುದುಗಿಸಿ ತಂಪುಮಾಡಿಕೊಳ್ಳುವ ಅಪೇಕ್ಷೆಯಿತ್ತು ಇಂದಿರೆಗೆ. ತಾನು ಕತ್ತೆತ್ತಿ ಅವರನ್ನು ನೋಡಿದಾಗ ಬೇರೆ ಭಾವಿಸಿಕೊಂಡರೋ ಹೇಗೆ? ತಾನೇನೂ ಅವರನ್ನು ನಿಂದಿಸುವ ದೃಷ್ಟಿಯಿಂದ ನೋಡಲಿಲ್ಲ.ಬದಲು ತನ್ನ ಒಲವನ್ನೆಲಾ ಅವರಿಗೆ ನಿವೇದಿಸಿ ಅವರ ಒಲವನ್ನು ಯಾಚಿಸುವ ದೃಷ್ಟಿಯಿಂದ ನೋಡಿದರೂ ಹೀಗೇಕಾಯಿತು ?

ಇಂದಿರ ಮುಂದೆ ಹೆಜ್ಜೆ ಇಟ್ಟಳು.

"ಇನ್ನೂ ಬೆಟ್ಟದ ಮೇಲೆ ಹೋಗೋಣವೇನು ?" ಮೋಹನ ಕೇಳಿದ.

"ನಿಮ್ಮಿಷ್ಟ."

"ಹಾಗಾದರೆ ಹೋಗೋಣ."

"ಆದರೆ ನೀವು ಹುಷಾರಾಗಿ ಬರಬೇಕು."

"ನಾನು ಬೀಳುವ ಹಾಗಾದರೆ ನೀನಿದೀಯಲ್ಲಾ ಹಿಡಿದುಕೊಳ್ಳೋಕೆ."

"ನೀವು ನನ್ನ ಹಿಡಿದುಕೊಂಡು ಎಳೆದರೆ ನಾನೂ ಬೀಳಬೇಕಾಗುತ್ತೆ"

ಮೋಹನ ನಕ್ಕ.ಇಂದಿರ ನಿಧಾನವಾಗಿ ಗಿಡಗಳನ್ನು ಸರಿಸುತ್ತಾ ಮುಂದೆ ನಡೆದಳು. ಮೋಹನ ಹಿಂಬಾಲಿಸಿದ.

ಹೊಂಗೆಯ ಮರವೊಂದರ ಕೆಳಗೆ ಮೋಹನ ಹೇಳಿದ.

"ಇಲ್ಲಿ ಕುಳಿತುಕೊಳ್ಳೋಣ."

"ಹೂಂ."

ಇಂದಿರ ಅಲ್ಲಿಯೇ ಇದ್ದ ಬಂಡೆಯೊಂದರ ಮೇಲೆ ಕುಳಿತಳು. ಮೋಹನ ಅವಳಿಗೆ ಸ್ವಲ್ಪ ದೂರದಲ್ಲಿ ಕರವಸ್ತ್ರವನ್ನು ಹಾಸಿಕೊಂಡು ಕುಳಿತ. ಮೋಹನ ನೇರವಾಗಿ ಮಾತು ಆರಂಭಿಸಿದ.

"ನಿನ್ನ ಅಭಿಪ್ರಾಯವೇನು ?"

"ಯಾವ ವಿಚಾರಕ್ಕೆ ಕೇಳ್ತಿದೀರಿ ?"

"ನಾನು ಅಮೆರಿಕಾಗೆ ಹೋಗುವ ವಿಷಯ ಮಾತನಾಡ್ತಿದೀನಿ."

"ನಿಮ್ಮ ಅಭಿಪ್ರಾಯವೇನು ?"

"ಮದುವೆಯಿಲ್ಲದೆ ಒಬ್ಬರನ್ನೊಬ್ಬರು ಬಿಟ್ಟಿರೋದು ಸುಲಭ. ಆದರೆ

ಮದುವೆ ಮಾಡಿಕೊಂಡು ಬಿಟ್ಟು ಹೋಗೋದು ಕಷ್ಟವಾಗುತ್ತದೆ. ನನ್ನ ವ್ಯಾಸಂಗ ಮುಗಿದ ಮೇಲೆ, ಅಲ್ಲಿಂದ ಹಿಂತಿರುಗಿದ ಮೇಲೆ ಮದುವೆ ಯಾಗೋದೇ ಒಳ್ಳೆಯದು."

ಇಂದಿರ ಮಾತನಾಡಲಿಲ್ಲ. ಮೋಹನ ಕ್ಷಣಕಾಲ ಸುಮ್ಮನಿದ್ದು ಮತ್ತೆ ಹೇಳಿದ.

"ಮದುವೆಯಾದರೆ ಮನಸ್ಸು ವ್ಯಾಸಂಗದಲ್ಲೇ ನಿಲ್ಲಿಸೋದು ಕಷ್ಟ ವಾಗುತ್ತೆ."

ಇಂದಿರ ಕತ್ತಿಯ ಮೊನೆಯಿಂದ ನೆಲದ ಮೇಲೆ ಗೀರು ಹಾಕುತ್ತಾ "ಹಾಗಾದರೆ ಅಲ್ಲಿಂದ ಬಂದಮೇಲೆ ಮದುವೆಯಾಗುವುದೇ ವಾಸಿ ಎನ್ನು ತ್ತೀರಾ ?" ಎಂದಳು.

"ಹೂಂ."

"ಒಂದು ಪಕ್ಷ ಅದಕ್ಕೆ ನಾನೊಪ್ಪದಿದ್ದರೆ ?" ಇಂದಿರ ಕೇಳಿದಳು.

"ಮದುವೆ ಮುಗಿಸಿಕೊಂಡೇ ಹೋಗುತ್ತೇನೆ. ನನ್ನ ಉನ್ನತ ಶಿಕ್ಷಣಕ್ಕೆ ಮದುವೆ ಯಾವ ರೀತಿಯಿಂದಲೂ ಅಡ್ಡಿ ಬರಬಾರದು ಎಂದು ನಾನು ಹೀಗೆ ಹೇಳುತ್ತಿದ್ದೇನೆ."

ನಿಜ. ಮದುವೆ ನಿಮ್ಮ ವ್ಯಾಸಂಗಕ್ಕೆ ಅಡ್ಡಿಯಾಗಬಾರದು" ಎಂದು ಇಂದಿರ ನಿಧಾನವಾಗಿ ಹೇಳಿದಳು.

"ಹಾಗಾದರೆ... ಹಾಗಾದರೆ....ಅಲ್ಲಿಂದ ಬಂದಮೇಲೆ ಮದುವೆಯಾಗು ವುದು ನಿನಗೊಪ್ಪಿಗೆಯೇ ಇಂದಿರಾ ?"

"ಹೂಂ."

"ಆಮೇಲೆ ನಾನು ಮೋಸ ಮಾಡುವುದಿಲ್ಲ ಎನ್ನುವುದು ಗೊತ್ತಿದೆತಾನೆ? ಅಥವಾ ನನ್ನಲ್ಲಿ ಅನುಮಾನವಿದೆಯೋ ?"

"ಇದೇಕೆ ಹೀಗೆ ಮಾತನಾಡ್ತೀರಿ ?"

ಅವಳ ದನಿಯಲ್ಲಿದ್ದ ನೋವನ್ನು ಗುರುತಿಸಿ ಮೋಹನ

"ತಪ್ಪಾಯಿತು. ಕ್ಷಮಿಸು" ಎಂದ.

"ಯಾವಾಗ ನಾನು ನಿಮ್ಮನ್ನು ನನ್ನವರು ಎಂದು ಒಪ್ಪಿಕೊಂಡೆನೋ ಆಗಿನಿಂದ ನಿಮ್ಮಲ್ಲಿ ನನಗೆ ಯಾವ ಅನುಮಾನವೂ ಇಲ್ಲ."

ಅವಳ ಧ್ವನಿ ವ್ಯಥೆಯಿಂದ ಕೂಡಿತ್ತು.

ಮೋಹನ ಅವಳ ಹತ್ತಿರ ಬಂದು ನಿಂತು "ತಪ್ಪಾಯಿತು ಎಂದೆನಲ್ಲಾ

ಇಂದಿರ. ಮನಸ್ಸಿಗೆ ಬೇಜಾರುಮಾಡಿಕೋಬೇಡ" ಎಂದ.

''ನಿಮ್ಮಲ್ಲಿ ಅಷ್ಟು ಅನುಮಾನವಿದ್ದರೆ ಮದುವೆ ಮಾಡಿಕೊಂಡೇ ನಿಮ್ಮನ್ನು ಕಳುಹಿಸುತ್ತಿದ್ದೆ. ಒಂದು ಪಕ್ಷ ಮದುವೆ ಮಾಡಿಕೊಂಡು ಹೋದರೂ ಮನಸ್ಸಿಗೆ ಬೇಡದಿದ್ದರೆ ಎರಡು ಬಗೆಯುವುದಕ್ಕೆ ಸಾಧ್ಯವಿಲ್ಲ ವೇನು ?"

ಮೋಹನ ಅವಳ ಕಾಲಿನ ಬಳಿ ಕುಳಿತು ''ನೀನು ಇಷ್ಟೊಂದು ನೊಂದು ಕೊಳ್ತೀಯಾಂತ ತಿಳಿದಿದ್ದರೆ ನಾನು ಆ ಮಾತನಾಡುತ್ತಿರಲಿಲ್ಲ" ಎಂದ,

ಇಂದಿರ ಮಾತನಾಡಲಿಲ್ಲ.

''ನೀನೇನು ಶಿಕ್ಷೆ ವಿಧಿಸಿದರೂ ಅನುಭವಿಸುತ್ತೀನಿ. ಬೇಕಾದರೆ ಆ ಕತ್ತಿ ತಗೊಂಡು ಎರಡೇಟು ಹಾಕಿದರೂ ಸಂತೋಷ."

''ಇಂದಿರ ಮುನಿಸಿನಿಂದ ತನ್ನ ಬಾಯಿಯ ಮೇಲೆ ಬೆರಳಿಟ್ಟು ''ಸಾಕು" ಎಂದಳು.

''ನಾನೊಂದು ಪ್ರಶ್ನೆ ಕೇಳಲಾ ?" ಮೋಹನ ಕೇಳಿದ.

''ಹೂಂ"

''ಸರಿಯಾಗಿ ಉತ್ತರ ಕೊಡುತ್ತೀಯಾ ?"

''ಹೂಂ"

''ನನ್ನ ಮುಖಾನೇ ನೋಡುತ್ತಾ ಹೇಳಬೇಕು."

''ಹೂಂ."

''ನೀನು ನನ್ನ ಪ್ರೀತಿಸುತ್ತೀಯಾ ?"

ಅದುವರೆವಿಗೂ ಅವನ ಮುಖವನ್ನೇ ನೋಡುತ್ತಿದ್ದ ಇಂದಿರ ಪ್ರಶ್ನೆ ಕೇಳಿ ತಟ್ಟನೆ ತಲೆ ತಗ್ಗಿಸಿದಳು.

"ಹೇಳೋದಿಲ್ಲವಾ ?"

"ಇಲ್ಲ. ಹೇಳ್ತೀನಿ."

"ಹೇಳು ಹಾಗಾದರೆ."

"ಥೂ ಹೋಗಿಯಪ್ಪ."

ಮೋಹನ ನಗುತ್ತಾ ನಿಂತ. ಇಂದಿರ ಎರಡು ಗಳಿಗೆ ಸುಮ್ಮನಿದ್ದು ''ನಾನೊಂದು ಪ್ರಶ್ನೆ ಕೇಳ್ತೀನಿ" ಎಂದಳು.

''ಕೇಳು."

''ನೀವು ನನ್ನ...."

''ಹೂಂ. ಮುಂದೆ ?"

"ಹೋಗಿ. ನಾನು ಕೇಳೋದಿಲ್ಲ."

"ಬಿಡು. ನಿನಗೆ ಉತ್ತರವೇ ಸಿಗೋದಿಲ್ಲ."

"ನಾನೇನು ಪ್ರಶ್ನೆ ಕೇಳಬೇಕೆಂದಿದೀನೋ ಅದು ನಿಮಗೆ ಗೊತ್ತಿದೆ. ಉತ್ತರ ಹೇಳಿಬಿಡಿ ಸಾಕು."

"ಉತ್ತರ ಬೇಕೇ ?"

"ಹೂಂ."

"ಬೇಕೇ ಬೇಕೆ ?"

"ಹೂಂ."

"ಆಮೇಲೆ ಯಾಕೆ ಉತ್ತರ ಅಪೇಕ್ಷಿಸಿದೆನೋಂತ ನೊಂದುಕೊಳ್ಳ ಬಾರದು."

"ಇಲ್ಲ."

ಮೋಹನ ಇಂದಿರಳನ್ನು ಬಂಡೆಯಿಂದ ಕೆಳಗೆಳೆದು ಅರುಣರಾಗದಿಂದ ಜ್ವಲಿಸುತ್ತಿದ್ದ ಅವಳ ಕೆನ್ನೆಯನ್ನು ಮುತ್ತಿಟ್ಟು,

"ಇದೇ ನನ್ನ ಉತ್ತರ" ಎಂದ.

ಇಂದಿರಳಿಗೆ ಒಂದು ಗಳಿಗೆ ಸ್ಮೃತಿ ತಪ್ಪಿದಂತಾಯಿತು. ಅವಳು ಕಣ್ಣು ಮುಚ್ಚಿ ಹೃದಯ ಬಿಚ್ಚಿ ಮೋಹನನ ಕಿವಿಯಲ್ಲಿ ಪಿಸುಗುಟ್ಟಿದಳು.

"ಓ ನನ್ನ ಜೀವ, ನಾನು ನಿನ್ನ ಪ್ರೀತಿಸುತ್ತೇನೆ. ತುಂಬಾ....ತುಂಬಾ."

ಸೂರ್ಯ ಮುಳುಗಿದ್ದ. ನಸುಕತ್ತಲು ಹರಡತೊಡಗಿತ್ತು. ತನ್ಮಯತೆ ಯಿಂದ ತನ್ನ ಮುಖವನ್ನೇ ನೋಡುತ್ತಿದ್ದ ಇಂದಿರಳನ್ನು ಮೋಹನ ಎಚ್ಚರಿಸಿದ.

"ಹೊರಡೋಣ. ಆಗಲೇ ಕತ್ತಲಾಗ್ತಿದೆ."

ಇಂದಿರ ಕೈಲಿ ಹಿಡಿದಿದ್ದ ಹುಲ್ಲುಕಡ್ಡಿಯನ್ನು ಎಸೆದು ಎದ್ದು ನಿಂತಳು, ಮೋಹನ ಎರಡು ಹೆಜ್ಜೆಯನ್ನು ಹಿಂದಿಟ್ಟು,

"ನನಗೋಸ್ಕರ ನೀನು ಎರಡು ವರ್ಷ ಕಾಯಬೇಕಾಗಿದೆಯಲ್ಲಾ ಇಂದಿರ" ಎಂದ.

"ನೀವೂ ಕಾಯಬೇಕಾಗಿದೆಯಲ್ಲಾ. ಈಗ ನಮಗಾಗಿ ಅವರೆಲ್ಲಾ ಕಾಯು ತ್ತಿರುತ್ತಾರೆ. ಬನ್ನಿ ಹೋಗೋಣ" ಎಂದು ಇಂದಿರ ವೇಗವಾಗಿ ಹೆಜ್ಜೆ ಹಾಕಿದಳು. ಅವರು ಸ್ವಲ್ಪ ದೂರ ಹೋಗುವುದರಲ್ಲಿ ಪುಟ್ಟಯ್ಯ ಟಾರ್ಚು ಹಿಡಿದುಬಂದ.

"ನಿಮ್ಮನ್ನ ತಪಸ್ಸಿನಿಂದ ಎಚ್ಚರಿಸೋಕೆ ನಾನು ಬಂದೆ" ಎಂದ ಪುಟ್ಟಯ್ಯ

"ಹೌದು. ಕೈಲಿ ಹೂಬಾಣಕ್ಕೆ ಬದಲಾಗಿ ಟಾರ್ಚು ಹಿಡಿದಿದೀರಿ ಅಲ್ಲವೇ ?" ಎಂದು ಮೋಹನ ರೇಗಿಸಿದ.

"ಕತ್ತಲಾಗ್ತಿದೆ. ನೋಡಿಕೊಂಡುಬಾಂತ ರಾಯರು ಕಳಿಸಿದರು. ಅದೂ ಅಲ್ಲದೆ ಚಿಕ್ಕಮ್ಮನಿಗೆ ತೋಟಕ್ಕೆ ಹೋಗಿಬಿಟ್ಟರೆ ಹೊರಗೆ ಬರಬೇಕೂಂತಾನೆ ಗೊತ್ತಾಗೋದಿಲ್ಲ. ಅದೂ ಅಲ್ಲದೆ ಇವತ್ತು ನೀವು ಬೇರೆ ಜೊತೆಗಿದೀರಿ.."

ಎಂದಿನ ಹುಡುಗಾಟ ಇಂದಿರಳಿಂದ ಮರೆಯಾಗಿತ್ತು. ಅವಳ ಮುಖದಲ್ಲಿ ಮನೆ ಮಾಡಿದ್ದ ಗಾಂಭೀರ್ಯವನ್ನು ಅಲುಗಿಸುವುದು ಪುಟ್ಟಯ್ಯನಿಗೆ ಸಾಧ್ಯವಾಗಲಿಲ್ಲ. ಮೋಹನ ಮಾತ್ರ ಹಗುರವಾದ ಹೃದಯದಿಂದ ಮಾತ ನಾಡುತ್ತಾ ಹೆಜ್ಜೆ ಹಾಕುತ್ತಿದ್ದ.

ರಾತ್ರಿ ಊಟವಾದ ಮೇಲೆ ಮೋಹನ ತಮ್ಮಿಬ್ಬರ ನಿರ್ಧಾರವನ್ನು ರಾಯರಿಗೆ ತಿಳಿಸಿದ. ಇಂದಿರ ಒಂದೇ ಮನಸ್ಸಿನಿಂದ ಹೇಳಿದಳು.

"ಅವರ ಮಾತು ಉಳಿದವರಿಗೆ ಒಪ್ಪಿಗೆಯಾಯಿತು. ಆದರೆ ಲಲಿತಮ್ಮ ನವರಿಗೆ ಮಾತ್ರ ಮಗಳ ಮದುವೆಯನ್ನು ಮುಗಿಸುವ ಆತುರವಿತ್ತು. ಎಲ್ಲರೂ ಮಲಗಿದ ಮೇಲೆ ಲಲಿತಮ್ಮ ಇಂದಿರೆಗೆ ಹೇಳಿದರು.

"ನೀನು ಮದುವೆ ಆಗಿಯೇ ವಿದೇಶಕ್ಕೆ ಹೊರಡಬೇಕೂಂತ ಹೇಳಿದ್ದರೆ ಆತ ಒಪ್ಪುತ್ತಿದ್ದ. ಈಗಲೂ ಸಮಯ ಮೀರಿಲ್ಲ."

"ನನ್ನಿಂದ ಅವರಿಗೆ ತೊಂದರೆಯಾಗಬಾರದು."

"ನಿನ್ನಿಂದ ಅವರಿಗೆ ಹೇಗೆ ತೊಂದರೆ ಇಂದಿರ ? ನೀನು ಇಲ್ಲಿರ್ತೀಯ. ಅವರು ಅಲ್ಲಿರುತ್ತಾರೆ."

"ಆದರೂ ಮನಸ್ಸು ಈ ಕಡೆ ಎಳೆಯೋದಿಲ್ಲವೇ ? ಮದುವೆ ಆಗಿದ್ದರೆ ಸೆಳೆತ ಹೆಚ್ಚು.

"ಒಂದು ಪಕ್ಷ ಆಮೇಲೆ ಅವರು...." ಲಲಿತಮ್ಮ ಅನುಮಾನದಿಂದ ಮಗಳ ಮುಖವನ್ನು ನೋಡಿದರು.

"ಅಮ್ಮ, ನನಗೆ ಅವರಲ್ಲಿ ಸಂಪೂರ್ಣ ನಂಬಿಕೆಯಿದೆ. ನೀನು ಹೀಗೆಲ್ಲಾ ಮಾತಾಡಿ ನನ್ನ ನೋಯಿಸಬೇಡ."

"ಅಲ್ಲಿಂದ ಮುಂದೆ ತಾಯಿ ಮಗಳನ್ನು ಪ್ರಶ್ನಿಸಲಿಲ್ಲ. ಲಲಿತಮ್ಮ ಅಚ್ಚರಿ ಯಿಂದ ಇಂದಿರಳ ಕಡೆ ನೋಡಿದರು ಅದುವರೆವಿಗೂ ಸ್ವಕೀಯಳಾಗಿದ್ದ ಮಗಳು ಇದ್ದಕ್ಕಿದ್ದಂತೆಯೇ ಪರಕೀಯಳಾಗಿ ತೋರಿದಳು. ಹದಿನೆಂಟುವರ್ಷ ಗಳಿಂದ ತಾವು ಅವಳಿಗೆ ಧಾರೆಯೆರೆದುಕೊಟ್ಟಿದ್ದ ಮಮತೆ, ಸ್ನೇಹ ವಿಶ್ವಾಸ, ಪ್ರೇಮ ಎಲ್ಲವನ್ನು ಮರುಳುಗೊಳಿಸುವ ಮುಖವುಳ್ಳ ಅಪರಿಚಿತ

ಯುವಕನೊಬ್ಬ ಒಂದೇ ದಿನದಲ್ಲಿ ಸೂರೆಗೊಂಡು ಮಗಳನ್ನು ತೀರ ನಿರ್ಗತಿಕ ಳನ್ನಾಗಿ ಮಾಡಿದ್ದಾನೆ ಎಂಬ ಸತ್ಯಾಂಶ ತಾಯಿಗೆ ಗೋಚರವಾಯಿತು.

'ನಾವು ಇವಳಿಗೆ ಇಷ್ಟು ಬೇಗ ದೂರವಾದವೆ!' ಎಂಬ ಅಚ್ಚರಿಯೊಡನೆ ಕೊಂಚ ಮತ್ಸರವೂ ಇತ್ತು. ಆದರೂ ಕೂಡಲೇ

"ಅದೂ ಸಹಜವೇ.ಗರಿ ಬಲಿಯುತ್ತಿರುವ ಹಕ್ಕಿ.ಜೊತೆಗಾರನೊಡನೆ ಸಧ್ಯ ದಲ್ಲಿಯೇ ಹಾರಿಹೋಗಲಿದೆ" ಎಂದು ಲಲಿತಮ್ಮ ಸಮಾಧಾನ ಮಾಡಿ ಕೊಂಡರು.

"ನನ್ನ ನೋಯಿಸಬೇಡ" ಎಂಬುದಕ್ಕೆ ಲಲಿತಮ್ಮ ವಿಶೇಷಾರ್ಥ ಕಲ್ಪಿಸಿ ಕೊಂಡು ನಕ್ಕರು. ನಗುತ್ತಲೇ ಆಕೆ

"ಈಗಲೇ ಹೀಗಾದರೆ ಮುಂದೆ ಹೇಗೆ ಇಂದಿರಾ ?" ಎಂದರು.

"ಹೇಗೆ ಎಂದರೆ ?"

"ಎರಡು ವರ್ಷ ಗಂಡನ್ನ ಬಿಟ್ಟಿರಬೇಕಲ್ಲಾ?"

"ಈಗಿನಿಂದ ಅದರ ಯೋಚನೆ ಯಾಕೆ ?"

"ಮದುವೆ ಮುಗಿಸಿ ನೀನೂ ಅವರ ಜೊತೆ ಹೊರಡಬಹುದು." ತಾಯಿ ಸಲಹೆ ಕೊಟ್ಟರು.

"ಆಗೋದಿಲ್ಲಮ್ಮ. ನಾನು ಅವರ ಜೊತೆ ಇದ್ದರೆ ಓದು ಸಾಗೋದಿಲ್ಲ. ಅವರು ಅಲ್ಲಿಂದ ಹಿಂತಿರುಗಿ ಬಂದ ಮೇಲೆಯೇ ಮದುವೆ. ಅದನ್ನಾಗಲೇ ನಾವಿಬ್ಬರೂ ನಿರ್ಧರಿಸಿಬಿಟ್ಟಿದ್ದೀವಿ."

ಅಲ್ಲಿಗೆ ಆ ವಿಷಯ ಇತ್ಯರ್ಥವಾದಂತಾಯಿತು.

ಮಾರನೆಯ ದಿನ ರಾಯರು ದೊಡ್ಡ ಉಪಹಾರಕೂಟವನ್ನೇರ್ಪಡಿ ಸಿದರು. ಸುತ್ತಮುತ್ತಲೂ ಇದ್ದ ಕಾಫಿ, ಏಲಕ್ಕಿ ತೋಟದ ಒಡೆಯರನ್ನೂ ಇತರ ಗೆಳೆಯರನ್ನೂ ಅವರು ಆಹ್ವಾನಿಸಿದರು. ಅತಿಥಿಗಳ ಸತ್ಕಾರದಲ್ಲಿ ಮೋಹನ ಪ್ರಮುಖ ಪಾತ್ರ ವಹಿಸಿದ್ದ. ರಾಯರು ಬಂದವರಿಗೆಲ್ಲಾ ಮೋಹನನ ಪರಿಚಯ ಮಾಡಿಕೊಡುತ್ತಿದ್ದರು,

"ಮೋಹನರಾವ್ ಸಧ್ಯದಲ್ಲಿಯೇ ನಮ್ಮ ಅಳಿಯನಾಗುವುದಲ್ಲಿದ್ದಾರೆ."

ಎಲ್ಲರೂ ಮೋಹನ, ಇಂದಿರಳನ್ನು ಅಭಿನಂದಿಸಿದರು, ಸುಬ್ಬಣ್ಣ, ಗೌರಮ್ಮನವರಂತೂ ಮಗನ ಅದೃಷ್ಟವನ್ನು ನೋಡಿ ಹಿಗ್ಗುತ್ತಿದ್ದರು. ಅದರಲ್ಲೂ ಗೌರಮ್ಮನವರು ಇಂದಿರ ಹಾಕಿಕೊಂಡಿದ್ದ ಅಮೂಲ್ಯವಾದ ಒಡವೆಗಳನ್ನು ನೋಡಿ ಆನಂದದಿಂದ

"ಲಕ್ಷ್ಮಿ ಹಾಗೆ ಇದೀಯಾ ತಾಯಿ. ಆದರೆ ಈ ಕಾಡಿನಲ್ಲಿ ಇಷ್ಟೊಂದು

ಒಡವೆ ಇಟ್ಟುಕೊಳ್ಳುವುದು ಅಪಾಯ ಅಲ್ಲವೇ ?" ಎಂದರು.

"ನಮ್ಮ ಹತ್ತಿರ ಎರಡು ರಿವಾಲ್ವರ್ ಇದೆ. ರಾತ್ರಿ ಹೊತ್ತು ನಮ್ಮ ತಂದೆ ದಿಂಬಿನ ಕೆಳಗೆ ಅದನ್ನಿಟ್ಟೇ ಮಲಗಿಕೊಳ್ಳುತ್ತಾರೆ."

"ಅವರು ಒಂದು ಪಕ್ಷ ಊರಿನಲ್ಲಿಲ್ಲದಿದ್ದರೆ ?"

"ಪುಟ್ಟಯ್ಯ ಇರ್ತಾರೆ. ನಾನೂ ಗುರಿ ಇಡುವುದನ್ನ ಕಲಿತಿದೀನಿ. ಇಲ್ಲಿ ಯಾವ ಭಯವೂ ಇಲ್ಲ" ಎಂದಳು ಇಂದಿರ. ಸದಾಶಿವರಾಯರ ಗೆಳೆಯರು ಮೋಹನನ ಕೈ ಕುಲುಕುತ್ತಾ

"ಊಟವನ್ನು ಬೇಗ ಹಾಕಿಸಿಬಿಡಿ" ಎಂದರು.

"ಎಷ್ಟು ವರ್ಷ ಅಮೆರಿಕದಲ್ಲಿ ಇರುತ್ತಾರೆ ?"

"ಎರಡು ವರ್ಷ" ರಾಯರು ಉತ್ತರವಿತ್ತರು.

"ಅಂತೂ ಊಟಕ್ಕೆ ನಾವು ಎರಡು ವರ್ಷ ಕಾಯಬೇಕು" ಎಂದೊಬ್ಬರು ಉದ್ಗಾರ ತೆಗೆದರು.

"ನಾವು ಕಾಯುವುದಿರಲಿ. ಇಂದಿರ ಎರಡು ವರ್ಷ ಕಾಯಬೇಕು" ಎಂದರು ಮತ್ತೊಬ್ಬರು.

"ನಾನೋ ?" ಎಂದು ನಗುತ್ತಾ ಕೇಳಿದ ಮೋಹನ. ಸದಾಶಿವರಾಯರ ಗೆಳೆಯರೊಬ್ಬರು ತಮಾಷೆಗಾಗಿ ನುಡಿದರು.

"ಇಂದಿರೆಯಷ್ಟು ನಿನಗೆ ಕಷ್ಟವಾಗೋದಿಲ್ಲ. ಯಾಕೆಂದರೆ ಅಮೆರಿಕ ನಿನಗೆ ಹೊಸ ಜಾಗ, ಹೊಸ ದೇಶ, ಹೊಸ ಗೆಳೆಯರು, ನಿನ್ನ ವ್ಯಾಸಂಗ ಇವುಗಳ ನಡುವೆ ಸಮಯ ಹೇಗೆ ಹೋಗುತ್ತದೆ ಎನ್ನುವುದೇ ನಿನಗೆ ತಿಳಿಯುವುದಿಲ್ಲ. ಆದರೆ ಇಂದಿರಳಿಗೆ ನೀನು ಬರುವವರೆಗೆ ನಿನ್ನದೇ ಧ್ಯಾನವಾಗಬಹುದು."

ಸಮೀಪದಲ್ಲಿಯೇ ನಿಂತಿದ್ದ ಇಂದಿರ ನಕ್ಕು

"ನಿಮ್ಮದೆಲ್ಲಾ ಉತ್ಪ್ರೇಕ್ಷೆಯಾಯಿತು ಮಾವ" ಎಂದಳು. ಮೋಹನ ಇಂದಿರೆಯನ್ನು ಕೀಟಲೆ ಮಾಡಲು "ನಾನು ಅಮೆರಿಕದಲ್ಲಿದ್ದರೇನು ? ಬೆಳ್ಳಿ ಮೋಡ ಇಲ್ಲಿಯೇ ಇರುತ್ತದೆಯಲ್ಲಾ. ಪುಟ್ಟಯ್ಯ ಅವತ್ತೇ ಹೇಳಿದರು ಇಂದಿರ ಬೆಳ್ಳಿಮೋಡದಲ್ಲಿ ವಿಹರಿಸುವ ಚಿಕ್ಕೆ ಎಂದು...."

"ಮೋಹನರಾವ್, ಇಲ್ಲಿ ಬನ್ನಿ ..." ಸದಾಶಿವರಾಯರು ಮೋಹನನನ್ನು ಕೂಗಿದರು. ಮೋಹನ ಅತ್ತ ಕಡೆ ಹೊರಟ.

ಮೋಹನ ತನ್ನ ಸಿದ್ಧತೆಗಳನ್ನು ಮುಗಿಸಿ ಅಮೆರಿಕಕ್ಕೆ ಹೊರಡಲು ಸುಮಾರು ಎರಡು ತಿಂಗಳು ಬೇಕಾಯಿತು. ಎರಡು ತಿಂಗಳಲ್ಲಿ ಅವನು 'ಬೆಳ್ಳಿಮೋಡ'ಕ್ಕೆ ಮೂರು ಬಾರಿ ಬಂದು ಹೋಗಿದ್ದ.

ತೋಟದಲ್ಲಿ ಕೆಲಸ ಮಾಡುವ ಕೂಲಿಯಾಳುಗಳೆಲ್ಲಾ ಮೋಹನನನ್ನು 'ಚಿಕ್ಕ ಧಣೀರು' ಎಂದೇ ಕರೆಯುತ್ತಿದ್ದರು. ಅವನು 'ಬೆಳ್ಳಿಮೋಡ'ಕ್ಕೆ ಮೊದಲನೆಯ ಬಾರಿ ಬಂದಾಗ ಇಂದಿರ ಅಚ್ಚರಿಪಟ್ಟಿದ್ದಳು. 'ಇವರಿಗೆ ನನ್ನ ಮೇಲೆ ಎಷ್ಟು ಪ್ರೀತಿ' ಎಂದು ಪುಲಕಿತಳಾಗಿದ್ದಳು.

ಮೋಹನ ಇಂದಿರೆಗಾಗಿ ಮೈಸೂರಿನಿಂದ ಸಾಧಾರಣ ಬೆಲೆಯ, ಆದರೆ ಡಬ್ಬಾಗಿ ಕಾಣುವ ಸೀರೆ ಮತ್ತು ಕಲ್ಚರ್ ಮುತ್ತಿನ ಓಲೆಯನ್ನು ಕಾಣಿಕೆಯಾಗಿ ತೆಗೆದುಕೊಂಡು ಬಂದಿದ್ದ. ಅದನ್ನು ಅವಳ ಕೈಗೆ ಕೊಡುವಾಗ ಅವನಿಗೇ ಹೀನಾಯವೆನಿಸಿತು.

"ಇಂದಿರಾ, ಇಷ್ಟೊಂದು ಅಗ್ಗದ ವಸ್ತುಗಳನ್ನು ನಿನಗೆ ಕಾಣಿಕೆಯಾಗಿ ಕೊಡೋದಕ್ಕೆ ನನಗೆ ತುಂಬಾ ಸಂಕೋಚವಾಗ್ತಿದೆ.ಆದರೆ ನಿನಗೆ ಏನಾದರೂ ತರಲೇಬೇಕೆನಿಸಿತು...."

ಇಂದಿರ ಬದಲು ಮಾತನಾಡದೇ ಕಲ್ಚರ್ ಮುತ್ತಿನ ಓಲೆಯನ್ನು ಕೈಲಿ ಹಿಡಿದು ತಿರುಗಿಸಿ ನೋಡಿ 'ತುಂಬಾ ಚೆನ್ನಾಗಿದೆ'ಎಂದು ಹೇಳಿದ್ದಲ್ಲದೆ ತಾನು ಹಾಕಿಕೊಂಡಿದ್ದ ವಜ್ರದ ಓಲೆಯನ್ನು ಕಳಚಿ ಮುತ್ತಿನದನ್ನು ಹಾಕಿಕೊಂಡು "ಹೇಗಿದೆ ?" ಎಂದಳು.

ಮೋಹನನಿಗೇನೋ ಅವಳು ಹಾಕಿಕೊಂಡಿದ್ದ ವಜ್ರದ ಓಲೆಯೇ ಅವಳ ಸಾಮವರ್ಣದ ಮುಖಕ್ಕೆ ಹೆಚ್ಚು ಒಪ್ಪಿತ್ತು ಎನಿಸಿದ್ದರೂ

"ಸೊಗಸಾಗಿದೆ.ವಜ್ರಕ್ಕಿಂತಲೂ ನಿನಗೆ ಮುತ್ತೇ ಹೆಚ್ಚು ಒಪ್ಪುತ್ತೆ."ಎಂದ

"ನಿಜವಾಗಿ ?"

"ಯಾಕೆ ಅನುಮಾನ ?"

"ನನ್ನ ಸ್ನೇಹಿತೆಯೊಬ್ಬಳು ಹಾಗೆ ಹೇಳಿದ್ದಳು."

"ಅವಳಿಗೆ ಕಣ್ಣಿಲ್ಲ" ಎಂದ ಮೋಹನ.

ಮನಸ್ಸಿನಲ್ಲಿ ಅವನು ಅವಳ ಗೆಳತಿಯ ಅಭಿಪ್ರಾಯವನ್ನೇ ಒಪ್ಪಿ 'ಜಾಣೆ ಆಕೆ' ಎಂದುಕೊಂಡ.

ಇಂದಿರ ಮೋಹನನ ಮಾತನ್ನು ನಿಜವೆಂದು ನಂಬಿದಳು. ಅವನನ್ನು ಮೆಚ್ಚಿಸುವ ಸಲುವಾಗಿ ಮೋಹನ ಅಲ್ಲಿರುವವರೆಗೆ ಅವಳು ಆ ಓಲೆಯನ್ನು

ತೆಗೆಯಲಿಲ್ಲ. ಲಲಿತಮ್ಮನವರು ಮಾತ್ರ ಒಂದೆರಡು ಬಾರಿ

"ತೆಗೆಯೇ ಅದನ್ನು. ನಿನಗೊಪ್ಪೋದಿಲ್ಲ" ಎಂದರು.

"ಇರಲಿ ಬಿಡಮ್ಮ. ಒಪ್ಪಬೇಕಾದವರೇ ಆರಿಸಿ ತಂದಿದಾರೆ" ಎಂದು ಉತ್ತರ ಕೊಟ್ಟಿದ್ದಳು ಇಂದಿರ.

"ಚನ್ನವೂ ಅಲ್ಲವೇನೋ ? ಹಿತ್ತಾಳೀನ ಕಿವಿಗೆ ಹಾಕಿಕೊಂಡರೆ ಕಿವಿ ಕಲತು ಹೋಗುತ್ತದೆ."

"ಪ್ರಪಂಚದಲ್ಲಿ ಹುಟ್ಟಿದವರೆಲ್ಲಾ ಚಿನ್ನವೇ ಬೇಕೂಂದರೆ ಹೇಗೆ ಸಾಧ್ಯ? ಹಿತ್ತಾಳೀನೂ ಅಭ್ಯಾಸ ಮಾಡಿಕೊಂಡಿದ್ದರೆ ಒಳ್ಳೆಯದು" ಎಂದು ಇಂದಿರ ಹಾಸ್ಯವಾಗಿಯೇ ನುಡಿದು ಆ ಮಾತನ್ನು ಮುಗಿಸಿದ್ದಳು.

ಆದರೆ ತಾಯಿ ಹಾಗೆ ಮಾತನಾಡುವಾಗ ಅವಳ ಮನಸ್ಸಿಗೆ ಮುಳ್ಳು ಚುಚ್ಚಿದಂತಾಯಿತು.

ನಿಜ. ಮೋಹನ ತನ್ನ ತಂದೆಯ ಅಂತಸ್ತಿಗಿಂತಲೂ ಬಹಳ ಕೆಳಗಿನ ಸ್ಥಾನದಲ್ಲಿದ್ದ. ಆದರೂ ಆ ಬಗೆಯ ಹೀಯಾಳಿಕೆಯನ್ನು ಅವಳ ಮನಸ್ಸು ಒಪ್ಪಲಿಲ್ಲ. ಅವರು ತಮಗಿಂತ ಬಡವರಾಗಿರುವುದು ಅವರ ತಪ್ಪೇ ? ಆದರೆ ಅವರಲ್ಲಿ ವಿದ್ಯೆಗೆ, ಗುಣಕ್ಕೆ, ಚೆಲುವಿಗೆ ಬಡತನವಿರಲಿಲ್ಲ. ಹಣಕ್ಕೆ ಮನುಷ್ಯ ಅಷ್ಟೊಂದು ಪ್ರಾಮುಖ್ಯತೆ ಕೊಡಬೇಕೆ ?

ಸದಾಶಿವರಾಯರು ಯಾವ ವಿಷಯಕ್ಕೂ ಬರುತ್ತಿರಲಿಲ್ಲ. ಮಗಳ ಮುಖ ಕಳೆಗುಂದದಿದ್ದರೆ ಸಾಕು. ಅವರು ಬೇರೆ ಯಾವುದನ್ನೂ ಹೆಚ್ಚು ಯೋಚಿಸುತ್ತಲೇ ಇರಲಿಲ್ಲ.

ಮೋಹನ ಮೂರನೆಯ ಬಾರಿ ಬಂದಾಗ ಲಲಿತಮ್ಮನವರಿಗೆ ಭಾವೀ ಅಳಿಯನ ವರ್ತನೆಯಿಂದ ಕೊಂಚ ಅಸಮಾಧಾನವೇ ಆಯಿತು. ಅವರು ತಮ್ಮ ಅಸಮಾಧಾನವನ್ನು ಮಗಳ ಮುಂದೆ ಆಡಿಯೂ ತೋರಿಸಿದರು.

"ಇದೇನು ಚಂದ ಇಂದಿರ, ಮದುವೆಗೆ ಮುಂಚೆ ಹೀಗೆ ಬರೋದು ನನಗೇನೋ ಚೆನ್ನ ಕಾಣುವುದಿಲ್ಲಮ್ಮ."

ಇಂದಿರೆಯ ಮನಸ್ಸು ಚುರುಕ್ಕೆಂದಿತು,

"ನನಗೋಸ್ಕರ ಬರ್ತಾರಮ್ಮ. ಆಮೇಲೆ ಈ ಮನೆಗೆ ಯಾಕೆ ಬರ್ತಾರೆ ಹೇಳು."

"ನೋಡಿದವರು ಏನು ತಿಳಿದುಕೊಳ್ಳುತ್ತಾರೆ ?"

"ಅಮೆರಿಕಾಗೆ ಹೋದ ಮೇಲೆ ಎಲ್ಲಿ ಬರ್ತಾರೆ? ಈಗ ಹತ್ತಿರವೇ ಇರೋ

ದರಿಂದ ಬರ್ತ್ತಾರೆ. ಅವರಿಗೆ 'ಬನ್ನಿ' ಎಂದೂ ನಾನು ಹೇಳಲಿಲ್ಲ. ಬಂದವರನ್ನು 'ಬರಬೇಡಿ' ಎಂದೂ ಹೇಳಲಾರೆ. ಯಾವ ರೀತಿಯಿಂದಲೂ ನಾನವರ ಮನಸ್ಸನ್ನು ದಂಡಿಸಲಾರೆ"—ಎಂದಳು ಇಂದಿರಾ ಖಂಡಿತವಾಗಿ.

ಲಲಿತಮ್ಮನವರು ಆಡಲಾರರು—ಅನುಭವಿಸಲಾರರು.

ನೆರೆಹೊರೆಯ ಕಾಫಿ ತೋಟದ ಒಡೆಯರ ಅಪಹಾಸ್ಯ ಅವರನ್ನು ತುಂಬಾ ಚಿಂತೆಗೀಡುಮಾಡಿತ್ತು.

ಮುಂದೆ ಅಳಿಯನಾಗುವವನಿಗೆ 'ಮದುವೆಯಾಗುವವರೆವಿಗೂ ನಮ್ಮ ಮನೆಗೆ ಬಂದು ಇಂದಿರನೊಡನೆ ಮಾತುಕತೆಯಾಡಬೇಡಿ' ಎಂದು ಹೇಳುವುದಾದರೂ ಹೇಗೆ ?

ಮೋಹನನ ಆಗಮನ ಇಂದಿರೆಯಲ್ಲಿ ಉತ್ಸಾಹ, ಸಂತೋಷವನ್ನು ತುಂಬಿದರೂ ಆಕೆ ಎಲ್ಲ ವಿಧವಾದ ಅಲಂಕಾರ, ಬೆಡಗು, ಬಿನ್ನಾಣಗಳಿಂದ ದೂರವಿರುತ್ತಿದ್ದಳು.

ಸರಳತೆ, ಸಹಜತೆಯೇ ಅವಳ ಲಾವಣ್ಯವಾಗಿತ್ತು. ಅವಳ ನಿಷ್ಕಪಟವಾದ ಮುಖದ ಮುಂದೆ ಎಂತಹ ಸೌಂದರ್ಯವೂ ಕಾಂತಿಹೀನವಾಗಿ ಕಾಣಿಸುತ್ತಿತ್ತು.

ಮೋಹನ ಇಲ್ಲದ್ದಾಗ ಯಾವ ಸರಳ ಉಡುಗೆಯಲ್ಲಿರುತ್ತಿದ್ದಳೋ ಮೋಹನನನ್ನು ಎದುರುಗೊಳ್ಳುವಾಗಲೂ ಅದೇ ಉಡುಪಿನಲ್ಲಿರುತ್ತಿದ್ದಳು.

ಮಗಳ ಅಲಂಕಾರದ ಬಗ್ಗೆ ಹೆಚ್ಚು ಆಸಕ್ತಿ ವಹಿಸಲು ಲಲಿತಮ್ಮನವರು ಪ್ರಯತ್ನಿಸಿದರು. ಆಕೆಯ ಪ್ರಯತ್ನ ನೋಡಿ ಇಂದಿರಾ ನಕ್ಕುಹೇಳುತ್ತಿದ್ದಳು.

"ಅಲಂಕಾರದಿಂದ ಯಾರನ್ನು ಸೆರೆ ಹಿಡಿದಿಡೋಕಾಗೋದಿಲ್ಲಮ್ಮ. ಹೆಣ್ಣು ತನ್ನ ಸೌಂದರ್ಯದಿಂದ ಗಂಡಸನ್ನು ಆಕರ್ಷಿಸಬಹುದು. ಆದರೆ ಆ ಆಕರ್ಷಣೆ ಶಾಶ್ವತವಾದುದಲ್ಲ. ಹೆಣ್ಣಿನ ಸೌಂದರ್ಯ ಮಾಸಿದಂತೆ ಆಕರ್ಷಣೆಯೂ ನಶಿಸುತ್ತದೆ."

"ನಿನಗೆ ಏನಾದರೂ ಹೇಳಿದರೆ ದೊಡ್ಡ ಪುರಾಣವನ್ನೇ ಪ್ರಾರಂಭ ಮಾಡಿ ಬಿಡುತ್ತೀಯ" ಎಂದು ರೇಗಿದರು ಲಲಿತಮ್ಮ.

ಮೋಹನ ಅಮೆರಿಕಾಗೆ ಹೊರಡುವ ತಾರೀಖು ನಿಶ್ಚಯವಾಯಿತು.

ಸದಾಶಿವರಾಯರು ಅಳಿಯನೊಡನೆ ಬೆಂಗಳೂರಿಗೆ ಹೋಗಿ ಅವನ ಪ್ರಯಾಣಕ್ಕೆಹಾಗೂ ವಿದೇಶಕ್ಕೆ ಬೇಕಾದ ಬಟ್ಟೆಬರೆಗಳನ್ನು ತೆಗೆಸಿಕೊಟ್ಟರು. ಬೆಂಗಳೂರಿನಿಂದ ಮೋಹನನನ್ನು ತಮ್ಮೊಡನೆಯೇ ಊರಿಗೆ ಕರೆದುಕೊಂಡು ಬಂದರು.

ನಾಲ್ಕಾರು ದಿವಸ ಮನೆಯಲ್ಲಿ ನಿತ್ಯೋತ್ಸವವಾಯಿತು. ಹೊರಡುವುದಕ್ಕೆ ಹಿಂದಿನ ದಿನ ಮೋಹನ ಇಂದಿರೆಯೊಡನೆ ಕಾಫಿ ತೋಟದಲ್ಲಿ ಅಡ್ಡಾಡಲು ಹೊರಟ.

ಭಾರವಾದ ಹೃದಯ ಹೊತ್ತು ಇಂದಿರ ಮೋಹನನೊಡನೆ ತಿರುಗಾಡಿದಳು.

ಮಿತಭಾಷಿಯಾದ ಇಂದಿರಾ ಆ ದಿನವಂತೂ ಮಾತನ್ನೇ ಆಡಲಿಲ್ಲ. ಆಡಬೇಕಾದ ಅವಳ ಪಾಲಿನ ಮಾತುಗಳನ್ನೂ ಮೋಹನನೇ ಆಡಿ ಮುಗಿಸಿದ.

"ಇಂದಿರ, ನಿನ್ನ ಬಿಟ್ಟು ಹೋಗುವುದಕ್ಕೆ ನನಗೆ ತುಂಬಾ ಬೇಜಾರಾಗುತ್ತೆ. ಆದರೆ ಏನು ಮಾಡುವುದು? ಎರಡನೇ ವರ್ಷ.ಆಮೇಲೆ ಖಂಡಿತ ಹಾರಿ ಬಂದುಬಿಡುತ್ತೇನೆ. ನಿನ್ನ ಬಿಟ್ಟು ನಾನು ಬಹಳ ದಿನ ದೂರವಿರಲಾರೆ. ನಿನಗೂ ನಾನು ಹೋಗುವುದು ಬೇಜಾರಾಗಿರಬಹುದು...."

ಮೋಹನನ ಕೊನೆಯ ವಾಕ್ಯ ಕೇಳಿ ಇಂದಿರ ನಸುನಗೆ ಬೀರಿದಳು.

"ನಾನು ದೂರ ಹೋದರೂ 'ಬೆಳ್ಳಿಮೋಡ' ನಿನ್ನದಾಗಿ ಇಲ್ಲಿಯೇ ಇರುತ್ತದೆ. 'ಬೆಳ್ಳಿಮೋಡ'ದ ಆರೈಕೆಯಲ್ಲಿ ನಾನು ದೂರ ಹೋಗಿರುವ ದುಃಖವನ್ನು ಮರೆಯಲು ಪ್ರಯತ್ನಿಸು."

"ಬೆಳ್ಳಿಮೋಡ ನಿಮ್ಮ ಪ್ರತಿನಿಧಿಯೇನೋ ?"

"ಹಾಗಲ್ಲ. ಸಾಧ್ಯವಾದಷ್ಟು ತೋಟದ ಕೆಲಸದಲ್ಲಿ ಮಗ್ನಳಾಗಿರು ಎಂದು ಹೇಳಿದೆ."

"ಯಾವುದೂ ನಿಮ್ಮ ವಿರಹವನ್ನು ಕಡಿಮೆ ಮಾಡಲಾರದು"—ಎಂದಳು ಇಂದಿರ ವ್ಯಥೆಯಿಂದ.

ಮೋಹನನಿಗೆ ಹೆಮ್ಮೆಯೇ ಉಂಟಾಯಿತು.

ಇಂದಿರೆಗೆ ತನ್ನಲ್ಲಿ ಎಷ್ಟು ಪ್ರೀತಿ !

"ತಾಯಿ, ತಂದೆ, ಬೆಳ್ಳಿಮೋಡ ಯಾವುದೂ ನಿನ್ನನ್ನು ಮರೆಸಲಾರದೇ?"

"ಇಲ್ಲ. ಯಾವುದೂ ಮರೆಸಲಾರದು."

ತನ್ನ ಪ್ರಭಾವ ಅವಳ ಮೇಲೆ ಅಪಾರವಾದುದು ಎಂದು ಮೋಹನನಿಗೆ ಖಾತ್ರಿಯಾಯಿತು.

"ಹಾಗಾದರೆ ಇನ್ನೊಂದು ಕೆಲಸ ಮಾಡೋಣ. ಈಗಲೇ ಮದುವೆ ಮಾಡಿಕೊಂಡುಬಿಡೋಣ. ನಂತರ ಇಬ್ಬರೂ ಒಟ್ಟಿಗೆ ವಿದೇಶಕ್ಕೆ ಹೋಗಿ ಬರೋಣ"—ಎಂದ ಮೋಹನ ಉತ್ಸುಕತೆಯಿಂದ.

"ನಿಮ್ಮ ವ್ಯಾಸಂಗ ?"

"ಸಾಗುತ್ತದೆ ಹೇಗಾದರೂ"—ಎಂದ ಮೋಹನ ಅಲಕ್ಷ್ಯದಿಂದ.

"ಊಹೂಂ. ಹಾಗೆ ಹೇಳಿದರೆ ಆಗೋದಿಲ್ಲ. ನೀವು ವ್ಯಾಸಂಗವನ್ನು ಮುಗಿಸಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿ ಬರಬೇಕು. ಅಲ್ಲಿಗೆ ನನಗೂ ತೃಪ್ತಿ. ನಮ್ಮ ತಂದೆಗೂ ತೃಪ್ತಿ. ನಿಮ್ಮ ಪ್ರಗತಿಯ ಮುಂದೆ ನಾನು ಸ್ವಾರ್ಥಿಯಾಗಿ ಅಡ್ಡಿ ಬರಲಾರೆ."

"ಹಾಗಾದರೆ ನಾನು ಒಂಟಿಯಾಗಿಯೇ ವಿದೇಶಕ್ಕೆ ಹೋಗಬೇಕೇ ?"

"ಇನ್ನು ಬೇರೆ ಮಾರ್ಗವೇ ಇಲ್ಲ."

"ಹೋಗುವಾಗಲೂ ನಾನು ಹೀಗೆಯೇ ತುಟಿಯೊಣಗಿಸಿಕೊಂಡು ಹೋಗಬೇಕೆ ?"

"ಬೇಡ. ಎಳನೀರು, ಪಾನಕ ಕುಡಿದುಕೊಂಡು ಹೋಗುವಿರಂತೆ" ಎಂದು ಕೀಟಲೆ ಮಾಡುವವಳಂತೆ ಇಂದಿರ ನಕ್ಕಳು.

ಹೊಂಗೆಯ ಮರದ ಕೆಳಗೆ ಇಳಿಜಾರಾಗಿದ್ದ ಪ್ರದೇಶದಲ್ಲಿ ಮೋಹನ ಕುಳಿತುಕೊಂಡ. ಇಂದಿರ ಅವನಿಗೆ ಸ್ವಲ್ಪ ದೂರದಲ್ಲಿ ಕುಳಿತಳು.

"ಆಮೇಲೆ ನಾವಿಬ್ಬರೂ ದೂರವಿರುವುದು ಇದ್ದೇ ಇದೆ. ಈಗಿನಿಂದಲೂ ನಾವು ದೂರವಿರಬೇಕೆ ?"

ಇಂದಿರ ಮಾತನಾಡಲಿಲ್ಲ.

ಮೋಹನ ಎದ್ದು ಬಂದು ಅವಳ ಒತ್ತಿನಲ್ಲಿ ಕುಳಿತುಕೊಂಡ. ಇಂದಿರ ಕೊಂಚ ಬೆದರಿ ಸುತ್ತಲೂ ನೋಡಿದಳು.

"ಕತ್ತಲಾಗಿದೆ. ಇಲ್ಲಿ ಯಾರು ಬರುತ್ತಾರೆ ? ಇಷ್ಟರ ಮೇಲೆ ಬಂದರೆ ತಾನೆ ಏನು ? ನಾವು ಎಂದಿದ್ದರೂ ಮದುವೆಯಾಗುವವರು" ಎಂದು ಮೋಹನ ಹೇಳಿದ.

"ಅದು ಸರಿ."

"ನಾಳೆ ನಾನು ಎಲ್ಲರ ಎದುರಿಗೆ ನಿನ್ನನ್ನು ಬೀಳ್ಕೊಡಬೇಕು. ಆದುದರಿಂದ ಈ ದಿನವೇ ನೀನು ನನ್ನನ್ನು ಬೀಳ್ಕೊಡು."

"ಹಾಗೆಯೇ ಆಗಲಿ. ನೀವು ಹೋಗಿ ಬಿಟ್ಟು ಬನ್ನಿ ಮೋಹನರಾಯರೇ" ಎಂದಳು ಇಂದಿರ ನಾಚಿಕೆಯುವಾಗಿ.

ಮೋಹನ ಮುನಿದು ಹೇಳಿದ.

"ಹೀಗೇನಾ ? ಬಲು ಚೆನ್ನಾಗಿದೆ."

"ಇನ್ನು ಹೇಗೆ ?"

"ಹೀಗೆ...."ಎಂದ ಮೋಹನ, ಅವನ ಅಪ್ಪುಗೆಯಲ್ಲಿ ದುಃಖ ತುಂಬಿದ ದೇಹ ಕುಲುಕಾಡಿತು. ಅವಳ ಕಣ್ಣೀರಿನಿಂದಾಗಿ ಅವನ ಕೆನ್ನೆಯೂ ತೇವ ಗೊಂಡಿತು.

ಇಂದಿರ ಎಂದುಕೊಂಡಳು.

....ಈತನ ಪ್ರಭಾವ ತನ್ನ ಮೇಲೆ ಎಷ್ಟೊಂದಿದೆ !

ಕೆಲವು ತಿಂಗಳುಗಳ ಹಿಂದೆ ಅಪರಿಚಿತನಾಗಿದ್ದ ಈ ಯುವಕ ಈಗ ತನ್ನ ಮೇಲೆ ಎಷ್ಟು ವಿಜಯ ಸಾಧಿಸಿದ್ದಾನೆ!

ಜನ್ಮ ಕೊಟ್ಟಿದ್ದ ತಾಯಿಗಿಂತಲೂ ಮೋಹನ ಅವಳಿಗೆ ಸಮೀಪದ ಬಂಧುವಾಗಿ ತೋರಿದ.

ತನಗೆಲ್ಲ ಬಗೆಯ ಸೌಕರ್ಯಗಳನ್ನೂ ಒದಗಿಸಿಕೊಟ್ಟು, ತನ್ನದೊಂದು ಕಂಬನಿಗೆ, ಸಪ್ಪೆ ಮುಖಕ್ಕೆ ಇಡಿಯ ಬ್ರಹ್ಮಾಂಡವನ್ನೆ ಸಾಧ್ಯವಾದರೆ ಸೂರೆಗೊಂಡು ತಂದುಕೊಡುತ್ತಿದ್ದ ತಂದೆಗಿಂತಲೂ ಮೋಹನ ಅವಳಿಗೆ ಈಗ ಆತ್ಮೀಯನಾಗಿದ್ದ.

ತಾಯಿಯ ತೊಡೆಗಿಂತಲೂ ಪ್ರಿಯವಾಗಿದ್ದ, ತಾನು ಆಡಿ, ಕುಣಿದು ತಿರುಗಾಡಿದ 'ಬೆಳ್ಳಿಮೋಡ'ವನ್ನು ಸಹಿತ ಮೋಹನನಿಗಾಗಿ ಬಿಟ್ಟು ಹೊರ ಡಲು ಇಂದಿರ ತಯಾರಾಗಿದ್ದಳು.

ಅಣ್ಣ, ಅಕ್ಕ, ತಂಗಿ, ತಮ್ಮಂದಿರಿಲ್ಲದೆ ಒಂಟಿಯಾಗಿ ಬೆಳೆದ ಇಂದಿರಳಿಗೆ ಯಾರ ಕೊರತೆಯೂ ಆಗದಂತೆ, ಸ್ನೇಹಿತರ ಅಭಾವ ತಲೆದೋರದಂತೆ ಪುಟ್ಟಯ್ಯ ಅವಳ ಅಣ್ಣನಾಗಿ, ಅಕ್ಕನಾಗಿ, ತಮ್ಮನಾಗಿ, ತಂಗಿಯಾಗಿ, ನಾನಾ ಬಗೆಯ ರೂಪತಾಳಿ ಇಂದಿರೆಯನ್ನು ರಮಿಸುತ್ತಿದ್ದ.

ಮೋಹನ ಇಂದಿರೆಯ ಸಾಮ್ರಾಜ್ಯವನ್ನು ಆಕ್ರಮಿಸಿದ ಮೇಲೆ ಇಂದಿರೆಗೆ ಪುಟ್ಟಯ್ಯನ ನೆನಪು ಆಗುತ್ತಿದ್ದುದೇ ವಿರಳ.

ಆತನ ದನಿ ಕೇಳಿದಾಗಲೇ ಇಂದಿರೆಗೆ ಪುಟ್ಟಯ್ಯನ ನೆನಪಾಗುತ್ತಿತ್ತು.

ತನಗೆ ಅತ್ಯಂತ ಪ್ರಿಯರಾಗಿದ್ದವರನ್ನೆಲ್ಲ ಮೋಹನ ತನ್ನ ಕಿರುಬೆರಳಿನಿಂದ ದೂರ ಸರಿಸಿ ಇಂದಿರೆಯನ್ನು ತಾನೇತಾನಾಗಿ ಆಕ್ರಮಿಸಿಕೊಂಡಿದ್ದ.

ಮೋಹನನ ಅಪ್ಪುಗೆಯಲ್ಲಿ ಇಂದಿರ ಮೈಮರೆತಿದ್ದಾಗ ದೂರದಲ್ಲಿ ಪುಟ್ಟಯ್ಯನ ದನಿ ಕೇಳಿಸಿತು.

"ಅಮ್ಮಯ್ಯಾ ...ಅಮ್ಮಯ್ಯಾ...."

ಆ ಗಳಿಗೆಯಲ್ಲಿ ಇಂದಿರೆಗೆ ಪುಟ್ಟಯ್ಯ ತನ್ನ ಶತ್ರುವೆಂದು ತೋರಿತು. ತನ್ನ ಸುಖ, ಸಂತೋಷಕ್ಕೆ ಈತ ಭಂಗತರಬೇಕೆ ?

"ಸುಮ್ಮನಿದ್ದು ಬಿಡು ಕೂಗಿಕೊಳ್ಳಲಿ"—ಎಂದ ಮೋಹನ ಜುಗುಪ್ಸೆಯಿಂದ.

"ಅಮ್ಮಯ್ಯ....ಕಾಡು ಹಂದಿ ಇಲ್ಲೆಲ್ಲೋ ಬಂದಿದೆಯಂತೆ. ಹುಷಾರಾಗಿರಬೇಕು....ಬಂದು ಬಿಡಿ...."

—ಪುಟ್ಟಯ್ಯ ಮತ್ತೆ ಕೂಗಿದುದು ಕೇಳಿಸಿತು.

ಮೋಹನನಿಗೆ ಏನಾದರೂ ಅಪಾಯವಾದರೆ ?

ಇಂದಿರ ತಟ್ಟನೆ ಎದ್ದು ಮೋಹನನ ಕೈ ಹಿಡಿದು

"ಬನ್ನಿ ಹೋಗೋಣ" ಎಂದಳು.

ಮೋಹನ ಒಲ್ಲದ ಮನಸ್ಸಿನಿಂದ ಅವಳನ್ನು ಹಿಂಬಾಲಿಸಿದ.

"ಕಾಗದ ಬರೆಯುವೆಯಾ ?"

"ಹೂಂ....ನೀವು ?"

"ನಾನು ಬರೆಯುತ್ತೇನೆ."

"ನನ್ನ ಮರೆಯಬೇಡಿ"—ಎಂದಳು ಇಂದಿರ.

"ಏನು ಮಾತು ಆಡುವೆ ಇಂದಿರ ? ನಿನ್ನ ಮರೆಯುವುದು ಸಾಧ್ಯವೇ ? ನಿನ್ನ ಮರೆತರೆ ನನಗಾರು ದಿಕ್ಕು ?"

"ಹಣ ಬೇಕೆನಿಸಿದಾಗ ಸಂಕೋಚಪಡಬೇಡಿ. ಪರದೇಶದಲ್ಲಿ ಕಷ್ಟಪಡಬೇಡಿ. ದೇಹಕ್ಕೆ ಆಯಾಸ ಮಾಡಿಕೊಳ್ಳಬೇಡಿ. ವಾರಕ್ಕೊಂದು ಕಾಗದ ಬರೆಯಿರಿ ನನ್ನಾಣೆಯಿದೆ."

"ಸಾಧ್ಯವಾದರೆ...." ಎಂದು ಹೇಳಿ ನಿಲ್ಲಿಸಿದ ಮೋಹನ.

"ಸಾಧ್ಯವಾದರೆ ಏನು ?"

"ನಿನ್ನನ್ನು ನನ್ನ ಎದೆಯ ಮೇಲಿನ ಶರಟಿನ ಗುಂಡಿಯನ್ನಾಗಿ ಮಾರ್ಪಡಿಸಿಕೊಂಡು ಹೋಗಿಬಿಡುತ್ತಿದ್ದೆ."

ತನ್ನ ವ್ಯಥೆಯನ್ನು ಮರೆತು ನಕ್ಕಳು ಇಂದಿರಾ.

ಕೈಯಲ್ಲಿ ಟಾರ್ಚು ಹಿಡಿದಿದ್ದ ಪುಟ್ಟಯ್ಯ ಎದುರಿಗೆ ಸಿಕ್ಕಿದ.

"ಬೇಗ ಹೆಜ್ಜೆ ಹಾಕು ಇಂದಿರ, ಕಾಡು ಹಂದಿ—ಗುಂಪಿನಿಂದ ಬೇರೆಯಾಗಿದೆಯಂತೆ...."

ಮೋಹನ ಹಾಸ್ಯ ಮಾಡಿದ.

"ಪುಟ್ಟಯ್ಯನವರೇ. ನಿಮಗೆ ಅಮ್ಮಯ್ಯನ ಹಿತಚಿಂತನೆಯೋ ಹೊರತು ನನ್ನದಿರುವ ಹಾಗಿಲ್ಲ."

"ನನಗೆ ಅಮ್ಮಯ್ಯನ ಹಿತಚಿಂತನೆ. ಅಮ್ಮಯ್ಯನಿಗೆ ನಿಮ್ಮ ಹಿತಚಿಂತನೆ. ಸರಿಯಾಯಿತಲ್ಲ"—ಎಂದ ಪುಟ್ಟಯ್ಯ.

"ಅಲ್ಲಿಗೆ ನೀವು ಪರೋಕ್ಷವಾಗಿ ನನ್ನ ಹಿತಚಿಂತನೆ ಮಾಡಿದ ಹಾಗಾಯಿತು, ಅಲ್ಲವೇ ?" ಎನ್ನುತ್ತಾ ಮೋಹನ ಗಟ್ಟಿಯಾಗಿ ನಕ್ಕ.

"ಅಡಿಗಲ್ಲು ಭದ್ರವಾಗಿದ್ದರೆ ಮನೆ ಸುರಕ್ಷಿತ. ಗಿಡದ ಬೇರಿಗೆ ನೀರು ಹಾಕಿದರೆ ಎಲೆಗಳೆಲ್ಲ ನಳನಳಿಸುತ್ತವೆ. ಆದರೆ ಎಲೆಗಳಿಂದಲೇ ಗಿಡಕ್ಕೆ ಒಂದು ಬಗೆಯ ಶೋಭೆ. ಬೋಳುಗಿಡ ಏನು ಚೆಂದ ?"

ಎನ್ನುತ್ತಾ ಪುಟ್ಟಯ್ಯ ನಶ್ಯದ ಡಬ್ಬಿಯನ್ನು ಈಚೆಗೆ ತೆಗೆದು

"ನೀವು ಹೋಗಿ, ನಾನು ನಿಧಾನವಾಗಿ ಬರುತ್ತೇನೆ" ಎಂದರು.

ಇಂದಿರ, ಮೋಹನ ಕಾಲುದಾರಿಯಲ್ಲಿ ಕಾಫಿಗಿಡದ ಎಲೆಗಳನ್ನು ಕೈಯಿಂದ ಸರಿಸುತ್ತಾ ಹೊರಟರು.

ಕಾಫಿ ಕಾಯಿಯ ಗಾತ್ರದ ಎರಡು ಹನಿ ಕಣ್ಣೀರು ಇಂದಿರೆಯ ಕಣ್ಣಿನಿಂದ ತುಳುಕಿ ಮಣ್ಣಿನಲ್ಲಿ ಉರುಳಿದವು.

ರಾತ್ರಿ ಊಟವಾಯಿತು.

ಬೆಳಗ್ಗೆ ಕಾರಿನಲ್ಲಿ ಕಡೂರಿಗೆ ಹೋಗಿ ಅಲ್ಲಿಂದ ಪೂನಾ ಎಕ್ಸ್‌ಪ್ರೆಸ್‌ನಲ್ಲಿ ಮುಂಬಯಿಗೆ ಹೋಗುವುದೆಂದು ಮೊದಲೇ ನಿರ್ಧರವಾಗಿತ್ತು.

ಮೋಹನನೊಡನೆ ಸದಾಶಿವರಾಯರೂ ಹೊರಟಿದ್ದರು.

ಮೋಹನನಿಗೆ ವಿಮಾನದಲ್ಲಿ ಅಮೆರಿಕಾಗೆ ಪ್ರಯಾಣ ಬೆಳೆಸುವ ಆಸೆಯಿತ್ತು. ಆದರೆ ಇಂದಿರ ಖಂಡಿತವಾಗಿ ಹೇಳಿದ್ದಳು.

"ನಾನು ನಿಮ್ಮನ್ನು ವಿಮಾನದಲ್ಲಿ ಕಳುಹಿಸಲಾರೆ."

ಮೋಹನ ಅವಳೊಡನೆ ಚರ್ಚಿಸಿ ವಿಫಲನಾದ

"ವಿಮಾನದಲ್ಲಿ ಹೋದರೆ ಏನು ಮಹಾ...."

"ಇಷ್ಟೊಂದು ಆಕಸ್ಮಿಕಗಳು ನಡೆಯುತ್ತವೆ. ನನಗೇನೋ ತುಂಬಾ ಭಯ.

"ಹಾಗೆ ಸಾಯುವುದು ನನ್ನ ಹಣೆಯಲ್ಲಿ ಬರೆದಿದ್ದರೆ ಯಾರು ತಪ್ಪಿಸಲಾದೀತು ?"

"ಹಾಗೆ ಮಾತನಾಡಬೇಡಿ"—ಎಂದು ಇಂದಿರ ಹೇಳಿದಾಗ ಮೋಹನ ಚಕಿತನಾದ.

ಅವಳ ಪ್ರೀತಿಯ ಆಳವನ್ನು ಅಳೆಯುವ ಶಕ್ತಿ ಅವನಿಗಿರಲಿಲ್ಲ.

ಪುಟ್ಟ ಮಗುವೊಂದು ಆಳವಾದ ಭಾವಿಯಲ್ಲಿ ಇಣುಕಿ 'ತುಂಬಾ ಆಳ ಇದೆ, ಕತ್ತಲು. ಸರಿಯಾಗಿ ಕಾಣಿಸುವುದಿಲ್ಲ' ಎಂದುಕೊಂಡ ಹಾಗೆ ಮೋಹನ ಎಂದುಕೊಂಡ.

ಸದಾಶಿವರಾಯರು ಮಗಳನ್ನು ತಮ್ಮೊಡನೆ ಮುಂಬಯಿಗೆ ಕರೆದೊಯ್ಯುವ ಆತುರ ತೋರಿಸಿದರು. ಮೋಹನನೂ ಇಂದಿರೆಯೂ ತಮ್ಮೊಡನೆ ಮುಂಬಯಿಯವರೆವಿಗೆ ಬರಲಿ ಎಂದು ಆಸೆ ಪಟ್ಟ.

ಮಾರನೆಯ ದಿನ ಬೆಳಗ್ಗೆ ಎಲ್ಲರನ್ನೂ ಕಳುಹಿಸಿಕೊಟ್ಟು ಲಲಿತಮ್ಮ ಜನ ಶೂನ್ಯವಾಗಿದ್ದ ಮನೆಗೆ ಹಿಂತಿರುಗಿದರು.

ಮೋಹನ ಮುಂಬಯಿಗೆ ಬಂದ ಮಾರನೆಯ ದಿನವೇ ಹಡಗು ಹೊರಡುವುದರಲ್ಲಿತ್ತು.

ಸದಾಶಿವರಾಯರು ಮೋಹನನನ್ನು ತಮ್ಮ ಪರಿಚಿತರ ಮನೆಗೆ ಕರೆದೊಯ್ದರು.

"ನನ್ನ ಅಳಿಯ, ಅಮೆರಿಕಾಗೆ ಹೊರಟಿದ್ದಾನೆ"—ಎಂದು ಅಳಿಯನ ಪರಿಚಯವನ್ನು ಮಾಡಿಕೊಟ್ಟರು.

ಮೋಹನನ ಗೆಳೆಯರು ಹಲವರು, ಸದಾಶಿವರಾಯರು, ಇಂದಿರ ಎಲ್ಲರೂ ಮೋಹನನನ್ನು ಬೀಳ್ಕೊಟ್ಟರು.

ಹಡಗನ್ನೇರುವುದಕ್ಕೆ ಮುಂಚೆ ಸದಾಶಿವರಾಯರು ಗುಲಾಬಿ ಹೂವಿನ ಹಾರವನ್ನು ತೆಗೆದು

"ಸುಖವಾಗಿ ಹಿಂತಿರುಗಿ ಬಾ" ಎಂದು ಹೇಳಿ ಅವನ ಕೊರಳಿಗೆ ಹಾಕಲು ಹೋದರು.

ಅಷ್ಟರಲ್ಲಿ ಮೋಹನನ ಗೆಳೆಯ ಸಖಾರಾಮ, ರಾಯರ ಕೈತಡೆದು

"ರಾಯರೆ, ಹಾರ ಹಾಕಬೇಕಾದವರು ಹಾಕಿದರೆ ಚೆಂದ ಅಲ್ಲವೇ?" ಎಂದ.

ರಾಯರ ಕೈ ತಡೆಯಿತು. ಅವರು ಅರ್ಥಗರ್ಭಿತವಾಗಿ ಮಗಳ ಕಡೆ ನೋಡಿದರು.

ಇಂದಿರಾ ಲಜ್ಜಿತಳಾದಳು.

ಕೆಂಪೇರಿದ ಮುಖದೊಡನೆ "ಊಹೂಂ" ಎಂದಳು.

ಆದರೆ ಸಖಾರಾಮ ಅಷ್ಟಕ್ಕೆ ಬಿಡುವವನೇ ?

"ನೀವು ಹಾರ ಹಾಕಿದ ಹೊರತು ಮೋಹನ ಹಡಗನ್ನು ಏರುವ ಹಾಗಿಲ್ಲ"—ಎಂದ.

ಗೆಳೆಯರ ಒತ್ತಾಯ ಬಲವಾಯಿತು.

ಇಂದಿರ ನಡುಗುವ ಕೈಗಳಿಂದ ಹೂವಿನ ಹಾರವನ್ನು ತೆಗೆದುಕೊಂಡಳು

ಮೋಹನ ಕೊರಳು ಬಾಗಿಸಿದ.

ಇಂದಿರ ಕೈ ಮುಂದೆ ತಂದಳು.

ಗೆಳೆಯರು ಉತ್ಸಾಹದಿಂದ ಚಪ್ಪಾಳೆ ತಟ್ಟಿದರು.

ಇಂದಿರ ಬೆವರಿ ಹಾರ ಹಾಕಿದಳು.

ಆದರೆ ಮಾಲೆ ಮೋಹನನ ಕೊರಳಿಗೆ ಬೀಳದೆ ಅವನ ಭುಜದ ಮೇಲೆ ಬಿದ್ದು ಕೆಳಗೆ ಉರುಳುವುದರಲ್ಲಿತ್ತು. ಅಷ್ಟರಲ್ಲಿ ಭುಜದಿಂದ ಉರುಳಲಿದ್ದ ಹಾರವನ್ನು ಮೋಹನ ಮಧ್ಯದಲ್ಲಿಯೇ ಹಿಡಿದು ತಾನೇ ಕೊರಳಿಗೆ ಹಾಕಿಕೊಂಡು ಇಂದಿರೆಯ ಕಡೆ ನೋಡಿದ.

ಇಂದಿರ ನಗಲು ಯತ್ನಿಸಿದಳು. ಆದರೆ ನಗು ಬರಲಿಲ್ಲ. ಬದಲು ಕಣ್ಣಿನ ತುಂಬಾ ನೀರು ತುಂಬಿಕೊಂಡಿತು.

ಗೆಳೆಯರು ಗೇಲಿ ಮಾಡಿದರು.

"ಹಾರ ಹಾಕಿಸಿಕೊಂಡು ಆಮೇಲೆ ನಮಗೆ ಊಟ ಹಾಕಿಸುವುದನ್ನು ಮರೆಯಬೇಡ ಮೋಹನಾ."

"ಎರಡೇ ವರ್ಷ"—ಎಂದ ಮೋಹನ ಗೆಳೆಯರಿಗೆ.

ಇಂದಿರೆಯ ಕಡೆ ತಿರುಗಿ ಭಾರವಾದ ದನಿಯಲ್ಲಿ ಹೇಳಿದ.

"ಎರಡು ವರ್ಷ !"

ಹಡಗಿನ ಸಿಳ್ಳೆ ಕೇಳಿ ಮೋಹನ ಆತುರವಾಗಿ ಹೊರಟ. ಹೊರಡುವಾಗೊಮ್ಮೆ ಹಿಂತಿರುಗಿ ನೋಡಿ

"ಕಾಗದ ಬರೆಯುತ್ತೇನೆ"—ಎಂದು ಕೂಗಿ ಹೇಳಿದ. ಹಡಗು ಚಲಿಸಲು ಪ್ರಾರಂಭವಾಗುತ್ತಲೆ ಇಂದಿರ ತಂದೆಯ ಕಡೆ ತಿರುಗಿ

"ಹೋಗೋಣ"—ಎಂದಳು.

ಡೆಕ್ಕಿನ ಮೇಲೆ ನಿಂತಿದ್ದ ಮೋಹನನಿಗೆ ಕೈ ಬೀಸಿ ಬೆನ್ನು ತಿರುಗಿಸಿದಳು.

ಸದಾಶಿವರಾಯರು ಅದೇ ದಿನ ಚಿಕ್ಕಮಗಳೂರಿಗೆ ಹೊರಟರು. ನಗು ನಗುತ್ತಾ ಮೋಹನನೊಡನೆ ಹೋದ ಮಗಳು ಸಪ್ಪೆಮುಖದೊಡನೆ ಮನೆಗೆ ಹಿಂತಿರುಗಿ ಬಂದುದನ್ನು ನೋಡಿ ಲಲಿತಮ್ಮನವರ ಕರುಳು ಚುರುಕ್ಕೆಂದಿತು.

'ಬೆಳ್ಳಿಮೋಡ'ಕ್ಕೆ ಬಂದ ಗಳಿಗೆಯೇ ಇಂದಿರ ಊಟ ಮುಗಿಸಿ, ಕೈಲಿ ಕತ್ತಿ ಹಿಡಿದು, ಕಾಲಿಗೆ ಮೊಳೆಗಳಿದ್ದ ಚಪ್ಪಲಿ ಮೆಟ್ಟಿ, ಉರಿಬಿಸಿಲಿನಲ್ಲಿ ಹೊರಟಳು.

"ಈಗ ಯಾಕೆ ಇಂದಿರಾ ?" ಎಂದರು ತಾಯಿ.

"ಅವರನ್ನ ಮರೆಯಬೇಕಾದರೆ ನನಗಿರೋ ದಾರಿ ಇದೊಂದು ಮಾತ್ರ."

"ಮೋಹನನಿಗೆ ನಿನ್ನ ಹೃದಯದಲ್ಲಿ ಮೊದಲ ಸ್ಥಾನ. ನಂತರ 'ಬೆಳ್ಳಿಮೋಡ'ಕ್ಕೆ ಎರಡನೆಯ ಸ್ಥಾನ. ಅಲ್ಲವೇ ?"—ತಾಯಿ ಮಗಳನ್ನು ಕೀಟಲೆ ಮಾಡಿದರು.

ಇಂದಿರೆಯ ಮೌನ ತಾಯಿಯ ಮಾತು ನಿಜವೆಂದು ಸಾರಿ ಹೇಳಿತು.

* * * *

ಮೋಹನನ ಪ್ರಥಮ ಪತ್ರ ಏಡನ್ನಿನಿಂದ ಹಾರಿ ಇಂದಿರೆಯ ಬಳಿಗೆ ಬಂದಿತು.

ಭಾವಿ ಪತಿಯ ಪ್ರಥಮ ಪತ್ರವದು.

ಅಂಚೆಯಾಳಿನ ಕೈಯಿಂದ ಪತ್ರ ತೆಗೆದುಕೊಳ್ಳುವಾಗ ಇಂದಿರೆಗೆ ಆತುರ, ಕಾತರ ಹಾಗೂ ಕಳವಳ.

ಎಷ್ಟು ಹುಡುಗಿಯರಿಗೆ ಮದುವೆಗೆ ಮುಂಚೆ ಪತಿಯಾಗುವವನಿಂದ ಪತ್ರ ಬರೆಯಿಸಿಕೊಳ್ಳುವ ಪುಣ್ಯವಿದೆ !

ಇಂದಿರ ಹಾರುತ್ತಿದ್ದ ಹೃದಯವನ್ನು ಎಡಗೈನಿಂದ ಒತ್ತಿ ಹಿಡಿದು, ಬಲಗೈಲಿ ಪತ್ರ ಹಿಡಿದು ಓದತೊಡಗಿದಳು.

"ನನ್ನ ಇಂದಿರಾ...."

ಊಂ....ಮದುವೆಗೆ ಮುಂಚೆಯೇ ಅವರ ಇಂದಿರೆಯಂತೆ ! ಎಷ್ಟು ಧೈರ್ಯ ಪುಂಡನಿಗೆ !

ಅಲ್ಲಿಂದ ಮುಂದೆ ಮೋಹನ ಕ್ಷೇಮ ಸಮಾಚಾರ ತಿಳಿಸಿದ್ದ. ಪ್ರಯಾಣ ಮಾಡುವಾಗ ತನಗೆ ಪರಿಚಯವಾದ ಗೆಳೆಯರ ವಿಷಯ ತಿಳಿಸಿದ್ದ.

ನಂತರ ವಿರಹ ಗೀತೆ ಹಾಡಿದ್ದ.

"ಇಂದಿರಾ, ನನ್ನ ಬಾಳ ಚಂದಿರ, ಬೆಳಗು ಬಾ ನನ್ನೀ ಮಂದಿರ, ನೀನಿಲ್ಲದೆ ಬಲು ಬೇಸರ...."

ನಸುನಗು ಇಂದಿರೆಯ ತುಟಿಯ ಮೇಲೆ ಮಿನುಗಿತು.

"ಓ ಡಾರ್ಲಿಂಗ್, ಡಾರ್ಲಿಂಗ್...."—ಎಂದುಕೊಂಡಳು ಇಂದಿರ ತನ್ನಲ್ಲಿಯೇ.

"ನಿನ್ನಪ್ರೀತಿಯ ಮೋಹನ"—ಎಂದು ಕಾಗದ ಮುಕ್ತಾಯಗೊಂಡಿತ್ತು.

ಇಂದಿರೆಯ ಹೃದಯ ಗರಿಗೆದರಿ ಕುಣಿಯಿತು. ಪ್ರೇಮಿಗಳಿಗೆ ವರ್ಷವೆಲ್ಲ ವಸಂತವೇನೋ ?

ಪ್ರೇಮಿಯ ಪ್ರಥಮ ಪ್ರೇಮಗರ್ಜನೆ ಕೇಳಿ ಜಾತಕಪಕ್ಷಿ ಉಲ್ಲಾಸಗೊಂಡಿತು.

ದಿನವೆಲ್ಲ ಮೋಹನನ ಪತ್ರ ಓದುವುದರಲ್ಲಿ ಇಂದಿರ ಕಳೆದಳು. ರಾತ್ರಿ 'ನಾನು ಹೇಗೆ, ಯಾವ ರೀತಿಯ ಕಾಗದ ಬರೆಯಲಿ' ಎಂಬ ಯೋಚನೆಯಲ್ಲಿ ಕಳೆಯಿತು.

ಹದಿನೈದು ದಿನಗಳ ನಿರಂತರ ಹೋರಾಟದ ಫಲವಾಗಿ ನಾಲ್ಕಾರು ಪತ್ರಗಳನ್ನು ಹರಿದುಹಾಕಿ ಇಂದಿರಾ ಕೊನೆಗೊಂದು ಪತ್ರ ಬರೆದಳು.

"........ಗೆ.

ನಮಸ್ಕಾರಗಳು.

ನಾನು ಕವಿಯಲ್ಲ. ನಿಮ್ಮಂತೆ ಬಣ್ಣಬಣ್ಣದ ಮಾತುಗಳನ್ನು ಬರೆಯೋಕೆ ನನಗೆ ಬರುವುದಿಲ್ಲ. ನಿಮ್ಮ ಆರೋಗ್ಯ ತಿಳಿಸುತ್ತಿರಿ.

ನಿಮ್ಮವಳೇ ಇಂದಿರಾ."

ಮೋಹನನ ಪತ್ರದ ಎದುರಿಗೆ ತನ್ನ ಪತ್ರವನ್ನು ಹಿಡಿದು ನೋಡಿದಳು ಇಂದಿರ.

ತನ್ನದು ತೀರಾ ಸಾಮಾನ್ಯವಾದ ಪುಟ್ಟ ಕಾಗದವೆನಿಸಿ ಇಂದಿರೆಗೆ ಹೀನಾಯವಾಯಿತು.

ಅವರ ಪತ್ರ ಓದುತ್ತಿದ್ದರೆ ಸುಂದರವಾದ ಕವಿತೆಯೊಂದನ್ನು ಓದುತ್ತಿರುವಂತೆ ಭಾಸವಾಗುತ್ತಿತ್ತು.

ಆದರೆ ತನ್ನದೋ ?

ಅತಿ ನೀರಸ, ಅತಿ ಸಾಮಾನ್ಯ, ಹುಲ್ಲುಕಡ್ಡಿಯೂ ಬೆಳೆಯದ ಬಂಜರು ಭೂಮಿ ತನ್ನ ಪತ್ರ.

ಮೋಹನನ ಪತ್ರವೋ ?

ವಸಂತ ಮಾಸದ ಸಂಜೆಯಲ್ಲಿ ಅರ್ಧ ಅರಳಿರುವ ಮಲ್ಲಿಗೆಗಳನ್ನು ಹೊತ್ತು ನಿಂತ ಮಲ್ಲಿಗೆಯ ಬಳ್ಳಿ.

ಆದರೆ ಈ ಪ್ರೇಮ ಮಲ್ಲಿಗೆ ಬಾಡದು, ಬಳ್ಳಿಯಿಂದ ಉದುರದು, ನಶಿಸದು. ತಾನೆಂತಹ ಪುಣ್ಯವತಿ !

ಮಗಳಿಗೆ ಅಳಿಯನಾಗುವವನಿಂದ ಕಾಗದ ಬಂದಿರುವುದನ್ನು ನೋಡಿ

ಲಲಿತಮ್ಮನಿಗೆ ಸ್ವಲ್ಪ ಅಸಮಾಧಾನ.

ಅಸಮಾಧಾನದ ಕಪ್ಪು ಮೋಡಕ್ಕೆ ಹಿಗ್ಗಿನ ಬೆಳ್ಳಿಯಂಚು.

ಮೋಹನನಿಗೆ ತನ್ನ ಮಗಳಲ್ಲಿ ಎಷ್ಟು ಪ್ರೀತಿ ! ದೂರವಿರುವಾಗ ಆತ ಇಂದಿರೆಗೆ ಕಾಗದ ಬರೆಯದೆ ಇರಲಾರ. ಹಳೆಯ ಪದ್ಧತಿಗಳ ಜಾಡಿನಲ್ಲಿ ಓದುತ್ತಿದ್ದ ಮನಸ್ಸು ಸಿಡಿಮಿಡಿಗೊಂಡಿತ್ತು.

ಮದುವೆಗೆ ಮುಂಚೆ ಕಾಗದ ಬರೆಯುವುದೇನು ಚೆಂದ ? ಮೋಹನನಿಗೆ ಕಾಗದ ಬರೆಯಬೇಡವೆಂದು ಹೇಳುವುದಾದರೂ ಹೇಗೆ ?

ಒಟ್ಟಿನಲ್ಲಿ ಅವರಿಬ್ಬರ ಮದುವೆ ಮುಗಿಸಿಯೇ, ಆತನನ್ನು ಅಮೆರಿಕಾಗೆ ಕಳುಹಿಸಿದ್ದರಾಗಿತ್ತು.

ಇಂದಿರೆಯ ಮದುವೆ ಮುಗಿಸಿದ್ದರೆ ಚೆನ್ನಾಗಿತ್ತು ಎಂಬ ಚಿಂತೆ ಆಕೆಯನ್ನು ಆಗಾಗ್ಗೆ ಕಾಡುತ್ತಿತ್ತು.

ಚಿಂತೆಯ ಕಾವಿಗೆ ಹಣ್ಣಾದಂತೆ ಆಕೆಯ ಶರೀರ ಕೃಶವಾಗತೊಡಗಿತು. ಬಳಲಿಕೆಯಿಂದ ದೇಹ ಸೊರಗಿತು.

ತಾಯಿಯ ಸ್ಥಿತಿ ಇಂದಿರೆಯನ್ನು ಚಿಂತೆಗೀಡುಮಾಡಿತು. ಒಮ್ಮೊಮ್ಮೆ ಅನಾವಶ್ಯಕವಾಗಿ ಚಿಂತೆ ಹಚ್ಚಿಸಿಕೊಂಡಿರುವುದನ್ನು ನೋಡಿ ಇಂದಿರೆಗೆ ತಾಯಿಯ ಮೇಲೆ ಚೆನ್ನಾಗಿ ರೇಗಿಬಿಡಬೇಕೆನಿಸುತ್ತಿತ್ತು.

ತಾನು ನಿಶ್ಚಿಂತೆಯಿಂದಿರುವಾಗ ತಾಯಿ ಇಷ್ಟು ಕೊರಗು ಹಚ್ಚಿಸಿಕೊಳ್ಳಬೇಕೆ ? ಇದು ಯಾವ ಹಣೆಯಬರಹ ?

ಊಟ, ತಿಂಡಿ ಬಿಟ್ಟು ಸಂಕಟಪಡಬೇಕೆ ?

ಮಂಚದ ಮೇಲೆ ಮುದುರಿಕೊಂಡು ಮಲಗಿದ್ದ ಲಲಿತಮ್ಮನನ್ನು ಇಂದಿರ ಹೋಗಿ ಕರೆದಳು.

"ಅಮ್ಮಾ, ಊಟಕ್ಕೆ ಬಾಮ್ಮ."

"ನನಗೆ ಹಸಿವಿಲ್ಲ ಇಂದಿರಾ. ನೀನು ಊಟ ಮಾಡಿಬಿಡು."

"ನೀನು ಊಟಮಾಡಿದರೇ ನಾನೂ ಮಾಡೋದು. ಇಲ್ಲದಿದ್ದರೆ ನಾನೂ ಉಪವಾಸವಿರುತ್ತೇನೆ."

"ನಂಗೆ ಬೇಡ."

"ನಾನು ಊಟ ಮಾಡಬೇಕೆಂದಿದ್ದರೆ ನೀನೂ ಮಾಡಬೇಕು. ಮನುಷ್ಯರು ತೀರ ಇಷ್ಟೊಂದು ಕೊರಗು ಹಚ್ಚಿಕೊಳ್ಳಬಾರದು. ಯಾವುದಕ್ಕೂ ಮಿತಿ ಇದೆ."

"ಏನಾದರಾಗಲಿ ಮದುವೆಮಾಡಿದ್ದರೆ ಚೆನ್ನಾಗಿತ್ತು. ನನ್ನ ಹಣೇಲಿ ನಿನ್ನ

ಮದುವೆ ಮಾಡುವುದು ಬರೆದಿದೆಯೋ ಇಲ್ಲವೋ ?"

—ಎಂದು ನರಳಿದರು ತಾಯಿ,

"ಹುಚ್ಚು ಹುಚ್ಚಾಗಿ ಮಾತನಾಡಬೇಡಮ್ಮ. ಎರಡು ವರ್ಷವೆನ್ನುವುದು ಎರಡು ತಿಂಗಳಿನ ಹಾಗೆ ಕಳೆದುಹೋಗುತ್ತದೆ. ಈಗಾಗಲೇ ಅವರು ಹೋಗಿ ಆರು ತಿಂಗಳಾದವು. ಇನ್ನು ಒಂದೂವರೆ ವರ್ಷ. ಅದೇನು ಮಹಾ, ಕಣ್ಣು ಮುಚ್ಚಿ ಕಣ್ಣು ಬಿಡುವುದರಲ್ಲಿ ಬಂದುಬಿಡುತ್ತದೆ."

"ಮದುವೆ ಮಾಡಿ ಅವರನ್ನು ಕಳುಹಿಸಿದ್ದರೆ ಚೆನ್ನಾಗಿತ್ತು."

"ಮತ್ತೆ ಅದೇ ಹಾಡು. ಅವರಲ್ಲಿ ನಿನಗೆ ನಂಬಿಕೆ ಇಲ್ಲವೇನಮ್ಮ. ಅವರು ಎಂದಿಗೂ ನಮಗೆ ದ್ರೋಹ ಬಗೆಯುವುದಿಲ್ಲ. ಮನುಷ್ಯರಲ್ಲಿ ಇಷ್ಟು ಅಪನಂಬಿಕೆಯಾದರೆ ಹೇಗೆ ?"

"ಅವರಲ್ಲಿ ನಂಬಿಕೆಯಿಲ್ಲ ಎಂದು ನಾನು ಹೇಳಲಿಲ್ಲ. ನಿನ್ನ ಮದುವೇನ ನಾನು ನೋಡುವುದಿಲ್ಲವೋ ಏನೋ ?"

ಇಂದಿರೆಗೆ ತುಂಬಾ ಕೋಪ ಬಂದಿತು.

"ನಿನ್ನೊಡನೆ ಮಾತು ವ್ಯರ್ಥ"—ಎಂದು ಸಿಡುಕಿ ಹೇಳಿ ಹೊರಟು ಹೋದಳು.

ಒಂದು ವಾರ ಕಳೆಯುವುದರಲ್ಲಿ ಲಲಿತಮ್ಮನ ಆರೋಗ್ಯ ಹದಗೆಟ್ಟಿತು. ಕುಡಿದ ನೀರು ಸಹಿತ ದಕ್ಕದೆ ಕೂಡಲೆ ವಾಂತಿಯಾಗಿಬಿಡುತ್ತಿತ್ತು. ಆಯಾಸ ಬಳಲಿಕೆಯಿಂದ ಆಕೆಗೆ ಹಾಸಿಗೆಯ ಮೇಲೆ ಕುಳಿತುಕೊಳ್ಳುವುದು ಸಹ ಸಾಧ್ಯವಾಗುತ್ತಿರಲಿಲ್ಲ.

ಇನ್ನು ತಡಮಾಡಬಾರದೆಂದು ಸದಾಶಿವರಾಯರು ಹೆಂಡತಿಯನ್ನು ಚಿಕ್ಕ ಮಗಳೂರಿಗೆ ಕಾರಿನಲ್ಲಿ ಕರೆದೊಯ್ದರು.

ಕಾರು ಹೋಗುವಾಗ ಗಾಳಿ ತಗುಲಬಾರದೆಂದು ಲಲಿತಮ್ಮ ಮೈತುಂಬಾ ನೀಲಿ ಬಣ್ಣದ ಶಾಲನ್ನು ಹೊದ್ದು ಸೀಟಿಗೊರಗಿ ಕುಳಿತರು.

ಬಿಳಿಚಿಕೊಂಡಿದ್ದ ಮುಖ, ಒಣಗಿದ ತುಟಿಗಳು, ಆಳಕ್ಕಿಳಿದ, ಕಪ್ಪು ಸುತ್ತಿನ ನಡುವೆ ಇದ್ದ ಕಾಂತಿಹೀನವಾದ ಕಣ್ಣುಗಳು, ಅರೆನೆರೆತ ತಲೆ ಗೂದಲು, ಮೊಳಕೈಗೆ ಜಾರಿದ್ದ ಬಳೆಗಳು—ಇವುಗಳನ್ನು ನೋಡಿ ಸದಾಶಿವರಾಯರಿಗೆ ಹೆಂಡತಿಯ ಬಗ್ಗೆ ಮರುಕ ಉಕ್ಕಿ ಬಂತು.

ಅವರು ಪ್ರೀತಿಯಿಂದ ಆಕೆ ಹೊದೆದುಕೊಂಡಿದ್ದ ಶಾಲನ್ನು ಸರಿಮಾಡಿ "ಈಗ ಹೇಗಿದೆ ಲಲಿತಾ ?" ಎಂದರು.

"ವಾಸಿ"—ಎಂದರಾಕೆ ಗಂಡನನ್ನು ಗಾಬರಿಗೊಳಿಸಬಾರದೆಂದು.

"ಯಾವ ವಿಷಯವನ್ನಾದರೂ ಅಷ್ಟೆ ಲಲಿತಾ—ತುಂಬಾ ಮನಸ್ಸಿಗೆ ಹಚ್ಚಿಸಿಕೊಳ್ಳಬಾರದು. ಸಣ್ಣ ವಿಷಯಗಳನ್ನೆಲ್ಲಾ ಮನಸ್ಸಿಗೆ ಹಚ್ಚಿಸಿ ಕೊಂಡರೆ ನಾವು ಬದುಕುವುದಾದರೂ ಹೇಗೆ? ನನಗೂ ಕೂಡಲೇ ಮದುವೆ ಮಾಡಿಬಿಡಬೇಕೆಂದು ಆಸೆಯಿತ್ತು.ಆದರೆ ಹುಡುಗರು ಹೇಳುವುದೂ ಒಂದು ರೀತಿಯಲ್ಲಿ ಸರಿ. ಮದುವೆಯಾದ ಮೇಲೆ ಒಬ್ಬರನ್ನೊಬ್ಬರು ಬಿಟ್ಟಿರುವುದು ತುಂಬಾ ಕಷ್ಟ. ಇಂದಿರೆಯೂ ಅದಕ್ಕೆ ಒಪ್ಪಲಿಲ್ಲ. ಅವಳ ಮಾತಿಗೆ ಪ್ರತಿ ಯಾಡುವ ಶಕ್ತಿ ಇನ್ನೂ ನಿನ್ನ ಗಂಡನಿಗೆ ಬಂದಿಲ್ಲ."

"ನಿಮ್ಮ ಜೋರೆಲ್ಲ ನನ್ನ ಮುಂದೆ"—ಎಂದು ಪ್ರೀತಿಯಿಂದ ಪತಿಯನ್ನು ಹೀಯಾಳಿಸಿದರು ಲಲಿತಮ್ಮ.

"ಅದು ನಿಜ. ನಿನ್ನನ್ನು ನೋಯಿಸಬಲ್ಲೆ ನಾನು, ಆದರೆ ಇಂದಿರಾನ ಮಾತ್ರ ಎಂದೆಂದಿಗೂ ನೋಯಿಸಲಾರೆ. ಅವಳ ಹಿಂದೆ ಎಷ್ಟೋ ಮನಸ್ಸು ಗಟ್ಟಿ ಮಾಡುತ್ತೇನೆ ಆದರೆ ಅವಳ ಮುಖ ಕಣ್ಣಿಗೆ ಬಿದ್ದ ಕೂಡಲೆ ಸೋಲು ನನ್ನದಾಗುತ್ತದೆ."

"ನಿಮಗೆ ನನಗಿಂತ ಮಗಳೇ ಹೆಚ್ಚಾಯಿತು.ಮಗಳಲ್ಲಿರುವ ಪ್ರೀತಿ ಹೆಂಡತಿ ಯಲ್ಲಿ ಇಲ್ಲ ನಿಮಗೆ"—ಎಂದರು ಲಲಿತಮ್ಮ, ಕೊಂಚ ಅಸೂಯೆಯಿಂದ.

"ಹೌದು. ಆದರೆ ನೀನು ಬೇಡ ಎಂದರೆ ಅವಳನ್ನು ದೂರಮಾಡಿ ಬಿಡುತ್ತೇನೆ."

"ಸಾಕು ಸುಮ್ಮನಿರಿ. ನನ್ನ ಮಾತಿಗೆ ತುಂಬಾ ಬೆಲೆ ಕೊಡುವವರ ಹಾಗೆ ಮಾತನಾಡಬೇಡಿ"—ಹುಸಿಮುನಿಸಿನಿಂದ ಆಕೆ ಎಂದರು.

ಕೈ ಹಿಡಿದ ತನಗಿಂತಲೂ ತನ್ನ ಮಗಳನ್ನು ರಾಯರು ಹೆಚ್ಚು ಪ್ರೀತಿ ಸುವುದನ್ನು ಕಂಡು ಒಮ್ಮೊಮ್ಮೆ ಲಲಿತಮ್ಮನಿಗೆ ಅಸೂಯೆಯಾಗುತ್ತಿತ್ತು. ಆದರೆ ಅದರಿಂದ ಯಾರಿಗೂ ಹಾನಿಯಿರಲಿಲ್ಲ.

ವಜ್ರದೋಲೆಯ ಆಸೆಗಾಗಿ ಕಿವಿ ಚುಚ್ಚಿಸಿಕೊಳ್ಳಲು ಒಪ್ಪುವ ಹೆಣ್ಣು ಮಗಳಂತೆ ಲಲಿತಮ್ಮ ಸುಮ್ಮನಿದ್ದರು.

ಗಂಡನ ಪ್ರೀತಿಯ ಪ್ರತಿಸ್ಪರ್ಧಿ ಇಂದಿರ. ಆ ಪಿತೃವಾತ್ಸಲ್ಯದ ಮೊನಚು ಲಲಿತಮ್ಮನಿಗೆ ಹಿತವಾದ ನೋವನ್ನುಂಟುಮಾಡುತ್ತಿತ್ತು.

ಇಂದಿರ ದೇವಸ್ಥಾನದ ಗೋಪುರದಂತೆ, ಹೆಣ್ಣಿನ ಕಿವಿಯ ಓಲೆಗಳಂತೆ, ಕೊಳದ ತಾವರೆಯಂತೆ 'ಬೆಳ್ಳಿಮೋಡ'ದ ಮಿನುಗುತಾರೆಯಾಗಿ ಮಿನುಗು ತ್ತಿದ್ದಳು.

ತಾಯಿಗಿಂತಲೂ ಇಂದಿರ ತಂದೆಗೆ ಬಹು ಹತ್ತಿರವಾಗಿದ್ದಳು.

ಲಲಿತಮ್ಮನಿಗೆ ಮಗಳಲ್ಲಿ ಪ್ರೀತಿ ಇಲ್ಲದೆ ಇರಲಿಲ್ಲ. ಆದರೆ ಆಕೆ ಮಗಳನ್ನು ಎಷ್ಟೇ ಪ್ರೀತಿಸಿದರೂ ಕೋಪ ಬಂದಾಗ ಮಗಳ ಮೇಲೆ ರೇಗಿಕೊಳ್ಳು ತ್ತಿದ್ದುದುಂಟು, ಹೀಯಾಳಿಸುತ್ತಿದ್ದುದುಂಟು.

ಯಾವ ಆಕಾರದ ಪಾತ್ರೆಗೂ ಅದರಂತೆ ಹೊಂದಿಕೊಂಡು,ಅದೇ ಆಕಾರ ಪಡೆಯುವ ನೀರಿನಂತೆ,ನಾನಾ ಬಗೆಯ ಭಾವೋದ್ವೇಗಗಳಿಗೆ ಅನುಸಾರವಾಗಿ ಲಲಿತಮ್ಮನ ಮನಸ್ಸು ರಬ್ಬರಿನಂತೆ ಬಾಗಿ, ನಿಂತು, ಕೊಂಕಿ ಸಿಡಿದೇಳು ತ್ತಿತ್ತು.

ಆದರೆ ಸದಾಶಿವರಾಯರ ಮನಸ್ಸು ಬಯಲಿನಂತೆ ಮಟ್ಟವಾಗಿತ್ತು. ಅಲ್ಲಿ ಮಗಳ ಪ್ರೀತಿ ದಿಣ್ಣೆಯೇರದೆ, ಹಳ್ಳಕ್ಕಿಳಿಯದೆ, ಧುಮುಕದೆ, ಜಾರದೆ, ಶಾಂತವಾಗಿ, ನೀರವವಾಗಿ, ಗಂಭೀರವಾಗಿ, ಸುಂದರವಾಗಿ ಹರಿಯುತ್ತಿತ್ತು.

ಇಂದಿರ ಏನು ಮಾಡಿದರೂ ತಂದೆಗೆ ಕೋಪ ಬರುತ್ತಿರಲಿಲ್ಲ. ಇಂದಿರ ಏನು ಕೇಳಿದರೂ ಆತ ಇಲ್ಲವೆನ್ನುತ್ತಿರಲಿಲ್ಲ. ಮಗಳಲ್ಲಿ ಅಪಾರ ಪ್ರೀತಿಯು ಸ್ನಿಟ್ಟಿದ್ದ ರಾಯರು ಕೊನೆಗೆ ಆಕೆ ಕಾಫಿ ತೋಟದ ಒಬ್ಬ ಕುಡುಕ ಕೂಲಿ ಯಾಳನ್ನು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿದ್ದರೂ ಕೂಡಲೇ ತಮ್ಮ ಒಪ್ಪಿಗೆ ಕೊಡುತ್ತಿದ್ದರು.

ಆದರೆ ಮಗಳ ಒಳಿತು, ಕೆಡುಕುಗಳನ್ನು ಕಡೆಗಾಣಿಸುವಷ್ಟು ತಾಯಿಯ ಪ್ರೀತಿ ಕುರುಡಾಗಿರಲಿಲ್ಲ. ಆಕೆ ಇಂದಿರೆಯ ಅಹಿತವನ್ನು ತೆರೆದ ಕಣ್ಣು ತೆರೆದ ಮನಸ್ಸಿನಿಂದ ಪರೀಕ್ಷಿಸಿ, ತಪ್ಪು ಕಂಡುಬಂದರೆ ಬುದ್ಧಿ ಹೇಳಿಯೋ, ನಿಂದಿಸಿಯೋ ದಾರಿಗೆ ತರಲು ಯತ್ನಿಸುತ್ತಿದ್ದರು.

ಇಂದಿರ ಎರಡು ವರ್ಷದ ಮಗುವಾಗಿದ್ದಾಗ, ಒಮ್ಮೆ ರಾಯರು ಮೈಸೂರಿನಿಂದ ತೋಟಕ್ಕೆ ಹಿಂತಿರುಗಿ ಬರುವಾಗ ನಂಜನಗೂಡಿನ ರಸ ಬಾಳೆಯ ಹಣ್ಣುಗಳನ್ನು ಕೊಂಡು ತಂದಿದ್ದರು.

ತಂದೆ ಬಂದ ಕೂಡಲೇ ಪುಟ್ಟ ಇಂದಿರ ಹಾರುತ್ತಾ ಆತನ ಬಳಿಗೆ ಬಂದು "ಅಣ್ಣಾ ನಂಗೆ ಹಣ್ಣು"—ಎಂದಳು.

ರಾಯರು ಕೂಡಲೇ ಸುಮಾರು ಎರಡು ಡಜನ್ನು ಹಣ್ಣುಗಳನ್ನು ತೆಗೆದು ಮಗಳ ಮುಂದಿಟ್ಟರು.

ಇಂದಿರ ರುಚಿಯಾದ ಹಣ್ಣುಗಳನ್ನು ಸುಲಿದು, ತಿನ್ನತೊಡಗಿದಳು.

ಒಂದಾಯಿತು .. ಎರಡಾಯಿತು....ಮೂರಾಯಿತು.

ಇಂದಿರ ನಾಲ್ಕನೆಯ ಹಣ್ಣಿಗೆ ಕೈಹಾಕಿದಾಗ ಅಲ್ಲಿಗೆ ಬಂದ ಲಲಿತಮ್ಮ ಓಡಿಬಂದು ಮಗಳ ಕೈಲಿದ್ದ ಹಣ್ಣನ್ನು ಬಲವಂತವಾಗಿ ಕಿತ್ತಿರಿಸಿಕೊಂಡರು.

ಇಂದಿರ ಅಳತೊಡಗಿದಳು. ಲಲಿತಮ್ಮ ರಾಯರ ಮೇಲೆ ರೇಗಿದರು. "ಅರಿಯದ ಮಗು ಒಂದಾದ ಮೇಲೊಂದು ಬಾಳೆಹಣ್ಣು ತಿನ್ನುತ್ತಿದ್ದರೂ ಸುಮ್ಮನೆ ಕೂತಿದೀರಲ್ಲ ?"

"ಪಾಪ ! ಆಸೆಯಿಂದ ತಿನ್ನುತ್ತಿದ್ದಳು."

"ಒಳ್ಳೆಯ ಪ್ರೀತಿ ನಿಮ್ಮದು, ಮಗೂಗೆ ಬಾಳೆಹಣ್ಣು ಇಷ್ಟ. ನಿಜ. ರಸಬಾಳೆ ಹಣ್ಣಾದರೂ ದಿನಕ್ಕೊಂದು ಸಾಕು. ಮಗುವಿನ ಮೇಲೆ ಪ್ರೀತಿಯಿದ್ದ ಮಾತ್ರಕ್ಕೆ ಅವಳು ಎಷ್ಟು ಹಣ್ಣು ತಿಂದರೂ ತಿನ್ನಲಿ ಎಂದು ಸುಮ್ಮನಿದ್ದರೆ ಹೇಗೆ ? ನಾಳೆ ಅವಳು ಜ್ವರ ಬಂದು ಮಲಗಿದರೋ ?"

"ನಿನ್ನ ಮಾತು ನಿಜ. ಅಲ್ಲಿಯವರೆವಿಗೆ ನನ್ನ ಮನಸ್ಸು ಹೋಗಿರಲಿಲ್ಲ. ಈಗ ತಿಳಿಯಿತು"—ಎಂದಿದ್ದರು ರಾಯರು.

ರಾಯರ ಪ್ರೀತಿ ಮುಂದಾಲೋಚನೆಯನ್ನು ಮಾಡುತ್ತಿರಲಿಲ್ಲ. ತಾಯಿಯ ಅಂಕೆ, ಆಜ್ಞೆ, ಯಾವುದೂ ಇಲ್ಲದಿದ್ದರೆ ಇಂದಿರ ಹಠಮಾರಿಯಾಗುತ್ತಿದ್ದಳೋ ಏನೋ ?

ಕಾರು ಗಿಡ ಮರಗಳನ್ನೂ, ಕಾಫಿ ತೋಟಗಳನ್ನೂ ಹಿಂದೆ ಹಾಕಿ ಕೆಂಪು ಧೂಳಿನ ಹೊಗೆಯನ್ನೆಬ್ಬಿಸುತ್ತಾ ಧಾವಿಸಿತ್ತು.

ಲಲಿತಮ್ಮ ಸೀಟಿಗೊರಗಿ ಕಣ್ಣು ಮುಚ್ಚಿದ್ದರು.

ರಾಯರು ಬಳಲಿದ್ದ ಲಲಿತಮ್ಮನನ್ನೇ ನೋಡುತ್ತಿದ್ದರು. ಅವರ ಮನಸ್ಸಿನ ಮುಂದೆ ಹಳೆಯ ನೆನಪುಗಳು ಹಾದುಹೋದವು.

ತಾವು ಆಕೆಯನ್ನು ಮದುವೆಯಾದುದು—ಹುಚ್ಚುಚ್ಚಾಗಿ ನಡೆಸಿದ ಪತ್ರವ್ಯವಹಾರ—ಆಕೆ ತಮ್ಮ ಮನೆಗೆ ಬಂದುದು, ಯೌವನದಆಟಗಳು—

ಆಕೆ ಎಷ್ಟು ಬಗೆಯಲ್ಲಿ, ಎಷ್ಟು ರೂಪಗಳಲ್ಲಿ ತನಗೆ ಸುಖ, ಸಂತೋಷ, ತೃಪ್ತಿ ಕೊಟ್ಟಿದ್ದಳು.

ಲಲಿತ ಸಹಸ್ರನಾಮದೊಡನೆಯೇ ರಾಯರಿಗೆ ಬೆಳಗಾಗುತ್ತಿತ್ತು.

ಹಾಸಿಗೆಯಿಂದ ಎದ್ದವರೇ 'ಲಲಿತಾ' ಎನ್ನುತ್ತಿದ್ದರು. ಮನೆಯಲ್ಲಿ ಎಷ್ಟೇ ಸೇವಕರಿರಲಿ, ರಾಯರ ಸೇವೆಯನ್ನು ಲಲಿತಮ್ಮನೇ ಮಾಡುತ್ತಿದ್ದರು. ಇತರರಿಗೆ ರಾಯರನ್ನೊಪ್ಪಿಸಿದರೆ ಹೇಗೋ ಏನೋ? ಯಾರಲ್ಲಿಯೂ ಲಲಿತಮ್ಮನಿಗೆ ನಂಬಿಕೆಯಿರಲಿಲ್ಲ.

ಹಲ್ಲುಜ್ಜುವ ಬ್ರಷ್ಷಿಗೆ ಪೇಸ್ಟು ಹಾಕಿಕೊಡುವುದರಿಂದ ಆಕೆಯ ಪತಿಸೇವೆ ಪ್ರಾರಂಭವಾಗುತ್ತಿತ್ತು.

'ಮಿನುಗುತಾರೆ'ಯಲ್ಲಿ ಇಂದಿರೆಯ ಆಗಮನವಾಗುವವರೆವಿಗೆ ಲಲಿತಮ್ಮ ನಿಗೆ 'ಬೆಳ್ಳಿಮೋಡ'ವೇ ಮಗುವಾಗಿತು.

ತೋಟದ ಆರೈಕೆಯಲ್ಲಿ, ಪೋಷಣೆಯಲ್ಲಿ, ಮೇಲ್ವಿಚಾರಣೆಯಲ್ಲಿ ಆಕೆಯ ದಿನದ ಬಹು ಭಾಗ ಕಳೆದುಹೋಗುತ್ತಿತ್ತು.

ಇಂದಿರ ಬಂದ ನಂತರ ಆಕೆಯ ಗಮನವೆಲ್ಲವೂ ಮಗಳ ಕಡೆಗೆ ತಿರುಗಿತು.

ಮಗಳು ದೊಡ್ಡವಳಾಗುತ್ತಾ ಬಂದಂತೆ ಲಲಿತಮ್ಮ ತೋಟದ ಜವಾಬ್ದಾರಿಯನ್ನೂ ರಾಯರ ಆರೈಕೆಯನ್ನೂ ಮಗಳಿಗೆ ಒಪ್ಪಿಸಿ ಹೆಜ್ಜೆ ಹೆಜ್ಜೆಯಾಗಿ ಹಿಂದೆ ಸರಿಯತೊಡಗಿದ್ದರು.

ತಾಯಿಗೆ ಮಗಳಲ್ಲಿ ಸಂಪೂರ್ಣ ನಂಬಿಕೆಯಿತ್ತು.

ತಾಯಿ ತನ್ನಲ್ಲಿಟ್ಟಿದ್ದ ನಂಬಿಕೆಯನ್ನು ಇಂದಿರ ಸುಳ್ಳುಮಾಡಲಿಲ್ಲ.

ನಿನ್ನೆ ಮೊನ್ನೆ ಅಂಬೆಗಾಲಿಡುತ್ತಿದ್ದ ಇಂದಿರ ಈಗ ವಧುವಾಗಿದ್ದಳು. ನಿನ್ನೆ ಇಂದಿರೆಯಂತಿದ್ದ ಲಲಿತ ಈಗ ಅರೆನೆರೆತ ತಲೆಗೂದಲಿನ ಹೆಂಗಸಾಗಿದ್ದಳು.

ದೇಹದ ಹೂವಿನಲ್ಲಿ ಯೌವನದ ಕಂಪು ಮಾಸತೊಡಗಿತ್ತು.

ಮುಪ್ಪಿನ ಮುದುಕಿ ಎನಿಸಿಕೊಳ್ಳುವ ವಯಸ್ಸು ಲಲಿತಮ್ಮನಿಗಾಗಿರಲಿಲ್ಲ. ಆದರೂ ಅನಾರೋಗ್ಯದ ಪರಿಣಾಮವಾಗಿ ಆಕೆ ವಯಸ್ಸಿಗೆ ಮುಂಚೆಯೇ ಮುದುಕಿಯಾಗತೊಡಗಿದ್ದರು.

'ನರ್ಸಿಂಗ್ ಹೋಂ' ಮುಂದೆ ಡ್ರೈವರು ಕಾರನ್ನು ನಿಲ್ಲಿಸಿದ. ರಾಯರು ಮೊದಲು ಕೆಳಗಿಳಿದು ನಂತರ ತಮ್ಮ ಕೈಕೊಟ್ಟು ಹೆಂಡತಿಯನ್ನು ನಿಧಾನವಾಗಿ ಇಳಿಸಿಕೊಂಡರು.

'ನರ್ಸಿಂಗ್ ಹೋಂ'ನ ಮುಖ್ಯ ವೈದ್ಯರು ತಾವೇ ಬಾಗಿಲಿಗೆ ಬಂದು ರಾಯರನ್ನು ಸ್ವಾಗತಿಸಿದರು.

ಚಿಕ್ಕಮಗಳೂರಿನ ಪ್ರಮುಖ ಕಾಫಿ ತೋಟವೊಂದರ ಒಡೆಯರಾದ ಆ ಶ್ರೀಮಂತರ ಪರಿಚಯ ಆಕೆಗಿತ್ತು..

ಆಕೆ ಸುಮಾರು ಮುಕ್ಕಾಲು ಗಂಟೆಯ ಕಾಲ ಲಲಿತಮ್ಮನನ್ನು ಪರೀಕ್ಷಿಸಿದರು. ಕೊನೆಗೆ ಅನುಮಾನಿಸುತ್ತಾ ಡಾಕ್ಟರು ಕೇಳಿದರು.

"ನಿಮಗೆ ಎಷ್ಟು ವರ್ಷ?"

"ನಲವತ್ತೇಳು ವರ್ಷ."

ಆಕೆ ಮತ್ತೆ ರೋಗಿಯನ್ನು ಪರೀಕ್ಷಿಸಿ ಕೊನೆಗೆ ಹಿಂಜರಿಯುತ್ತಾ ಹೇಳಿದರು.

"ನಿಮಗೆ ಖಾಯಿಲೆ ಏನೂ ಇಲ್ಲ."

"ಮತ್ತೆ ನಾನು ಹೀಗೇಕಿದೀನಿ."

"ನಿಮಗೆ ಮೂರು ತಿಂಗಳಾಗಿದೆಯೆಂದು ತೋರುತ್ತದೆ."

"ಈ ವಯಸ್ಸಿನಲ್ಲಿ ! ಇಷ್ಟು ವರ್ಷಗಳ ನಂತರ? ನನಗೇನೋ ನಂಬಿಕೆಯಿಲ್ಲ"—ಲಲಿತಮ್ಮ ಖಂಡಿತವಾಗಿ ಹೇಳಿದರು.

"ಇನ್ನೆರಡು ತಿಂಗಳು ಕಾದು ನೋಡಿದರೆ ಆಗ ತಾನಾಗಿಯೇ ತಿಳಿಯುತ್ತದೆ."

"ಹಾಳು ಕಾಟ ಹೋಯಿತೇನೋ ಎಂದು ನಾನು ನಿರಾತಂಕವಾಗಿದ್ದೆ. ಆದರೆ ಪರಿಸ್ಥಿತಿ ಹೀಗಿರಬಹುದು ಎಂದು ನನಗೆ ಅನುಮಾನವೇ ಬರಲಿಲ್ಲ."

"ನೀವು ತುಂಬಾ ದುರ್ಬಲರಾಗಿದೀರಿ. ವಯಸ್ಸಾದ ಮೇಲೆ ತಾಯಿಯಾಗಲಿದ್ದೀರಿ. ನೀವು ಬಹಳ ಹುಷಾರಾಗಿರಬೇಕು."

"ನನಗೇನೋ ನಿಮ್ಮ ಮಾತಿನಲ್ಲಿ ನಂಬಿಕೆಯಿಲ್ಲ"—ಎಂದರು ಲಲಿತಮ್ಮ ಕ್ಷೀಣ ದನಿಯಲ್ಲಿ.

"ಇಂತಹ ವಿಷಯದಲ್ಲಿ ನಾನು ತಪ್ಪುಮಾಡಲಾರೆ ಎಂದುಕೊಂಡಿದ್ದೇನೆ."

ಲಲಿತಮ್ಮನ ಮನಸ್ಸು ಇಂದಿರೆಯನ್ನು ನೆನೆಸಿತು.

ಇಷ್ಟು ವರ್ಷಗಳ ನಂತರ ತಾನು ಪುನಃ ತಾಯಿಯಾಗುವುದೇ !

ಛೀ. ಮದುವೆಗೆ ನಿಂತಿರುವ ಮಗಳನ್ನು ಮನೆಯಲ್ಲಿರಿಸಿಕೊಂಡು ತಾನು ಎಳೆಯ ಮಗುವನ್ನು ಎತ್ತಿಕೊಳ್ಳುವುದೇ ?

ನ್ಯಾಯವಾಗಿ ಆಗಿದ್ದರೆ ಇಷ್ಟು ಹೊತ್ತಿಗೆ ಇಂದಿರೆಗೆ ನಾಲ್ಕಾರು ಜನ ತಮ್ಮ, ತಂಗಿಯರಿರಬಹುದಾಗಿತ್ತು. ಚಿಕ್ಕ ವಯಸ್ಸಿನಲ್ಲಿ ಒಬ್ಬ ಮಗಳ ತಾಯಿಯಾಗಿ ಈಗ ಈ ಇಳಿವಯಸ್ಸಿನಲ್ಲಿ ಪ್ರಾಯದ ಮಗಳ ಎದುರಿಗೆ ತಾನು ಈ ಸ್ಥಿತಿಯಲ್ಲಿ ತಲೆ ಎತ್ತಿಕೊಂಡು ಓಡಾಡುವುದಾದರೂ ಹೇಗೆ ?

ಇಂದಿರ ಎಷ್ಟು ನಗುವಳೋ ?

ಊಹೂಂ, ಇಂದಿರ ಅಷ್ಟು ಹಗುರ ಮನಸ್ಸಿನ ಹುಡುಗಿಯಲ್ಲ. ಅವಳ ತೂಕದ ಮನಸ್ಸು ತನಗೆ ತಿಳಿದಿತ್ತು.

ಆದರೂ ಏನೋ ಮಾಡಬಾರದ ತಪ್ಪುಮಾಡಿದವಳಂತೆ ತನ್ನದೆಯೇಕೆ ಸಂಕೋಚ, ಅಪಮಾನ, ನಾಚಿಕೆಯಿಂದ ಹಿಡಿಯಾಗಿಹೋಗಿದೆ ?

ಇಂದಿರೆಗೆ ಮುಖ ತೋರಿಸುವುದು ಹೇಗೆ ?

ಈ ಪ್ರಶ್ನೆಯೊಡನೆ ಸೆಣಸಾಡುತ್ತಾ ಲಲಿತಮ್ಮ ಹೊರಗೆ ಬಂದರು. ಆಕೆಯ ಹಿಂದೆಯೇ ಲೇಡಿ ಡಾಕ್ಟರು ಈಚೆಗೆ ಬಂದರು.

ಒಳಗೆ ಹೋಗುವಾಗ ಬಿಳಿಚಿಕೊಂಡಿದ್ದ ಲಲಿತಮ್ಮನ ಮುಖ ಹೊರಗೆ ಬರುವಾಗ ಕೆಂಪಗಾಗಿತ್ತು.

ರಾಯರು ಆತಂಕದಿಂದ ಕೇಳಿದರು.

"ಏನಾಗಿದೆ ಡಾಕ್ಟರ್ ?"

"ಏನೂ ಇಲ್ಲ. ಸ್ವಲ್ಪ ವಯಸ್ಸಾದ ಮೇಲೆ ಹೀಗಾಗಿರುವುದರಿಂದ ಬಳಲಿದಾರೆ. ಒಳ್ಳೆಯ ಟಾನಿಕ್ಕು, ವಿಟಮಿನ್ 'ಬಿ' ಮಾತ್ರೆಗಳನ್ನು ಬರೆದುಕೊಡುತ್ತೇನೆ. ಪುಷ್ಟಿಯಾದ ಆಹಾರ ತೆಗೆದುಕೊಳ್ಳಲಿ. ವಾರ ಕ್ಕೊಂದು ಸಲ ಇಲ್ಲಿಗೆ ಬಂದು ಪರೀಕ್ಷಿಸಿಕೊಂಡು ಹೋಗಲಿ."

"ಸರಿ, ಹಾಗೇ ಹಾಗಲಿ. ಆಕೆಗೇನಾಗಿದೆ ಎಂದು ಕೇಳಬಹುದೇ ?"

"ಚಿಕ್ಕಮಗಳೂರಿಗೆ ಸಕ್ಕರೆ ಹಂಚುವ ಕೆಲಸ ನಿಮಗೆ ಬರಲಿದೆ. ಕೇವಲ ಕಾಫಿ ಬೀಜ ಸರಬರಾಜು ಮಾಡಿದರಾಗದು—" ಎಂದರಾಕೆ ನಗುತ್ತಾ.

"ಓ !"—ಎಂದರು ರಾಯರು.

ಅವರ ಮುಖವೂ ಕೆಂಪೇರಿತು. ಒಂದು ಕ್ಷಣ ತಲೆ ತಗ್ಗಿಸಿ ಕುಳಿತಿದ್ದು ನಂತರ ಎದ್ದು ಹೆಂಡತಿಯೊಡನೆ ನಿಧಾನವಾಗಿ ಹೊರಗೆ ಬಂದರು.

ಅವರು ಕಾರು ಹತ್ತುತ್ತಿರುವಾಗ ನರ್ಸೊಬ್ಬಳು ಓಡಿಬಂದು ಡಾಕ್ಟರು ಕೊಟ್ಟಿದ್ದ ಔಷಧಿ, ಮಾತ್ರೆಗಳ ಚೀಟಿಯನ್ನು ರಾಯರ ಕೈಗೆ ಕೊಟ್ಟು ಹೋದಳು.

ಡಾಕ್ಟರ ಶಾಪಿನ ಮುಂದೆ ಕಾರು ನಿಂತಾಗ ಅದುವರೆವಿಗೂ ಮೂಕಿ ಯಂತಿದ್ದ ಲಲಿತಮ್ಮ ಹೇಳಿದಳು.

"ನಂಗೆ ಔಷಧಿ ಬೇಡ."

ರಾಯರು ಹೆಂಡತಿಗೆ ಉತ್ತರ ಕೊಡುವ ಪ್ರಯತ್ನವನ್ನೂ ಮಾಡದೆ ತಾವೇ ಕೆಳಗಿಳಿದು ಹೋದರು.

ಅಲ್ಲಿಂದ ಹಣ್ಣುಗಳನ್ನು ಕೊಂಡು ಮತ್ತೆ ಕಾರಿನಲ್ಲಿ ಕುಳಿತರು.

ಬೆಳ್ಳಿಮೋಡ ಸೇರುವವರೆವಿಗೆ ಇಬ್ಬರೂ ಒಬ್ಬರ ಕಡೆ ಒಬ್ಬರು ತಿರುಗ ಲಿಲ್ಲ. ಅವರಿಬ್ಬರ ನಡುವೆ ಯಾವ ಮಾತೂ ನಡೆಯಲಿಲ್ಲ.

ತಾಯಿ, ತಂದೆಯ ಆಗಮನವನ್ನು ಆತಂಕದಿಂದ ನಿರೀಕ್ಷಿಸುತ್ತಾ ಇಂದಿರ ಪುಟ್ಟ ದಿಬ್ಬವೊಂದರ ಮೇಲೆ ನಿಂತಿದ್ದಳು.

ಮಗಳನ್ನು ನೋಡಿ ರಾಯರ ಮುಖದ ಮೇಲೆ ಮಂದಹಾಸ ಹರಡಿತು. ಲಲಿತಮ್ಮ ಕೊಂಚ ಗೆಲುವಾದರು.

ಯಾವಾಕೆಯ ದರ್ಶನಮಾತ್ರದಿಂದ ತಮ್ಮಿಬ್ಬರ ಹೃದಯದಲ್ಲಿ ಅಮೃತ ಸಂಚಾರವುಂಟಾಗುವುದೋ, ಆ ಅಮೃತ ವರ್ಷದಿಂದ ತಮಗಾಗುವ ಸುಖ, ಆನಂದ ಮತ್ತೊಂದು ಜೀವಿಯ ಆಗಮನದಿಂದ ಮತ್ತೆ ಆಗಲಿದೆ.

ಯಾಕಾಗಬಾರದು ?

ಈಗ ರಾಯರು ಹೆಂಡತಿಯ ಕಡೆ ತಿರುಗಿದರು. ಲಲಿತಮ್ಮನೂ ರಾಯರನ್ನು ನೋಡಿದರು. ಇಬ್ಬರೂ ನಕ್ಕರು.

ರಾಯರು ಪಿಸುಗುಟ್ಟಿದರು.

"ಇಂದಿರೆಯಂತಹ ಮತ್ತೊಂದು ಮಗುವನ್ನು 'ಬೇಡ' ಎನ್ನುವ ಧೈರ್ಯ ನಮಗಿದೆಯೇ ?"

"ಆದರೂ ಈ ವಯಸ್ಸಿನಲ್ಲಿ...."

"ಇಂದಿರೆಯ ಬೆನ್ನ ಹಿಂದೆ ನಾಲ್ಕಾರು ಆಗಿದ್ದರೆ ಆಗ ಸುಮ್ಮನೆ ಇರುತ್ತಿದ್ದೆವು. ಈಗ ಸ್ವಲ್ಪ ತಡವಾಗಿದೆ. ಇಂದಿರೆಯನ್ನು ಗಂಡನ ಮನೆಗೆ ಕಳುಹಿಸಿ ನಾವಿಬ್ಬರೇ ಹೇಗೆ ಈ ಮನೆಯಲ್ಲಿ ಇರುವುದು ಎಂದು ನನಗೆ ಹಗಲಿರುಳೂ ಯೋಚನೆಯಾಗಿತ್ತು. ಇನ್ನು ಮೇಲೆ ನನಗೆ ಆ ಯೋಚನೆಯಿಲ್ಲ."

"ಬೆಳೆದ ಹುಡುಗಿ ಇಂದಿರ. ಅವಳು ಈ ಸುದ್ದಿ ಕೇಳಿದರೆ ಏನೆಂದು ಕೊಳ್ಳುವಳೋ ?"

"ಅನ್ನುವುದೇನು ? ಹಿಗ್ಗುತ್ತಾಳೆ."

"ನಾನಂತೂ ಈ ಸುದ್ದಿ ಅವಳಿಗೆ ತಿಳಿಸಲಾರೆ."

"ಬೇಡ, ನಾನು ಹೇಳುತ್ತೇನೆ"—ಎಂದರು ರಾಯರು ನಿರಾತಂಕವಾಗಿ.

"ಆದರೂ...." ಎಂದು ಲಲಿತಮ್ಮ ರಾಗ ತೆಗೆಯುವಷ್ಟರಲ್ಲಿ ರಾಯರು

"ಲಲಿತಾ, ನಾನು ತುಂಬಾ ಸಂತೋಷದಿಂದ ಇದ್ದೇನೆ. ಅದಕ್ಕೆ ಭಂಗ ತರಬೇಡ" ಎಂದರು.

"ನಿಜವಾಗಿ !"

"ಹೂಂ."

"ಹಾಗಾದರೆ ನಾನು ಇನ್ನು ಯೋಚನೆ ಮಾಡುವುದಿಲ್ಲ"—ಎಂದು ಲಲಿತಮ್ಮ ನಿಶ್ಚಿಂತೆಯಿಂದ ನುಡಿದರು.

ಕಾರು ಮನೆಯ ಮುಂದಿದ್ದ ಪೋರ್ಟಿಕೋನಲ್ಲಿ ಬಂದು ನಿಲ್ಲುವಷ್ಟರಲ್ಲಿ ಇಂದಿರಾ ದಿಬ್ಬವಿಳಿದು ಬಳಸುದಾರಿಯಲ್ಲಿ ಬಾರದೆ ಅಡ್ಡದಾರಿ ಹಿಡಿದು ಮತ್ತೆ ಮನೆಯ ಮುಂದೆ ಬಂದು ನಿಂತಿದ್ದಳು.

ಮಗಳಿಗೆ ಗಾಬರಿಯಾಗದಿರಲೆಂದೋ ಏನೋ ರಾಯರು ನಗುಮುಖ ಮಾಡಿಕೊಂಡು ಕೆಳಗಿಳಿದರು. ನಂತರ ಹೆಂಡತಿಯನ್ನು ಹುಷಾರಾಗಿ ಇಳಿಸಿಕೊಂಡರು.

ಇಂದಿರ ಹತ್ತಿರ ಬಂದು ಕೇಳಿದಳು.

"ಏನಾಗಿದೆಯಂತಣ್ಣ ?"

ರಾಯರು ಅಚ್ಚರಿ ನಟಿಸಿ

"ಅರೆ ! ನೀನು ಇಲ್ಲಿ ! ನಾವು ಬರುವಾಗ ದಿಬ್ಬದ ಮೇಲೊಬ್ಬ ಇಂದಿರೆಯನ್ನು ನೋಡಿದೆವು. ಈಗ ಇಲ್ಲೊಬ್ಬಳು ಇಂದಿರ ನಿಂತಿದ್ದಾಳೆ. ಹಾಗಾದರೆ ನಮ್ಮ ಮನೆಯಲ್ಲಿ ಇಬ್ಬರು ಇಂದಿರೆಯರಿದ್ದಾರೆಯೇ !" ಎಂದರು.

ಇಂದಿರಾ ತಂದೆಯನ್ನು ಹಿಂಬಾಲಿಸಿ ಒಳಗೆ ಬಂದಳು. ಆತಂಕದಿಂದ ಮತ್ತೆ ಕೇಳಿದಳು.

"ಏನಾಗಿದೆಯಂತಣ್ಣ ?"

"ನನ್ನ ಪ್ರಶ್ನೆಗೆ ಮೊದಲು ಉತ್ತರ ಹೇಳು."

"ನಿನ್ನ ಪ್ರಶ್ನೆ ಏನು ?"

"ನಮ್ಮ ಮನೆಯಲ್ಲಿ ಇಬ್ಬರು ಇಂದಿರೆಯರಿದ್ದಾರೆಯೇ ?"

ಇಲ್ಲ. ಇರುವವಳು ನಾನೊಬ್ಬಳು. ಹುಡುಗಾಟ ಸಾಕು. ಹೇಳಣ್ಣ."

"ನಿನ್ನ ಉತ್ತರ ತಪ್ಪು. ನಮ್ಮ ಮನೆಯಲ್ಲಿ ಇಬ್ಬರು ಇಂದಿರೆಯರಿದ್ದಾರೆ."

"ಹೋಗಣ್ಣ."

"ನನ್ನೆದುರಿಗೆ ನಿಂತಿರುವವಳೊಬ್ಬಳು."

ಇಂದಿರೆಯೂ ತಂದೆಯ ಹಾಸ್ಯದಲ್ಲಿ ಬೆರೆತುಕೊಂಡು "ಹೂಂ ಹೂಂ ಹೌದು. ಇಲ್ಲೊಬ್ಬಳು, ಬೆಟ್ಟದ ದಾರಿಯಲ್ಲಿ ದಿಬ್ಬದ ಮೇಲೆ ನಿಂತಿರುವವಳೊಬ್ಬಳು" ಎಂದಳು.

"ಊಹೂಂ. ಅಲ್ಲೂ ತಪ್ಪಿದೆ. ಇನ್ನೊಬ್ಬಳು ಬೆಟ್ಟದ ದಾರಿಯಲ್ಲಿನ ದಿಬ್ಬದ ಮೇಲಿಲ್ಲ."

"ಇನ್ನೊಬ್ಬಳು ಎಲ್ಲಿದ್ದಾಳೆ ?"

"ನಿಮ್ಮಮ್ಮನ ಹತ್ತಿರ."

"ಹೋಗಣ್ಣ. ಎಲ್ಲಾ ಹೀಗೇನೇ...."

"ಇನ್ನು ಆರು ತಿಂಗಳಿಗೆ ನಮ್ಮಿಬ್ಬರ ಹತ್ತಿರ ಬರುತ್ತಾಳೆ."

ಇಂದಿರೆಯ ಮಾತು ಅರ್ಥಕ್ಕೇ ನಿಂತುಹೋಯಿತು. ಅವಳ ಕಣ್ಣುಗಳು

ಬೆಳಕಿನ ಹೊಳೆಯಂತೆ ಹೊಳಪೇರಿದವು. ಆ ಹೊಳೆ ಕಣ್ಣುಗಳಂಚಿನಿಂದ ಧುಮುಕಿ ಕೆನ್ನೆಯ ಮೇಲೆ ಹರಿದಾಡಿ, ತುಟಿಯ ಮೇಲೆ ಹರಡಿಕೊಂಡಿತು. ಮುತ್ತಿನ ಸಾಲಿನಂತಹ ಎರಡುಸಾಲು ಹಲ್ಲು ತುಟಿಯ ಹಿಂದೆ ಮಿನುಗಿದವು.

ಜೋಡಿ ನಕ್ಷತ್ರದ ಹೊಳಪನ್ನು ನೋಡಿ ರಾಯರು ಸೆಳೆಯಲ್ಪಟ್ಟು ಹತ್ತಿರ ಬಂದರು.

ಇಂದಿರಾ ಇನ್ನೂ ತಂದೆ ಹೃದಯದಲ್ಲಿ ನಾಟಿದ ಸುದ್ದಿಯನ್ನು ಮೆಲುಕು ಹಾಕುತ್ತಿದ್ದಳು. ರಾಯರು ಅವಳ ಬೆನ್ನುತಟ್ಟಿ ಎಚ್ಚರಿಸಿ ಮೆಲ್ಲನೆ

"ಇಂದಿರಾ" ಎಂದರು.

"ಏನಣ್ಣ ?"

"ಇನ್ನು ಮೇಲೆ ಲಲಿತ ನಿನ್ನ ತಾಯಿಯಲ್ಲ."

"ಹೂಂ. ಇನ್ನೊಬ್ಬ ಇಂದಿರೆಯ ತಾಯಿ."

"ಅಲ್ಲ. ಆ ಇಂದಿರ ಬರುವವರೆವಿಗೂ ಲಲಿತ ನಿನ್ನ ಮಗಳು. ನೀನು ಅವಳ ತಾಯಿ."

ತನ್ನ ಹೃದಯದಲ್ಲಿ ತುಂಬಿಬಂದ ಹರ್ಷವನ್ನೆಲ್ಲಾ ಒಂದು ಸುಂದರ ನಗೆ ಯಲ್ಲಿ ತುಳುಕಿಸಿ ಇಂದಿರಾ ಹೊರಗೆ ಹೋದಳು.

ಲಲಿತಮ್ಮನಿಗೆ ಮಗಳ ಮುಖ ನೋಡಲೂ ನಾಚಿಕೆಯಾಯಿತು. ತನ್ನ ಬಳಿಗೆ ತೇಲಿಬಂದ ಮಂದಮಾರುತಕ್ಕೆ ಮೈಯೊಡ್ಡಿ ಕುಳಿತುಕೊಳ್ಳುವ ಬಳಲಿದ ಪಥಿಕನಂತೆ—ಲಲಿತಮ್ಮ ಮಗಳ ಆಗಮನವನ್ನು ನಿರೀಕ್ಷಿಸಿ ಕುಳಿತಿದ್ದರು.

ಆದರೂ ಆಕೆಗೆ ಸಂಕೋಚವೆನಿಸಿತು.

"ಅಮ್ಮಾ"—ಇಂದಿರ ಕೂಗಿದಳು.

ಲಲಿತಮ್ಮ ಮಾತನಾಡಲಿಲ್ಲ.

"ಇನ್ನು ಮೇಲೆ ಊಟ, ತಿಂಡಿ, ಆರೈಕೆಯ ವಿಷಯದಲ್ಲಿ ನಾನು ಹೇಳಿದ ಹಾಗೆ ನೀನು ಕೇಳಬೇಕು."

ಕೆಲವು ವಿಷಯಗಳಲ್ಲಿ ಮಗಳು ಎಷ್ಟು ಕಠಿಣಳು ಎಂಬುದು ತಾಯಿಗೂ ತಿಳಿದಿತ್ತು.

ಆಕೆ ಕುಗ್ಗಿ ನುಡಿದರು.

"ಇಂದಿರಾ, ನೀನು ನನ್ನ ಸ್ಥಿತಿಯಲ್ಲಿರಬೇಕಾಗಿತ್ತು. ಆಗ ಅದು ನ್ಯಾಯವಾಗುತ್ತಿತ್ತು ! ಈಗ...ಇದು....ಅನ್ಯಾಯ...."

"ನ್ಯಾಯ, ಅನ್ಯಾಯದ ವಿಷಯ ಆಮೇಲಾಗಲಿ. ಈ ಬಗೆಯ ಮನೋ

ಭಾವ ಮೊದಲು ನಿನ್ನಿಂದ ದೂರವಾಗಲಿ. ಅದು ನನ್ನ ಮೊದಲನೆಯ ಕೆಲಸ."

"ಇಂದಿರಾ...."

"ಏನಮ್ಮ ?"

"ಮೋಹನನಿಗೆ ಕಾಗದ ಬರೆಯುವಾಗ ಈ ವಿಷಯ ಮಾತ್ರ ಬರೆಯ ಬೇಡ, ನನ್ನಾಣೆಯಿದೆ. ನಮ್ಮ ಅತ್ತೆಗೇನು ಬಂತು ಕೇಡು ಈ ಮುದಿ ವಯಸ್ಸಿನಲ್ಲಿ—ಎಂದುಕೊಂಡಾನು."

"ನನಗಾಗುತ್ತಿರುವ ಸಂತೋಷವನ್ನು ಅವರೊಡನೆ ಹಂಚಿಕೊಂಡಾಗಲೇ ನನಗೆ ಸಂಪೂರ್ಣ ತೃಪ್ತಿ."

"ನಿನ್ನ ದಮ್ಮಯ್ಯ ಇಂದಿರಾ, ಹಾಗೆ ಬರೆಯಬೇಡ. ನೀನು ಈ ವಿಷಯ ಅವರಿಗೆ ತಿಳಿಸಿದರೆ ನಾನು ನಿನ್ನ ಕೈಲಿ ಮಾತನಾಡುವುದಿಲ್ಲ."

"ಆಮೇಲಾದರೂ ಅವರಿಗೆ ತಿಳಿದೇ ತಿಳಿಯುತ್ತದೆ."

"ಆಮೇಲೆ ತಿಳಿದರೂ ಪರವಾಗಿಲ್ಲ. ಈಗ ಮಾತ್ರ ನೀನಾಗಲಿ, ಅವರಾಗಲಿ ತಿಳಿಸಬಾರದು. ನಾನಂತೂ ಅಳಿಯನಿಗೆ ಮುಖ ತೋರಿಸುವುದು ಹೇಗೆಂದು ನಾಚಿಕೆಯಿಂದ ಸಾಯುತ್ತಿದ್ದೇನೆ."

"ಕೆಟ್ಟ ಮಾತನಾಡಬೇಡಮ್ಮ."

"ಯಾವುದಕ್ಕೂ ಒಂದು ವಯಸ್ಸು, ಕಾಲ ಇದೆ ಇಂದಿರಾ. ಅದು ಮೀರಿದ ಮೇಲೆ ಯಾವುದೂ ಚೆನ್ನಾಗಿರೋದಿಲ್ಲ. ನನಗಾಗುವಬದಲು ನೀನಾಗಿದ್ದರೆ."

ಇಂದಿರ ಕುಚೇಷ್ಟೆಯಿಂದ ನಕ್ಕು ಕಣ್ಣರಳಿಸಿ

"ಮದುವೆಗೆ ಮುಂಚೆ ? ಆಮೇಲೆ ನೀನು ನನ್ನ ಮನೆಬಿಟ್ಟು ಓಡಿಸುತ್ತಿದ್ದೆ" ಎಂದಳು.

"ನಿನಗೆ ಮದುವೆಯಾಗಿ ನೀನು ಆಗಿದ್ದಿದ್ದರೆ ? ನಾನೆಷ್ಟು ಸಂಭ್ರಮ ಪಡುತ್ತಿದ್ದೆ ಗೊತ್ತೆ?"

"ಈಗ ನಾನು ಅಷ್ಟೇ ಸಂಭ್ರಮಪಡುತ್ತಿದ್ದೇನೆ."

ಇಂದಿರ ಈ ಮಾತಿನ ಮಟ್ಟಿಗೆ ಖಂಡಿತವಾಗಿಯೂ ಸುಳ್ಳಾಡಿರಲಿಲ್ಲ.

ಮದುವೆಯಾದ ಬಹಳ ವರ್ಷಗಳ ನಂತರ ಪ್ರೀತಿಯ ಮಗಳು ಮೊದಲ ಬಾರಿ ಬಸಿರಾದರೆ ಹಿಗ್ಗುವ ತಾಯಿಯಂತೆ ಇಂದಿರ ಹಿಗ್ಗುತ್ತಿದ್ದಳು.

ವಿಶಾಲವಾದ 'ಬೆಳ್ಳಿಮೋಡ'ದಲ್ಲಿ ಕೈಲೊಂದು ಕತ್ತಿಹಿಡಿದು ತಿರುಗಾಡುವಾಗ ತನ್ನ ಜೊತೆಗೆ ಯಾರಾದರೂ ಇದ್ದಿದ್ದರೆ ಚೆನ್ನಾಗಿತ್ತು ಎಂದು ಇಂದಿರೆಗೆ ಎನಿಸುತ್ತಿತ್ತು.

ಮಾತನಾಡಲು, ಹರಟೆ ಹೊಡೆಯಲು, ಸುಖದುಃಖ ಹೇಳಿಕೊಳ್ಳಲು ತನಗೊಬ್ಬ ತಮ್ಮನೋ, ತಂಗಿಯೋ ಇದ್ದರೆ ಎಂದವಳು ಯೋಚಿಸುತ್ತಿದ್ದಳು.

ಆ ಯೋಚನೆ ಈಗ ಅವಳ ಮನಸ್ಸಿನಿಂದ ಮಾಸಿತ್ತು.

ಯೋಚನೆ ಅಳಿದ ಮೇಲೆ ಮತ್ತೆ ಅಲ್ಲೊಂದು ಬೆಳಕಿನ ಸುಳಿ ಬಂದಾಗ ಇಂದಿರೆಗೆ ಆದ ಆನಂದ ಅಷ್ಟಿಷ್ಟಲ್ಲ.

ತಮ್ಮನೋ, ತಂಗಿಯೋ ಯಾರಾದರೂ ಸರಿ.

ಮೋಹನ ಬರುವವರೆವಿಗೆ ತನಗೆ ಇನ್ನು ಬೇಸರವಾಗಲಾರದು. ಮುದ್ದಾಡಲು ಎಳೆಯ ಮಗುವೊಂದು ಕೈಗೆ ಸಿಕ್ಕುತ್ತದೆ. ಅದರ ಲಾಲನೆ ಪಾಲನೆಯಲ್ಲಿ ಮೋಹನನಿಗೆ ಪತ್ರ ಬರೆಯುವುದರಲ್ಲಿ ತನ್ನ ವೇಳೆ ಸವೆಯಬಹುದು.

ಮೋಹನ ಈ ಸುದ್ದಿ ಕೇಳಿದರೆ ಎಷ್ಟು ಸಂತೋಷಪಡುವನೋ ?

ಆದರೆ....ಅಮ್ಮ ಹೀಗೇಕೆ ಹೇಳುತ್ತಾಳೆ ?

ಇಂದಿರ ನಿರಾಶೆಯಿಂದ "ಅಮ್ಮ, ಹಾಗಾದರೆ ಅವರಿಗೆ ಈ ವಿಷಯ ತಿಳಿಸಬಾರದೇನಮ್ಮ ?" ಎಂದಳು.

"ಊಹೂಂ. ನನ್ನ ಕೈಮೇಲೆ ಕೈಯಿಟ್ಟು ಹೇಳು."

"ಹಾಗೆ ಹೇಳುವುದಿಲ್ಲ. ಆದರೆ ನಿನಗೆ ವಿರೋಧವಾಗಿ ಎಂದಿಗೂ ಬರೆಯುವುದಿಲ್ಲ. ನನ್ನನ್ನು ನಂಬು.

"ನಿನ್ನಲ್ಲಿ ನಂಬಿಕೆಯಿದೆ"—ಎಂದರು ತಾಯಿ.

"ಆದರೆ ಅಣ್ಣ ತಿಳಿಸಿದರೋ ?"

"ನನ್ನ ಇಷ್ಟಕ್ಕೆ ವಿರೋಧವಾಗಿ ಅವರೆಂದಿಗೂ ಹೋಗುವುದಿಲ್ಲ"—ಎಂದಾಕೆ ನುಡಿಯುತ್ತಿರುವಾಗ ರಾಯರು ಬಂದರು.

"ತಾಯಿ, ಮಗಳು ಬಹಳ ಮಾತನಾಡುತ್ತಿರುವ ಹಾಗಿದೆ."

"ಹೂಂ. ನೋಡಣ್ಣ ಮತ್ತೆ ಅಮ್ಮ...." ಎಂದು ಪ್ರಾರಂಭಿಸಿದಳು ಇಂದಿರ.

"ಅಳಿಯಂದಿರಿಗೆ ಮಾತ್ರ ಈ ಸುದ್ದಿ ತಿಳಿಸಬೇಡಿ ಮಹರಾಯರೆ"—ಎಂದು ಲಲಿತಮ್ಮ ಗಂಡನಲ್ಲಿ ಅಂಗಲಾಚಿಕೊಂಡರು.

"ಯಾಕೆ ?" ರಾಯರಿಗೆ ಅಚ್ಚರಿ.

"ನಂಗೆ ತುಂಬಾ ಹೀನಾಯವಾಗುತ್ತದೆ. ಈ ಮುದಿ ವಯಸ್ಸಿನಲ್ಲಿ ಹೀಗೆ...."

"ಯಾರೂ ಮಾಡದ ತಪ್ಪು ನಾವೇನೂ ಮಾಡಿಲ್ಲವಲ್ಲ. ನೀನೂ ಖುಷಿ

ಪಂಚಮಿ ಮಾಡಿರಲಿಲ್ಲ. ಅಲ್ಲವೇ ?"

"ಸಾಕು ಸುಮ್ಮನಿರಿ. ಇಂದಿರಾ ಬೆಳೆದ ಹುಡುಗಿ"—ಎಂದು ಲಲಿತಮ್ಮ ಮುನಿದು ಹೇಳಿದರು.

"ನೀನು ಬೆಳೆದ ಮಗು"—ರಾಯರು ಕೆಣಕಿದರು.

"ನೀವು ಏನಾದರೂ ಹೇಳಿ. ನನ್ನ ಮಾತು ನಡೆಸಿಕೊಡಿ."

ಹೆಂಡತಿ ಈ ಪರಿಸ್ಥಿತಿಯಲ್ಲಿರುವಾಗ ಯಾವ ಗಂಡ—ಹೆಂಡತಿಯಲ್ಲಿ ನಿಜವಾಗಿಯೂ ಪ್ರೀತಿಯಿರುವ ಗಂಡ—ಅವಳ ಮಾತನ್ನು ಮೀರಿ ನಡೆಯಲು ಸಾಧ್ಯ ?

"ಆಗಲಿ, ಆದರೆ ಆಮೇಲೆ ನೀನೆಷ್ಟು ವಿರೋಧಿಸಿದರೂ ಸಕ್ಕರೇನ ಮಾತ್ರ ಖಂಡಿತ್ವಕಳಿಸುತ್ತೇನೆ."

"ಆಗ ನೋಡಿಕೊಳ್ಳೋಣ—ಎಂದರು ಲಲಿತಮ್ಮ.

* * * *

ಅಂದಿನಿಂದ ಇಂದಿರ ತಾಯಿಗೆ ಉಪಚಾರ ಪ್ರಾರಂಭಿಸಿದಳು. ತಾಯಿಗೆ ದೇಹದಿಂದಾಗಲಿ, ಮನಸ್ಸಿನಿಂದಾಗಲಿ ಕೊಂಚವೂ ಆಯಾಸವಾಗದ ಹಾಗೆ ಇಂದಿರ ನೋಡಿಕೊಳ್ಳುತ್ತಿದ್ದಳು.

ಆಕೆಯ ಬಾಯಿಂದ ಮಾತು ಬರುವುದೇ ತಡ ಅದು ಕೂಡಲೇ ನೆರವೇರುತ್ತಿತ್ತು.

ಮಗಳ ಉಪಚಾರ, ಸೇವೆಯಿಂದ ತಾಯಿ ಕೆಲವು ಬಾರಿ ಪ್ರಸನ್ನಗೊಳ್ಳುತ್ತಿದ್ದರು. ಮತ್ತೆ ಕೆಲವು ಬಾರಿ ಕೋಪಿಸಿಕೊಳ್ಳುತ್ತಿದ್ದರು.

ಲಲಿತಮ್ಮ ಉದ್ವೇಗಗೊಳ್ಳದ್ದಂತೆ, ಯಾವಾಗಲೂ ಸಂತೋಷಚಿತ್ತರಾಗಿರುವಂತೆ ಮಾಡಲು ತಂದೆ, ಮಗಳು ಪ್ರಯತ್ನಿಸುತ್ತಿದ್ದರು.

ಪ್ರತಿದಿನವೂ ಬೆಳಗಿನ ಸಮಯದಲ್ಲಿ ಲಲಿತಮ್ಮ, ರಾಯರು ತೋಟದಲ್ಲಿ ತಿರುಗಾಡಿ ಬರುತ್ತಿದ್ದರು. ಆಗ ಇಂದಿರ ಅವರೊಡನೆ ಹೊರಡುತ್ತಿರಲಿಲ್ಲ. ಅವಳಿಗೆ ಅಡಿಗೆ ಮನೆಯ ಮೇಲ್ವಿಚಾರಣೆ, ತೋಟದ ಕೆಲಸಗಳಲ್ಲಿ ಸಮಯ ಕಳೆದುಹೋಗುತ್ತಿತ್ತು.

ಸಂಜೆ, ಸೂರ್ಯನ ಕಾವು ಅಳಿದ ನಂತರ ಮೂವರೂ ತಿರುಗಾಡಿ ಕೊಂಡು ಬರುತ್ತಿದ್ದರು.

ಎರಡೆರಡು ದಿನಕ್ಕೆ ಮಗಳು ಬಲವಂತದಿಂದ ತಮಗೆ ನೀರು ಹಾಕಿದಾಗಲಂತೂ ಲಲಿತಮ್ಮ ಸಿಡಿದೇಳುತ್ತಿದ್ದರು. ನೀರಾದ ನಂತರ ಸಾಂಬ್ರಾಣಿ, ಹಾಲು

ಮಡ್ಡಿಯಲ್ಲಿ ಕೂದಲು ಕಾಸುವಾಗಲೆಲ್ಲಾ ಲಲಿತಮ್ಮ ಮಗಳಿಗೆ ಹೇಳುತ್ತಿದ್ದರು.

"ಈಗಲ್ಲ ಕಣೆ ಕೂದಲು ಕಾಸೋದು. ಆಮೇಲೆ...."

"ನಾನೇನೋ ಈಗಿನಿಂದಲೇ ಕಾಸುತ್ತೇನೆ"

"ಎಲ್ಲ ಅತಿಯಾಯಿತು ನಿನ್ನದು"—ಎಂದು ಕೋಪಗೊಳ್ಳುತ್ತಿದ್ದರು ತಾಯಿ.

ಪ್ರಾಯದ ಮಗಳು ಮದುವೆಯಿಲ್ಲದೆ ಮನೆಯಲ್ಲಿ ಉಳಿದಿರುವಾಗ ತಾವು ಈ ಸ್ಥಿತಿ ತಂದುಕೊಂಡುದಕ್ಕಾಗಿ ಲಲಿತಮ್ಮ ಒಮ್ಮೊಮ್ಮೆ ಬೇಸರಪಟ್ಟು ಕೊಳ್ಳುತ್ತಿದ್ದರು. ಮಗಳಲ್ಲಿ ತಾವು ಏನೋ ತಪ್ಪುಮಾಡಿದವರಂತೆ, ಅಪರಾಧಿಯಂತೆ ವರ್ತಿಸುತ್ತಿದ್ದರು.

ಗಂಡ—ಮಗಳ ಮಿತಿಮೀರಿದ ಉಪಚಾರಕ್ಕಾಗಿ ಹೀನಾಯಪಟ್ಟು ಕೊಳ್ಳುತ್ತಿದ್ದರು ಲಲಿತಮ್ಮ.

ಹೆಂಡತಿಯನ್ನು ಆಗಾಗ್ಗೆ ಚಿಕ್ಕಮಗಳೂರಿಗೆ ಕಾರಿನಲ್ಲಿ ಕಳುಹಿಸುವುದು ಸರಿತೋರದೆ ರಾಯರು ವೈದ್ಯರನ್ನು ತಮ್ಮಲ್ಲಿಗೇ ಕರೆಸಿಕೊಳ್ಳುತ್ತಿದ್ದರು.

'ಬೆಳ್ಳಿಮೋಡ'ದ ಕೂಲಿಯಾಳುಗಳಿಂದ ಹಿಡಿದು ರಾಯರವರೆವಿಗೆ ಎಲ್ಲರೂ ಸಂಭ್ರಮಪಡುತ್ತಿದ್ದರು.

ಯಾವುದೋ ಒಂದು ಉತ್ಸವವನ್ನು ನಿರೀಕ್ಷಿಸುವ ಆತುರ, ಕಾತರ, ಸಡಗರ 'ಬೆಳ್ಳಿಮೋಡ'ವನ್ನು ಸುತ್ತುಗಟ್ಟಿತ್ತು.

ಇಂದಿರ, ರಾಯರಿಗಿಂತಲೂ ಪುಟ್ಟಯ್ಯನಿಗೆ ಹೆಚ್ಚು ಸಂತೋಷವಾಗಿತ್ತು.

ರಾಯರಲ್ಲಿ ಅಪಾರ ಅಭಿಮಾನವಿದ್ದರೂ, ಗೌರವವೂ ಅಭಿಮಾನದ ಜೊತೆ ಸೇರಿದುದರಿಂದ ಲಲಿತಮ್ಮನಲ್ಲಿ ಪುಟ್ಟಯ್ಯನಿಗಿದ್ದ ಸಲಿಗೆ ರಾಯರಲ್ಲಿ ಇರಲಿಲ್ಲ.

ಲಲಿತಮ್ಮ ಮದುವೆಯಾಗಿ 'ಬೆಳ್ಳಿಮೋಡ'ದ ಒಡತಿಯಾಗಿ ಬಂದಾಗ ಪುಟ್ಟಯ್ಯನೂ ಬಂದು ತೋಟದ ಆಶ್ರಯ ಪಡೆದಿದ್ದ.

'ಅಮ್ಮ ಅಮ್ಮ'—ಎಂದು ಅವನು ಬಿಡುವು ಸಿಕ್ಕಿದಾಗಲೆಲ್ಲ ಆಕೆಯ ಹಿಂದೆ ಮುಂದೆ ಸುತ್ತಾಡುತ್ತಿದ್ದ. ರಾಯರಲ್ಲಿ ಹೇಳಿಕೊಳ್ಳಲಾಗದ ತನ್ನ ಸಂಸಾರದ ಕಷ್ಟ, ಸುಖವನ್ನು ಲಲಿತಮ್ಮನಲ್ಲಿ ಹೇಳಿಕೊಂಡು ಆಕೆಯಿಂದ ಸಲಹೆ ಪಡೆಯುತ್ತಿದ್ದ.

ಲಲಿತಮ್ಮನಲ್ಲಿ ಆತನಿಗೆ ತುಂಬಾ ವಿಶ್ವಾಸ, ಸ್ನೇಹ, ಅಭಿಮಾನವಿತ್ತು.

ಸಮಯ ಸಿಕ್ಕಿದಾಗಲೆಲ್ಲಾ ಇಂದಿರೆಯನ್ನು ಪುಟ್ಟಯ್ಯ ಕೀಟಲೆಮಾಡುತ್ತಿದ್ದ.

"ಅಮ್ಮಯ್ಯ, ಇನ್ನು ಮುಂದೆ ನಿಮ್ಮ ಕಾಲ ಮುಗಿದುಹೋಯಿತು. ಇನ್ನು ಎರಡೇ ತಿಂಗಳು ನಿಮ್ಮ ಆಳ್ವಿಕೆ 'ಬೆಳ್ಳಿಮೋಡ'ದಲ್ಲಿ. ಅಷ್ಟರಲ್ಲಿ ಎಲ್ಲ ವೈಭವವನ್ನೂ ಮುಗಿಸಿಕೊಂಡು ಬಿಡಿ...."

"ಹೋಗಪ್ಪ. ನೀನೊಬ್ಬ...."

"ಆಮೇಲೆ ನಿನ್ನ ಇಲ್ಲಿ ಮಾತನಾಡಿಸುವವರು ಯಾರೂ ಇಲ್ಲ."

"ಅದಕ್ಕೆಂದೇ ನೀನು ಮೋಹನನ ಜೊತೆ ಓಡಿಹೋಗಲು ಹವಣಿಸುತ್ತಿದೀಯೇನೋ ?"—ಪುಟ್ಟಯ್ಯ ಮತ್ತೆ ಕೆಣಕಿದ.

"ಊಹೂಂ. ನಾನು ಅದಕ್ಕಾಗಿ ಓಡಿಹೋಗಬೇಕೆಂದಿಲ್ಲ. ನಿನ್ನ ಕಾಟ ತಡೆಯಲಾರದೆ ಹೊರಟು ಹೋಗಬೇಕೆಂದಿದ್ದೇನೆ."

ಚಿಕ್ಕ ಯಜಮಾನರು ಬರ್‍ತಾರೆ. ಆಮೇಲೆ ನನ್ನ ಕೇಳೋದಿಲ್ಲ ಎಂದು ನಿನಗೆ ಭಯ."

"ಏನಿಲ್ಲ."

"ಅದಿರಲಿ ಅಮ್ಮಯ್ಯ, ನಿನಗೆ ತಮ್ಮ ಬೇಕೋ, ತಂಗಿ ಬೇಕೋ ?"

"ಇಬ್ಬರೂ ಬೇಕು."

"ಅಲ್ಲಿಗೆ ನಾನೇನಾಗಬೇಕು ?"—ಲಲಿತಮ್ಮ ಕೇಳಿದರು.

"ನಿನಗೆ ಯಾರು ಬೇಕು ಇಂದಿರ ?"—ಪುಟ್ಟಯ್ಯ ಮತ್ತೆ ಪ್ರಶ್ನಿಸಿದರು.

"ನನಗೆ ಯಾರೂ ಇಲ್ಲ. ಆದುದರಿಂದ ಯಾರಾದರೂ ಸಂತೋಷ."

"ನಿಮಗೆ ಅಮ್ಮ ?"—ಪುಟ್ಟಯ್ಯ ಲಲಿತಮ್ಮನನ್ನು ಕೇಳಿದ.

ಈ ಬಾರಿ ಮಗನ ತಾಯಿಯಾಗಲು ಲಲಿತಮ್ಮನಿಗೇನೋ ತುಂಬಾ ಆಸೆಯಿತ್ತು.

ಒಂದು ಪಕ್ಷ ಹೆಣ್ಣಾದರೆ ?

ಆದರೇನಂತೆ ? ಬಿಸಾಡಲು ಆದೀತೆ ?

ಪುಟ್ಟಯ್ಯ ಅಮ್ಮನ ಉತ್ತರಕ್ಕಾಗಿ ಕಾಯುತ್ತಾ ಸೊಂಟದಿಂದ ನಶ್ಯದ ಡಬ್ಬಿಯನ್ನು ಹೊರಗೆ ತೆಗೆದ.

"ದೂರ ದೂರ...."—ಎಂದಳು ಇಂದಿರ.

''ಅಮ್ಮಯ್ಯ....''

''ದೂರ ಹೋಗಪ್ಪ. ಇನ್ನು ಅದರ ಘಾಟಿಗೆ ಅಮ್ಮ ಸೀನುವುದಕ್ಕೆ ಹತ್ತುತ್ತಾಳೆ'' ಎಂದು ಇಂದಿರ ಪುಟ್ಟಯ್ಯನನ್ನು ಹೆದರಿಸಿ ದೂರ ಕಳುಹಿಸಿದಳು.

ಹೊರಗೆ ಹೋದ ಪುಟ್ಟಯ್ಯ ಎರಡು ನಿಮಿಷಗಳಲ್ಲಿ ಮತ್ತೆ ಒಳಗೆ ಬಂದು ಕೈಲಿದ್ದ ಕವರನ್ನು ದೂರದಿಂದಲೇ ಇಂದಿರನಿಗೆ ತೋರಿಸಿ

"ಈಗ ಹತ್ತಿರ ನೀನೇ ಬರುವೆ" ಎಂದು ನಕ್ಕ.

ಇಂದಿರ ಪುಟ್ಟಯ್ಯನ ಹತ್ತಿರ ಬಂದು ಅವನು ಕೈಲಿ ಹಿಡಿದಿದ್ದ ಕವರನ್ನು ಕಸಿದುಕೊಂಡು ರೂಮಿಗೆ ಹೋದಳು.

ಮೋಹನನ ಪ್ರೀತಿ ತುಂಬಿದ್ದ ಪತ್ರವನ್ನು ನಾಲ್ಕಾರು ಬಾರಿ ಓದಿದಳು.

ಒಂದು ಸುಖವಾದ ತರಂಗ ಅವಳ ದೇಹವನ್ನು ಮೀಟಿ ಹೋದಂತಾಯಿತು.

ತಾನೆಷ್ಟು ಸುಖಿ! ಮೋಹನನ ಒಲವು, ಐಶ್ವರ್ಯ, ತಾಯಿ ತಂದೆಯರ ಪ್ರೀತಿ, ಸಧ್ಯದಲ್ಲಿಯೇ ಬರುವ ತಂಗಿ ಅಥವಾ ತಮ್ಮ...

ತನಗಿಂತಲೂ ಸುಖಿಗಳು ಈ ಜಗತ್ತಿನಲ್ಲಿರುವರೇ ?

ಇಂದಿರ ಪತ್ರವನ್ನು ಮಡಿಸಿ ಮೇಜಿನ ಮೇಲಿರಿಸಿ ಕನಸು ಕಾಣುತ್ತಿದ್ದಾಗ ಲಲಿತಮ್ಮ ಹಿಂದಿನಿಂದ ಬಂದು ಕೇಳಿದರು.

"ಏನಂತ ಬರೆದಿದಾರೆ ?"

"ಆರೋಗ್ಯವಾಗಿದಾರಂತೆ."

"ಅಷ್ಟೇನೆ ಸಮಾಚಾರ ?"

"ಊಂ...."

ಲಲಿತಮ್ಮ ಮಗಳ ಮುಖ ನೋಡಿ ನಕ್ಕು ಒಳಗೆ ಹೋದರು.

ಇಂದಿರ ಮತ್ತೆ ಮೋಹನನ ಪತ್ರವನ್ನು ಬಿಡಿಸಿದಳು. ಅವನ ಪತ್ರ ಒಂದು ಸುಂದರ ಕವಿತೆಯಂತಿತ್ತು.

ಪ್ರೇಮಿಗಳಿಗೆ ಜಗತ್ತೇ ಸುಂದರವಾಗಿರುವುದೇನೋ ? ಅವರ ಕಣ್ಣಿಗೆ ಕುರೂಪವಾದುದೂ ಸುಂದರವಾಗಿಯೇ ಕಾಣುವುದು.

ಇಂದಿರ ಪತ್ರವನ್ನು ಓದುತ್ತ ಹೋದಂತೆ ಕೋಮಲ ಭಾವನೆಯಿಂದ ಅವಳ ಹೃದಯ ತುಂಬಿಬಂತು.

ಓ ಅಮ್ಮ ಯಾಕೆ ಇಷ್ಟು ಕಠಿಣಳಾಗಿದ್ದಾಳೆ? ತನ್ನನ್ನು ಅಪಾರ ಸಂತೋಷಕ್ಕೀಡುಮಾಡಿರುವ ಸುದ್ದಿಯನ್ನು ಮೋಹನನಿಗೆ ತಿಳಿಸಬಾರದೆಂದು ಕಟ್ಟಪ್ಪಣೆ ಮಾಡುವುದರಲ್ಲಿ ಯಾವ ಅರ್ಥವಿದೆ? ಮುಂದೆ ಎಂದಾದರೂ ತಿಳಿಯುವ ವಿಷಯ ಇಂದೇ ತಿಳಿಯಬಾರದೇಕೆ ?

ಈ ವಿಷಯವನ್ನು ಗುಟ್ಟಾಗಿ ಮೋಹನನಿಗೆ ತಿಳಿಸಿದರೋ ?

ಊಹೂಂ. ಬೇಡ. ಒಂದು ಪಕ್ಷ ಅಮ್ಮನಿಗೆ ತಿಳಿದರೆ ಆಮೇಲೆ ತುಂಬಾ ಬೇಸರಗೊಳ್ಳಬಹುದು.

ಈ ಸ್ಥಿತಿಯಲ್ಲಿ ಆಕೆಯನ್ನು ತುಂಬಾ ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ವೈದ್ಯರು ಹೇಳಿದ್ದಾರೆ.

ಇಂದಿರ ಆ ಯೋಚನೆಯನ್ನು ಬಿಟ್ಟುಕೊಟ್ಟಳು.

"ಇಂದಿರಾ, ಇಂದಿರಾ...."—ಲಲಿತಮ್ಮ ಒಳಗಿನಿಂದ ಮಗಳನ್ನು ಕೂಗಿದರು

ಇಂದಿರ, ಎದ್ದು ಒಳಗೆ ಹೋದಳು.

ಹಾಸಿಗೆಯ ಮೇಲೆ ದಿಂಬಿಗೊರಗಿ ತಾಯಿ ಕುಳಿತಿದ್ದರು.

ಆಕೆಯ ಮುಖ ತುಂಬಾ ಸೊರಗಿರುವಂತೆ, ತುಂಬ ಬಿಳಚಿಕೊಂಡಿರುವಂತೆ ಇಂದಿರೆಗೆ ಭಾಸವಾಯಿತು.

ತಾಯಿಗೆ ಏನು ಕಡಿಮೆಯಾಗಿದೆ ?

ಕೆಲಸ ಮಾಡಲು, ಆಕೆಯ ಸೇವೆ ಮಾಡಲು ಇಡೀ 'ಬೆಳ್ಳಿಮೋಡ'ವೇ ಕೈ ಕಟ್ಟಿ ನಿಂತಿತ್ತು.

ಇನ್ನು ಆರೈಕೆ—ದೇವಲೋಕದ ಅಮೃತವನ್ನೇ ಕೇಳಿದರೂ ರಾಯರು ತಂದು ಕೊಡಲು ತಯಾರಿದ್ದರು. ಹಾಲು ತುಪ್ಪದ ಕೋಡಿನಲ್ಲಿ ಹೆಂಡತಿಯನ್ನು ಮೀಯಿಸುವ ಚೈತನ್ಯ ರಾಯರಿಗಿತ್ತು. ಆದರೆ ಊಟಕ್ಕೆ ಹಾಕಿದ ಒಂದು ಮಿಳ್ಳೆ ತುಪ್ಪವನ್ನು ಜೀರ್ಣಿಸಿಕೊಳ್ಳುವ ಶಕ್ತಿ ಲಲಿತಮ್ಮನಿಗಿರಲಿಲ್ಲ.

ದೇವರು ಆಕೆಗೆ ಸಕಲ ಸೌಕರ್ಯವನ್ನೂ ಕೊಟ್ಟಿದ್ದ. ಆದರೆ ಆರೋಗ್ಯ ಸಂಪತ್ತನ್ನು ಮಾತ್ರ ಆಕೆಗೆ ಕರುಣಿಸಿರಲಿಲ್ಲ.

ಜರಿ ಸೀರೆಯ, ಚಿನ್ನದೊಡವೆಗಳ ಭಾರಕ್ಕೆ ಆಕೆ ಸಲಗುತ್ತಿದ್ದರು. ತಲೆಗೆ ಮುಡಿದ ಹೂವೂ ಆಕೆಯ ಪಾಲಿಗೆ ಹೊರೆಯಾಗಿತ್ತು.

ದೇವರು ಅಪಾರಸಂಪತ್ತನ್ನು ಕರುಣಿಸಿದ್ದ–ಆಕೆಯ ಔಷಧಿಗಳಿಗಾಗಿ, ವೈದ್ಯರುಗಳಿಗಾಗಿ.

ಬಡತನವಿದ್ದರೂ ಚಿಂತೆಯಿಲ್ಲ, ಆರೋಗ್ಯವಿರಬೇಕು ಎಂದು ಆಕೆ ಒಮ್ಮೊಮ್ಮೆ ಬೇಸರಪಟ್ಟುಕೊಳ್ಳುತ್ತಿದ್ದರು.

ಆದರೆ ಒಂದು ವಿಧದಲ್ಲಿ ದೇವರು ತುಂಬಾ ಕರುಣಾಮಯನಾಗಿದ್ದ.

ಇಂದಿರ ತಾಯಿಯಂತೆ ದುರ್ಬಲಳಾಗಿರಲಿಲ್ಲ.

ತಂದೆಯಂತೆ ದೃಢಕಾಯಳಾಗಿ, ಆರೋಗ್ಯವಾಗಿದ್ದಳು. ಕಲ್ಲನ್ನಾದರೂ

ಲ್ಲಕನ್ನರಗಿಸುವ ಚೈತನ್ಯ ಆಕೆಗಿತ್ತು.

ಇಷ್ಟರ ಮಟ್ಟಿಗಾದರೂ ತನಗೆ ಪುಣ್ಯ ದಯಪಾಲಿಸಿರುವುದಕ್ಕಾಗಿ ಲಲಿತಮ್ಮ ದೇವರನ್ನು ಭಕ್ತಿಯಿಂದ ಸ್ಮರಿಸಿಕೊಳ್ಳುತ್ತಿದ್ದರು.

ಸಧ್ಯ ತನ್ನ ಮತ್ತೊಂದು ಮಗುವೂ ಆರೋಗ್ಯದಲ್ಲಿ ತನ್ನನ್ನು ಹೋಲದೆ ರಾಯರಂತಿದ್ದರೆ ಸಾಕು ಎಂದಾಕೆ ದಿನವೂ ದೇವರಲ್ಲಿ ಮೊರೆಯಿಡುತ್ತಿದ್ದರು.

ವಿಧಿ ತನ್ನನ್ನು ಆಹುತಿ ತೆಗೆದುಕೊಂಡರೂ ಚಿಂತೆಯಿಲ್ಲ—ಇಂದಿರೆಯಂತೆ ಆರೋಗ್ಯವಾಗಿರುವ ಮಗುವಾದರೆ ಸಾಕು ಎಂದಾಕೆ ಹಗಲಿರುಳೂ ಕೊರಗುತ್ತಿದ್ದರು.

ಬಳಲಿಕೆಯಿಂದ ಮಲಗಿದ್ದ ತಾಯಿಯನ್ನು ನೋಡಿ ಇಂದಿರೆಗೆ ಮರುಕವಾಯಿತು. ಅವಳು ಪ್ರೀತಿಯಿಂದ

"ಹಣ್ಣಿನ ರಸ ಕೊಡಲೇನಮ್ಮ?"—ಎಂದಳು.

"ಬೇಡ."

"ಅಮ್ಮ, ನಿನಗೆ ಮನೆಯಲ್ಲಿ ಉಪಚಾರ ಸಾಲದೇನೋ? ನರ್ಸಿಂಗ್ ಹೋಂನಲ್ಲಿ ಇದ್ದರೆ ಹೇಗೆ?"

"ಉಹೂಂ, ನಾನು ಈ ಮನೆ ಬಿಟ್ಟು ಕದಲುವುದಿಲ್ಲ. ಇಲ್ಲೇ ಸಾಯುತ್ತೇನೆ"—ಎಂದು ಲಲಿತಮ್ಮ ಖಂಡಿತವಾಗಿ ಹೇಳಿಬಿಟ್ಟರು.

ಇಂದಿರ ತಾಯಿಯ ಮನಸ್ಸನ್ನು ತಿರುಗಿಸಲು ಯತ್ನಿಸಿದಳು. ಆದರೆ ಅವಳ ಪ್ರಯತ್ನ ವಿಫಲವಾಯಿತು.

ರಾಯರು ಮಗಳ ಮಾತನ್ನು ಅನುಮೋದಿಸಿದರು. ಯಾವಾಗಲೂ ಹಠ ಮಾಡದ ಲಲಿತಮ್ಮ ಇದೊಂದು ವಿಷಯಕ್ಕೆ ಗಂಡ, ಮಗಳ ಮಾತನ್ನು ಒಪ್ಪಲಿಲ್ಲ.

ಲಲಿತಮ್ಮನನ್ನು ಪರೀಕ್ಷಿಸಲು ಬಂದ ವೈದ್ಯರು ಸಹ

"ತುಂಬಾ ದುರ್ಬಲರಾಗಿದಾರೆ. ಅವರನ್ನು ಆಸ್ಪತ್ರೆಯಲ್ಲಿರಿಸಿಕೊಳ್ಳುವುದು ಒಳ್ಳೆಯದು"—ಎಂದಿದ್ದರು.

ಆದರೆ ಎಲ್ಲರ ಸಲಹೆ, ಸೂಚನೆಗಳಿಗೆ ಲಲಿತಮ್ಮ ತಲೆ ಅಲುಗಿಸಿದರು.

ಕೊನೆಗೆ ರಾಯರು 'ಅವಳ ಹಣೆಯಲ್ಲಿ ಬರೆದಂತಾಗಲಿ' ಎಂದು ಹೇಳಿದರು.

ಎಲ್ಲರಿಂದಲೂ ಆರೈಕೆ ಮಾಡಿಸಿಕೊಂಡು, ಊಟ ಉಪಚಾರ, ಔಷಧಿಗಳನ್ನು ಸೇವಿಸಿ ದಿನದಿನಕ್ಕೆ ದುರ್ಬಲರಾದರು ಲಲಿತಮ್ಮ.

ತಂದೆ ಮಗಳಿಗೆ ಇದು ಯೋಚನೆಗಿಟ್ಟುಕೊಂಡಿತು.

ಈ ದುಃಖಮಯ ವಾತಾವರಣದಲ್ಲಿ ಇಂದಿರೆಗಿದ್ದ ಒಂದೇ ಒಂದು ಆಶಾಕಿರಣವೆಂದರೆ ಮೋಹನನ ಪತ್ರ.

ತಾಯಿಯ ಅನಾರೋಗ್ಯ, ಬಳಲಿಕೆಯನ್ನು ಕ್ಷಣಕಾಲ ಮರೆಸುವ ಶಕ್ತಿ ಮೋಹನನ ಪತ್ರಕ್ಕಿದ್ದಿತು.

ಅವನ ಪತ್ರವೇ ಸದ್ಯಕ್ಕೆ ತನ್ನ ಯೋಚನೆಯನ್ನು ದೂರಮಾಡುವ ಶಕ್ತಿಯನ್ನು ಪಡೆದಿದೆ—ಎಂದುಕೊಂಡಿದ್ದಳು. ಇಂದಿರ

ಮೋಹನನ ಪತ್ರಕ್ಕೆ ಪ್ರತ್ಯುತ್ತರ ಬರೆಯುವ ಕೆಲಸವಂತೂ ಅವಳ ಪಾಲಿಗೆ ಅತ್ಯಂತ ಪವಿತ್ರವಾದ ಕೆಲಸವಾಗಿತ್ತು.

o o o o

ಅತ್ಯಂತ ದುರ್ಬಲವಾಗಿದ್ದ ಲಲಿತಮ್ಮ ಗರ್ಭದಲ್ಲಿ ಮಗುವಿಗೆ ಹೆಚ್ಚು ದಿನ ಆಶ್ರಯ ಕೊಡಲಾಗದೇ ಏಳನೇ ತಿಂಗಳಿನಲ್ಲಿ ಮಗುವಿಗೆ ಜನ್ಮಕೊಟ್ಟರು.

'ಗಂಡು ಮಗು'—ಎಂಬ ಸುದ್ದಿ ರಾಯರಿಗೂ, ಇಂದಿರೆಗೂ ಹೋಯಿತು.

ಕೂಡಲೇ ಇಂದಿರ ಕೊಬ್ಬರಿ ಸಕ್ಕರೆಯನ್ನು ಸಿದ್ಧಪಡಿಸಿ 'ಬೆಳ್ಳಿಮೋಡ' ದವರಿಗೆ ಹಂಚತೊಡಗಿದಳು.

ಪುಟ್ಟಯ್ಯನಂತೂ ಸಕ್ಕರೆಯನ್ನು ಹಿಡಿಹಿಡಿಯಾಗಿ ಮುಕ್ಕುತ್ತಾ ಇಂದಿರ ನನ್ನು ಗೇಲಿಮಾಡಿದ.

"ಅಮ್ಮಯ್ಯ, ನೀನು ಯಾವಾಗ ಸಕ್ಕರೆ ಕೊಡ್ತೀಯಾ?"

"ಈಗಲೇ ತಗೋ"—ಎನ್ನುತ್ತಾ ಇಂದಿರ ಮತ್ತೊಂದು ಹಿಡಿ ಸಕ್ಕರೆ." ಯನ್ನು ಪುಟ್ಟಯ್ಯನ ಮುಂದೆ ಹಿಡಿದಳು

"ಈ ಸಕ್ಕರೆ ತಿಂದಾಯಿತು. ನಿನ್ನ ಮಗುವಿನ ಜನ್ಮೋತ್ಸವದ ಸಕ್ಕರೆ

ಬೇರೆ ಸಮಯದಲ್ಲಿ ಪುಟ್ಟಯ್ಯ ಈ ಮಾತನಾಡಿದ್ದರೆ ಇಂದಿರ ಅವನ ಮೇಲೆ ರೇಗುತ್ತಿದ್ದಳು. ಆದರೆ ಈ ಸಂತೋಷ ಸಮಯದಲ್ಲಿ ಅವನ ಮೇಲೆ ರೇಗುವುದು ಅವಳಿಂದಾಗಲಿಲ್ಲ. ಅವಳು ಹಿಗ್ಗಿನಿಂದ

"ಅದಕ್ಕೆ ಇನ್ನೂ ಕೊಂಚ ದಿನ ಕಾಯಬೇಕು"—ಎಂದಳು.

"ತುಂಬಾ ದಿನ ಕಾಯಿಸಬೇಡ ಅಮ್ಮಯ್ಯ."

"ನಿನಗೆ ಬೇಕಾದುದು ಸಕ್ಕರೆಯೋ ನಶ್ಯವೋ ?"

"ಬಾಯಿ ಸಿಹಿಯಾಗಲು ಸಕ್ಕರೆ, ಮೂಗು ಸಿಹಿಯಾಗಲು ನಶ್ಯ"—ಎಂದ ಭಂಡ ಪುಟ್ಟಯ್ಯ.

"ನೀನು ಹಾಳಾದೆ"—ಎಂದಳು ಇಂದಿರ.

ಬಹಳ ವಿಜೃಂಭಣೆಯಿಂದ ಮಗನ ನಾಮಕರಣವನ್ನು ಆಚರಿಸ ಬೇಕೆಂದಿದ್ದ ರಾಯರಿಗೆ ಹೆಂಡತಿಯ ಅಶಕ್ತತೆಯಿಂದಾಗಿ ನಾಮಕರಣವನ್ನು ಆಚರಿಸಲಾಗಲಿಲ್ಲ.

ಲಲಿತಮ್ಮ ಹಾಸಿಗೆ ಬಿಟ್ಟೇಳಲಾರದಷ್ಟು ದುರ್ಬಲರಾಗಿದ್ದರು.

ತಮ್ಮ ಹಿಗ್ಗಿಗಾಗಿ ಆಕೆಯನ್ನು ಎಬ್ಬಿಸಿ ಹಿಂಸೆ ಪಡಿಸುವುದು ರಾಯರಿಗೆ ಸರಿತೋರಲಿಲ್ಲ.

ಕಾಫಿ ತೋಟದ ಕೂಲಿಯಾಳುಗಳಿಗೆ, ತಮ್ಮ ಬಂಧುಬಳಗದವರಿಗೆ ಔತಣ ವನ್ನರಿಸಿಕೊಂಡರು. ಸಂತೋಷಸಮಾರಂಭದಲ್ಲಿ ಕೂಲಿಯಾಳುಗಳಿಗೆ ಒಂದು ವಾರದ ಸಂಬಳವನ್ನು ಉಚಿತವಾಗಿ ಕೊಟ್ಟರು.

ಕೂಲಿಯಾಳುಗಳು ಆ ಸಂಬಳದಿಂದ ಹೊಟ್ಟೆ ತುಂಬ ಕುಡಿದು 'ಬೆಳ್ಳಿ ಮೋಡ' ಹೆದರಿ ನಡುಗುವಷ್ಟು ಕೂಗಿ ಗದ್ದಲ ಮಾಡಿದರು.

"ಹಾಳಾದವರಿಗೆ ಹಣ ಕೊಡೋಕೆ ಬದಲು ಅವರ ಮಕ್ಕಳುಗಳಿಗೆ ಬಟ್ಟೆ ಬರೆ ತೆಗೆಸಿಕೊಟ್ಟಿದ್ದರೆ ಚೆನ್ನಾಗಿತ್ತು" ಎಂದು ರಾಯರು ಆಮೇಲೆ ಪೇಚಾಡಿ ದರು.

ಇಂದಿರೆಗೂ ಸಾರಾಯಿ ಕಂಡರೆ ತುಂಬಾ ತಿರಸ್ಕಾರವಿತ್ತು. ಆದರೆ ಈ ಸಮಯದಲ್ಲಿ ಯಾರು ಎಂತಹ ತಪ್ಪು ಮಾಡಿದರೂ ಕ್ಷಮಿಸುವಷ್ಟು ವಿಶಾಲ ಮನೋಭಾವವುಳ್ಳವಳಾಗಿದ್ದಳಾಕೆ—ತಮ್ಮನ ಆಗಮನದಿಂದ.

ಏಳನೆಯ ತಿಂಗಳಿನಲ್ಲಿ ಹುಟ್ಟಿದವನಾದುದರಿಂದ ಗಿರಿರಾಜ ಆಕಾರದಲ್ಲಿ ತುಂಬಾ ಪೀಚಾಗಿದ್ದ. ಬೆಚ್ಚಗಿರುವ ಬಟ್ಟೆಗಳಲ್ಲಿ ಅವನನ್ನು ಸುತ್ತಿ ಮಲಗಿಸಿ, ಆಹಾರ ಕೊಡುವುದು ಪ್ರಯಾಸದ ಕೆಲಸವಾಗಿತ್ತು.

"ಎರಡು ತಿಂಗಳು ಮುಂಚೆ ಬಂದಿದ್ದಾನೆ. ಆದುದರಿಂದ ಅವನನ್ನು ಎರಡು ತಿಂಗಳು ತುಂಬಾ ಜೋಪಾನವಾಗಿ ನೋಡಿಕೊಳ್ಳಬೇಕು"—ಎಂದಿದ್ದರು ವೈದ್ಯರು.

ದಿನಕ್ಕೆರಡು ಬಾರಿ ಬರುತ್ತಿದ್ದ ವೈದ್ಯರು, ನಿವೃತ್ತಿ ಹೊಂದಿದ ನರ್ಸೊಬ್ಬಳು, ಇಂದಿರ ಇವರೆಲ್ಲರ ಉಪಚಾರ ಗಿರಿರಾಜನಿಗೆ, ಲಲಿತಮ್ಮನಿಗೆ ಸತತ ವಾಗಿ ಆಗುತ್ತಿತ್ತು.

ಗಿರಿರಾಜ ಹುಟ್ಟಿದ ಮೂರನೆಯ ದಿನ ಇಂದಿರ ತಾಯಿಯ ಹಾಸಿಗೆಯಬಳಿ ನಿಂತು ಮೃದುವಾಗಿ "ಅಮ್ಮ, ಈಗಲಾದರೂ ಅವರಿಗೆ ಕಾಗದ ಬರೆಯಲೇ"

ಎಂದಳು.

ಸೊರಗಿದ ಮುಖದಲ್ಲಿ ನಸುನಗೆ ಹರಡಿತು. ಆಕೆ ಮಗಳ ಮುಖವನ್ನೇ ನೋಡುತ್ತಾ 'ಹೂಂ' ಎಂದರು.

ಇಂದಿರ ರೂಮಿಗೆ ಓಡಿಹೋದಳು. ಕಾಗದ, ಪೆನ್ನು ಕೈಲಿ ಹಿಡಿದು ಗೀಚಿದಳು.

'ಮೋಹನ,

ನನಗೊಬ್ಬ ಪುಟ್ಟ ತಮ್ಮ ನಿಮಗೊಬ್ಬ ಪುಟ್ಟ ಭಾವಮೈದುನ ಬಂದಿದ್ದಾನೆ. ಮಗು ನನ್ನಂತೆ ಇದೆ. ಅಮ್ಮ ತುಂಬಾ ನಿಶ್ಯಕ್ತಿಯಿಂದಿದ್ದಾಳೆ. ನನಗೆ ಈಗ ಎಷ್ಟು ಸಂತೋಷವಾಗಿದೆಯೆಂದರೆ–ಇನ್ನು ಕಾಗದ ಬರೆಯಲು ತೋರು ತ್ತಿಲ್ಲ. ಸಾಕು.

ನಿಮ್ಮ
ಇಂದಿರಾ."

ಇಂದಿರ ಆತುರದಿಂದ ಕಾಗದವನ್ನು ಮಡಿಸಿ ಪುಟ್ಟಯ್ಯನ ಕೈಗೆ ಕೊಟ್ಟು

"ಈಗಲೇ ಪೋಸ್ಟ್‌ಗೆ ಹಾಕಿಬಿಡು"—ಎಂದಳು.

"ಈಗಲೇ ? ಹೀಗೆ?"

"ಹೂಂ, ಹೂಂ. ಈಗಲೇ."

ಅವಳ ಆತುರವನ್ನು ಕಂಡು ಪುಟ್ಟಯ್ಯನಿಗೆ ನಗು ಬಂತು.

ಅವನು ಕಾಗದವನ್ನು ಇಂದಿರೆಗೆ ತೋರಿಸಿ

"ವಿಳಾಸವನ್ನೇ ಬರೆದಿಲ್ಲ.... ನಿನ್ನ ಮೋಹನ ಅಮೇರಿಕದ ಅಧ್ಯಕ್ಷ ಎಂದು ಭಾವಿಸಿರುವೆಯಾ ?"—ಎಂದ.

ಇಂದಿರ ಕಾಗದವನ್ನು ಅವನ ಕೈಯಿಂದ ಕಸಿದುಕೊಂಡು ವಿಳಾಸವನ್ನು ಬರೆದುಕೊಟ್ಟಳು.

"ಈಗಲೇ ಹಾಕಿಬಿಡು. ಮರೆಯಬೇಡ"—ಎಂದು ಇಂದಿರ ಮತ್ತೊಮ್ಮೆ ಒತ್ತಿ ಹೇಳಿದಳು.

"ನಾನು ಯಾವಾಗ ಹಾಕಿದರೂ ಪೋಸ್ಟ್‌ಮನ್ ಅವನ ಸಮಯಕ್ಕೇ ಬಂದು ತೆಗೆದುಕೊಂಡು ಹೋಗುತ್ತಾನೆ."—ಎಂದ ಪುಟ್ಟಯ್ಯ

ಆದರೆ ಪುಟ್ಟಯ್ಯನ ಮಾತುಗಳನ್ನು ಕೇಳಿಸಿಕೊಳ್ಳಲು ಇಂದಿರ ಅಲ್ಲಿರಲಿಲ್ಲ.

ಅವಳು ತಾಯಿಯ ಬಳಿ ನಿಂತು

"ಅಮ್ಮ, ಅವರಿಗೆ ಕಾಗದ ಬರೆದಿದ್ದೇನೆ. ಈ ಸುದ್ದಿ ಕೇಳಿ ಅವರು ತುಂಬಾ ಸಂತೋಷಪಡಬಹುದು—" ಎಂದಳು.

ಲಲಿತಮ್ಮ ಮಾತನಾಡಲಿಲ್ಲ.

ಮಗಳಿಗೆ ಏನೋ ಹೇಳಲು ಎರಡು ಮೂರು ಬಾರಿ ಪ್ರಯತ್ನಿಸಿದರು. ಕೊನೆಗೆ ಕಣ್ಣಿನಲ್ಲಿ ನೀರು ತಂದುಕೊಂಡು ಸುಮ್ಮನಾದರು.

ಇಂದಿರೆಗೆ ತಮ್ಮ ಬಂದ ಮೇಲೆ ಸ್ವಲ್ಪವೂ ಬಿಡುವಿರುತ್ತಿರಲಿಲ್ಲ. ಗಿರಿರಾಜನನ್ನು ನೋಡಿಕೊಳ್ಳಲು ನರ್ಸೊಬ್ಬಳನ್ನು ನೇಮಿಸಿದ್ದರೂ ಇಂದಿರ ತಮ್ಮನನ್ನು ತಾನೇ ನೋಡಿಕೊಳುತ್ತಿದ್ದಳು.

ತಮ್ಮನಿಗೆ ಸಮಯಕ್ಕೆ ಸರಿಯಾಗಿ ಹಾಲು ಹಾಕುವುದು, ನೀರು ಹಾಕುವುದು, ಬಟ್ಟೆ ಬದಲಾಯಿಸುವುದು. ಇತ್ಯಾದಿ ಕೆಲಸಗಳನ್ನು ಇಂದಿರ ಅತ್ಯಂತ ಶ್ರದ್ಧೆಯಿಂದ, ಆಸಕ್ತಿಯಿಂದ ಮಾಡುತ್ತಿದ್ದಳು

ರಾತ್ರಿಯಲ್ಲಿ ಸಹಿತ ನಾಲ್ಕಾರು ಬಾರಿ ಎದ್ದು ಬಂದು ಗಿರಿ ತೊಟ್ಟಿಲಿನಲ್ಲಿ ಮಲಗಿರುವುದನ್ನು ನೋಡಿ ನಂತರ ತನ್ನ ರೂಮಿಗೆ ಹಿಂತಿರುಗುತ್ತಿದ್ದಳು.

ಗಿರಿಗೆ ನರ್ಸ್ ಪೌಡರ್ ಹಚ್ಚಿದರೆ ಇಂದಿರ ಒಪ್ಪುತ್ತಿರಲಿಲ್ಲ.

"ಆಕೆ ಚೆನ್ನಾಗಿ ಹಾಕುವುದಿಲ್ಲ. ಮೈಗೆಲ್ಲ ಬೂದಿ ಬಳಿದ ಹಾಗೆ ಬಳಿಯುತ್ತಾಳೆ"—ಎಂದು ಆಕೆಯ ಕೆಲಸ ಟೀಕಿಸಿ ಇಂದಿರ ತಾನೇ ಪೌಡರನ್ನು ಹದವಾಗಿ ಗಿರಿರಾಜನ ಮೈಗೆ ಬಳಿಯುತ್ತಿದ್ದಳು.

ಕೆಲಸದ ಆಳು ಮಗುವಿಗೆ ನೀರು ಹಾಕಲು ಇಂದಿರ ಬಿಡುತ್ತಿರಲಿಲ್ಲ.

ಅವಳು ತುಂಬಾ ಬಿಸಿಯಾಗಿ ಹಾಕಿಬಿಟ್ಟರೆ ?

ಹಾಲು ಕುಡಿಸಲು ಇತರರಿದ್ದರೂ ಇಂದಿರ ಯಾರನ್ನು ನಂಬುತ್ತಿರಲಿಲ್ಲ.

ಅವರು ಹೊಟ್ಟೆಯ ತುಂಬಾ ಕುಡಿಸುವರೋ ಇಲ್ಲವೋ ? ಮಗುವನ್ನು ಯಾರಿಗೊಪ್ಪಿಸಲೂ ಇಂದಿರೆಗೆಅನುಮಾನ—ತಾಯಿಯೊಬ್ಬಳ ಹೊರತಾಗಿ ಇಂದಿರೆಗೆ ಇತರ ಕೆಲಸದವರಲ್ಲಿ ಸ್ವಲ್ಪವೂ ನಂಬಿಕೆಯಿರಲಿಲ್ಲ.

ಕೊನೆಗೆ ಹಾಲು ಕುಡಿಯುವ ಬಾಟಲಿಯನ್ನೂ ಸಹಿತ ಬ್ರಷ್ಷು ಹಾಕಿ ಅವಳೇ ತೊಳೆಯಬೇಕು.

ಇತರರು ಚೆನ್ನಾಗಿ ತೊಳೆಯುವರೋ ಇಲ್ಲವೋ ?

ಚೆನ್ನಾಗಿ ಬಾಟಲಿಯನ್ನು ತೊಳೆಯದೆ ಹಾಲನ್ನು ಕುಡಿಸಿದರೆ ಮಕ್ಕಳಿಗೆ ಲಿವರ್ ಖಾಯಿಲೆ ಬರುವುದೆಂದು ಇಂದಿರೆ ಯಾರ ಬಾಯಿಂದಲೋ ಕೇಳಿದ್ದಳು.

ಅಕ್ಕನ ಆರೈಕೆಯಿಂದಾಗಿ ಕೃಶನಾಗಿದ್ದ ಗಿರಿರಾಜ ದಿನದಿನಕ್ಕೆ ಮೈ ಕೈ ತುಂಬಿಕೊಂಡು ಆರೋಗ್ಯವಾಗಿ ಬೆಳೆಯತೊಡಗಿದ. ಗಾತ್ರವೊಂದರಲ್ಲಿ ವಿನಾ

ಉಳಿದೆಲ್ಲ ವಿಷಯಗಳಲ್ಲೂ ಅವನು ತನ್ನವಯಸ್ಸಿಗೆ ಸರಿಯಾಗಿದ್ದ.

ಆದರೆ ಲಲಿತಮ್ಮ ಮಾತ್ರ ಸ್ವಲ್ಪವೂ ಚೇತರಿಸಿಕೊಂಡಿರಲಿಲ್ಲ. ಗಿರಿ ದುಂಡಗಾದಂತೆ ಆಕೆ ಸವೆಯತೊಡಗಿದರು.

ರಾಯರು ಹಣವನ್ನು ನೀರಿನಂತೆ ಖರ್ಚು ಮಾಡಿದರು. ಆದರೆ ಲಲಿತಮ್ಮ ಚೇತರಿಸಿಕೊಳ್ಳಲಿಲ್ಲ.

ಲಲಿತಮ್ಮ ಹಾಸಿಗೆ ಬಿಟ್ಟೇಳಲಾರದ ರೋಗಿಯಾಗಿದ್ದಾಗ ಇಂದಿರೆಯ ಕಾಗದಕ್ಕೆ ಮೋಹನನಿಂದ ಉತ್ತರ ಬಂದಿತು.

ಇಂದಿರ ಕಾಗದವನ್ನು ಲಲಿತಮ್ಮನ ಕೈಗೆ ಕೊಟ್ಟಳು. ಆಕೆ ಮಲಗಿದ್ದಂತೆಯೇ ಕಾಗದವನ್ನು ಓದಲು ಯತ್ನಿಸಿದರು.

ಆದರೆ ಕಣ್ಣು ಮಂಜಾಗಿ ಅಕ್ಷರಗಳು ಕಲಸಿಕೊಂಡವು.

"ನೀನೇ ಓದಿ ಹೇಳಮ್ಮ. ನನಗೆ ಅಕ್ಷರ ಕಾಣೋದಿಲ್ಲ" ಎಂದರಾಕೆ ಕ್ಷೀಣ ದನಿಯಲ್ಲಿ.

ಇಂದಿರ ಓದಿದಳು.

"ಇಂದಿರ,

ನಿನ್ನ ಪತ್ರ ತಲುಪಿತು. ನನಗೆ ಭಾವಮೈದುನ ಬಂದಿರುವುದು ನಿಜಕ್ಕೂ ಸಂತೋಷದ ವಿಷಯ. ನಿಮ್ಮ ತಾಯಿ ಆರೋಗ್ಯವಾಗಿರುವರೆಂದು ನಂಬಿದ್ದೇನೆ.

ಮೋಹನ."

ಅದೇಕೋ ಪತ್ರ ತುಂಬಾ ಸಪ್ಪೆಯಾಗಿ, ನೀರಸವಾಗಿ ಲಲಿತಮ್ಮನಿಗೆ ತೋರಿತು.

"ಇಷ್ಟೇನೆ ಬರೆದಿರೋದು ?"—ಆಕೆ ಮಗಳನ್ನು ಕೇಳಿದರು.

"ಹೂಂ."

"ಇನ್ನು ಏನೂ ಬರೆದಿಲ್ಲವೇ ?"

"ಇಲ್ಲ."

ಆಕೆಯ ಮುಖದ ಮೇಲೆ ನಿರಾಶೆ ಮೂಡಿತು. ಬದಲು ಹೇಳದೆ ಲಲಿತಮ್ಮ ಬೇರೊಂದು ಮಗ್ಗುಲಿಗೆ ಹೊರಳಿಕೊಂಡರು.

ಇಂದಿರ ಮೋಹನನಿಗೆ ಪತ್ರ ಬರೆಯಲು ಕುಳಿತಳು. ತಾಯಿಯ ಆರೋಗ್ಯವನ್ನು ಅವನಿಗೆ ತಿಳಿಸಿ ಅವನಿಂದ ತನ್ನ ಮನಸ್ಸನ್ನು ಸಂತಯಿಸಿಕೊಳ್ಳಬೇಕೆಂಬ ಅಪೇಕ್ಷೆ ಅವಳಿಗಿತ್ತು.

ತಾಯಿಯ ಎದುರಿಗೆ, ರಾಯರ ಎದುರಿಗೆ ಎಷ್ಟೇ ಧೈರ್ಯದಮಾತುಗಳ ನ್ನಾಡಿದರೂ ಇಂದಿರೆಗೆ ತಾಯಿ ಈಬಾರಿಬದುಕಲಾರಳು ಎಂದೇ ತೋರಿತ್ತು.

ಇತರರಿಗೆ ಧೈರ್ಯದ ಪೊಳ್ಳುಮಾತುಗಳನ್ನು ಹೇಳಿ, ತನ್ನ ಮಾತನ್ನೇ ನಿಜವೆಂದು ನಂಬಲು ಯತ್ನಿಸಿ ನಿರಾಶಳಾಗುತ್ತಿದ್ದಳು ಇಂದಿರ.

ಈ ಬಗೆಯ ಆತ್ಮವಂಚನೆ ಇನ್ನೆಷ್ಟು ದಿನ ?

ತಾಯಿ ಕ್ರಮೇಣ ಮುಳುಗಲಿರುವ ಹಡಗಿನಂತೆ ಸ್ವಲ್ಪಸ್ವಲ್ಪವಾಗಿ ಮುಳು ಗುತ್ತಿದ್ದುದು ಎಲ್ಲರಿಗೂ ಗೋಚರವಾಗಿತ್ತು.

ಗಿರಿರಾಜ,ಇಂದಿರೆಗಿಂತಲೂ ರಾಯರು ಹೆಚ್ಚು ಅಸಹಾಯಕರಾಗಿ ಶಬ್ಬಲಿ ಯಾಗಿದ್ದರು. ಅವರ ಮುಖದ ಮೇಲೆ ಅನಾಥಕಳೆ ಸುರಿಯುತ್ತಿತ್ತು. ತಂದೆ ಯನ್ನು ನೋಡಿದಾಗಲೆಲ್ಲ ಇಂದಿರೆಗೆ ತುಂಬಾ ವ್ಯಥೆಯಾಗುತ್ತಿತ್ತು.

ಒಂದು ಸಂಜೆ ಲಲಿತಮ್ಮನಿಗೆ ಆಗ ತಾನೆ ನಿದ್ದೆ ಹತ್ತಿತ್ತು. ಆಕೆ ನಿದ್ದೆ ಮಾಡುತ್ತಿರುವುದನ್ನು ಕಂಡು ತಂದೆ, ಮಗಳಿಬ್ಬರೂ ಸದ್ದಾಗದಂತೆ ಹೊರಗೆ ಬಂದಿದ್ದರು.

"ಇಂದಿರಾ, ಬಾಲ್ಕನಿಗೆ ಹೋಗೋಣ ಬಾ"—ಎಂದರು ರಾಯರು.

ಇಂದಿರ ಮರುಮಾತನಾಡದೆ ತಂದೆಯನ್ನು ಹಿಂಬಾಲಿಸಿದಳು.

ತಂದೆ, ಮಗಳಿಬ್ಬರೂ ಒಬ್ಬರನ್ನೊಬ್ಬರು ನೋಡದೆ ಮೌನವಾಗಿ ಕುಳಿ ತರು. ಕೊನೆಗೆ ಮೌನ ತಡೆಯಲಾರದೇ ರಾಯರು ಮಾತಿಗೆ ಪ್ರಾರಂಭ ಮಾಡಿದರು,

"ಲಲಿತಾಗೆ ಈಗ ಹೇಗಿದೆ ಎನಿಸುತ್ತದೆ ಇಂದಿರಾ ?"

ಇಂದಿರ ಎಲ್ಲೋ ನೋಡುತ್ತಾ "ಈಗ ಸ್ವಲ್ಪವಾಸಿ" ಎಂದಳು.

"ಈ ಮಾತು ಸುಳ್ಳು ಎಂದು ನಮ್ಮಿಬ್ಬರಿಗೂ ತಿಳಿದಿದೆ."

ಇಂದಿರ ಮಾತನಾಡಲಿಲ್ಲ.

"ನಿನ್ನ ಮದುವೆ ನೋಡೋಕೆ ಅವಳಿಗೆ ತುಂಬಾ ಆಸೆಯಿತ್ತು. ಅವಳ ಆದೊಂದು ಆಸೆಯನ್ನು ನೆರವೇರಿಸುವುದಾಗಲಿಲ್ಲ. ಈಗಲೂ ಮನಸ್ಸಿನಲ್ಲಿ ಅದನ್ನಿಟ್ಟುಕೊಂಡು ಕೊರಗುತ್ತಿದ್ದಾಳೆ."

"ಏನು ಮಾಡೋಣ ಅಣ್ಣಾ...."

"ಮೋಹನನ್ನು ಕರೆಸಿ ಮದುವೆ ಮಾಡಿದರೆ ಹೇಗೆ ?"

"ಅಣ್ಣಾ !"

"ಹೌದು ಇಂದಿರ, ನಿನ್ನೆಯಿಂದಲೂ ನಿನಗೆ ಈ ಮಾತನ್ನು ನಾನು ಹೇಳ

ಬೇಕೆಂದಿದ್ದೆ. ಪ್ಲೇನಿನಲ್ಲಿ ಅವನನ್ನು ಕರೆಸಿ ಅವಳ ಕಣ್ಣೆದುರಿಗೆ ಮದುವೆ ಮಾಡಿ ಮಾರನೆಯ ದಿನವೇ ಮತ್ತೆ ಅವನನ್ನು ಕಳಿಸಿಕೊಡುತ್ತೇನೆ. ಅವಳ ಕೊನೆಯ ಆಸೆಯನ್ನು ನೆರವೇರಿಸಲೇ ಬೇಕು. ಹಣ ಖರ್ಚು ಮಾಡಲು ನಾನು ಹಿಂದೆ ಮುಂದೆ ನೋಡುವುದಿಲ್ಲ."

"ಆದರೆ ಅಣ್ಣಾ, ನನ್ನ ಮದುವೆಗೆ ಎದ್ದು ಬಂದು ಕುಳಿತುಕೊಳ್ಳುವ ತ್ರಾಣವೂ ಅಮ್ಮನಿಗಿಲ್ಲ. ಮದುವೆ ಮನೆಯ ಗದ್ದಲದಲ್ಲಿ ಅವಳು ತನ್ನ ಪ್ರಾಣವನ್ನು ಒತ್ತೆ ಇಟ್ಟಾದರೂ ಓಡಿಯಾಡಿ ಆಯಾಸ ಮಾಡಿಕೊಳ್ಳುತ್ತಾಳೆ. ಅವಳು ಸಾಯುವಳೆಂದೇ ನಾವು ಯಾಕೆ ನಿರ್ಧರಿಸಬೇಕು? ಆಕೆ ಬದುಕಬಾರದೇಕೆ? ಅವಳ ಆಸೆಯನ್ನು ಪೂರಯಿಸಿದರೆ ಅವಳು ಇನ್ನು ಸಾಯಲು ಅಡ್ಡಿಯಿಲ್ಲ ಎಂದು ನಿಶ್ಚಿಂತಳಾಗಬಹುದು ಬದಲು ನನ್ನ ಮದುವೆ ನೋಡುವ ಹಂಬಲ ಅವಳಲ್ಲಿದ್ದರೆ, ಅದೇ ಅವಳನ್ನು ಬದುಕಿಸಬಹುದು. ನನ್ನ ಮದುವೆ ನೋಡಬೇಕೆಂಬ ಛಲಕ್ಕಾದರೂ ಅವಳು ಉಳಿಯಬಾರದೇಕೆ? ನನ್ನ ಮದುವೆ ಮಾಡಿಬಿಟ್ಟರೆ ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಹಾಗಾಗುವುದಿಲ್ಲವೇ?"

"ಆದರೆ....ಆದರೆ....ಆ ಆಸೆಯನ್ನು ಅವಳು ಉಳಿಸಿಕೊಂಡೇ ತೀರಿದರೆ ನಾನು ಹೇಗಿರಲಿ ಇಂದಿರಾ?"

"ಕೆಟ್ಟದ್ದನ್ನು ಯೋಚಿಸಬೇಡ ಅಣ್ಣಾ. ಸ್ವಲ್ಪ ವಯಸ್ಸಾದ ಮೇಲೆ ಹೀಗಾಗಿರುವುದರಿಂದ ಅಮ್ಮ ದುರ್ಬಲಳಾಗಿದ್ದಾಳೆ. ಅವಳು ಚೇತರಿಸಿಕೊಂಡರೂ ಚೇತರಿಸಿಕೊಳ್ಳಬಹುದು. ಒಂದು ಪಕ್ಷ ನೀನು ಮೋಹನನನ್ನು ಕರೆಸಿದೆ ಎಂದೇ ಇಟ್ಟುಕೊಳ್ಳೋಣ. ಅಲ್ಲಿಯ ಸಂದರ್ಭ ಹೇಗಿದೆಯೋ? ನಿಧಾನವಾಗಿ ಯೋಚಿಸಣ್ಣ. ದುಡುಕಬೇಡ. ಅಮ್ಮನ ಆಸೆಯನ್ನು ಪೂರಯಿಸುವ ಆಸೆ ನನಗೂ ಇದೆ. ಬೇಕಾದರೆ ಅಮ್ಮನನ್ನೇ ಒಂದು ಮಾತು ಕೇಳಿ ನೋಡೋಣ—"ಎಂದು ಇಂದಿರಾ ತಂದೆಗೆ ಹೇಳಿದಳು.

"ಆಗಲಿ ನಾನು ಕೇಳುತ್ತೇನೆ. ಲಲಿತ ಒಪ್ಪಿದರೆ ನಿನ್ನಡ್ಡಿ ಇಲ್ಲವಷ್ಟೆ?"—ಎನ್ನುತ್ತಾ ರಾಯರು ಮಗಳ ಮುಖ ನೋಡಿದರು.

"ಇಲ್ಲ"

ಮೋಹನನೊಡನೆ ಪುನರ್ಮಿಲನ ಅವಳಿಗೆ ತುಂಬಾ ಸಂತೋಷಕರವಾದುದಾದರೂ ಅವನನ್ನು ಅರ್ಧದಲ್ಲಿ ಕರೆಸಿಕೊಳ್ಳುವ ಸಂದರ್ಭ ಅವಳನ್ನು ದುಃಖಕ್ಕೀಡುಮಾಡಿತು.

"ಮೋಹನ, ಎಂತಹ ಸಂದರ್ಭದಲ್ಲಿ ನಿನ್ನನ್ನು ನೋಡಬೇಕಾಗಿದೆ."

ಎಂದವಳ ಮನಸ್ಸು ಕೊರಗಿ ನುಡಿಯಿತು.

ರಾತ್ರಿ ಎಂಟು ಗಂಟೆಯ ಸಮಯದಲ್ಲಿ ರಾಯರು ಹೆಂಡತಿಯ ರೂಮಿಗೆ ಹೋದಾಗ ಗಿರಿರಾಜ ಸೊಳ್ಳೆಪರದೆಯ ಮರೆಯಲ್ಲಿ ಸುಖವಾಗಿ ಮಲಗಿ ನಿದ್ರಿಸುತ್ತಿದ್ದ. ಪರದೆಯನ್ನು ಸರಿಸಿ ಕ್ಷಣಕಾಲ ಮಗುವನ್ನು ನೋಡಿ ನಂತರ ಹೆಂಡತಿಯ ಕಡೆ ತಿರುಗಿದರು. ಲಲಿತಮ್ಮ ಗಂಡನ ಮುಖವನ್ನೇ ತದೇಕ ಚಿತ್ತರಾಗಿ ನೋಡುತ್ತಿದ್ದರು.

ರಾಯರು ನಸುನಕ್ಕು

"ಗಿರಿ ತುಂಬಾ ಚೆನ್ನಾಗಿ ಬೆಳೆದಿದಾನೆ. ಒಂದು ತಿಂಗಳ ಮಗು ಆಗಲಿ ಕೈಕಾಲು ತುಂಬಿಕೊಂಡು ಪೈಲ್ವಾನ್ ಆದ ಹಾಗೆ ಆಗಿದ್ದಾನೆ"—ಎಂದರು.

ಲಲಿತಮ್ಮ ಹೆಮ್ಮೆಯಿಂದ

"ನಾನೇನು ಅವನಿಗೋಸ್ಕರ ಸ್ವಲ್ಪ ಕಷ್ಟ ಪಟ್ಟಿದೇನೆಯೇ? ಅವನ ಜನ್ಮಕ್ಕಾಗಿ ನನ್ನ ಸರ್ವಸ್ವವನ್ನೂ ಕೊಟ್ಟಿದೀನಿ. ಇನ್ನು ಪ್ರಾಣ ಒಂದು ಕೊಡೋದು ಬಾಕಿಯಿದೆ"—ಎಂದರು.

ರಾಯರು ಹೆಂಡತಿಯ ಹಾಸಿಗೆಯ ತುದಿಯಲ್ಲಿ ಕುಳಿತು ಆಕೆಯ ದುರ್ಬಲ ಹಸ್ತವನ್ನು ತಮ್ಮ ಕೈಲಿ ಹಿಡಿದು ಗದ್ಗದ ಕಂಠದಿಂದ ಹೇಳಿದರು.

"ಹೀಗೆ ಮಾತನಾಡಬೇಡ ಲಲಿತ. ನನಗೆ ತುಂಬಾ ದುಃಖವಾಗುತ್ತದೆ."

"ಆ 'ದಿನ' ನೀವು ಎದುರಿಸಲು ತಯಾರಾಗಿರಿ. ಅದೂ ಬಹಳ ದೂರವೇನಿಲ್ಲ."

"ನಾನು ನಿನ್ನ ಉಳಿಸಿಕೊಳ್ಳುತ್ತೇನೆ—ಹೇಗಾದರೂ."

ಲಲಿತಮ್ಮ ಗಂಡನ ಕಡೆ ನೋಡಿ ಮರುಕದಿಂದ ನಕ್ಕರು.

"ಅಯ್ಯೋ ಹುಡುಗಾ! ನನ್ನ ಉಳಿಸಿಕೊಳ್ಳುವುದೇ? ಬೆಳ್ಳಿಮೋಡವನ್ನು ನೀವು ಬಿಟ್ಟುಕೊಟ್ಟರೂ ಸಾಧ್ಯವಿಲ್ಲ ಅದು. ನಾನು ಹೋದರೆ ತಾನೆ ಏನು ನಷ್ಟ ? ನಿಮಗೆ ಇಂದಿರ ಇದಾಳೆ. ಗಿರಿ ಇದಾನೆ...."

"ಆದರೆ ನೀನಿದ್ದ ಹಾಗಾಯಿತೇ ?"

"ಇಲ್ಲ ಆದರೆ ಅದೇನೂ ಅಷ್ಟು ದೊಡ್ಡ ಕೊರತೆಯಲ್ಲ. ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ನಾನು ಪ್ರತ್ಯೇಕವಾಗಿ ಹೇಳಲೇಬೇಕಾಗಿಲ್ಲ"

"ಆಮೇಲೆ ನಾನು ಹೇಗಿರಲಿ ?"

"ಹೇಳಲೇ ?"

"ಹೂಂ."

ಕಾಂತಿಹೀನವಾಗಿದ್ದ ಕಣ್ಣುಗಳು ತುಂಟತನದ ಮಿಂಚಿನಿಂದ ಹೊಳೆದವು.

"ಇನ್ನೊಂದು ಮದುವೆ ಮಾಡಿಕೊಳ್ಳಿ."

"ಒಂದೇ ಮದುವೆ ಸಾಕೆ?"

"ಎರಡು ಮದುವೆ ಮಾಡಿಕೊಂಡರೆ ಸರ್ಕಾರದವರು ಶಿಕ್ಷೆವಿಧಿಸುತ್ತಾರೆ."

"ನೀನು ನನ್ನ ಬಿಟ್ಟು ಹೋಗುವುದಕ್ಕಿಂತಲೂ ಕಠಿಣವಾದ ಶಿಕ್ಷೆ ಬೇರೆ ಇದೆಯೇನು?"

"ಏನು ಮಾಡಲಿ ? ನನಗೂ ಈಗ ನಿಮ್ಮನ್ನೆಲ್ಲಾ ಬಿಟ್ಟು ಹೋಗಲು ಮನಸ್ಸಿಲ್ಲ. ಅಪರೂಪದ ಮಗ, ಮಗಳು, ದೊರೆಯಂತಹ ನೀವು, ಬೆಳ್ಳಿ ಮೋಡ, ಮಿನುಗುತಾರೆ—ಇವೆಲ್ಲವನ್ನೂ ಬಿಟ್ಟು ನಾನಾದರೂ ಹೇಗೆ ಹೋಗಲಿ ? ಆದರೆ ನಮಗೆ ಮೀರಿದ ಶಕ್ತಿಯ ಮುಂದೆ ನಮ್ಮಾಟ ಏನೇನೂ ನಡೆಯುವುದಿಲ್ಲ."

"ಇಷ್ಟೊಂದು ಸುಂದರವಾದ ಬದುಕನ್ನು ಒದರಿ ಸಾವನ್ನಪ್ಪುವುದು ನನಗೂ ಕಷ್ಟ....ಹುಂ....ಮುತ್ತೈದೆ ಸಾವು....ಎಷ್ಟು ಜನಕ್ಕೆ ಆ [illegible]ವಿದೆ? ನನ್ನ ಸಂಸಾರ ಚೆನ್ನಾಗಿರುವಾಗಲೇ ಸುಮಂಗಲಿಯಾಗಿ ಸಾಯುವುದು ಒಂದು ಅದೃಷ್ಟ. ಆದರೆ ಒಂದಾಸೆ ನನ್ನಲ್ಲೇ ಉಳಿಯಿತು."

"ಇಂದಿರೆಯ ಮದುವೆ ?"

ಲಲಿತಮ್ಮ ತಲೆ ಅಲುಗಿಸಿದರು.

"ಲಲಿತಾ, ನಿನ್ನ ಕಣ್ಣೆದುರಿನಲ್ಲೇ ಇಂದಿರೆಯ ಮದುವೆ ಮಾಡುತ್ತೇನೆ. ಒಪ್ಪುವೆಯಾ?"

"ಹೇಗೆ, ಹೇಗೆ...." ಎನ್ನುತ್ತಾ ಆಕೆ ಎದ್ದು ಕೂರಲು ಯತ್ನಿಸಿದರು.

"ಏಳಬೇಡ....ಮಲಗಿಕೊಂಡೇ ಮಾತನಾಡು...." ಎನ್ನುತ್ತಾ ರಾಯರು ಅರ್ಧ ಎದ್ದಿದ್ದ ಹೆಂಡತಿಯನ್ನು ನಿಧಾನವಾಗಿ ಮಲಗಿಸಿದರು.

ಭಾವೋದ್ವೇಗದ ಕಾವಿನಿಂದಾಗಿ ಆಕೆಯ ಬಿಳುಪೇರಿದ ಹಣೆಯ ಮೇಲೆ ಬೆವರಿನ ಹನಿಗಳು ಕಾಣಿಸಿಕೊಂಡವು.

"ಸ್ವಲ್ಪ ಸುಧಾರಿಸಿಕೋ....ನನ್ನ ಮನಸ್ಸಿನಲ್ಲಿರುವುದನ್ನು ನಿನಗೆ ನಿಧಾನವಾಗಿ ಹೇಳುತ್ತೇನೆ. ಇಂದಿರ ಮದುವೆ ನೋಡಲು ನಿನಗೆ ಆಸೆಯಿದೆಯೆ?"

"ಹೂಂ. ಅವಳ ಮದುವೆ ನೋಡಲೆಂದೇ ನಾನಿನ್ನೂ ಬದುಕಿದ್ದೇನೆ."

"ಹಾಗಾದರೆ ನಾನು ಇಂದಿರೆಗೆ ಮದುವೆ ಮಾಡುವುದೇ ಇಲ್ಲ"—ಎಂದು ರಾಯರು ಖಂಡಿತವಾಗಿ ಹೇಳಿದರು.

"ಯಾಕೆ?"

"ನಾನು ಅವಳಿಗೆ ಮದುವೆ ಮಾಡಿಬಿಟ್ಟರೆ ನೀನು ಬದುಕಿದ್ದು ಸಾಕೆಂದು ನಿರ್ಧರಿಸಿಬಿಡುವೆಯೋ ಏನೋ?"

"ನನ್ನನ್ನು ಇಚ್ಛಾಮರಣಿ ಎಂದು ತಿಳಿದಿರುವಿರಾ?"

—ಲಲಿತಮ್ಮ ನಗಲು ಯತ್ನಿಸಿದರು.

"ಲಲಿತ, ಮೋಹನ ಬರುವವರೆಗೆ ಜೀವ ಹಿಡಿದಿರಲಾರೆಯಾ?"—ರಾಯರು ದೈನ್ಯದಿಂದ ಕೇಳಿದರು.

"ಎಲ್ಲವೂ ನನ್ನ ಕೈಯಲ್ಲಿದೆ ಎನ್ನುವ ಹಾಗೆ ಕೇಳುತ್ತಿರುವಿರಲ್ಲಾ?"

"ಮನಸ್ಸಿಗಿಂತ ದೊಡ್ಡದು ಯಾವುದಿದೆ?"

ಮೃತ್ಯು"

"ನೀನು ಮನಸ್ಸು ಮಾಡಿ ಬದುಕಲು ಪ್ರಯತ್ನಿಸು ಲಲಿತಾ. ಸಾವಿನ ಯೋಚನೆ ಎಂದಿಗೂ ನಿನ್ನ ಮನಸ್ಸಿನಲ್ಲಿ ಸುಳಿಯದಿರಲಿ. ಇಂದಿರಾ, ಗಿರಿ ಇಬ್ಬರಿಗೂ ಮದುವೆ ಮಾಡಿ ನಂತರ ನಾವಿಬ್ಬರೂ ಒಟ್ಟಿಗೆ ಸಾಯೋಣ."

ಲಲಿತಮ್ಮ "ಗಿರಿಯ ಮದುವೆ !" ಎನ್ನುತ್ತಾ ನಕ್ಕರು.

"ಇಂದಿರೆಯ ಮದುವೆಯನ್ನು ತುಂಬಾ ವಿಜೃಂಭಣೆಯಿಂದ ಮಾಡಬೇಕೆಂದು ನಾನು ನಿರ್ಧರಿಸಿದ್ದೇನೆ. ಹುಡುಗನಿಗೆ ಒಂದು ಚಮಚದಿಂದ ಹಿಡಿದು....ಕೇಳ್ತಿದೀಯ ಲಲಿತಾ...."

ಲಲಿತಮ್ಮ ಕಣ್ಣು ಮುಚ್ಚಿ ಮಗಳ ಮದುವೆಯ ವರ್ಣನೆಯನ್ನು ಪತಿಯ ಬಾಯಿಂದ ಕೇಳತೊಡಗಿದರು.

'ಇಂದಿರಾ, ಮೋಹನ....' ಎಂದು ಆಕೆ ಅಸ್ಪಷ್ಟವಾಗಿ ಗೊಣಗಿದರು.

ರಾಯರು ಬಹಳ ಹೊತ್ತು ಮಾತನಾಡಿದರು.

ಹೆಂಡತಿಯ ಕಡೆ ನೋಡಿದಾಗ ಜೋಗುಳಕ್ಕೆ ನಿದ್ದೆ ಹೋಗುವ ಮಗುವಿನಂತೆ ಆಕೆ ಪತಿಯ ಇನಿದನಿ ಕೇಳುತ್ತಾ ನಿದ್ರಿಸಿದ್ದರು.

ಒಣಗಿದ ತುಟಿಯ ಸುತ್ತಲೂ ಕಿರುನಗೆಯೊಂದು ಬಳಸಿಕೊಂಡಿತ್ತು.

ಬೆಳಗ್ಗೆ ಎಂಟು ಗಂಟೆಯಾದರೂ ಲಲಿತಮ್ಮ ಏಳಲಿಲ್ಲ.

'ನಿದ್ದೆ ಮಾಡ್ತಿರಬಹುದು. ಯಾಕೆ ಎಚ್ಚರಿಸಬೇಕು'—ಎಂದು ಎಲ್ಲರೂ ಸುಮ್ಮನಿದ್ದರು.

ಒಂಭತ್ತು ಗಂಟೆಯಾದರೂ ಆಕೆ ಏಳದಿರುವುದನ್ನು ಕಂಡು ರಾಯರು ತಳಮಳಗೊಂಡರು. ಕೊನೆಗೆ ಜೀವ ನಿಲ್ಲದೆ ಅವರು ಹೆಂಡತಿಯ ಹಾಸಿಗೆಯ ಬಳಿ ನಿಂತು ಮೃದುವಾಗಿ

'ಲಲಿತಾ !' ಎಂದರು.

ಆಕೆಯ ಹಣೆಯನ್ನು ಸವರಿದಾಗ ಅವರಿಗೆ ಲಲಿತಾ 'ಇಲ್ಲ' ಎಂಬುದು ತಿಳಿಯಿತು.

ಅವರು ತಮ್ಮ ಚೈತನ್ಯವನ್ನೆಲ್ಲ ಕಳೆದುಕೊಂಡು ಕುಸಿದರು.

ಮರುಗಳಿಗೆಯಲ್ಲಿ ಮನೆ ರೋದನದಿಂದ ತುಂಬಿತು. 'ಬೆಳ್ಳಿಮೋಡ'ದ ಕೂಲಿಯಾಳುಗಳೆಲ್ಲ ಮನೆಯ ಮುಂದೆ ಗುಂಪು ಗುಂಪಾಗಿ ನಿಂತಿದ್ದರು. ಅಕ್ಕ ಪಕ್ಕದ ಕಾಫಿತೋಟದೊಡೆಯರು ತಮ್ಮ ಸಂತಾಪವನ್ನು ವ್ಯಕ್ತಪಡಿಸಲು ರಾಯರನ್ನೂ, ಇಂದಿರೆಯನ್ನೂ ಹುಡುಕಿಕೊಂಡು ಬಂದಿದ್ದರು.

ರಾಯರಿಗೆ,ಇಂದಿರೆಗೆ ಯಾವ ಸಮಾಧಾನವೂ ಬೇಕಿರಲಿಲ್ಲ. ಲಲಿತಮ್ಮನ ಸಾವು ಅವರಿಗೆ ಅನಿರೀಕ್ಷಿತವಾದುದಾಗಿರಲಿಲ್ಲ. ಆದರೂ ರಾಯರು ದಿಕ್ಕುಗೆಟ್ಟಿದ್ದರು. ಇಂದಿರಾ ತಾಯಿಯಿಲ್ಲದ ತಬ್ಬಲಿಯಾಗಿದ್ದಳು.

ಈ ಗದ್ದಲದಲ್ಲಿ ಗಿರಿಯನ್ನು ಕೇಳುವವರೇ ಇರಲಿಲ್ಲ.

ಅವನು ತೊಟ್ಟಿಲಿನಲ್ಲಿ ಒಂದೇ ಸಮನೆ ಚೀರುತ್ತಿದ್ದ.

ಇಂದಿರ ಅವನ ಚೀರಾಟ ಕೇಳಲಾರದೆ ತೊಟ್ಟಿಲಿನಬಳಿ ನಿಂತು ಅವನನ್ನು ಎತ್ತಿಕೊಂಡು ಗದ್ಗದ ದನಿಯಲ್ಲಿ

"ಗಿರಿ.... ನಿನಗೆ ಅಮ್ಮನ ನೆನಪೂ ಇರುವುದಿಲ್ಲ. ಅಮ್ಮ ಇಲ್ಲ...."ಎಂದಳು.

ಆಗ ಅವಳ ಕಣ್ಣುಗಳಲ್ಲಿ ಕಂಬನಿಯುಕ್ಕಿತು. ಅದುವರೆವಿಗೂ ತಡೆದು ಹಿಡಿದಿದ್ದ ದುಃಖ ಮಗುವನ್ನು ನೋಡಿದ ಕೂಡಲೇ ಒತ್ತರಿಸಿಕೊಂಡು ಬಂದಿತು.

ರಾಯರು 'ಕೊನೆಗೂ ಇಂದಿರೆಯ ಮದುವೆ ನೋಡದೇ ನೀನು ಹೊರಟುಹೋದೆ'—ಎಂದು ಹಲುಬಿದರು.

ಮಗಳ ಮದುವೆಯಾಗುವವರೆಗಾದರೂ ಹೆಂಡತಿ ಬದುಕಿದ್ದರೆ ಚೆನ್ನಾಗಿತ್ತು ಎಂದವರು ಕೊರಗಿದರು.

ಹೆಂಡತಿಯ ಕೊನೆಯಾಸೆ ಮೊನಚಾದ ಮುಳ್ಳಾಗಿ ಅವರ ಹೃದಯದಲ್ಲಿ ಆಳವಾಗಿ ನಾಟಿಕೊಂಡಿತ್ತು.

ರಾಯರು ಹೆಂಡತಿಯ ಅಂತ್ಯಕರ್ಮಗಳನ್ನು ಶ್ರದ್ಧೆಯಿಂದ,ವೈಭವದಿಂದ ನೆರವೇರಿಸಿದರು.

"ಗಿರಿ ಅಂತ್ಯಕರ್ಮ ಮಾಡುವ ಹಾಗಾಗುವವರೆಗಾದರೂ ಲಲಿತ ಬದುಕಿದ್ದರೆ ಚೆನ್ನಾಗಿತ್ತು"–ಎಂದು ಆ ಗಳಿಗೆಯಲ್ಲಿ ರಾಯರಿಗೆ ಎನಿಸದೆ ಇರಲಿಲ್ಲ.

ಲಲಿತಮ್ಮ ಹೋದ ಸಮಾಚಾರವನ್ನು ರಾಯರೂ, ಇಂದಿರೆಯೂ ಬೇರೆ

ಬೇರೆಯಾಗಿ ಕಾಗದ ಬರೆದು ಮೋಹನನಿಗೆ ತಿಳಿಸಿದ್ದರು.

ಆತ ಸಂಕ್ಷೇಪವಾಗಿ 'ಹೀಗಾಗಬಾರದಾಗಿತ್ತು. ಸಮಾಧಾನತಂದುಕೊಳ್ಳಿ' –ಎಂದು ಬರೆದಿದ್ದ. ಮೋಹನನಿಂದ ಇನ್ನೂ ಹೆಚ್ಚಿನ ಸಮಾಧಾನ,ಸಹಾನುಭೂತಿಯನ್ನು ನಿರೀಕ್ಷಿಸಿದ್ದ ಇಂದಿರೆಗೆ ಅವನ ಚುಟುಕಾದ ಕಾಗದವನ್ನು ಓದಿ ನಿರಾಶೆಯಾಯಿತು.

"ಹುಂ, ಹೆತ್ತತಾಯಿಯ ಮೇಲೆ ನನಗಿರುವ ಪ್ರೀತಿ ಅವರಿಗೆಲ್ಲಿಂದ ಬರಬೇಕು? ಈಗ ಅವರ ತಾಯಿಯಲ್ಲಿ ನನಗೆ ಅವರಿಗಿರುವಷ್ಟು ಪ್ರೀತಿ ಇದೆಯೇ–" ಎಂದುಕೊಂಡು ಸಮಾಧಾನ ತಾಳಿದ್ದಳು.

ಕುಳಿತರೆ, ನಿಂತರೆ ತಾಯಿಯ ನೆನಪು ಇಂದಿರೆಯನ್ನು ಕಾಡುತ್ತಿತ್ತು.

ಬೀರುವೊಂದರ ತುಂಬ ಇದ್ದ, ಅರ್ಧವೂ ಖರ್ಚಾಗದೇ ಇದ್ದ ಟಾನಿಕ್ಕಿನ ಸೀಸೆಗಳನ್ನು ನೋಡಿದಾಗ ಇಂದಿರೆಯ ಕಣ್ಣುಗಳು ತೇವಗೊಳ್ಳುತ್ತಿದ್ದವು.

"ಈ ಟಾನಿಕ್ಕುಗಳು ಮುಗಿಯುವವರೆಗಾದರೂ ಅಮ್ಮ ಇರಬಾರದಾಗಿತ್ತೇ ?"–ಎಂದವಳು ನೊಂದುಕೊಳ್ಳುತ್ತಿದ್ದಳು.

ಲಲಿತಮ್ಮನ ಬಟ್ಟೆಗಳನ್ನು ರಾಯರು ಪುಟ್ಟಯ್ಯನ ಹೆಂಡತಿಗೂ, ತೋಟದಲ್ಲಿ ಕೆಲಸ ಮಾಡುವ ಇತರ ಹೆಂಗಸರಿಗೂ ಹಂಚಿಬಿಟ್ಟಿದ್ದರು.

ಆಕೆಯ ಒಡವೆಗಳನ್ನು ಮಾತ್ರ ಇಂದಿರೆಯ ಮದುವೆಗೆಂದು ರಾಯರು ಜೋಪಾನ ಮಾಡಿದರು.

ತಾಯಿ ಹೋದ ತರುಣದಲ್ಲಿ ಇಂದಿರಾ ಬಡಕಲಾಗಿದ್ದಳು. ಜೀವನದಲ್ಲಿ ಅವಳಿಗೆ ಆಸಕ್ತಿಯಾಗಲಿ, ಉತ್ಸಾಹವಾಗಲಿ ಇರಲಿಲ್ಲ. ತೋಟದ ಕೆಲಸವನ್ನೂ ಅಲಕ್ಷಿಸಿ ನಾಲ್ಕಾರು ದಿನ ಪ್ರಪಂಚವೇ ಬೇಡದವಳಂತೆ ಮನೆಯಲ್ಲಿಯೇ ಇದ್ದುಬಿಟ್ಟಳು.

ಆದರೆ ಅಂತಹ ಸಮಯದಲ್ಲೂ ಗಿರಿಯನ್ನು ನಿರ್ಲಕ್ಷಿಸುವುದು ಅವಳಿಂದಾಗುತ್ತಿರಲಿಲ್ಲ.

ಗಿರಿಗಾಗಿಯೇ ರಾಯರು ದಾದಿಯೊಬ್ಬಳನ್ನುನೇಮಿಸಿದ್ದರೂ,ಯಾರನ್ನೂ ನಂಬದ ಇಂದಿರ ತಮ್ಮನ ಉಪಚಾರವನ್ನು ಮಾತ್ರ ಯಾರಿಗೂ ಒಪ್ಪಿಸದೆ ತಾನೇ ಮಾಡುತ್ತಿದ್ದಳು.

ಅಮ್ಮನೆಂದರೆ ಏನೆಂದು ತಿಳಿಯದ, ಅಮ್ಮನ ನೆನಪೇ ಇಲ್ಲದ ಗಿರಿ ಅಕ್ಕನ ವಾತ್ಸಲ್ಯದಡಿಯಲ್ಲಿ ದಿನದಿನಕ್ಕೆ ದುಂಡಾಗಿ, ಮುದ್ದಾಗಿ ಬೆಳೆದ.

ಗಿರಿಯಿಂದ ಬೀಸಿ ಬರುತ್ತಿದ್ದ ಹೊಸ ಗಾಳಿಗೆ ಮೈಯೊಡ್ಡಿ ಬೆಳೆದ ಗಿರಿ

ರಾಜ ಆರೋಗ್ಯದಿಂದ ಮೆರೆಯುತ್ತಿದ್ದ.

ಕಾಫಿ ಹೂಗಳ ಸುವಾಸನೆ ಅವನ ಮುಖದಲ್ಲಿ ನಗೆಯ ಸೌರಭವನ್ನು ತುಂಬುತ್ತಿತ್ತು.

ಕೆನ್ನೆಯ ಕೆಂಪನ್ನು ಕಾಫಿ ಹಣ್ಣಿನಿಂದ ಅವನು ಎರವಲು ಪಡೆದಂತಿತ್ತು.

ಕ್ರಮೇಣ ಇಂದಿರೆಯ ದುಃಖ ಕಡಿಮೆಯಾದಂತೆ ಅವಳು ತೋಟದ ಕೆಲಸದಲ್ಲಿ ಮೊದಲಿನಂತೆಯೇ ಆಸಕ್ತಿ ವಹಿಸುತ್ತಿದ್ದಳು. ಎಂದಿನಂತೆಯೇ ತೋಟದಲ್ಲಿ ಅಲೆದಾಟ ಪ್ರಾರಂಭವಾಯಿತು.

ಆದರೆ ಈಗ ಇಂದಿರ ಮೊದಲಿನಂತೆ ಒಂಟಿಯಾಗಿ ಹೊರಡುತ್ತಿರಲಿಲ್ಲ.

ಇಂದಿರ, ಗಿರಿ, ರಾಯರು ತೋಟದ ಮೇಲುಸ್ತುವಾರಿಗೆ ಹೊಗುತ್ತಿದ್ದರು. ಇಂದಿರ ಕೈಲಿ ಕತ್ತಿ ಹಿಡಿದು ಮುಂದೆ ಮುಂದೆ ಹೋಗುತ್ತಿದ್ದಳು. ಅವಳ ಹಿಂದೆ ರಾಯರು ಮಗುವನ್ನೆತ್ತಿಕೊಂಡು ಬರುತ್ತಿದ್ದರು.

ರಾಯರು ಊರಿನಲ್ಲಿಲ್ಲದ ದಿನಗಳಲ್ಲಿ ಗಿರಿ ಪುಟ್ಟಯ್ಯನ ತೋಳುಗಳಲ್ಲಿ ಸವಾರಿ ಮಾಡುತ್ತಾ ಹೊರಡುತ್ತಿದ್ದ.

ಮರಗಳ ನೆರಳಿನಲ್ಲಿ ಅವನ ಸುಪ್ಪತ್ತಿಗೆಯನ್ನು ಸಿದ್ಧಪಡಿಸಿ, ಹಲವು ಬಗೆಯ ಆಟದ ಸಾಮಾನುಗಳನ್ನು ಅವನ ಸುತ್ತಲೂ ಹರಡಿ ಇಂದಿರ ಆಳುಗಳ ಕೆಲಸ ನೋಡಲು ಹೋಗುತ್ತಿದ್ದಳು.

ಐದು ನಿಮಿಷಗಳಿಗೊಮ್ಮೆ ಗಿರಿಯನ್ನು ಬಂದು ನೋಡಿಕೊಂಡು ಹೋಗುತ್ತಿದ್ದಳು ಇಂದಿರಾ. ಕೆಲಸದಲ್ಲಿ ತಲ್ಲೀನಳಾಗಿ ತನ್ನನ್ನು ಮರೆತ ಅಕ್ಕನನ್ನು ಗಿರಿ ದೇವರು ಕೊಟ್ಟ ಗಂಟಲಿನಿಂದ ಹತ್ತಿರಕ್ಕೆ ಬರಮಾಡಿಕೊಳ್ಳುತ್ತಿದ್ದ. ಆವನ ಆರ್ಭಟಕ್ಕೆ ಹೆದರಿ ಇಂದಿರ ಅಲ್ಲಿಯವರೆವಿಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ.

'ಅತ್ತರೆ, ಕೂಗಿದರೆ ಮಗುವಿಗೆ ಆಯಾಸವಾಗುವುದು'–ಎಂದು ಇಂದಿರ ಹೆದರುತ್ತಿದ್ದಳು.

ಒಂದು ಸಲ ಇಂದಿರ ತಮ್ಮನನ್ನು ಹೊಂಗೆ ಮರದ ನೆರಳ ಕೆಳಗೆ ಮಲಗಿಸಿ ಹೋಗಿದ್ದಳು. ಹತ್ತು ನಿಮಿಷದ ನಂತರ ಅವಳು ಹಿಂತಿರುಗಿ ಬಂದು ನೋಡಿದಾಗ ಗಿರಿ ಬಿಸಿಲಿನಲ್ಲಿ ಮಲಗಿದ್ದ.

ತಾನೇನಾದರೂ ಮರೆತು ಮಗುವನ್ನು ಬಿಸಿಲಿನಲ್ಲಿಯೇ ಮಲಗಿಸಿಹೋದನೇನೋ ಎಂದು ಇಂದಿರಅನುಮಾನಿಸುವಷ್ಟರಲ್ಲಿ,ಗಿರಿ ಅಕ್ಕನ ಮುಖವನ್ನು ನೋಡಿ ನಗುತ್ತಾ ಈಜಿಕೊಂಡು, ನಾಲ್ಕು ಹೆಜ್ಜೆ ಮುಂದೆ ಸರಿದು ತನ್ನ

ಸಾಹಸಕಾರ್ಯವನ್ನು ಪ್ರದರ್ಶಿಸಿದ.

ಇಂದಿರೆಯ ಅನುಮಾನ ಪರಿಹಾರವಾಯಿತು.

'ಸಧ್ಯ. ದಿಬ್ಬ, ದಿಣ್ಣೆ ಇದ್ದಿದ್ದರೆ ಏನು ಗತಿಯಾಗುತ್ತಿತ್ತು ? ಇನ್ನು ಮೇಲೆ ಮಗುವನ್ನು ಒಂಟಿಯಾಗಿ ಬಿಟ್ಟುಹೋಗುವುದು ಅಪಾಯ'—ಎಂದುಕೊಂಡಳು ಇಂದಿರ.

ರಾತ್ರಿ ರಾಯರ ಎದುರಿನಲ್ಲಿ ಇಂದಿರ ತಮ್ಮನ ಶೌರ್ಯವನ್ನು ವಿವರಿಸಿ "ಇನ್ನು ಮೇಲೆ ಅವನನ್ನ ತೋಟಕ್ಕೆ ಕರೆದುಕೊಂಡು ಹೋಗುವುದು ಅಪಾಯ ಅಣ್ಣ"—ಎಂದಳು.

"ಹೌದಮ್ಮ, ನಡಿಗೆ ಬರುವವರೆವಿಗೆ ಗಿರಿ ಮನೆಯಲ್ಲಿ ಇರಲಿ"–ಎಂದರು ರಾಯರು.

ಮಾರನೆಯದಿನ ಇಂದಿರಾ ಗಿರಿಯನ್ನು ಮನೆಯಲ್ಲಿಯೇ ಬಿಟ್ಟುಹೋದಳು. ಅವಳು ಮನೆಗೆ ಬರುವ ಹೊತ್ತಿಗೆ ಗಿರಿ ಮನೆಯಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಎಬ್ಬಿಸಿದ್ದ. ಇಂದಿರ ಮನೆಗೆ ಬಂದಾಗ ಗಿರಿ ಅತ್ತು ಬಳಲಿ ಮಲಗಿದ್ದ.

"ಶಾನೆ ರಂಪ ಮಾಡಿದ"–ಎಂದಳು ದಾದಿ.

ಕೊನೆಗೆ ತಂದೆಯ ಸಲಹೆಯಂತೆ ಇಂದಿರ ನಾಲ್ಕೂ ಕಡೆ ಕಟಕಟೆಯುಳ್ಳ ಬೆತ್ತದ ತೊಟ್ಟಿಲನ್ನು ತೆಗೆಸಿಕೊಂಡು ಹೋಗಿ ನೆರಳಿನಲ್ಲಿ ಹಾಕಿಸಿ, ಅದರಲ್ಲಿ ಗಿರಿಯನ್ನು ಮಲಗಿಸಿ ನಿಶ್ಚಿಂತೆಯಿಂದ ತೋಟವನ್ನು ಸುತ್ತಾಡಿ ಬರುತ್ತಿದ್ದಳು.

ಈಗ ಗಿರಿಗೆ ತೊಟ್ಟಿಲಿನಲ್ಲಿ ಮರದ ಬೊಂಬೆಯಂತೆ ಮಲಗಲು ಬೇಸರವಾಗುತ್ತಿತ್ತು. ಕೈಕಾಲುಬಡಿದು ಅವನು ತನ್ನ ಅಸಮಾಧಾನವನ್ನು ಅಕ್ಕನಿಗೆ ಸೂಚಿಸಿದ. ತನ್ನ ಅಸಮಾಧಾನಕ್ಕೆ ಆಕೆ ಯಾವ ಬೆಲೆಯನ್ನೂ ಕೊಡದಿರುವುದನ್ನು ನೋಡಿ ಕುಪಿತನಾಗಿ ಮೂಗನ್ನು ತೊಟ್ಟಿಲಿಗೆ ಜಜ್ಜಿ ರಕ್ತ ಬರಿಸಿಕೊಂಡು ಆಕೆಯ ಗಮನವನ್ನೂ, ಕನಿಕರವನ್ನೂ ಸಂಪಾದಿಸಿ ವಿಜಯಿಯಾದ.

"ಇನು, ಮೇಲೆ ಇವನನ್ನು ತೊಟ್ಟಲಿನಲ್ಲಿ ಬಿಟ್ಟು ಹೋಗೋಕಾಗೋದಿಲ್ಲ ಅಣ್ಣ. ಇವತ್ತು ಮೂಗು ಜಜ್ಜಿಕೊಂಡು ರಕ್ತ ಬರಿಸಿಕೊಂಡಿದ್ದ" ಎಂದು ಇಂದಿರ ರಾತ್ರಿ ತಂದೆಗೆ ವರದಿಯೊಪ್ಪಿಸಿದಳು.

"ಮನೆಯಲ್ಲಿಯೇ ಬಿಟ್ಟು ಹೋದರೆ ಹೇಗೆ ?"

"ಅದೂ ಆಗೋದಿಲ್ಲ ಅಣ್ಣ. ಮನೆಯಲ್ಲಿ ನನ್ನ ಕಾಣದೆ ಅತ್ತು ಅತ್ತು ಬಳಲಿಬಿಡುತ್ತಾನೆ. ಮಗೂನ ಅಷ್ಟೊಂದು ಅಳಿಸುವುದು ನನ್ನಿಂದಾಗದ ಕೆಲಸ"–ಎಂದು ಇಂದಿರ ಆತಂಕದಿಂದ ಹೇಳಿದಳು.

"ಹಾಗಾದರೆ ನೀನು ಅವನನ್ನು ಎತ್ತಿಕೊಂಡು ಹೋಗಿ ತೋಟವನ್ನೆಲ್ಲಾ ಒಂದು ಸುತ್ತು ಹಾಕಿಸಿ ಅವನನ್ನು ಕರೆದುಕೊಂಡು ಬಂದುಬಿಡು. ಆಮೇಲೆ ಬೇಕಾದರೆ ನೀನು ಹೋಗುವಿಯಂತೆ ಮತ್ತೆ"—ಎಂದು ರಾಯರು ಸಲಹೆ ಕೊಟ್ಟರು.

ಇಂದಿರೆಗೆ ಅದು ಒಪ್ಪಿಗೆಯಾಯಿತು.

ಮಾರನೆಯ ದಿನ ಇಂದಿರ ಗಿರಿಯನ್ನು ಎತ್ತಿಕೊಂಡು ಹೊರಟಳು.

ದುಂಡಗೆ ಆರೋಗ್ಯವಾಗಿ ಬೆಳೆದಿದ್ದ ಮಗುವನ್ನು ಎತ್ತಿಕೊಂಡು ದಿಬ್ಬಗಳನ್ನೇರುವಾಗ ಇಂದಿರೆಗೆ ತುಂಬಾ ಶ್ರಮವಾಯಿತು. ಬೆವರು ಕೊರಳಿನಿಂದ ಹರಿಯಿತು.

ಇಂದಿರ ಪ್ರತಿಯೊಂದು ಗಿಡದ ಮುಂದೆಯೂ ನಿಂತು ತಮ್ಮನಿಗೆ ಅದರ ಪರಿಚಯ ಮಾಡಿಕೊಟ್ಟಳು.

ಟ್ಯಾಂಕಿನ ನೀರು ಹರಿಯುವ ಜಾಗದ ಅಕ್ಕಪಕ್ಕಗಳಲ್ಲಿ ಕಾಫಿಗಿಡಗಳು ನೀರನ್ನುಂಡು ಹೇರಳವಾಗಿ ಹಸಿರುಕಾಯಿಗಳ ಜೊಂಪೆಯನ್ನು ಹೊತ್ತು ನಿಂತಿದ್ದವು.

"ನೋಡು ಕಾಯಿ ಹೇಗೆ ಬಿಟ್ಟಿದೆ...." ಎಂದಳು ಇಂದಿರ.

ಗಿರಿ ತಟ್ಟನೆ ಬಾಗಿ ಜೊಂಪೆಯನ್ನು ಹಿಡಿದುಕೊಂಡ.

"ಬಿಡಮ್ಮ. ಬಿಟ್ಟುಬಿಡು ಛೀ....ಹೀಗೆಲ್ಲಾ ಮಾಡಿದರೆ ನಿನ್ನ ಇನ್ನು ಮೇಲೆ ಇಲ್ಲಿಗೆ ಕರೆದುಕೊಂಡು ಬರುವುದಿಲ್ಲ"—ಎಂದಳು.

ಗಿರಿ ಕಾಯಿಯನ್ನು ಬಿಡಲಿಲ್ಲ. ತನ್ನ ಕಪಿಮುಷ್ಠಿಯಲ್ಲಿ ಅದನ್ನು ಬಿಗಿಯಾಗಿ ಹಿಡಿದಿದ್ದ.

ಇಂದಿರ ಮಗುವಿನ ಕಿವಿಯಲ್ಲಿ ನಗುತ್ತಾ ಹೇಳಿದಳು.

"ಈ ಕಾಯಿಗಳ ಒಳಗೆ ಮುತ್ತು, ರತ್ನ, ಪಚ್ಚೆ ಎಲ್ಲಾ ಇದೆಯಂತೆ ಕಣೋ. ಹಾಗೆಂದು ಜನ ಹೇಳುತ್ತಾರೆ. ಆದರೆ ಅವರಿಗಾರಿಗೂ ಗೊತ್ತಿಲ್ಲ. ಮುತ್ತು ರತ್ನ ಪಚ್ಚೆ ಇರೋದು ಗಿಡದಲ್ಲಲ್ಲ. ಮಿನುಗುತಾರೆಯ ತೊಟ್ಟಿಲಲ್ಲಿ ಇದೇಂತ...."ಎನ್ನುತ್ತಾ ಮಗುವಿನ ಕೈಯಿಂದ ಸಣ್ಣ ರೆಂಬೆಯನ್ನು ಬಿಡಿಸಿದಳು.

ಕೆಂಪಗಾಗಿದ್ದ ಮಗುವಿನ ಅಂಗೈಗೆ ಮುತ್ತಿಟ್ಟು ಇಂದಿರ ಮುಂದೆ ನಡೆದಳು.

ಎದುರಿಗೆ ಸಿಕ್ಕಿದ ಪುಟ್ಟಯ್ಯನನ್ನು ಕುರಿತು ಇಂದಿರ ಹೇಳಿದಳು

"ಇವನ್ನ ಕರೆದುಕೊಂಡು ಹೋಗು. ಈ ಧಾಂಡಿಗನ್ನ ಎತ್ತಿಕೊಂಡು ಹೋಗುವುದು ನನ್ನಿಂದಾಗುವುದಿಲ್ಲ.

"ಬನ್ನಿ ಚಿಕ್ಕರಾಯರೇ"—ಎಂದು ಪುಟ್ಟಯ್ಯ ಕೈನೀಡಿದ.

ಗಿರಿ ಅವನ ಕಡೆ ತಿರುಗಿಯೂ ನೋಡಲಿಲ್ಲ.

"ಅಮ್ಮಯ್ಯ, ಅವನಿಗೆ ನಾನು ಬೇಕಿಲ್ಲ"—ಎಂದ ಪುಟ್ಟಯ್ಯ.

"ನಿನ್ನ ನಶ್ಯಕ್ಕೆ ಹೆದರುತ್ತಾನೆ ಗಿರಿ."

"ನಾನು ಅವನ ಮುಖದ ಮೇಲಿರುವ ಪೌಡರಿಗೆ ಹೆದರುತ್ತೇನೆ. ಅವನಿಗೆ ಯಾಕೆ ಅಷ್ಟೊಂದು ಪೌಡರು ?"

"ಬೆವರುಗುಳ್ಳೆ ಬಾರದಿರಲಿ ಎಂದು ಹಾಕುತ್ತೇನೆ. ಹೇಗೆ ಬೆಳೀತಿದಾನೆ ಈ ಗೂಂಡಾ?"—ಇಂದಿರ ಹೆಮ್ಮೆಯಿಂದ ಕೇಳಿದಳು.

"ಕೊಬ್ಬಿದ ಕಾಡುಕೋಣ."

"ಥೂ. ನೀನು ಹಾಳಾದೆ. ಕಾಡುಕೋಣಕ್ಕೆ ಈ ಮುದ್ದು ಮಗು ವನ್ನು ಹೋಲಿಸಿದರೆ ನಿನಗೆ ಬೇರೊಂದು ನರಕ ಸೃಷ್ಟಿಯಾಗಿರುತ್ತದೆ."

"ಮತ್ತೆ ಯಾರಿಗೆ ಹೋಲಿಸಲಿ ಅವನನ್ನು ?"

"ಹೂವು. ಊಹೂಂ ಸರಿಯಲ್ಲ. ಚಂದ್ರ....ಅದೂ ಸರಿಯಾಗಿಲ್ಲ. ಅವನನ್ನು ಯಾರಿಗೂ ಹೋಲಿಸಬೇಡ. ಗಿರಿ ಗಿರಿಯೇ ಸರಿ. ಕರೆದು ಕೊಂಡು ಹೋಗು ಪುಟ್ಟಯ್ಯ."

"ಬಾಪ್ಪ. ಅವನು ತನ್ನ ಮುಖದ ಪೌಡರನ್ನೆಲ್ಲಾ ನನಗೆ ಬಳಿದು ಬಿಡು ತ್ತಾನೆ. ಆಮೇಲೆ ನನ್ನ ಹೆಂಡತಿ ನನ್ನ ತರಾಟೆಗೆ ತಗೋತಾಳೆ...."

"ಹೂಂ. ಅವಳೂ ಸುಮ್ಮನೆ ಅನುಮಾನ ಪಡೋದಿಲ್ಲವಲ್ಲ. ಆಮ್ಯಾಗಂ ಮಗಳು ನೀಲಿ ಹತ್ತಿರ ನೀನೇನು ಕಡಿಮೆ ಆಟ ಆಡುತ್ತೀಯ?"

"ಅದು ನನಗೆ ಮಗಳಿದ್ದ ಹಾಗೆ ಅಮ್ಮಯ್ಯ. ನೀಲಿಯೂ ಪೌಡರ್ ಹಚ್ಚುತ್ತಾಳೆ. ಆದರೆ ನನ್ನ ಮುಖಕ್ಕೆ ಪೌಡರ್ ಬಳಿಯುವ ಧೈರ್ಯ ಇರೋದು ಗಿರಿಯಪ್ಪನಿಗೆ ಮಾತ್ರ."

ಇಂದಿರ ನಕ್ಕಳು.

ನಿರ್ಮಲವಾದ ನಗುವನ್ನು ಯಾವುದೋ ಯೋಚನೆಯೊಂದು ಕಟ್ಟಿ ಹಾಕಿತು.

"ಏನಾಯಿತು ಅಮ್ಮಯ್ಯ ?"

"ಕಾಗದ ಬಂತೇ ?"

"ಕಾಣಲಿಲ್ಲ. ರಾಯರಿಗೆ ಬಂದ ಹಾಗಿತ್ತು."

ಮೋಹನನದಿರಬಹುದೇ ?

ಇಂದಿರೆಗೆ ತಿಳಿದುಕೊಳ್ಳುವ ತವಕವಾಯಿತು.

"ಬಾರಣ್ಣ"—ಎಂದು ಪುಟ್ಟಯ್ಯ ಕೈನೀಡಿದ.

"ಇರಲಿ ನಾನೇ ಹೋಗುತ್ತೇನೆ"—ಎನ್ನುತ್ತಾ ಇಂದಿರ ಮನೆಯ ಕಡೆ ಹೊರಟಳು.

ತಂದೆ ಸ್ನಾನ ಮಾಡುತ್ತಿದ್ದರು.

ಇಂದಿರ ಆತುರದಿಂದ ಹೋಗಿ ಅವರಿಗೆ ಬಂದಿದ್ದ ಕಾಗದವನ್ನು ಕೈಗೆತ್ತಿ ಕೊಂಡು ವಿಳಾಸವನ್ನು ನೋಡಿದಳು.

ಕಾಗದ ಮೋಹನನದಾಗಿರಲಿಲ್ಲ

ಇಂದಿರೆಗೆ ತುಂಬಾ ನಿರಾಶೆಯಾಯಿತು.

ಹುಷಾರಾಗಿದಾರೋ ಇಲ್ಲವೊ ?

ಆತಂಕ, ಗಾಬರಿಯಿಂದ ಇಂದಿರೆಗೆ ಏನು ಮಾಡಲೂ ತೋರಲಿಲ್ಲ.

ನಾಳೆ ಒಂದು ದಿನ ನೋಡಿ ಕೇಬಲ್ ಕಳಿಸಿ ಕ್ಷೇಮಸಮಾಚಾರ ತಿಳಿದು ಕೊಳ್ಳಬೇಕು ಎಂದುಕೊಂಡಳು ಇಂದಿರ.

ಮಾರನೆಯ ದಿನವೂ ಮೋಹನನಿಂದ ರಾಯರಿಗಾಗಲಿ, ಇಂದಿರೆಗಾಗಲಿ ಕಾಗದ ಬರಲಿಲ್ಲ.

ಇಂದಿರೆಗೆ ನಿಜವಾಗಿಯೂ ಕಳವಳಕ್ಕಾರಂಭವಾಯಿತು. ಮೋಹನ ಎಂದೂ ಇಷ್ಟು ತಡವಾಗಿ ಉತ್ತರ ಬರೆದವನಲ್ಲ. ಈ ಬಾರಿ ಹೀಗೆ ಮಾಡಲು ಕಾರಣವೇನು ?

ಇಂದಿರೆಗೆ ರಾತ್ರಿ ನಿದ್ದೆ ಬರಲಿಲ್ಲ.

ಮಾರನೆಯ ದಿನ ಬೆಳಗಾದ ಕೂಡಲೇ ಇಂದಿರ ರಾಯರ ಬಳಿಗೆ ಹೋಗಿ, "ಅಣ್ಣಾ, ಅವರಿಗೊಂದು ಕೇಬಲ್ ಕಳಿಸಬೇಕು"—ಎಂದಳು.

ರಾಯರು ಮಾತನಾಡಲಿಲ್ಲ.

ಆ ದಿನವೇ ಇಂದಿರೆಯಿಂದ ಮೋಹನನಿಗೆ ಕೇಬಲ್ ಹೋಯಿತು. ಕೇಬಲ್ ತಲುಪಿದ ಕೂಡಲೇ ಇಂದಿರೆಗೆ ಮೋಹನನಿಂದ ಉತ್ತರಬಂದಿತು.

"ಗಾಬರಿಯಾಗಬೇಡ. ಓದುವುದಿರುತ್ತದೆ. ಏನೂ ಸುದ್ದಿಯಿಲ್ಲದಿದ್ದರೆ ಶುಭ ಸುದ್ದಿ ಎಂದು ಭಾವಿಸು."

ಸಧ್ಯ! ಮೋಹನ ಕ್ಷೇಮವಾಗಿದ್ದಾನೆ ಎಂದು ತಿಳಿದು ಭಾರವಾಗಿದ್ದ ಇಂದಿರೆಯ ಹೃದಯ ಹಗುರವಾಯಿತು.

ವ್ಯಾಸಂಗದ ನಡುವೆ ತನ್ನ ಕೇಬಲ್ ಹೋಗಿ ಅವರನ್ನು ಎಷ್ಟು ಗಾಬರಿ ಗೊಳಿಸಿತೋ ಎಂದು ಇಂದಿರ ತನ್ನನ್ನು ನಿಂದಿಸಿಕೊಂಡಳು.

ಇಂದಿರ ತನ್ನ ಪ್ರತಿಯೊಂದು ಕಾಗದದಲ್ಲಿಯೂ ಗಿರಿಯ ಆಟಪಾಟಗಳು, ಅವನ ಬೆಳವಣಿಗೆ, ತುಂಟತನ ಮುಂತಾದವುಗಳನ್ನು ಕುರಿತು ವಿವರವಾಗಿ ಬರೆಯುತ್ತಿದ್ದಳು.

'ಗಿರಿ ಈ ದಿನ ಮಗುಚಿಕೊಂಡ, ಮುಂದೆ ಹೋಗುತ್ತಾನೆ, ಮುಖ ನೋಡಿ ನಗುತ್ತಾನೆ, ನನ್ನ ಪರಿಚಯ ಚೆನ್ನಾಗಿಟ್ಟುಕೊಂಡಿದ್ದಾನೆ. ಸ್ನಾನ ಮಾಡಿಸಲು, ಹಾಲು ಕುಡಿಸಲು ನಾನೇ ಆಗಬೇಕು. ಇಲ್ಲದಿದ್ದರೆ ಸತ್ಯಾಗ್ರಹ ಹೂಡುತ್ತಾನೆ. ಗಿರಿಗೆ ಎರಡು ಹಲ್ಲು ಬರುತ್ತಿವೆ. ಅದರಿಂದಾಗಿ ಮೈ ಬೆಚ್ಚಗಾಗಿದೆ.—ಮಗು ಬಡವಾಗಿದೆ—ಅವನ ಬೋಳುತಲೆ ಈಗ ಗುಂಗುರುಗಳಿಂದ ತುಂಬಿದೆ–ಇನ್ನು ಹದಿನೈದು ದಿನಕ್ಕೆ ಅನ್ನ ಪ್ರಾಶನವಿರಿಸಿ ಕೊಂಡಿದಾರೆ–ನೀವೂ ಇದ್ದಿದ್ದರೆ ಚೆನ್ನಾಗಿತ್ತು. ಈಗ 'ಅಕ್ಕ' ಎನ್ನುತ್ತಾನೆ...."

ತನ್ನ ತಮ್ಮನ ಬಾಲಲೀಲೆಗಳನ್ನು ಕುರಿತು ಮೋಹನನಿಗೆ ಕಾಗದ ಬರೆಯುವುದರಲ್ಲಿ ಇಂದಿರೆಗೆ ಅಪಾರ ಸಂತೋಷವಾಗುತ್ತಿತ್ತು. ಅವುಗಳನ್ನು ಓದಿ ಮೋಹನನೂ ಅಷ್ಟೇ ಸಂತೋಷಪಡುತ್ತಾನೆ ಎಂದು ಅವಳಿಗೆ ಸಂಪೂರ್ಣ ನಂಬಿಕೆಯಿತ್ತು.

ಗಿರಿಯಂತೂ ಈಗ ಮುದ್ದಿನ ಮುದ್ದೆಯಾಗಿದ್ದ.

ತೋಟದ ಕೂಲಿಯಾಳುಗಳಿಂದ ಮೊದಲುಗೊಂಡು ರಾಯರವರೆಗೆ ಎಲ್ಲರೂ ಅವನನ್ನು ಮುದ್ದಿಸುತ್ತಿದ್ದರು. ಎಲ್ಲರ ಹೆಗಲ ಮೇಲೆಯೂ ಕುಳಿತು ಸವಾರಿ ಮಾಡುತ್ತಿದ್ದ–ಗಿರಿರಾಜ.

ಅವನಿಗೆ ಅತ್ಯಂತ ಪ್ರಿಯರಾದವರು ಇಂದಿರ ಹಾಗೂ ರಾಯರು.

ಮಗನ ಅನ್ನಪ್ರಾಶನವನ್ನು ರಾಯರು ತುಂಬಾ ವೈಭವದಿಂದ ನೆರವೇರಿಸಿದರು. ತೋಟದ ಕೂಲಿಯಾಳುಗಳು ಪಾಯಸದೂಟವನ್ನು ಉಂಡು ಮಗುವನ್ನು ಹರಸಿದರು.

ಒಮ್ಮೊಮ್ಮೆ ಇಂದಿರ ನೊಂದುಕೊಳ್ಳುತ್ತಿದ್ದಳು.

"ಮಗುವಿಗೆ ಅಮ್ಮನೆಂದರೆ ಏನೆಂದು ತಿಳಿಯದು. ತಬ್ಬಲಿ ಪಾಪ...."

ಮಗಳ ವ್ಯಥೆ ನೋಡಿ ರಾಯರು ಸಮಾಧಾನ ಮಾಡುತ್ತಿದ್ದರು.

"ತಬ್ಬಲಿ ಎಂದೇಕೆ ಹೇಳ್ತೀಯಾ ಇಂದಿರಾ? ನಾನಿದೀನಿ, ನೀನಿದೀಯ."

"ಆದರೂ ಅಮ್ಮ ಇದ್ದ ಹಾಗಾಯಿತೇನಣ್ಣ?" ಎಂದು ಇಂದಿರ ಕೇಳಿದಾಗ ರಾಯರಿಗೆ ಏನು ಹೇಳಲೂ ತೋರುತ್ತಿರಲಿಲ್ಲ. ಹೆಂಡತಿಯ ನೆನಪಿನಿಂದ ಅವರಿಗೂ ಹೃದಯ ಕದಡಿದಂತಾಗಿ ಅವರು ಆ ಸ್ಥಳ ಬಿಟ್ಟೆದ್ದು

ಹೊರಟು ಹೋಗುತ್ತಿದ್ದರು.

ಮೋಹನ ಒಮ್ಮೊಮ್ಮೆ ತನ್ನ ಪತ್ರದಲ್ಲಿ ಗಿರಿಯ ಯೋಗಕ್ಷೇಮ ವಿಚಾರಿಸುತ್ತಿದ್ದ. ಆಗ ಇಂದಿರ ಮೋಹನನಿಗೆ ಗಿರಿಯಲ್ಲಿ ಎಷ್ಟು ಅಭಿಮಾನ, ಪ್ರೀತಿ ಎಂದುಕೊಳ್ಳುತ್ತಿದ್ದಳು.

"ಗಿರಿ, ಭಾವ ಕಾಗದ ಬರೆದಿದಾರೆ ಕಣೋ. ನಿನ್ನ ಕೇಳಿದಾರೆ ಭಾವ...." ಎಂದು ಯಾರೂ ಇಲ್ಲದಾಗ ಅವನ ಕಿವಿಯಲ್ಲಿ ಪಿಸುಗುಟ್ಟಿ ತೃಪ್ತಿಪಟ್ಟು ಕೊಳ್ಳುತ್ತಿದ್ದಳು.

೦ ೦ ೦

ಮೋಹನ ಮರಳಿ ಬರುವ ದಿನ ಸಮೀಪಿಸುತ್ತಿತ್ತು. ತನ್ನ ವ್ಯಾಸಂಗ ಹಾಗೂ ಶಿಕ್ಷಣದಲ್ಲಿ ಅವನು ಯಶಸ್ಸನ್ನು ಗಳಿಸಿದ್ದ. ಹೋಗುವಾಗ ಹಡಗಿನಲ್ಲಿ ತೆರಳಿದ್ದ ಮೋಹನ ಬರುವಾಗಲೂ ಹಡಗಿನಲ್ಲಿ ಬರುವುದೆಂದು ನಿಶ್ಚಯವಾಗಿತ್ತು.

ಆತ ವಿಮಾನ ಹತ್ತಬಾರದೆಂದು ಆಗ್ರಹ ಮಾಡಿದವಳು ಇಂದಿರಾ. ದಿನ ಬೆಳಗಾದರೆ ವೃತ್ತಪತ್ರಿಕೆಗಳಲ್ಲಿ ವಿಮಾನ ಅಪಘಾತದ ಬಗ್ಗೆ ಸುದ್ದಿಗಳನ್ನು ಓದಿ ಇಂದಿರಾ ವಿಮಾನವೆಂದರೆ ಹೆದರಿ ನಡುಗುತ್ತಿದ್ದಳು.

ಮೋಹನ ಬರುವ ದಿನ ಹತ್ತಿರ ಬಂದಂತೆ ಇಂದಿರೆಗೆ, ರಾಯರಿಗೆ ಹರ್ಷ, ವ್ಯಥೆ ಎರಡೂ ಉಂಟಾದವು.

ಸುಮಾರು ಎರಡು ವರ್ಷಗಳಿಂದ ವಿದೇಶದಲ್ಲಿದ್ದ ಭಾವಿಪತಿ ತನ್ನಲ್ಲಿಗೆ ಹಿಂತಿರುಗಿ ಬರುವ ಸುದ್ದಿ ಇಂದಿರೆಗೆ ತುಂಬಾ ಪ್ರಿಯವಾಗಿತ್ತು.

ಮೋಹನ ಬಂದ ಕೂಡಲೇ ಅವರ ವಿವಾಹ ನೆರವೇರುವುದರಲ್ಲಿ ಸಂಶಯ ವಿರಲಿಲ್ಲ.

ತನ್ನ ಮದುವೆಯಾದೊಡನೆ ಗಿರಿಯನ್ನೂ, 'ಬೆಳ್ಳಿಮೋಡ'ವನ್ನೂ ಬಿಟ್ಟು ಮೋಹನನೊಡನೆ ಸಂಸಾರ ಹೂಡಲು ಹೋಗುವುದು ಮಾತ್ರ ಇಂದಿರೆಗೆ ಕೊಂಚ ವ್ಯಥೆಯನ್ನುಂಟು ಮಾಡಿತ್ತು.

ರಾಯರನ್ನೊಪ್ಪಿಸಿ ಗಿರಿಯನ್ನು ತನ್ನೊಡನೆ ಕರೆದೊಯ್ಯುವುದು ಇಂದಿರೆಗೆ ಸಾಧ್ಯವಿತ್ತು.

ಆದರೆ 'ಬೆಳ್ಳಿಮೋಡ'ವೋ ?

ಅದರ ನೆನಪು ಬಂದಾಗ ಆಕಾಶದ ಕಡೆ ಮುಖ ಮಾಡಿ ನಿಲ್ಲುವುದರ ಹೊರತು ಬೇರೆ ದಾರಿ ಇರಲಾರದು.

ಅಣ್ಣ ಗಿರಿಯನ್ನೂ ತನ್ನೊಟ್ಟಿಗೆ ಕಳುಹಿಸಲಾರರು.

ತಾನು ದೂರ ಹೋದ ಮೇಲೆ ತನ್ನಂತೆ ಮಗುವನ್ನು ನೋಡಿಕೊಳ್ಳುವವರು ಯಾರು ?

ಮೋಹನ ಮುಂಬಯಿಗೆ ಬರುವ ದಿನ ತಿಳಿದಿತ್ತು. ಆದಿನ ರಾಯರು ಮುಂಬಯಿಗೆ ಹೋಗಿ ಭಾವಿ ಅಳಿಯನನ್ನು ಎದಿರುಗೊಳ್ಳಬೇಕೆಂದು ನಿರ್ಧರಿಸಿದ್ದರು.

ಇಂದಿರೆಗೂ ತಂದೆಯೊಡನೆ ಹೋಗಿ ಮೋಹನನ್ನು ಸ್ವಾಗತಿಸುವ ಆಸೆ ಹೃದಯದ ತುಂಬಾ ತುಂಬಿಕೊಂಡಿತ್ತು.

ಸಧ್ಯದಲ್ಲಿಯೇ ವಧುವಾಗಲಿದ್ದ ಇಂದಿರೆಯನ್ನು ಯಾಕೆ ಅಲೆದಾಡಿಸಬೇಕು ಎಂದು ರಾಯರು ಯೋಚಿಸಿದ್ದರು

ಮೋಹನ ಬರುವುದಕ್ಕೆ ಇನ್ನೂ ಒಂದು ವಾರವಿದೆ ಎನ್ನುವಾಗ ತಂದೆ, ಮಗಳು ಮಾತನಾಡಿದ್ದರು.

ಗಿರಿಯನ್ನು ಪುಟ್ಟಯ್ಯ ಸುತ್ತಾಡಿಸಿಕೊಂಡು ಬರಲು ಹೋಗಿದ್ದ.

ಗಿರಿಗಾಗಿ ಇಂದಿರ ಸ್ವೆಟರು ಹಾಕುತಿದ್ದಳು.

"ನಾನು ಬೊಂಬಾಯಿಗೆ ಹೋಗುತ್ತೇನೆ. ಮೋಹನನ ತಾಯಿ, ತಂದೆ ಮಗನನ್ನು ಎದಿರುಗೊಳ್ಳಲು ಬರುವರೋ ಇಲ್ಲವೋ ತಿಳಿಯದು. ನೀನೂ ಬರ್ತೀಯೇನು ?"

ಇಂದಿರ ಲಜ್ಜೆಯಿಂದ

"ನನ್ನೇನು ಕೇಳ್ತೀಯಣ್ಣ ? ನೀನು ಹೇಳಿದ ಹಾಗೆ ಮಾಡುತ್ತೇನೆ."–ಎಂದಳು.

ತಂದೆಯೊಡನೆ ಹೋಗಲು ಅವಳಿಗೆ ತುಂಬಾ ಆಸೆಯಿತ್ತು. ಆದರೆ ಅದನ್ನು ಬಾಯಿಬಿಟ್ಟು ನುಡಿಯಲಾರದಾದಳು.

ಮೋಹನ–ಮೊದಲೇ ಮೋಹನ.

ಈಗ ಹೇಗಾಗಿರುವನೋ ?

ಅವನಿಗಾಗಿ ಕಣ್ಣುಗಳು ಹಸಿದಿದ್ದವು. ಅವನ ಪ್ರೀತಿಯ ನುಡಿಗಳನ್ನು ಕೇಳಲು ಕಿವಿಗಳು ಹಸಿದಿದ್ದವು. ಅವನ ಹೃದಯದ ಮಿಡಿತದೊಡನೆ ತಾಳ ಹಾಕಲು ಇಂದಿರೆಯ ಹೃದಯ ಹಸಿದಿತ್ತು.

"ಅಮ್ಮ ಇದ್ದಿದ್ದರೆ ಎಷ್ಟು ಸಂತೋಷಪಡುತ್ತಿದ್ದಳೋ"-

ಎಂದು ನೆನಪಿನ ಮುಳ್ಳೊಂದು ಅಂತರಂಗವನ್ನು ಒತ್ತುತ್ತಲೇ ಇತ್ತು.

"ನಿನ್ನೂ ಕರೆದುಕೊಂಡು ಹೋಗಬಹುದಾಗಿತ್ತು. ಗಿರಿಯನ್ನೇನು ಮಾಡೋಣ"–ರಾಯರ ಮಾತು ಇಂದಿರೆಯನ್ನು ಎಚ್ಚರಿಸಿತು.

"ಅವನನ್ನೂ ಕರೆದುಕೊಂಡು ಹೋಗಬಹುದಿತ್ತು. ಆದರೆ ಮಗುವಿಗೆ ಆಯಾಸವಾಗಬಹುದು"–ಎಂದು ಇಂದಿರ ಅಡ್ಡಗೋಡೆಯ ಮೇಲೆ ದೀಪ ವಿಟ್ಟಹಾಗೆ ಮಾತನಾಡಿದಳು.

"ಹೌದು. ಆದುದರಿಂದ ನಾನೊಬ್ಬನೇ ಹೋಗುತ್ತೇನೆ. ನೀನಿಲ್ಲದಿದ್ದರೆ ಗಿರಿ ತುಂಬಾ ರಂಪ ಮಾಡುತ್ತಾನೆ. ನೀನು ಮದುವೆ ಮಾಡಿಕೊಂಡು ಗಂಡನ ಮನೆಗೆ ಹೊರಟುಹೋದಮೇಲೆ ಮಗುವನ್ನು ಹೇಗೆ ನೋಡಿ ಕೊಳ್ಳುವುದು ಎಂಬ ಯೋಚನೆ ನನಗೆ ಈಗಿನಿಂದ ಪ್ರಾರಂಭವಾಗಿದೆ. ಆ ಯೋಚನೆಯಿಂದ ನನಗೆ ನಿದ್ದೆಯಿಲ್ಲ"–ಎಂದರು ರಾಯರು ಆತಂಕದಿಂದ.

ಇಂದಿರ ನಗುತ್ತಾ ಹೇಳಿದಳು.

"ಅದಕ್ಕೆ ಯಾಕೆ ಅಷ್ಟು ಯೋಚನೆ ಮಾಡಬೇಕಣ್ಣ? ನಾನೊಂದು ಉಪಾಯ ಹೇಳಲೇ?"

"ಹೂಂ"–ರಾಯರು ಕುತೂಹಲ ತೋರಿದರು.

"ಗಿರಿಯನ್ನು ನನ್ನೊಡನೆಯೇ ಕರೆದುಕೊಂಡು ಹೋಗುತ್ತೇನೆ."

ರಾಯರ ಮುಖ ಸಪ್ಪೆಯಾಯಿತು.

"ಅದು ಖಂಡಿತ ಸಾಧ್ಯವಿಲ್ಲ."

"ಯಾಕಣ್ಣ, ಅಕ್ಕನ ಮನೆಯಲ್ಲಿ ಗಿರಿಗೆ ಅಷ್ಟು ಸ್ಥಾನವಿಲ್ಲವೇ?"

"ಇಲ್ಲಿ ಸ್ಥಾನದ ಪ್ರಶ್ನೆಯೇ ಇಲ್ಲ ಇಂದಿರಾ. ನಿನ್ನನ್ನೂ ಕಳುಹಿಸಿ, ಗಿರಿಯನ್ನೂ ಕಳುಹಿಸಿ ನಾನೊಬ್ಬನೇ ಇಲ್ಲಿ ಹೇಗಿರಲಿ? ನನಗೆ ಬೇಸರವಾಗುವುದಿಲ್ಲವೇ?"

"ಮಗು ನನಗೆ ತುಂಬಾ ಹೊಂದಿಕೊಂಡಿದೆ. ನಾನಿಲ್ಲದಿದ್ದರೆ ಯಾರಿಗೂ ಅವನನ್ನು ಹಿಡಿಯೋದಿಕ್ಕಾಗುವುದಿಲ್ಲ. ನಾನೇ ಊಟ ಮಾಡಿಸಬೇಕು, ನಾನೇ ಮಲಗಿಸಬೇಕು....ನೀನೇ ನೋಡಿದೆಯೋ ಇಲ್ಲವೋ–ಆ ದಿನ ನಾನು ಚಿಕ್ಕಮಗಳೂರಿಗೆ ಹೋಗಿ ಬರುವುದು ತಡವಾದಾಗ ಹಾಲು ಕುಡಿಯದೆ, ಊಟ ಮಾಡದೆ ಎಷ್ಟು ಗಲಾಟೆ ಮಾಡಿದ? ಈಗಿನಿಂದಲೇ ಹೀಗಾದರೆ ಮುಂದೆ?"

"ನಾನು ಬದುಕಿರುವವರೆಗೂ ಅವನನ್ನು ನಿನ್ನ ಜೊತೆ ಕಳಿಸೋದಿಲ್ಲ ಇಂದಿರಾ."

"ಕೆಟ್ಟ ಮಾತನಾಡಬೇಡಣ್ಣ"–ಎಂದಳು ಇಂದಿರ ವ್ಯಥೆಯಿಂದ.

"ಈಗಿನಿಂದ ಮಗೂನ ಇನ್ನು ಯಾರಿಗಾದರೂ ನೀನೇ ಹೊಂದಿಕೊಳ್ಳು ವಂತೆ ಮಾಡು."

"ಯಾಕಣ್ಣ ಅಷ್ಟೊಂದು ತೊಂದರೆ ? ಗಿರಿಗೂ ಇನ್ನೊಬ್ಬರಿಗೆ ಹೊಂದಿ ಕೊಳ್ಳುವುದು ತುಂಬಾ ಕಷ್ಟವಾಗಬಹುದು. ನನ್ನ ಜೊತೆಯಲ್ಲಿ ಯಾಕೆ ಕಳುಹಿಸಬಾರದು ? "

"ಅದೊಂದು ನನ್ನಿಂದ ಸಾಧ್ಯವಿಲ್ಲ."

"ಹಾಗಾದರೆ ಈಗಿನಿಂದ ಅವನನ್ನು ನೋಡಿಕೊಳ್ಳಲು ದಾದಿಗೆ ಹೇಳು ತ್ತೇನೆ. ಇಂದಿನಿಂದ ಅವನೆಷ್ಟು ಹಠ ಮಾಡಿದರೂ ನಾನು ಅವನಿಗೆ ಊಟ, ತಿಂಡಿ, ಸ್ನಾನ ಮಾಡಿಸೋಕೆ ಹೋಗೋದಿಲ್ಲ."

"ಹಾಗೇ ಮಾಡು. ಇನ್ನು ಮೇಲೆ ಆದಷ್ಟು ಮಗುವಿನಿಂದ ದೂರವಿರು. ನಿನ್ನ ಬಿಟ್ಟಿರೋದು ಅವನಿಗೆ ಕಷ್ಟವಾಗಬಾರದು."

"ಆದರೂ ಅವನನ್ನು ಬಿಟ್ಟಿರೋದು ನನಗೆ ತುಂಬಾ ಕಷ್ಟವಾಗುತ್ತಣ್ಣಾ. ಅವನನ್ನು ಬಿಟ್ಟು ನಾನಾದರೂ ಹೇಗಿರಲಿ ?"

"ಕ್ರಮೇಣ ಎಲ್ಲ ಸರಿಹೋಗುತ್ತದೆ"–ಎಂದರು ರಾಯರು ಚೇಷ್ಟೆ ಯಿಂದ.

"ಎಂದಿಗೆ ಸರಿಯಾಗುತ್ತದೆಯೋ ?"

"ನಿನಗೊಂದು ಮಗುವಾದಾಗ"–ಎಂದು ರಾಯರು ನಗೆಯಾಡಿದರು.

"ಹೋಗಣ್ಣ"–ಎಂದಳು ಇಂದಿರಾ ಮುನಿದು.

"ಈಗ ಬೊಂಬಾಯಿಗೆ ನಾನೊಬ್ಬನೇ ಹೋಗಲೋ ಹೇಗೆ ?"

"ನಿನ್ನಿಷ್ಟ."

"ಮೋಹನನ ತಂದೆ ಬಂದಿರುತ್ತಾರೊ ಏನೋ ? ಅವನು ಮೊದಲು ತಂದೆಯನ್ನು ನೋಡಿಕೊಂಡು ಬರುವುದಾದರೆ ಬರಲಿ. ಅವನ ತಾಯಿಗೂ ಮಗನನ್ನು ಬಿಟ್ಟಿರುವುದು ಕಷ್ಟವಾಗಿರಬಹುದು. ಅವನನ್ನು ಅಲ್ಲಿಗೆ ಹೋಗಿಯೇ ಇಲ್ಲಿಗೆ ಬಾ ಎಂದು ಹೇಳುತ್ತೇನೆ."

"ಹೂಂ."

"ಅಥವಾ ಇಲ್ಲಿಗೇ ಬಂದೇ...."

"ಬೇಡ, ಅಲ್ಲಿಗೆ ಹೋಗಿಯೇ ಬರಲಿ."

"ನಿನಗೇನೂ ಆತುರವಿಲ್ಲ ಅವನನ್ನು ನೋಡೋಕೆ. ಅಲ್ಲವೇ ?"

"ಹೋಗಣ್ಣ"—ಎಂದಳು ಇಂದಿರ.

ಮೋಹನನನ್ನು ನೋಡಲು ತನಗೆ ಆತುರವಿಲ್ಲವೇ? ಅವನನ್ನು ನೋಡುವ ಹಂಬಲ, ಅವನ ಮೇಲಣ ಪ್ರೀತಿ ಎಂತೆಂತಹ ವಿಷಮ ಗಳಿಗೆಯಲ್ಲೂ ಅವಳಿಗೆ ಬದುಕು ನೀರಸ ಎನಿಸುವ ಹಾಗೆ ಮಾಡಿರಲಿಲ್ಲ,

ಅವಳಿಗೆ ಆತುರವಿಲ್ಲವೇ ?

ಮೋಹನನೊಡನೆ ತಾನು ಸುತ್ತಾಡಿದ ಜಾಗಗಳಲ್ಲಿ ತಾನು ಅದೆಷ್ಟು ಬಾರಿ ಹೋಗಿ ಕುಳಿತು ಕನಸು ಕಂಡಿರಲಿಲ್ಲ ?

ಕನಸಿನಲ್ಲೇ ಅವಳು ತನ್ನ ಎರಡು ವರ್ಷಗಳನ್ನು ಕಳೆದಿದ್ದಳು. ಮೋಹನನಿಗೆ ಪತ್ರ ಬರೆಯುವುದರಲ್ಲೇ ಅವಳ ಹಸಿವು ಹಿಂಗುತ್ತಿತ್ತು. ಮೋಹನನ ಪತ್ರ ವಿರಹದಿಂದ ಬೆಂದ ಮನಸ್ಸಿನ ಮೇಲೆ ಪ್ರೇಮದ ತುಂತುರು ಹನಿಗಳನ್ನೆರಚಿ ಅದನ್ನು ತಂಪು ಮಾಡುತ್ತಿತ್ತು.

ಮೋಹನ—ಮೋಹನ—ಮೋಹನ.

ಇಂದಿರೆಗೆ ಯಾವಾಗಲೂ ಮೋಹನನ ಜಪವೇ ಆಗಿತ್ತು. ಕೊನೆಗೆ ಗಿರಿಗೆ ಸಹ ಮೋಹನನನ್ನು ಅವಳ ಮನಸ್ಸಿನಿಂದ ಸ್ವಲ್ಪ ಸರಿಸುವುದೂ ಸಾಧ್ಯವಾಗಿರಲಿಲ್ಲ.

ಗಿರಿಯಲ್ಲೂ ಇಂದಿರೆಗೆ ಅಮಿತ ಪ್ರೇಮವಿತ್ತು.

ಮೋಹನ ಅವಳ ಸರ್ವಸ್ವವಾಗಿದ್ದ.

ಅವಳಿಗೆ ಮೋಹನನನ್ನು ನೋಡುವ ಆತುರವಿರಲಿಲ್ಲವೇ ?

ಮೊದಲೇ ಸುಂದರ ರೂಪು ಅವನದು. ಈಗ ವಿದೇಶ ಯಾತ್ರೆಯಿಂದ ಆಹಾರ, ಹವಾ ಬದಲಾವಣೆಯಿಂದ ಮೋಹನ ಮತ್ತೂ ಚೆಲುವಾಗಿ ಕಾಣಬಹುದಲ್ಲವೇ ?

ಎಂದಿಗೆ ಅವನ ಮಂಗಳ ಮೂರ್ತಿಯನ್ನು ಕಣ್ಣು ತುಂಬ ನೋಡಿಯೇನೋ ಎಂದು ಹಂಬಲಿಸುತ್ತಿರುವ ತನಗೆ ಆತುರವಿಲ್ಲವೇ ?

ಮೋಹನ ಹಿಂತಿರುಗಿ ಬರುವ ದಿನ ಸಮೀಪಿಸುತ್ತಿರುವಂತೆ ಅವಳಿಗೆ ಒಂದೊಂದು ದಿನ ಕಳೆಯುವುದೂ ಒಂದೊಂದು ಯುಗವಾಗಿತ್ತು.

ಮೋಹನನಿಗಾಗಿ ತನ್ನ ಬದುಕಿನ ಉಸಿರಾಗಿದ್ದ 'ಬೆಳ್ಳಿಮೋಡ'ವನ್ನೂ ಹಿಂದೆ ಬಿಟ್ಟು ಮುಂದಡಿಯಿಡಲು ಅವಳು ಸಿದ್ಧಳಾಗಿದ್ದಳು

ತನ್ನ ಪ್ರಾಣವಾಗಿದ್ದ ಗಿರಿಯನ್ನು ಎರಡನೆಯ ಬಾರಿ ತಬ್ಬಲಿಯನ್ನಾಗಿ ಮಾಡಲು ಅವಳು ತಯಾರಾಗಿದ್ದಳು.

'ಬೆಳ್ಳಿಮೋಡ', ಗಿರಿ—ಇಬ್ಬರನ್ನೂ ನೀನು ತೊರೆದು ನನ್ನೊಡನೆ ಬರಬೇಕು ಎಂಬ ಷರತ್ತು ಮೋಹನ ಹಾಕಿದರೂ ಆದಕ್ಕೆ ಹೂಂಗುಡುವಷ್ಟು ಇಂದಿರ ಬಾಗಿದ್ದಳು.

'ಬೆಳ್ಳಿಮೋಡದ' ಈ ದಿಟ್ಟ ಹೆಣ್ಣು, ಯಾರಿಗೂ ಹೆದರದೆ, ಬೆದರದೆ, ಬಾಗದೆ, ಪ್ರತಿಭಟನೆಯಿಲ್ಲದೆ ಗಿರಿಯಂತೆ ನೇರವಾಗಿ, ಯಾವ ಅಳುಕೂ ಇಲ್ಲದೆ ಆಕಾಶದೆತ್ತರ ಬೆಳೆದಿದ್ದ ಮನಸ್ಸನ್ನು ಅಪರಿಚಿತ ಸುಂದರ ತರುಣನೊಬ್ಬನಿಗೆ ಅರ್ಪಿಸಿದ್ದಳು.

ಅವಳೆಲ್ಲ ಕಟ್ಟು, ನಿಯಮ, ಶಿಸ್ತು, ಸಂಯಮ ಇವುಗಳನ್ನು ಮೋಹನನ ನಗೆ, ನೋಟ, ಮಾತುಗಳು ಸಡಿಲಗೊಳಿಸಿದ್ದುವು.

ಸಾಧಾರಣವಾಗಿ ಯಾರಲ್ಲೂ, ಯಾವ ವಿಷಯದಲ್ಲೂ ದೌರ್ಬಲ್ಯವನ್ನು ಪ್ರದರ್ಶಿಸದ ಇಂದಿರಾ ಮೋಹನನ ಪ್ರೇಮದೆದುರಿಗೆ ತುಂಬಾ ದುರ್ಬಲಳಾಗಿದ್ದಳು. ಆ ದೌರ್ಬಲ್ಯ ಅವಳನ್ನು ವಿವಶಳನ್ನಾಗಿ ಮಾಡಿತ್ತು.

ಮೋಹನನನ್ನು ಸಂಧಿಸುವ ದಿನ ಹತ್ತಿರ ಬಂದಂತೆ ಹೃದಯದ ಭಾವನೆಗಳೆಲ್ಲ ಹುರಿಗೊಂಡಿದ್ದುವು.

ಶ್ರುತಿ ಮಾಡಿರಿಸಿದ ತಂಬೂರಿಯ ತಂತಿ, ಪ್ರೇಮಿ ತನ್ನನ್ನು ಎಂದಿಗೆ ಮೀಟಿ ಪ್ರೇಮಗೀತೆಯನ್ನು ನುಡಿಸುವನೋ ಎಂದು ಕಾತರಿಸಿತ್ತು.

ಬೀಸು ಗಾಳಿಗೂ ನಸು ಕಂಪಿಸುತ್ತಿದ್ದ ತಂತಿ, ರಾಗ ಲೋಕವನ್ನೇ ತನ್ನೊಳಗೆ ಐಕ್ಯವಾಗಿರಿಸಿಕೊಂಡಿತ್ತು. ಉತ್ತಮ ಕಲಾವಿದನ ಬರವನ್ನು ಹಾರಯಿಸಿಕೊಂಡು ಮೂಕವಾದ್ಯವಾಗಿತ್ತು.

ಇಂದಿರೆಗೆ ಆತುರವಿರಲಿಲ್ಲವೇ ?

ಅಳತೆಗೋಲಿನಿಂದ ಅಳೆಯಲಾಗದಷ್ಟು ಆತುರ.

ನಾಲಿಗೆ ನುಡಿಯಲಾರದಷ್ಟು ಕಾತುರ.

ಬ್ರಹ್ಮಾಂಡವನ್ನೇ ಅಡಗಿಸಿಟ್ಟುಕೊಳ್ಳಬಹುದಾಗಿದ್ದ ವಿಶಾಲವಾದ ಹೃದಯದಲ್ಲಿ ತುಂಬಿಡಲಾಗದಷ್ಟು. ತುಂಬಿದರೂ ತುಳುಕಿ ಚೆಲ್ಲುವಷ್ಟು ಪ್ರೇಮವಾಹಿನಿ ಅವಳನ್ನು ವೈಮರೆಯುವಂತೆ ಮಾಡಿತ್ತು.

ಇಂದಿರ ಜಾಗೃತಳಾಗಿದ್ದೂ ಕನಸು ಕಾಣುತ್ತಿದ್ದಳು.

ಕನಸು ಕಾಣುತ್ತಲೇ ತಂದೆಯನ್ನು ಮುಂಬಯಿಗೆ ಕಳುಹಿಸಿಕೊಟ್ಟಳು. ಮನೆಯಲ್ಲಿ ತಾನು ನಿಂತು ಇನಿಯನ ಆಗಮನಕ್ಕೆ ತಕ್ಕ ಸಿದ್ಧತೆಗಳನ್ನು ನಡೆಸಿದಳು.

'ಬೆಳ್ಳಿಮೋಡ' ಅವಳ ಕೈಯ ಸ್ಪರ್ಶದಿಂದ ಚಿನ್ನದ ಮೋಡವಾಗಿ ತನ್ನ ಸುತ್ತಲೂ ಹೊಂಬಣ್ಣವನ್ನೆರಚತೊಡಗಿತ್ತು. ಮೋಡಗಳ ಮೇಲೆ ತೇಲಿ ಹೋಗುವ ಈ ಕಿನ್ನರಿ ಸ್ವಪ್ನಸೌಧದಲ್ಲಿ ವಿಹರಿಸುತ್ತಿದ್ದಳು.

ಮಿನುಗುತಾರೆಯ ಬಣ್ಣವೇ ಅವಳ ಕೈವಾಡದಿಂದ ಬದಲಾಯಿಸಿತು. ಮನೆಯನ್ನು ಎಷ್ಟು ಸಿಂಗರಿಸಿದರೂ ಇಂದಿರೆಗೆ ತೃಪ್ತಿ ಇರಲಿಲ್ಲ. ಮೋಹನನಿಗೆಂದು ಮೀಸಲಾಗಿರಿಸಿದ್ದ ಕೊಠಡಿಯಂತೂ ಗರಿಗೆದರಿ ಕುಣಿಯುವ ನವಿಲಿನ ಸೊಬಗನ್ನು ನೆನಪಿಗೆ ತರುತ್ತಿತ್ತು.

ಮಗಳ ಮನಸ್ಸನ್ನರಿತಿದ್ದ ರಾಯರು ಇಂದಿರೆಗೆ ಟೆಲಿಗ್ರಾಂ ಕಳುಹಿಸಿದ್ದರು—ಮೋಹನ ಭಾರತದಲ್ಲಿ ಅಡಿಯಿಟ್ಟ ಕೂಡಲೇ.

"ಮೋಹನ ತಲುಪಿದ. ಸುರಕ್ಷಿತವಾಗಿದ್ದಾನೆ. ತನ್ನ ಊರಿಗೆ ಹೋಗಿ ಬರುತ್ತಾನೆ."

ಇದುವರೆವಿಗೂ ಕೇವಲ ನೆನಪು ಮಾತ್ರವಾಗಿ ಉಳಿದಿದ್ದ ಮೋಹನ ಇನ್ನು ಮೇಲೆ ಸಜೀವವಾಗಿ, ಜೀವಂತವಾಗಿ ತನ್ನ ಕಣ್ಣುಗಳಿಗೆ ಕಾಣಿಸಿಕೊಳ್ಳಲಿದ್ದಾನೆ.

ಭಾವನೆಗಳ ತಂತಿ ಮತ್ತಷ್ಟು ಬಿಗಿಯಾಗಿ ಮಿಡಿತಕ್ಕೆ ಸಿದ್ಧವಾಯಿತು. ರಾಯರು ಬಂದ ಕೂಡಲೇ ಮೋಹನನ ಬಗ್ಗೆ ಸಾವಿರ ಪ್ರಶ್ನೆಗಳನ್ನು ಕೇಳಬೇಕೆಂದಿದ್ದ ಇಂದಿರ ಒಂದು ಮಾತನ್ನೂ ಆಡಲಿಲ್ಲ.

ಮಾತು ಬಾರದ ಮೂಕಿಯಾಗಿ, ನೆಲ ನೋಡುತ್ತಾ ತಂದೆ ಹೇಳಿದುದನ್ನೆಲ್ಲಾ ನಿಂತು ಕೇಳಿದಳು ಇಂದಿರ.

"ಆರೋಗ್ಯವಾಗಿದಾನಮ್ಮ. ತುಂಬಾ ಲಕ್ಷಣವಾಗಿ ಆಗಿದಾನೆ. ನೀನೂ ಎದಿರುಗೊಳ್ಳೋಕೆ ಬಂದಿದ್ದರೆ ಚೆನ್ನಾಗಿತ್ತು ಎಂದ. ಲಲಿತ ಹೋದ ಸಮಾಚಾರ ಕೇಳಿ ವ್ಯಥೆಯಾಯಿತು ಎಂದು ಹೇಳಿದ. ಅವನ ತಂದೆ ಮಗನನ್ನು ಎದಿರುಗೊಳ್ಳಲು ಬಂದಿರಲಿಲ್ಲ...."

"ಗಿರಿಯ ವಿಷಯ ಕೇಳಿದರೇನಣ್ಣ ?"

"ಆಂ....?ಹೂ....ಕೇಳಿದಾಂತ ಕಾಣುತ್ತೆ. ಇಲ್ಲಿಗೆ ಬರುವ ಸೋಮವಾರ ಬರುತ್ತಾನೆ."

ರಾಯರು ಮುಂದೇನು ಮಾತನಾಡಿದರೋ ಅದು ಇಂದಿರೆಯ ಕಿವಿಗೆ ಬೀಳಲಿಲ್ಲ.

'ಬರುವ ಸೋಮವಾರ ಬರುತ್ತಾನೆ.'

ಇಂದಿರಾ ಒಳಗೆ ಓಡಿಬಂದು ಗಿರಿಯನ್ನೆತ್ತಿಕೊಂಡು,

"ಗಿರಿ, ನಿನ್ನ ಭಾವ ಬರುವ ಸೋಮವಾರ ಬರುತ್ತಾರೆ ಕಣೋ"—ಎಂದಳು.

ಎರಡು ವರ್ಷಗಳನ್ನು ಕಳೆದುದಕ್ಕಿಂತಲೂ ಒಂದು ವಾರ ಕಳೆಯುವುದು ಇಂದಿರೆಗೆ ತುಂಬಾ ಕಷ್ಟವಾಯಿತು.

ದಿನ ಯುಗವಾಯಿತು. ಗಂಟೆ ವರ್ಷವಾಯಿತು.

ಮೋಹನನನ್ನು ಎದುರುಗೊಳ್ಳಲು ರಾಯರು ಇಂದಿರಾ ಹೊರಟಿದ್ದರು. ಇಂದಿರ ಎಂದಿನಂತೆಯೇ ತನ್ನ ಸರಳವಾದ ಉಡಿಗೆಯಲ್ಲಿ ಹೊರಟಿದ್ದಳು.

ಮಗಳ ಅಲಂಕಾರ ತೀರಾ ಸಾದಾ ಎನಿಸಿತು ರಾಯರಿಗೆ. ಆದರೆ ಅವರು ಏನನ್ನೂ ಹೇಳಲಿಲ್ಲ.

ಕಡೂರಿನ ಪ್ಲಾಟ್ ಫಾರಂನ ಮೇಲೆ ತಂದೆ ಮಗಳಿಬ್ಬರೂ ಕಾದು ಕುಳಿತರು.

ಇಂದಿರ ವೆಯಿಟಿಂಗ್ ರೂಮಿನಲ್ಲಿ ಕುಳಿತಿದ್ದಳು. ತಂದೆಯ ಮಾತುಗಳ ಕಡೆ ಅವಳ ಲಕ್ಷ್ಯವಿರಲಿಲ್ಲ. ದೇಹವೆಲ್ಲಾ ಕಿವಿಯಾಗಿ ಅವಳು ಟ್ರೈನಿನ ಸದ್ದು ಆಲಿಸುತ್ತಿದ್ದಳು.

ಭಾವನೆಗಳ ತಂತಿ ಮತ್ತಷ್ಟು ಬಿಗಿಯಾಯಿತು.

ಟ್ರೈನಿನ ಸದ್ದು ಕೇಳಿಸಿತು.

ತಂದೆ, ಮಗಳಿಬ್ಬರೂ ಹೊರಕ್ಕೆ ಧಾವಿಸಿದರು.

ಈಗ ಎಲ್ಲವನ್ನೂ ಮರೆತು ಇಂದಿರಾ ಕಣ್ಣು ಮಾತ್ರವಾದಳು.

ಟ್ರೈನು ನಿಂತಿತು.

ರಾಯರು ಮುಂದೆ ಹೋಗಿ ಮೋಹನನ ಕೈ ಕುಲುಕಿದರು. ಮೋಹನ ಟ್ರೈನಿನಿಂದ ಕೆಳಗೆ ಧುಮುಕಿದ.

ಸ್ವಲ್ಪ ದೂರದಲ್ಲಿ ನಿಂತಿದ್ದ ಇಂದಿರಾ ಹೃದಯವನ್ನು ಒತ್ತಿ ಹಿಡಿದು ಎರಡು ಹೆಜ್ಜೆ ಮುಂದೆ ಬಂದಳು.

ಮೋಹನ ಅವಳನ್ನು ನೋಡಿದ

ಅವರ ಕಣ್ಣುಗಳು ಸಂಧಿಸಿದವು.

ಎರಡು ಕ್ಷಣ ಇಬ್ಬರೂ ಜಗತ್ತನ್ನು ಮರೆತರು.

ಮೋಹನ ಇಂದಿರೆಯನ್ನು ನೋಡಿ ಸುಂದರವಾಗಿ ನಕ್ಕ. ಇಂದಿರೆಯ ತುಟಿಯ ಮೇಲೆ ಅರಳಲಿದ್ದ ಮಂದಹಾಸ ಮುದುಡಿಕೊಂಡಿತು. ಅವಳ ಭಾವನೆಗಳೆಲ್ಲ ಹೆಪ್ಪುಗಟ್ಟಿದವು.

ಇಂದಿರೆಯ ಮುಖ ಬಿಳಿಚಿಕೊಂಡಿತು. ಹಣೆಯ ಮೇಲೆ ಬೆವರಿನ ಹನಿಗಳು ಸಾಲುಗಟ್ಟಿದವು. ನೆಲಕ್ಕೆ ಕೀಲಿಸಿದಂತಿದ್ದ ಕಾಲುಗಳು ಅಸ್ಥಿರ ವಾದವು. ದೇಹ ಕೊಂಚ ಹೊಯ್ದಾಡಿತು.

ತಂತಿ ಕಡಿಯಿತು.

ಮರುಗಳಿಗೆ ಇಂದಿರ ತನ್ನನ್ನು ಸಾವರಿಸಿಕೊಂಡಳು. ನಿರ್ಜೀವ ನಗೆ ಯೊಂದು ಒಣಗಿದ ತುಟಿಯನ್ನು ಆಕ್ರಮಿಸಿಕೊಂಡಿತು.

ಮೋಹನ ಹತ್ತಿರಕ್ಕೆ ಧಾವಿಸಿ ಬಂದ.

ಇಂದಿರ ತನ್ನರಿವು ಇಲ್ಲದಂತೆ ಅವನಿಂದ ಎರಡು ಹೆಜ್ಜೆ ಹಿಂದೆ ಸರಿದು ನಿಂತಳು.

"ಇಂದಿರಾ, ಹೇಗಿದೀಯ ?"

"ಚೆ ...ಚೆನ್ನಾಗಿದೀನಿ."

ಮೋಹನನಿಗೆ ಮುಂದೇನು ಮಾತನಾಡಬೇಕೆಂದು ತೋರಲಿಲ್ಲ.

"ತುಂಬಾ ದಿನವಾಯಿತು"—ಎಂದ ಮೋಹನ.

"ಹೂಂ...."

ಈ ದಿನ ನಿಜವಾಗಿಯೂ ಬಂದಿದೆ ಎಂದರೆ ನನಗೆ ನಂಬೋಕೇ ಸಾಧ್ಯ ವಿಲ್ಲ."

"ನನಗೂ ನಂಬಿಕೆಯಿಲ್ಲ"

"ನಾನು ವಿದೇಶಕ್ಕೆ ಹೋಗಿ ಅಲ್ಲಿ ಎರಡು ವರ್ಷವಿದ್ದುದು ಕನಸೇನೋ ಎನಿಸುತ್ತಿದೆ."

"ಕನಸು !"

"ಎಷ್ಟು ಬೇಗ ಎರಡು ವರ್ಷ ಕಳೆದುಹೋಯಿತು! ನಾನು ವಿದೇಶಕ್ಕೆ ಹೊರಟದ್ದು ಇನ್ನೂ ನಿನ್ನೆ ನೋಡಿದ ನಾಟಕದಂತೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ."

"ನಾಟಕ ! ಹೂಂ....ನಾಟಕ"—ಎಂದು ಇಂದಿರ ತೊದಲಿದಳು.

ಮೋಹನನ ಸಾಮಾನುಗಳನ್ನು ಕೆಳಗೆ ಇಳಿಸಿಕೊಂಡು ರಾಯರು ಮೋಹನನ ಹತ್ತಿರ ಬಂದು ಮೆಲ್ಲನೆ ಅವಳ ಭುಜ ತಟ್ಟಿ

"ಹೊರಡೋಣ"—ಎಂದರು.

"ಹೊರಡೋಣ ಇಂದಿರಾ"—ಎಂದ ಮೋಹನ.

"ಹೂಂ....ಹೂಂ....ಹೋಗೋಣ"—ಎಂದಳು ಇಂದಿರಾ

o o o o

ರಾಯರು ಡ್ರೈವರನ ಪಕ್ಕದಲ್ಲಿ ಕುಳಿತರು. ಹಿಂದುಗಡೆಯ ಸೀಟಿನಲ್ಲಿ ಮೋಹನ, ಇಂದಿರ ಕುಳಿತರು.

ಕಾರು ಹೊರಟಿತು.

ರಾಯರು, ಮೋಹನ ಒಂದೇ ಸಮನೆ ಮಾತನಾಡುತ್ತಿದ್ದರು.

ಮೋಹನ ತನ್ನ ಅನುಭವವನ್ನು ರಸವತ್ತಾಗಿ ಬಣ್ಣಿಸುತ್ತಿದ್ದ. ಅವನ ವರ್ಣನೆ, ಮಾತಿನ ಜಾಣ್ಮೆ ಇವುಗಳಿಗೆ ರಾಯರು ಮೆಚ್ಚಿ ತಲೆದೂಗುತ್ತಿದ್ದರು. ಮೋಹನ ತಮಾಷೆ ಮಾಡಿದಾಗ ರಾಯರು ಬಾಯಿ ತುಂಬಾ ನಗುತ್ತಿದ್ದರು.

ಇವರ ಹಾಸ್ಯ, ಹರಟೆ, ಮಾತಿನಲ್ಲಿ ಬೆರೆಯದೆ ಇಂದಿರ ಕಿಟಕಿಯಿಂದಾಚೆ ನೋಡುತ್ತಿದ್ದಳು.

ತಾನು ಅಪ್ಪಿದ್ದ ಆಧಾರಸ್ತಂಭ ಯಾಕೋ ಕರಗತೊಡಗಿದೆ ಎನಿಸಿತು ಇಂದಿರೆಗೆ.

ಇಂದಿರಾ ಯಾಕೆ ಮಂಕಾಗಿದಾಳೆ ಎಂದು ರಾಯರು ಯೋಚಿಸಿ

"ಇಂದಿರಾ, ಹುಷಾರಾಗಿದೀಯಾ?"—ಎಂದರು.

ತಂದೆ ತನ್ನ ಹೆಸರು ಹಿಡಿದು ಕೂಗುತ್ತಲೇ ಅನ್ಯಮನಸ್ಕಳಾಗಿದ್ದ ಇಂದಿರಾ ಬೆಚ್ಚಿದಳು.

"ಏನೆಂದೆ ?"

"ಹುಷಾರಾಗಿದೀಯಾ ?"

"ಹೂಂ"–ಎನ್ನುತ್ತಾ ಇಂದಿರ ನಕ್ಕಳು.

ಹೃದಯ ತುಂಬಿ ಬಂದು, ಮಿತಿಮೀರಿದ ಸಂತೋಷದಿಂದಾಗಿ ಮಾತು ಹೊರಡುತ್ತಿಲ್ಲ ಎಂದುಕೊಂಡು ಮನಸ್ಸಿನಲ್ಲಿಯೇ ನಕ್ಕರು ರಾಯರು.

ಮೋಹನ ಸಂಶಯ ತುಂಬಿದ ಕಳ್ಳನೋಟವನ್ನು ಇಂದಿರೆಯತ್ತ ಬೀರಿದ.

ಇಂದಿರ ಓಡುತ್ತಿದ್ದ ಗಿಡ ಮರಗಳನ್ನು ನೋಡುತ್ತಿದ್ದಳು. ಮೋಹನನಿಗೆ ಅವಳ ಪಕ್ಕಕ್ಕೆ ಸರಿದು ಕುಳಿತುಕೊಳ್ಳುವ ಮನಸ್ಸಾಯಿತು. ಆದರೆ ಅದೇಕೋ ಧೈರ್ಯ ಬರಲಿಲ್ಲ.

ಮಿನುಗುತಾರೆಯ ಪೋರ್ಟಿಕೋದಲ್ಲಿ ಕಾರು ನಿಂತಿತು.

ಮೇಲು ಮೆಟ್ಟಲಿನ ಮೇಲೆ ಮಗುವನ್ನೆತ್ತಿಕೊಂಡು ಕೆಲಸದಾಳು ನಿಂತಿದ್ದಳು.

ತಂದೆ, ಅಕ್ಕನನ್ನು ಗುರುತಿಸಿ ಗಿರಿ ಚಪ್ಪಾಳೆ ತಟ್ಟಿ ನಕ್ಕ. ಕಾರಿನಿಂದ ಮೊದಲು ಕೆಳಗಿಳಿದ ಇಂದಿರೆಯತ್ತ ಕೈ ನೀಡಿ ಇಳಿಬಿದ್ದ.

ತನ್ನತ್ತ ಚಾಚಿದ ತಮ್ಮನ ಪುಟ್ಟ ತೋಳುಗಳನ್ನು ನೋಡದವಳಂತೆ ಇಂದಿರಾ ಒಳಗೆ ನಡೆದುಬಿಟ್ಟಳು.

ಸರಸವಾಗಿ ಮಾತನಾಡುತ್ತಿದ್ದ ಮೋಹನನ ಮುಖ ಇದ್ದಕ್ಕಿದ್ದಂತೆ. ಗಂಭೀರವಾಯಿತು.

ರಾಯರು ಮಗನನ್ನೆತ್ತಿಕೊಂಡು

"ಭಾವ ಕಣೋ ರಾಜ"—ಎಂದರು.

ಮೋಹನ ಮಗುವನ್ನು ದಿಟ್ಟಿಸಿ ನೋಡಿದ.

ಒಂದು ವರ್ಷ ಎರಡು ತಿಂಗಳಿನ ಮಗು ಬೆಳವಣಿಗೆಯಲ್ಲಿ ಮೂರು ವರ್ಷದ ಮಗುವಿನಂತಿತ್ತು. ದೇಹದ ಬೆಳವಣಿಗೆಗೆ ತಕ್ಕ ಹಾಗೆ ಚಟು ವಟಿಕೆ, ಚುರುಕು ಅವನ ಆಟದಲ್ಲಿ ಎದ್ದು ಕಾಣುತ್ತಿತ್ತು.

ಮಗು ಎದುರಿಗೆ ನಿಂತಿದ್ದ ಹೊಸಬರನ್ನು ಕಣ್ಣರಳಿಸಿ ನೋಡಿತು. ತಂದೆಯ ಕಡೆ ಪ್ರಶ್ನಾರ್ಥವಾಗಿ ತಿರುಗಿತು.

"ಭಾವ ಕಣೋ. ಹುಟ್ಟುವಾಗಲೇ ತಾಯಿಯನ್ನು ತಿಂದುಕೊಂಡ ಮೋಹನರಾವ್, ಈ ದಿನ ಅವಳಿದ್ದಿದ್ದರೆ ಎಷ್ಟು ಸಂತೋಷ ಪಡು ತ್ತಿದ್ದಳೋ. ನಿಮ್ಮ ಮದುವೆ ನೋಡುವ ಆಸೆಯಿತ್ತು ಅವಳಿಗೆ. ಏನು ಮಾಡುವುದು? ನಮ್ಮ ಗಿರಿ ಹುಟ್ಟುವಾಗ ಕೈಲಿ ಬರಲು ಹಿಡಿದುಕೊಂಡು. ಹುಟ್ಟಿರಬೇಕು...."

"ಛೇ, ಚಿನ್ನದ ಚಮಚ ಬಾಯಲ್ಲಿಟ್ಟುಕೊಂಡು ಹುಟ್ಟಿದಾನೆ ತುಂಟ.." ಎನ್ನುತ್ತಾ ಮೋಹನ ಮಗುವಿನ ಕೆನ್ನೆಯಮೇಲೆ ತನ್ನ ಬೆರಳಿನಿಂದ ಮೃದು ವಾಗಿ ಒಂದೇಟು ಹಾಕಿದ.

"ದೇವರು ಒಂದು ವಿಧದಲ್ಲಿ ಕೊಟ್ಟರೆ ಮತ್ತೊಂದು ವಿಧದಲ್ಲಿ ಕಿತ್ತು ಕೊಳ್ಳುತ್ತಾನೆ...."

—ರಾಯರು ಮೋಹನ ತಮ್ಮ ಆತ್ಮೀಯ ಎನ್ನುವಂತೆ ತಮ್ಮ ಮನದಳ ಲನ್ನು ಅವನೆದುರಿಗೆ ತೋಡಿಕೊಂಡರು.

ಕೆಲಸದ ಹುಡುಗಿ ಬಂದು

"ನೀರು ಸಿದ್ಧವಾಗಿದೆ. ಸ್ನಾನ ಮಾಡಬಹುದಂತೆ"—ಎಂದಳು.

ರಾಯರು ಮೋಹನನಿಗಾಗಿ ತೆರವು ಮಾಡಿಸಿದ್ದ ಕೊಠಡಿಗೆ ಅವನನ್ನು ಕರೆದುಕೊಂಡು ಹೋಗಿ

"ಇನ್ನು ನೀವುಂಟು, ಇಂದಿರೆಯುಂಟು. ಸಂಕೋಚ ಮಾಡಿಕೊಳ್ಳದೆ ಇದು ನಿಮ್ಮ ಮನೆ ಎಂದು ಭಾವಿಸಬೇಕು.--"

ಎಂದು ಹೇಳಿ ಮಗನನ್ನೆತ್ತಿಕೊಂಡು ಹೋದರು.

ಅಲ್ಲಿಯೇ ಇದ್ದ ಆರಾಮ ಕುರ್ಚಿಯ ಮೇಲೆ ಮೋಹನ ಕುಸಿದು ಕುಳಿತ.

ಹಿಂದಕ್ಕೊರಗಿ, ತಲೆಯ ಹಿಂದೆ ಕೈಕಟ್ಟಿ ಯೋಚನಾ ಸಮಾಧಿಯಲ್ಲಿ ಮುಳುಗಿದ.

ಇಂದಿರ ಒಳಗೆ ಬಂದು "ಊಟಕ್ಕೆ ಬನ್ನಿ"....ಎಂದಾಗ ಮೋಹನ ಎಚ್ಚರಗೊಂಡ.

"ಹೂಂ....ಪ್ರಯಾಣದ ಆಯಾಸ..." ಎನ್ನುತ್ತಾ ಇಂದಿರೆಯನ್ನು ನೋಡಿ ನಕ್ಕು ಬೂಟ್ಸನ್ನು ಬಿಚ್ಚತೊಡಗಿದ.

ಇಂದಿರ ಸೌಜನ್ಯವಾಗಿ ಪೆಚ್ಚಾಗಿ ನಕ್ಕಳು.

"ನಾಟಕ....ನಾಟಕ—ಎಂದವಳ ಮನಸ್ಸು ಚೀರಿತು.

"ಇಂದಿರ, ನಾನು ಅಮೆರಿಕದಲ್ಲಿದ್ದಾಗ...." ಎನ್ನುತ್ತಾ ಮೋಹನ ತಲೆ ಎತ್ತಿದ.

ಇಂದಿರ ರೂಮಿನಲ್ಲಿರಲಿಲ್ಲ. ಮೋಹನ ಚಕಿತನಾದ.

ಮೋಹನ ಎದ್ದು ಊಟದ ಮನೆಗೆ ಬಂದ. ಆಗಲೆ ಮಣೆಯ ಮುಂದೆ ಕುಳಿತಿದ್ದ ರಾಯರು "ಬನ್ನಿ"—ಎಂದರು

ಮೋಹನನ ಸಲುವಾಗಿ ಬಗೆಬಗೆಯಾದ ಅಡುಗೆಯಾಗಿತ್ತು.

"ಅವಳಿದ್ದಿದ್ದರೆ ನಿಮಗೆ ಇಷ್ಟರಲ್ಲೇ ಕೊನೆಗಾಣಿಸುತ್ತಿರಲಿಲ್ಲ ಮೋಹನ ರಾವ್. ಅಳಿಯನಿಗಾಗಿ ಎಷ್ಟು ಬಗೆ ಭಕ್ಷ್ಯಗಳನ್ನು ತಯಾರು ಮಾಡುತ್ತಿದ್ದಳೋ ಏನೊ ? ಪಾಪ ! ಇಂದಿರಾ ಏನು ತಿಳಿಯದ-ಹುಡುಗಿ. ಮನೆಯ ಜವಾಬುದಾರಿಯೆಲ್ಲ ಈಗ ಅವಳ ತಲೆಯ ಮೇಲೆ ಬಿದ್ದಿದೆ. ಇನ್ನು ಮದುವೆಗೆ ಅಣಿ...."

"ಅಣ್ಣಾ, ಜಿಲೇಬಿ ಬೇಕೆ?"--ಇಂದಿರ ಅವರ ಮಾತಿನ ನಡುವೆ ಪ್ರವೇಶಿಸಿ ಕೇಳಿದಳು.

"ನನಗೆ ಬೇಡ. ನಿನ್ನ ಗಂಡನನ್ನು ಕೇಳು–" ಎಂದರು ರಾಯರು.

ಮೋಹನ ಜಿಲೇಬಿ ಹಾಕಿಸಿಕೊಂಡು ಹೇಳಿದ.

" ಈ ಬಗೆಯ ತಿಂಡಿಗಳು ಅಲ್ಲಿ ಸಿಕ್ಕುವುದೇ ಇಲ್ಲ. ನಮ್ಮ ದೇಶದ ಆಹಾರ ಎಂದಿಗೆ ತಿನ್ನುವೆನೋ ಎನಿಸಿತ್ತು ನನಗೆ."

ಉಪಚಾರದ ನಡುವೆ ಊಟ ಸಾಗಿತು.

ಊಟ ಮಾಡುತ್ತಾ ನಡುನಡುವೆ ಮೋಹನ ಎದುರಿಗೆ ಜಿಲೇಬಿಯ

ಚೂರೊಂದನ್ನು ಚೀಪುತ್ತಾ ಕುಳಿತಿದ್ದ ಗಿರಿಯ ಕಡೆ ನೋಡುತ್ತಿದ್ದ.

"ಲೋ ತುಂಟಾ, ಸಾಕು ಏಳು" ಎಂದರು ರಾಯರು.

ಮೋಹನ ಮಗುವನ್ನು ದಿಟ್ಟಿಸಿ ನೋಡುತ್ತಾ "ಮಗು ನಿಮ್ಮ ಹಾಗೆಯೇ ಇದೆ"—ಎಂದ.

ಇಂದಿರ ಬಂದು ಗಿರಿಯನ್ನು ಎತ್ತಿಕೊಂಡಳು. ಗಿರಿಗೆ ಅಷ್ಟು ಬೇಗ ಹೊರಟುಹೋಗುವುದು ಸಮ್ಮತವಿರಲಿಲ್ಲ. ಅವನು ಕೈಕಾಲು ಬಡಿದು, ಚೀರಿ ತನ್ನ ಪ್ರತಿಭಟನೆಯನ್ನು ಸೂಚಿಸಿದ. ಆದರೆ ಇಂದಿರ ಬಲವಂತದಿಂದ ಮಗುವನ್ನು ಎತ್ತಿಕೊಂಡು ಹೋದಳು.

ಮಗನ ಚೀರಾಟ ಕೇಳಲಾರದೆ ರಾಯರು

"ಇರಲಿ ಬಿಡು ಇಂದಿರಾ" ಎಂದರು.

ಆದರೆ ಇಂದಿರ ಹಿಂದಕ್ಕೆ ಬರಲಿಲ್ಲ.

ಊಟವಾದ ನಂತರ ಮೋಹನ ಮಲಗಿಕೊಂಡ. ಅವನಿಗೆ ಎಚ್ಚರವಾದಾಗ ಸಂಜೆ ಐದುಗಂಟೆಯಾಗಿತ್ತು, ಕಾಫಿ ತಿಂಡಿಯನ್ನು ಇಂದಿರ ರೂಮಿಗೇ ತಂದುಕೊಟ್ಟಳು.

"ತೋಟದಲ್ಲಿ ತಿರುಗಾಡಿಕೊಂಡು ಬರೋಣ ಬರ್ತೀಯಾ ?"—ಮೋಹನ ಕೇಳಿದ.

"ಹೂಂ."

"ಹಾಗಾದರೆ ರೆಡಿಯಾಗು."

"ಸಿದ್ಧವಾಗೇ ಇದೀನಿ."

"ಕೈಯಲ್ಲಿ ಕತ್ತಿ ಇಲ್ಲವಲ್ಲಾ...."

"ನೀವು ಹೊರಡಿ, ನಾನು ಕತ್ತಿ ಹಿಡಿದು ಬರುತ್ತೇನೆ."

"ಆತ್ಮ ರಕ್ಷಣೆಯೋ ನನ್ನ ರಕ್ಷಣೆಯೋ ?"

"ಎರಡೂ."

ಮೋಹನ ತಲೆ ಬಾಚಿಕೊಂಡು ಹೊರಟ. ಎಂದಿನಂತೆಯೇ ಕೈಲಿ ಕತ್ತಿ ಹಿಡಿದು ಇಂದಿರ ಹೊರಟಳು.

ದಾರಿಯಲ್ಲಿ ಸಿಕ್ಕಿದ ಪುಟ್ಟಯ್ಯ ಇಬ್ಬರನ್ನೂ ನೋಡಿ ಕೀಟಲೆಯ ನಗು ನಕ್ಕ. ಇಂದಿರ ಕೋಪದಿಂದ ಅವನನ್ನು ಸುಡುವಂತೆ ನೋಡಿದಳು.

ನಸುಕತ್ತಲು ಹರಡುವವರೆಗೂ ಇಬ್ಬರೂ ತೋಟದಲ್ಲಿ ಸುತ್ತಾಡಿದರು. ಇಬ್ಬರ ನಡುವೆ ಹೆಚ್ಚು ಮಾತಿರಲಿಲ್ಲ. ಮೌನವನ್ನು ತಡೆಯಲಾರದೆ

ಮೋಹನನೇ ಆಗೊಂದು, ಈಗೊಂದು ಮಾತನಾಡುತ್ತಿದ್ದ.

"ಕುಳಿತುಕೊಳ್ಳೋಣ."

"ಹುಂ."

"ಎಲ್ಲಿ ? ನಿನ್ನ ಕೈಲಿ ತುಂಬಾ ಮಾತನಾಡುವುದಿದೆ."

"ಜರಿಯ ಹತ್ತಿರ ಹೋಗೋಣ."

"ತುಂಬಾ ದೂರವೇನು ?"

"ಇಲ್ಲ. ಹತ್ತಿರದಲ್ಲಿಯೇ ಇದೆ. ಗಿರಿಯಿಂದ ಹರಿದು ಬರುವ ನೀರಿನ ಜರಿ ಈಗ ತುಂಬಾ ಚೆನ್ನಾಗಿರುತ್ತದೆ."

"ಅಲ್ಲಿಗೇ ಹೋಗೋಣ."

ಇಂದಿರ ದಾರಿ ತೋರಿಸುತ್ತಾ ಮುಂದೆ ನಡೆದಳು. ಮೋಹನ ಅವಳನ್ನು ಹಿಂಬಾಲಿಸಿದ.

ಇಂದಿರ ಜರಿಯ ನಡುವೆಇದ್ದ ಕಲ್ಲು ಬಂಡೆಯೊಂದರ ಮೇಲೆ ಕುಳಿತಳು. ಪಕ್ಕದಲ್ಲಿಯೇ ಇದ್ದ ಮತ್ತೊಂದು ಬಂಡೆಯ ಮೇಲೆ ಮೋಹನ ಕುಳಿತ.

ಮೋಹನ ಸುತ್ತಲೂ ನೋಡಿದ. ಹತ್ತಿರದಲ್ಲಿ ಜನಸಂಚಾರವಿದ್ದಂತೆ ತೋರಲಿಲ್ಲ.

ಅವನು ಹೇಳುವುದನ್ನು ಕೇಳಲು ತಯಾರಾಗಿರುವಂತೆ ಇಂದಿರ ಕುಳಿತಳು.

ಮೋಹನ ಕೈಗಳನ್ನು ಹೊಸೆದ. ಅವಳ ಕಣ್ಣುಗಳನ್ನು ತಪ್ಪಿಸಿ ಸುತ್ತಲೂ ನೋಡಿದ. ಕಾಲು ಗಂಟೆಯಾದರೂ ಅವನು ಏನೂ ಮಾತನಾಡದಿರುವುದನ್ನು ನೋಡಿ ಇಂದಿರ ಹೇಳಿದಳು.

"ಏನೋ ಹೇಳಬೇಕೆಂದಿದ್ದಿರಿ ?"

"ಹೂಂ. ಆದರೆ ಹೇಗೆ ಹೇಳುವುದು ಎಂದು ಯೋಚಿಸುತ್ತಿದ್ದೇನೆ."

"ಅಷ್ಟೊಂದು ಕಷ್ಟವೇ ?"

"ಹೂ .. ಸ್ವಲ್ಪ ಕಷ್ಟವೇ ಅದು. ನೀನು ಅದನ್ನು ಹೇಗೆ ತೆಗೆದುಕೊಳ್ಳುತ್ತಿಯೋ ನನಗೆ ಗೊತ್ತಿಲ್ಲ."

"ಶಾಂತವಾಗಿಯೇ ತೆಗೆದುಕೊಳ್ಳುತ್ತೇನೆ. ಧೈರ್ಯವಾಗಿ ಹೇಳಿ."

ಆದರೂ ನನಗೆ ಆ ವಿಷಯ ಹೇಗೆ ಹೇಳುವುದೆಂದು ಬಾಯಿ ಬರುತ್ತಿಲ್ಲ ಇಂದಿರಾ. ಇಷ್ಟು ಹೇಳಬಲ್ಲೆ–ನಿಮ್ಮೆಲ್ಲರ ವಿಷಯದಲ್ಲಿ ನಾನು ದೊಡ್ಡ ಅಪರಾಧಿ. ನಿಮ್ಮೆಲ್ಲರ ಕ್ಷಮೆ ಕೇಳೋಕೂ ನನಗೆ ಯೋಗ್ಯತೆ ಇಲ್ಲ."

"ಮೊದಲು ನಿಮ್ಮ ಅಪರಾಧ ತಿಳಿಸಿ. ಅನಂತರ ಕ್ಷಮೆ ಕೇಳುವ ಮಾತು."

"ಹೇಗೆ ಹೇಳಲಿ ಇಂದಿರಾ ? ನಾನು ಹೇಳುವ ವಿಷಯದಿಂದ ಎಲ್ಲರಿಗೂ, ಅದರಲ್ಲೂ ನಿನಗೆ ತುಂಬಾ ನೋವಾಗುತ್ತದೆ. ನೀನು ನನ್ನನ್ನು ಕ್ಷಮಿಸ ಬೇಕು."

"ವಿಷಯ ಹೊರಗೆ ಬರಲಿಲ್ಲ."

"ಹೇಗೆ ಹೇಳಲಿ ? ಈ ಗಳಿಗೆಯನ್ನು ಹೇಗೆ ಎದುರಿಸುವುದು ಎಂದು ಯೋಚಿಸಿ ಹಣ್ಣಾದೆ ನಾನು."

"ಇಂದಿರಾ...."–ಎಂದ ಮೋಹನ ಅತ್ಯಂತ ದೈನ್ಯದಿಂದ.

"ಏನು ?" ಶಾಂತವಾಗಿ ಕೇಳಿದಳು ಇಂದಿರ.

"ನಿನ್ನ ಕೈ ಹಿಡಿಯಲು ನನ್ನ ಮನಸ್ಸೇಕೋ ಒಪ್ಪುತ್ತಿಲ್ಲ ಇಂದಿರಾ."

ಇಂದಿರ ಮಾತನಾಡಲಿಲ್ಲ.

ಆಕೆ ಮಾತನಾಡದಿರುವುದನ್ನು ನೋಡಿ ಮೋಹನ ಗಾಬರಿಯಾಗಿ "ಇಂದಿರಾ"–ಎಂದ.

"ಏನು?"

"ಏನಾದರೂ ಹೇಳು ಇಂದಿರಾ. ಏನೂ ಹೇಳದೆ ಹೀಗೆ ಮೌನ ವ್ರತ ಹಿಡಿದು ನನ್ನನ್ನು ಕೊಲ್ಲಬೇಡ."

"ಏನು ಹೇಳಲಿ ?"

"ಏನಾದರೂ ಸರಿ. ನನ್ನನ್ನು ನಿಂದಿಸು, ತೆಗಳು, ಕೋಲು ತೆಗೆದು ಕೊಂಡು ಹೊಡಿ. ಕೃತಜ್ಞತೆ ಇಲ್ಲದವನು ಎಂದು ಶಪಿಸು. ಒಬ್ಬ ಮನುಷ್ಯ ಮತ್ತೊಬ್ಬನಿಗೆ ದೈಹಿಕವಾಗಿ, ಮಾನಸಿಕವಾಗಿ ಎಷ್ಟೆಷ್ಟು ಹಿಂಸೆ ಕೊಡಲು ಸಾಧ್ಯವೋ ಅಷ್ಟೂ ಹಿಂಸೆ ಕೊಡು. ನಾನು ಸಹಿಸುತ್ತೇನೆ. ಆದರೆ...."

"ಆದರೆ ನನ್ನನ್ನು ಮದುವೆಯಾಗಲು ತಯಾರಿಲ್ಲ ಅಲ್ಲವೆ ?"

ಮೋಹನ ಅವಮಾನದಿಂದ ತಲೆ ತಗ್ಗಿಸಿದ.

"ಅಲ್ಲವೇ?"—ಇಂದಿರ ಕೇಳಿದಳು.

"ಹೂಂ."

ಮೋಹನ ಇಂದಿರೆಯಿಂದ ಜ್ವಾಲಾಮುಖಿಯೊಂದು ಉದ್ಭವಿಸಬಹುದು ಎಂದು ನಿರೀಕ್ಷಿಸಿದ್ದ. ಅವಳ ಹೃದಯದ ಕಿಚ್ಚು ಕಾಳ್ಗಿಚ್ಚಾಗಿ ಇಡೀ 'ಬೆಳ್ಳಿ ಮೋಡ' ವನ್ನು ಸುಡಬಹುದು ಎಂದು ಎದಿರುನೋಡುತ್ತಿದ್ದ. ಅವನು ಜಲ ಪ್ರಳಯವನ್ನು ಬಯಸಿದ್ದ. ಅವಳ ಕಣ್ಣುಗಳಿಂದಹೊರಟ ಕಂಬನಿಯಿಂದಾಗಿ

ಜರಿ ದೊಡ್ಡ ಸಾಗರವಾಗಬಹುದು ಎಂದು ಭಾವಿಸಿದ್ದ.

ಇಂದಿರ ಯಾವ ಬಗೆಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ.

ಅವಳು ಕಂಬನಿ ಹರಿಯಿಸಿದರೆ ತಾನು ಆಗ ಅವಳನ್ನು ಯಾವ ರೀತಿ ಸಮಾಧಾನಮಾಡಬೇಕು ಎಂದವನು ಮೊದಲೇ ಲೆಕ್ಕಾಚಾರ ಹಾಕಿದ್ದ. ಬೈಗುಳಗಳ, ಹೀನವಾಕ್ಯಗಳ ಆಣಿ ಮುತ್ತುಗಳು ಅವಳ ಬಾಯಿಂದ ಹೊರ ಹೊಮ್ಮಿದರೆ ಆಗ ತನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂದವನು ಯೋಚಿಸಿದ್ದ. ಆಕೆ ಜ್ವಾಲಾಮುಖಿಯಾದರೆ ಯಾವ ಹಿಮಪರ್ವತವನ್ನು ಅವಳ ಮುಂದಿಡಬೇಕು ಎಂದು ಚಿಂತಿಸಿದ್ದ.

ಆದರೆ ಇಂದಿರ ನಿರ್ವಿಕಾರಚಿತ್ತಳಾಗಿ ಶಿಲೆಯೊಡನೆಶಿಲೆಯಾಗಿ ಕುಳಿತಿದ್ದಳು.

"ಏನಾದರೂ ಹೇಳು ಇಂದಿರಾ"–ಎಂದು ಮೋಹನ ಅವಳನ್ನು ಬೇಡಿಕೊಂಡ.

"ಹೇಳುವುದೇನೂ ಇಲ್ಲ."

"ಅಂದರೆ ನಾವಿಬ್ಬರೂ ವಾಗ್ದಾನಗಳಿಂದ ಪರಸ್ಪರ ಬಂಧಿತರು ಎಂದೇ ನಿನ್ನರ್ಥ ? ನಿಮ್ಮ ತಂದೆ ನನ್ನ ವ್ಯಾಸಂಗಕ್ಕಾಗಿ ಹಣ ಕೊಟ್ಟಿದ್ದಾರೆ ನಿಜ. ಆದರೆ ಅದನ್ನು ನಾನು ಸಾಲವೆಂದು ಪರಿಗಣಿಸಿ ನನಗೆ ಕೆಲಸವಾದ ಮೇಲೆ ಸ್ವಲ್ಪಸ್ವಲ್ಪವಾಗಿ ತೀರಿಸಲು ತಯಾರಿದ್ದೇನೆ. ಹಣದಿಂದ ಯಾರೂ ನನ್ನನ್ನು ಕೊಳ್ಳಲಾರರು. ನಾನೇನೂ ಅಗ್ಗವಾದವಸ್ತುವಲ್ಲ ಕೊಂಡುಕೊಳ್ಳುವುದಕ್ಕೆ."

ಮೋಹನ ಅವಳ ಭಾವನೆಗಳನ್ನು ಕೆದಕಲು, ಅವಳನ್ನು ಶಾಂತಿಯ ಕವಚದಿಂದ ಹೊರಗೆಳೆಯುಲು ಬಾಯಿಗೆ ಬಂದಂತೆ ಮಾತನಾಡಿದ.

ಇಂದಿರ ಕೇಳಿದಳು "ಈಗ ನಿಮ್ಮನ್ನು ಕೊಂಡುಕೊಳ್ಳುವವರು ಯಾರಿದ್ದಾರೆ ?"

"ನನ್ನನ್ನು ಬಿಡುಗಡೆ ಮಾಡು ಇಂದಿರಾ. ನನ್ನ ಸ್ವಾತಂತ್ರ್ಯ ನನಗೆ ಕೊಟ್ಟುಬಿಡು. ನಿಮ್ಮ ಮನೆಯ ಸೇವಕನಾಗಿ ಇರುತ್ತೇನೆ."

"ಸೇವಕನಾಗಿರಲು ಅಮೆರಿಕದವರೆಗೆ ಹೋಗಬೇಕೆ ?"

"ನಾನು ಯಾವುದಕ್ಕಾದರೂ ತಯಾರು.... ನಿನ್ನನ್ನು ಮದುವೆಯಾಗುವುದೊಂದು ಬಿಟ್ಟು."

"ಇಂದಿರೆಯ ಗಂಡನಾಗುವುದಕ್ಕಿಂತಲೂ ಇಂದಿರೆಯ ಸೇವಕನಾಗಿರುವುದೇ ವಾಸಿ. ಅಲ್ಲವೇ ?"—ಎನ್ನುತ್ತಾ ಇಂದಿರ ಕಿಲಕಿಲನೆ ನಕ್ಕಳು.

ಮೋಹನ ಗಾಬರಿಯಾಗಿ ಅವಳನ್ನು ನೋಡಿದ.

"ನನಗೆ ಹುಚ್ಚು ಹಿಡಿದಿಲ್ಲ, ಹೆದರಬೇಡಿ. ನನ್ನ ಪ್ರಶ್ನೆಗೆ ಉತ್ತರ ಹೇಳ್ತೀರಾ ?"

"ಏನು?"

"ನನ್ನನ್ನು ನೀವು ಮದುವೆಯಾಗದಿರಲು ಕಾರಣವೇನು ? ನೀವು ಅಳಿಯನಾಗುವಿರಿ ಎಂಬ ಉದ್ದೇಶದಿಂದ ಅಣ್ಣ ನಿಮ್ಮನ್ನು ವಿದೇಶಕ್ಕೆ ಕಳುಹಿಸಿದರು. ನಿಮ್ಮ ವ್ಯಾಸಂಗ ಮುಗಿದ ಮೇಲೆ ಸ್ವದೇಶಕ್ಕೆ ಹಿಂತಿರುಗಿ ಈಗ ನನ್ನ ಬಿಡುಗಡೆ ಮಾಡು ಎಂದರೆ ಅರ್ಥವೇನು?"

"ನಿಮ್ಮ ತಂದೆಯಿಂದ ತೆಗೆದುಕೊಂಡ ಹಣವನ್ನು ಸಾಲ...."

"ನಮ್ಮ ತಂದೆ ಲೇವಾದೇವಿ ಮಾಡುವವರ ಗುಂಪಿಗೆ ಸೇರಿದವರಲ್ಲ. ಯಾರಿಗಾದರೂ ಹಣಕೊಟ್ಟರೆ ಪ್ರೀತಿಗಾಗಿ ಕೊಡುತ್ತಾರೆ. ಇಲ್ಲವಾದರೆ...."

"ಇಲ್ಲವಾದರೆ?"—ಮೋಹನ ಕುತೂಹಲದಿಂದ ಕೇಳಿದ.

"ಧರ್ಮಾರ್ಥವಾಗಿ ಕೊಡುತ್ತಾರೆ."

ಮೋಹನನಿಗೆ ಕೆನ್ನೆಯ ಮೇಲೆ ರಪ್ಪನೆ ಹೊಡೆದಂತಾಯಿತು.

"ನನಗೇನೂ ನಿಮ್ಮ ತಂದೆಯ ಧರ್ಮ ಬೇಕಿಲ್ಲ"—ಎಂದ ಅವನು ಕಹಿಯಾಗಿ.

"ಧರ್ಮ ಮಾಡಿದರೂ ಯೋಗ್ಯತೆಯುಳ್ಳವರಿಗೆ ದಾನ ಮಾಡಬೇಕು. ಸತ್ಪಾತ್ರರಿಗೆ...."

"ಸಾಕು ಇಂದಿರಾ."

"ವಿದೇಶದ ಬೆಡಗಿಯರನ್ನು ನೋಡಿದ ನಿಮ್ಮ ಕಣ್ಣುಗಳಿಗೆ ನಾನು ತೀರಾ ಸಾಮಾನ್ಯಳಾಗಿ ಕಾಣಬಹುದು ಅಲ್ಲವೇ ?"

"ಊಹೂಂ. ಕಾರಣ ನನಗೆ ಗೊತ್ತಿಲ್ಲ. ನಿನ್ನನ್ನು ಮದುವೆಯಾಗಲು ನನ್ನ ಮನಸ್ಸೊಪ್ಪುತ್ತಿಲ್ಲ."

"ನೀವು ಬೇರೆ ಯಾರನ್ನಾದರೂ ಪ್ರೀತಿಸುತ್ತಿರುವಿರಾ ?"

"ಇಲ್ಲ."

"ವಿದೇಶದಲ್ಲಿ ಏನಾದರೂ ತೊಡಕು ಮಾಡಿಕೊಂಡು ಬಂದಿರುವಿರಾ?"

"ಇಲ್ಲ."

"ಹಾಗಾದರೆ ನನ್ನನ್ನು ಮದುವೆಯಾಗಲು ನೀವು ನಿರಾಕರಿಸುತ್ತಿರುವುದಕ್ಕೆ ಕಾರಣ ತಿಳಿಯಿತು."

"ಏನು ಕಾರಣ ?"

"ಗಿರಿ."

ಮೋಹನ ನಾಲಿಗೆ ಕಳೆದುಕೊಂಡ ಮೂಕನಂತಾದ.

"ಮತ್ತೆ...."

"ಸಾಕು ಸುಮ್ಮನಾಗಿ. ನಾನೇನೂ ಎಳೆಯ ಮಗುವಲ್ಲ. ರೈಲ್ವೆ ಸ್ಟೇಷನ್ನಿನಲ್ಲಿ ನಿಮ್ಮನ್ನು ನೋಡಿದ ಕೂಡಲೆ ನನಗೆ ತೋರಿತು—ನಾನು ವಿದೇಶಕ್ಕೆ ಕಳುಹಿಸಿಕೊಟ್ಟ ಮೋಹನ ಇವರಲ್ಲ. ಅದೇ ಗಾತ್ರ, ನಿಲುವು, ರೂಪು. ಆದರೆ ಈ ಮೋಹನ ಬೇರೆ. ತಾನಾಗಿಯೇ ಪ್ರೀತಿಯಿಂದ ಪ್ರೇಯಸಿಯ ಬಳಿಗೆ ಹಾರಿ ಬರುವ ಪ್ರಿಯನಿಗೂ ಯಾವುದೋ ಕಟ್ಟಿಗೆ ಒಳಗಾಗಿ ಬಲವಂತದಿಂದ ತಳ್ಳಲ್ಪಟ್ಟವನಿಗೂ ನನಗೆ ವ್ಯತ್ಯಾಸ ತಿಳಿಯುತ್ತದೆ."

"ಇಷ್ಟೆಲ್ಲಾ ಸುಳಿವು, ಸೂಕ್ಷ್ಮ ತಿಳಿಯುವವಳಿಗೆ ನಾನು ವಿದೇಶಕ್ಕೆ ಹೊರಟಾಗ...."

ಒತ್ತಿಬಂದ ಸಂಕೋಚದಿಂದ ಮೋಹನ ತನ್ನ ಮಾತನ್ನು ನುಂಗಿಕೊಂಡ.

"ಊಹೂಂ. ಆಗ ನನಗೆ ತಿಳಿಯಲಿಲ್ಲ. ನನಗಾಗಿಯೇ ನೀವು ನನ್ನ ಕೈ ಹಿಡಿಯಲು ಒಪ್ಪಿರುವಿರಿ ಎಂದು ನಾನು ಭಾವಿಸಿದ್ದೆ. ಅಲ್ಲದೆ ಆಗ ನಾನು ಎರಡು ವರ್ಷ ಚಿಕ್ಕವಳಾಗಿದ್ದೆ. ಈಗ ಎರಡು ವರ್ಷ ಅನುಭವ, ಜೀವನ ನನಗೆ ಎಷ್ಟೋ ತಿಳುವಳಿಕೆಯನ್ನುಂಟುಮಾಡಿವೆ. ನಿಮಗೆ ಬೇಕಾಗಿದ್ದುದು ನನ್ನ ತಂದೆಯ ಆಸ್ತಿ."

"ಇಂದಿರಾ!"

"ಒಬ್ಬಳೇ ಮಗಳಾದ ನನಗೆ ತಂದೆಯ ಆಸ್ತಿಯೆಲ್ಲಾ ಬರುತ್ತದೆ ಎಂಬ ಒಂದೇ ಉದ್ದೇಶದಿಂದ ನೀವು ನನ್ನನ್ನು ಮದುವೆಯಾಗಲು ಒಪ್ಪಿದಿರಿ. ನಿಮ್ಮ ಕಣ್ಣಿನ ಹೊಳಪನ್ನು ಪ್ರೇಮದ ಬೆಳಕೆಂದು ಭ್ರಮಿಸಿದೆ. ಆಗ ನಿಮ್ಮ ಕಣ್ಣುಗಳಲ್ಲಿ ಉರಿಯುತ್ತಿದ್ದುದು ಹಣದ ದಾಹ."

ಮೋಹನ ಕೊಂಚ ರೇಗಿ ನುಡಿದ "ಹಾಗೆಯೇ ಆಗಲಿ. ನಿನ್ನ ಅಭಿಪ್ರಾಯಗಳನ್ನು ನಾನು ಅನುಮೋದಿಸುವುದಿಲ್ಲ. ನನ್ನ ಬಗ್ಗೆ ನೀನು ಏನಾದರೂ ತಿಳಿದುಕೋ. ಆದರೆ ಒಂದು ಕೋರಿಕೆ. ನನ್ನನ್ನು ನಿನ್ನಿಂದ ಬಿಡುಗಡೆ ಮಾಡು."

"ನಾನೇನೂ ನಿಮ್ಮನ್ನು ಕಟ್ಟಿಹಾಕಿಲ್ಲವಲ್ಲ"—ಇಂದಿರ ತಿರಸ್ಕಾರದಿಂದ ನುಡಿದಳು.

"ಹಾಗಾದರೆ ನಾಳೆಯ ದಿನ ಈ ವಿಷಯವನ್ನು ನಿಮ್ಮ ತಂದೆಗೆ ತಿಳಿಸಲೇ ?"—ಮೋಹನ ಆತುರದಿಂದ ಕೇಳಿದ.

"ನಿಮಗೆ 'ಬೆಳ್ಳಿ ಮೋಡ'ದಲ್ಲೇ ಐಕ್ಯವಾಗಲು ಆಸೆಯೇ ?" ಇಂದಿರಾ ಕೇಳಿದಳು.

"ಹಾಗೆಂದರೆ?" ಮೋಹನನಿಗೆ ಅಚ್ಚರಿ.

"ನನ್ನ ತಂದೆ ನನ್ನನ್ನು ಎಷ್ಟು ಪ್ರೀತಿಸುತ್ತಾರೆಂದು ನಿಮಗೆ ತಿಳಿಯದು. ನಿಜ ಹೇಳಬೇಕೆಂದರೆ ನಮ್ಮ ಮದುವೆ ಅವರಿಗಿಷ್ಟವಿರಲಿಲ್ಲ. ಕೇವಲ ನನ ಮನಸ್ಸಿಗೆ ನೋವಾಗದಿರಲೆಂದು ಅವರು ನಮ್ಮ ಮದುವೆಗೆ ಒಪ್ಪಿಗೆ ಕೊಟ್ಟಿದ್ದರು...."

"ಸರಿ"

"ಅವರಿಗೆ ನನ್ನಲ್ಲಿ ಎಷ್ಟು ಪ್ರೀತಿಯಿದೆ ಗೊತ್ತೆ ?"

"ಎಷ್ಟು"

"ಈ ಬಂಡೆಗೆ ನನ್ನನ್ನು ಮದುವೆ ಮಾಡು ಎಂದರೂ ಈ ಕೂಡಲೇ ಮಾಡುತ್ತಾರೆ. ಡೊಳ್ಳು ಹೊಟ್ಟೆಯ ಚೋಮನನ್ನ ಪ್ರೀತಿಸುತ್ತೇನೆ ಎಂದು ನಾನು ಹೇಳಿದರೆ ನಾಳೆಯೇ ನನ್ನನ್ನು ಅವನಿಗೆ ಧಾರೆಯೆರೆದು ಕೊಡುತ್ತಾರೆ."

"ಸರಿ"—ಎಂದ ಮೋಹನ ಅಸಹನೆಯಿಂದ.

"ಕೆಲವು ವರ್ಷಗಳ ಹಿಂದಿನ ಮಾತು. ಆಗ ನನಗೆ ಹನ್ನೆರಡು ವರ್ಷ ವಯಸ್ಸಾಗಿತ್ತು. ಎಂದಿನಂತೆಯೇ ನಾನು ಕೈಲಿ ಕತ್ತಿ ಹಿಡಿದು ತೋಟದಲ್ಲಿ ಅಲೆದಾಡುತ್ತಿದ್ದೆ. ಆಗ ಇಲ್ಲಿ ಮುರುಗ ಎಂದು ಒಬ್ಬ ಕೂಲಿಯಾಳಿದ್ದ ಒಂಟಿಯಾಗಿ ಸಿಕ್ಕಿದ ನನ್ನನ್ನು ರೇಗಿಸಿ ಕೆಣಕಲು ಬಂದ. ಬಾಲ್ಯದ ಮುಗ್ಧಾವಸ್ಥೆಯಲ್ಲಿದ್ದ ನನಗೆ ದಿಗ್ಭ್ರಮೆಯಾಯಿತು. ನನ್ನ ಕೈಯಲ್ಲಿದ್ದ ಕತ್ತಿಯಿಂದ ಅವನ ಬೆನ್ನಿನ ಮೇಲೆ ಹೊಡೆದೆ. ಮುರುಗ ಕೆಳಗೆ ಬಿದ್ದ. ನಾನು ಅಳುತ್ತಾ ಅಲ್ಲಿಂದ ಓಡಿಹೋದೆ. ದಿಕ್ಕುಗೆಟ್ಟವಳಂತೆ ತಂದೆಯ ಬಳಿಗೆ ಓಡಿ ಬಂದು ಮುರುಗ ನನ್ನನ್ನು ಕೆಣಕಲು ಬಂದಿದ್ದ ಸಮಾಚಾರವನ್ನು ಅವರಿಗೆ ತಿಳಿಸಿದೆ. ತಂದೆ ರೌದ್ರದಿಂದ ಎದ್ದು ತಮ್ಮ ಹಾಸಿಗೆಯ ಹತ್ತಿರವಿದ್ದ ಬೀರುವಿನಿಂದ ಪಿಸ್ತೂಲು ತೆಗೆದುಕೊಂಡು 'ಎಲ್ಲಿ ಅವನು' ಎಂದರು. ಅವರ ಆಗಿನ ಸ್ವರೂಪ ನೋಡಿ ನನಗೆ ತುಂಬಾ ದಿಗಿಲಾಯಿತು. ಮುರುಗನ ಸಮಾಚಾರವನ್ನು ನಾನು ದುಡುಕಿ ಅವರಿಗೆ ಹೇಳಿದೆ ಎನಿಸಿತು.

ಯಾವಾಗಲೂ ಶಾಂತರಾಗಿರುತ್ತಿದ್ದ ತಂದೆ ಅಷ್ಟೊಂದು ಸಿಟ್ಟಾದುದನ್ನು ನಾನು ನೋಡಿರಲಿಲ್ಲ.

ನಾನು ಹೆದರಿ ಸುಮ್ಮನೆ ನಿಂತೆ.

'ಹೂಂ. ನಡಿ'—ಎಂದು ನನ್ನನ್ನು ಗದರಿಸಿ ಕೈಹಿಡಿದು ಎಳೆದುಕೊಂಡು ಅವರು ಹೋದರು.

ಈ ಗದ್ದಲದಿಂದ ತೋಟದ ಕೂಲಿಯಾಳುಗಳು ಸಮಾಚಾರ ತಿಳಿದು ಮುರುಗನನ್ನು ಅಡಗಿಸಿಟ್ಟರು. ನಮ್ಮ ತಂದೆ ತೋಟವನ್ನೆಲ್ಲಾ ಅಲೆದು ಸಾಕಾದರು. ಕೈಲಿ ಪಿಸ್ತೂಲು ಹಿಡಿದು ಮುಂದೆ ಅವರು, ಅವರ ಹಿಂದೆ ಅಳುತ್ತಾ ನಾನು—ಹೀಗೆ ತೋಟವನ್ನು ಮೂರು ಸುತ್ತು ಹಾಕಿದೆವು. ಆ ದಿನ ಮುರುಗ ಅವರ ಕಣ್ಣಿಗೆ ಬಿದ್ದಿದ್ದರೆ ಅವನು ಕೂಡಲೇ ಸುಟ್ಟು ಬೂದಿಯಾಗುತ್ತಿದ್ದ.

ನಂತರ ಪುಟ್ಟಯ್ಯ ಇತರರು ಸೇರಿ ತಂದೆಯನ್ನು ಸಮಾಧಾನ ಮಾಡಿದರು.

'ಮುರುಗ ಕುಡಿದಿದ್ದ. ಅವನಿಗೆ ಜ್ಞಾನವಿರಲಿಲ್ಲ'—ಎಂದೆಲ್ಲಾ ಹೇಳಿ ತಂದೆಯನ್ನು ಅವರು ಶಾಂತಗೊಳಿಸಿದರು.

ಆ ಮೇಲೆ ಮುರುಗ ನಮ್ಮ ತೋಟಕ್ಕೆ ಕಾಲಿಡುವ ಸಾಹಸವನ್ನು ಮಾಡಲಿಲ್ಲ. ತಂದೆ ಬೆಂಗಳೂರಿಗೆ ಹೋಗಿದ್ದಾಗ ಪಕ್ಕದ ತೋಟದಿಂದ ಅವನು ಬಂದು ನನ್ನ ಕಾಲು ಹಿಡಿದು ಕ್ಷಮಾಪಣೆ ಕೇಳಿಕೊಂಡ.

'ಅಮ್ಮಯ್ಯ ಕಳ್ಳು—ಚೆನ್ನಾಗಿ ಕುಡಿದಿದ್ದೆ. ಈ ಮಗನ್ನ ನೀನೆ ಕತ್ತಿಯಿಂದ ತುಂಡರಿಸಿದ್ದರೆ ಚೆನ್ನಾಗಿತ್ತು. ನಾನು ಮಾಡಿದ ತಪ್ಪನು ಹೊಟ್ಟ್ಯಾಗ ಹಾಕ್ಕೋ.'

ತಾಯಿಯೂ ಅವನನ್ನು ಸಮಾಧಾನ ಪಡಿಸಿದರು.

"ಏನು ಮಾಡೋದಕಾಗುತ್ತೆ ಮುರುಗ ? ಒಂದೊಂದು ಸಲ ಹೀಗೆ ಅಚಾತುರ್ಯವಾಗುತ್ತದೆ. ಆದರೆ ನೀನು ಮಾತ್ರ ಅವರ ಕಣ್ಣಿಗೆ ಬೀಳಬೇಡ. ಇಂದಿರೆಗೆ ಯಾವ ರೀತಿಯಿಂದ ಅಪಚಾರವಾಗುವುದನ್ನು ಅವರು ಸಹಿಸರು. ಒಂದು ಚುಚ್ಚು ನುಡಿ, ಒಂದು ತೆಗಳಿಕೆ ಅವಳಿಗೆ ತಗುಲಬಾರದು. ಇದು ಕುರುಡು ವ್ಯಾಮೋಹವೆಂದು ನನಗೆ ಎನಿಸುತ್ತದೆ. ಇಂದಿರೆಗೆ ಯಾವ ರೀತಿಯಿಂದಲಾದರೂ ನೋವು ಮಾಡಿದವನು ಈ ಭೂಮಿಯ ಮೇಲೆ ಇರಬಾರದೆಂದು ಅವರ ಅಭಿಪ್ರಾಯ. ನೀನು ಎಚ್ಚರಿಕೆಯಿಂದಿರು-' ಎಂದು ಅಮ್ಮ ಅವನನ್ನು ಸಮಾಧಾನಪಡಿಸಿ ಕಳಿಸಿದರು."

ಚಂದ್ರ ಮೇಲೇರಿ ಬಂದಿದ್ದ.

ಬೆಳದಿಂಗಳಿನಲ್ಲಿ ಭಾವೋದ್ವೇಗದ ಕಾವಿನಿಂದ ಇಂದಿರೆಯ ಕಣ್ಣುಗಳು ಪ್ರಜ್ವಲಿಸುತ್ತಿದ್ದವು.

ಇಂದಿರೆಯ ಮಾತುಗಳನ್ನು ಕೇಳಿ ಮೋಹನ ಉಗುಳು ನುಂಗಿದ. ತಂಪಾದ

ಬೆಳದಿಂಗಳ ರಾತ್ರಿಯಲ್ಲೂ ಅವನ ದೇಹ ಬೆವರಿತು.

"ಹಾಗಾದರೆ....ಹಾಗಾದರೆ...."

"ನೀವೇ ಈ ವಿಷಯವನ್ನು ತಂದೆಗೆ ತಿಳಿಸಿದರೆ—ನನ್ನ ಹೃದಯಕ್ಕಾಗಿರುವ ಗಾಯ ಎಂತಹದು ಎಂದವರು ಊಹಿಸಿಕೊಳ್ಳುತ್ತಾರೆ. ನಿಮಗಿನ್ನೂ ಬದುಕಬೇಕೆಂಬ ಆಸೆ ಇದ್ದರೆ ನೀವು ಈ ವಿಷಯ ಅವರಿಗೆ ತಿಳಿಸಬೇಡಿ."

"ಬೇರೆ ದಾರಿ ಯಾವುದು ?"–ಮೋಹನ ಅಸಹಾಯಕನಾಗಿ ಕೇಳಿದ.

"ನಾನೇ ಅವರಿಗೆ ಈ ವಿಷಯ ಹೇಳುತ್ತೇನೆ."

"ಏನೆಂದು ಹೇಳುವೆ ? ಮೋಹನ ನನ್ನನ್ನು ಮದುವೆಯಾಗಲು ಒಪ್ಪುವುದಿಲ್ಲ ಎಂದು ಹೇಳುವೆಯಾ "

"ಊಹೂಂ."

"ಮತ್ತೆ ?"

ಇಂದಿರ ಕ್ಷಣಕಾಲ ಸುಮ್ಮನಿದ್ದು ದೀರ್ಘವಾಗಿ ಉಸಿರೆಳೆದು ಹೇಳಿದಳು.

"ಊಹೂಂ. ಹಾಗೆ ಹೇಳೋದಿಲ್ಲ 'ಮೋಹನನನ್ನು ಮದುವೆಯಾಗುವ ಅಪೇಕ್ಷೆ ಈಗ ನನಗಿಲ್ಲ. ಅವರನ್ನು ಆರಿಸುವಾಗ ನಾನು ತಪ್ಪು ಮಾಡಿದೆ. ಅವರೊಡನೆ ನಾನು ಸುಖಿಯಾಗಿರುವುದಿಲ್ಲ ಎಂದು ನನಗೆ ತೋರುತ್ತದೆ'–ಎಂದು ಹೇಳುತ್ತೇನೆ."

"ಇಂದಿರಾ !"

"ನಾನೇ ಹಾಗೆ ಅವರಿಗೆ ಹೇಳಿದರೆ....?"

"ಹೂಂ."

ಇಂದಿರ ಪ್ರಯಾಸದಿಂದ ನುಡಿದಳು. "ಒಂದು ಪಕ್ಷ....ಒಂದು ಪಕ್ಷ.... ನಾವು ದೇಹಸಂಬಂಧ ಬೆಳೆಸಿದ್ದೇವೆಂದು ಹೇಳಿದರೂ ತಂದೆ ನನ್ನನ್ನು ನಿಮಗೆ ಧಾರೆಯೆರೆದು ಕೊಡುವುದಿಲ್ಲ. ಆ ಧೈರ್ಯ, ನಂಬಿಕೆ ನನಗಿದೆ."

"ಇಂದಿರಾ !"

"ಅವರ ಪ್ರೀತಿಯೋ ಒಮ್ಮೊಮ್ಮೆ ನನ್ನನ್ನು ಹೆದರಿಸುತ್ತದೆ. ನಾನುಎಂದೂ ಯಾವಾಗಲೂ ನಿಮ್ಮನ್ನು ಹಿಡಿದಿಡಲು ಪ್ರಯತ್ನಿಸಲಿಲ್ಲ. ನನ್ನ ತಂದೆಯ ಹಿಡಿತದಿಂದ ಪಾರಾಗಲು ನಿಮಗಿರುವ ದಾರಿ ಇದೊಂದೇ. ಆಗ ನೀವುಮಾತ್ರ ತಪ್ಪೆಲ್ಲವೂ ನನ್ನದು ಎನ್ನುವಂತೆ ವರ್ತಿಸಿ. ನನ್ನನ್ನು ಮದುವೆ ಮಾಡಿಕೊಳ್ಳಲು ಆತುರವಿರುವಂತೆ ಅಭಿನಯಿಸಿ. ನನ್ನನ್ನು ಬಿಟ್ಟು ಹೋಗುವುದು ನಿಮಗೆ ತುಂಬಾ ಕಷ್ಟಕರವಾಗಿದೆ ಎಂಬ ಆಟ ಹೂಡಿ. ಒಟ್ಟಿನಲ್ಲಿ ನಾಯಿಕೆ

ಯಿಂದ ತಿರಸ್ಕರಿಸಲ್ಪಟ್ಟು ಪ್ರಣಯಭಂಗ ಹೊಂದಿದ ದುರಂತನಾಯಕ ನೀವಾಗಬೇಕು."

"ಇಂದಿರಾ"

ಎನ್ನುತ್ತಾ ಮೋಹನ ಬಂಡೆಯಿಂದ ಕೆಳಗೆ ಜಿಗಿದು ಇಂದಿರೆಯ ಹತ್ತಿರ ಬಂದ.

"ದೂರ"–ಎಂದಳು ಇಂದಿರ ಅಧಿಕಾರವಾಣಿಯಿಂದ.

ಮೋಹನ ಪೆಚ್ಚಾಗಿ ನಿಂತ.

ಇಂದಿರ ನಿಧಾನವಾಗಿ ಕೆಳಗಿಳಿದಳು. ಕಾಲಿನ ಕೆಳಗೆ ಹರಿಯುತ್ತಿದ್ದ ನೀರನ್ನು ತುಳಿಯುತ್ತಾ ಒಂದೊಂದೇ ಹೆಜ್ಜೆ ಇಟ್ಟಳು.

ಬೆಳದಿಂಗಳಿನಲ್ಲಿ ಇಂದಿರೆಯ ಮುಖ ಬಿಳಿಮೋಡದಂತೆ ರಕ್ತವಿಲ್ಲದೆ ಬಿಳಚಿ ಕೊಂಡಿದ್ದುದು ಮೋಹನನಿಗೆ ಗೋಚರವಾಯಿತು.

"ಇಂದಿರಾ...."

"ಇನ್ನು ನನಗೆ ಮಾತನಾಡುವ ಆಸೆಯಿಲ್ಲ. ನನ್ನ ಪಾಡಿಗೆ ನನ್ನನ್ನುಬಿಡಿ" –ಎನ್ನುತ್ತಾ ಇಂದಿರ ಹಿಂತಿರುಗಿ ನೋಡದೆ ಸರಸರನೆ ಮುನ್ನಡೆದಳು.

ಕಣ್ಣು ಕಟ್ಟಿಕೊಂಡರೂ ತೋಟದ ಪರಿಚಯವಿದ್ದ ಇಂದಿರ ನೆಪ್ಪಿನ ಮೇಲೆ ತೋಟದಲ್ಲಿ ತಿರುಗಾಡಬಲ್ಲವಳಾಗಿದ್ದಳು.

ತನ್ನ ಯೋಚನೆಯಲ್ಲಿ ವ್ಯಮರೆತು ಇಂದಿರಾ ಮುಂದೆ ನಡೆದಳು. ಹೃದಯದಲ್ಲಿ ಎದ್ದಿದ್ದ ಬಿರುಗಾಳಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅವಳು ಸರ್ವಸಾಹಸ ಮಾಡುತ್ತಿದ್ದಳು.

"ಇಂದಿರಾ ..." ಎಂಬ ಆರ್ತನಾದ ಅವಳನ್ನು ಎಚ್ಚರಿಸಿತು. ಇಂದಿರ ತಟ್ಟನೆ ನಿಂತು ಹೊರಳಿ ನುಡಿದಳು.

ಕಡಿದು ಹಾಕಿದ್ದ ಮರವೊಂದನ್ನುಕಾಣದೇ ಎಡವಿದ ಮೋಹನ, ಸುಮಾರು ಇಪ್ಪತ್ತೈದು ಅಡಿಗಳ ಕೆಳಗಿದ್ದ ಹಳ್ಳವೊಂದಕ್ಕೆ ದಿಬ್ಬದ ಮೇಲಿನಿಂದ ಉರುಳಿದ.

ಗರ ಬಡಿದವಳಂತೆ ಇಂದಿರ ಒಂದು ಕ್ಷಣ ನಿಂತಳು.

ಮರುಕ್ಷಣ ಚೆದುರಿದ್ದ ಚೈತನ್ಯವನ್ನು ಒಟ್ಟುಗೂಡಿಸಿಕೊಂಡು ಇಂದಿರ ದಿಬ್ಬದ ಮೇಲಿನಿಂದ ಕೆಳಗೆ, ಇಳಿಜಾರಾಗಿದ್ದ ಜಾಗದಲ್ಲಿ ಓಡಿದಳು.

ಅವನ ದೇಹ ಬಂಡೆಗೆ ಹೊಡೆದಾಗ ಮೋಹನ 'ಹಾ' ಎಂದು ಚೀರಿದ, ಇಂದಿರ ಉಸಿರುಗಟ್ಟಿ ಓಡಿದಳು.

ತನ್ನ ಬಳಿಗೆ ಓಡಿ ಬರುತ್ತಿದ್ದ ಇಂದಿರೆಯನ್ನು ಮೋಹನ ನೋಡಿದ. ಅವಳನ್ನು ಹಿಡಿದುಕೊಳ್ಳುವವನ ಹಾಗೆ ಅವನು ತನ್ನ ಬಲಗೈಯನ್ನು ಮುಂದೆ ಮಾಡಿದ. ಮರುಕ್ಷಣ ಪ್ರಜ್ಞೆ ತಪ್ಪಿತು.

ಇಂದಿರ ಮೋಹನನ ಬಳಿ ಕುಳಿತು ಅವನ ಕಿವಿಯ ಬಳಿ ಬಾಯನ್ನಿಟ್ಟು 'ಮೋಹನ' ಎಂದಳು.

ಅವನು ಪ್ರಜ್ಞಾಶೂನ್ಯನಾಗಿದ್ದುದರ ಅರಿವು ಅವಳಿಗಾಯಿತು.

ಇದುವರೆವಿಗೂ ಅದುವಿ ಹಿಡಿದಿದ್ದ ಭಾವನೆಗಳೆಲ್ಲ ಕಂಬನಿಯ ರೂಪ ತಾಳಿ ಕೆನ್ನೆಯ ಮೇಲೆ ಹರಿದುವು.

ಅವಳು ಅವನ ನಾಡಿ ಹಿಡಿದು ನೋಡಿ, ಎದೆಯ ಮೇಲೆ ಕಿವಿಯಿಟ್ಟು ಹೃದಯದ ಬಡಿತವನ್ನಾಲಿಸಿದಳು.

ಜೀವವಿದೆ ಎನ್ನುವುದು ಖಾತ್ರಿಯಾದ ಕೂಡಲೇ ಇಂದಿರೆಗೆ ಧೈರ್ಯ ಬಂತು.

ಅವನ ಕೆನ್ನೆಗಳನ್ನು ನಡುಗುವ ಕೈಗಳಿಂದ ಸವರಿದಳು. ಹಣೆಯ ಮೇಲೆ ಹೂ ಮುತ್ತನ್ನೊಂದೊತ್ತಿ ಇಂದಿರಾ ಆ ಜಾಗದಿಂದ ಓಡಿದಳು.

ಓಡಿಬಂದ ಮಗಳನ್ನು ನೋಡಿ ರಾಯರು ಬೆದರಿದರು.

"ಏನಾಯಿತು ಇಂದಿರಾ ?"

"ಮೋಹನ.... ಮೋಹನ...."

"ಹೂಂ-ಏನಾಯಿತು ?"

"ಮೋಹನ ಹಳ್ಳದೊಳಗೆ ಬಿದ್ದುಬಿಟ್ಟರು. ಜ್ಞಾನವಿರುವ ಹಾಗೆ ಕಾಣು ವುದಿಲ್ಲ."

ರಾಯರು ಗಾಬರಿಯಿಂದ ಪುಟ್ಟಯ್ಯನನ್ನು ಕೂಗಿದರು.

ಐದಾರು ಜನ ಆಳುಗಳು ಕೈಲಿ ಟಾರ್ಚು ಹಿಡಿದು ಹೊರಟರು.

ಅರ್ಧ ಗಂಟೆಯಲ್ಲಿ ಅವರು ಮೋಹನನ ಪ್ರಜ್ಞಾಶೂನ್ಯ ದೇಹವನ್ನು ಎತ್ತಿಕೊಂಡು ಒಳಗೆ ಬಂದರು.

ರಕ್ತದಿಂದ ತೊಯ್ದು ಹೋಗಿದ್ದ ಅವನ ಬಟ್ಟೆಗಳನ್ನೂ, ಅವನ ದೇಹ ವನ್ನೂ ನೋಡಲಾರದೆ ಇಂದಿರ ಕಣ್ಣು ಮುಚ್ಚಿಕೊಂಡಳು.

ರಾಯರು ಡಾಕ್ಟರನ್ನು ಕರೆದುತರಲು ಕಾರು ತೆಗೆದುಕೊಂಡು ಚಿಕ್ಕಮಗ ಳೂರಿಗೆ ಹೊರಟರು.

ಪುಟ್ಟಯ್ಯ ಗಾಯದಿಂದ ಒಸರುತ್ತಿದ್ದ ರಕ್ತವನ್ನು ಒರೆಸಿ ತನಗೆ ತಿಳಿದಿದ್ದ

ಸೊಪ್ಪಿನ ರಸ ಸವರಿದ್ದ.

ಇಂದಿರ ಬೆರಗು ಬಡಿದವಳಂತೆ ಮೋಹನನ ತಲೆಯ ಹತ್ತಿರ ಕುಳಿತಿದ್ದಳು.

"ಏನೂ ಆಗೋಲ್ಲ ಅಮ್ಮಯ್ಯ. ಧೈರ್ಯವಾಗಿರು. ಬಿದ್ದ ಗಾಬರಿಗೆ ಜ್ಞಾನ ಹೋಗಿದೆ."

"ಅವರಿಗೆ ಏನೂ ಆಗೋದಿಲ್ಲವೇ ?"

"ಇಲ್ಲ. ಅವರ ಪ್ರಾಣಕ್ಕೆ ನನ್ನ ಪ್ರಾಣ ಒತ್ತೆ."

"ನನಗೆ ಏನು ಮಾಡೋಕೂ ಗೊತ್ತಾಗೋದಿಲ್ಲ."

"ಮಲಗಿಕೋ ಹೋಗು ಅಮ್ಮಯ್ಯ. ನಾನು ನೋಡಿಕೊಳ್ಳುತ್ತೇನೆ ಮೋಹನರಾಯರನ್ನ."

ಇಂದಿರ ಮೋಹನನ ಪಕ್ಕದಿಂದ ಕದಲಲಿಲ್ಲ.

ವೈದ್ಯರು ಬಂದರು.

ದೇಹದ ಮೇಲಾಗಿದ್ದ ಗಾಯಗಳಿಗೆ ಔಷಧಿ ಹಚ್ಚಿದರು.

"ಮೂಳೆ ಏನಾದರೂ ಮುರಿದಿದೆಯೋ ಏನೋ ಒಂದು ಸಲ ನೋಡಿ ಬಿಡುವುದು ವಾಸಿ. ಯಾಕೆಂದರೆಎತ್ತರದಿಂದ ಬಿದ್ದಿದ್ದಾರೆ.ಈಗ ಉದಾಸೀನ ಮಾಡಬಾರದು. ಮೊದಲು ಅವರಿಗೆ ಜ್ಞಾನ ಬರಲಿ. ನಂತರ ಎಕ್ಸ್‌ರೇ ತೆಗೆಸಬೇಕು."

"ಪ್ರಾಣಕ್ಕೆ ಏನೂ ಅಪಾಯ ಇಲ್ಲವೇ ?"

–ರಾಯರು ಕೇಳಿದರು.

"ಛೇ,ಪ್ರಾಣಕ್ಕೇನೂ ತೊಂದರೆಯಿಲ್ಲ. ಬಿದ್ದ ಷಾಕಿಗೆ ಜ್ಞಾನಹೋಗಿದೆ."

ಡಾಕ್ಟರು ತಮ್ಮ ಕರ್ತವ್ಯ ಮುಗಿಸಿ ಹೋದರು.

ಆ ದಿನ ಮನೆಯಲ್ಲಿ ಯಾರೂ ಊಟ ಮಾಡಲಿಲ್ಲ. ಭಾವೀ ಅಳಿಯನಿಗಾಗಿ ಮಾಡಿಸಿದ್ದ ರುಚಿರುಚಿಯಾದ ತಿಂಡಿ, ಅಡಿಗೆಯನ್ನು ಮನೆಯ ನೌಕರರು ಹಂಚಿಕೊಂಡರು.

ಮೋಹನನ ಮಂಚದ ಬಳಿ ಕುರ್ಚಿ ಹಾಕಿಕೊಂಡು ಕುಳಿತ ಇಂದಿರ ಅಲ್ಲಿಂದ ಏಳಲಿಲ್ಲ.

ಅಂತರಂಗ ಅವಳನ್ನು ಕುಕ್ಕಿ ಹಿಂಸಿಸುತ್ತಿತ್ತು. ತನ್ನ ಅಜಾಗರೂಕತೆಯಿಂದಲೇ ಮೋಹನ ಬಿದ್ದ ಎಂಬ ಭಾವನೆ ಅವಳಲ್ಲಿ ಬೇರೂರಿತ್ತು.

ಮೋಹನನ ಮೇಲೆ ತಾನು ಈ ರೀತಿ ಸೇಡು ತೀರಿಸಿಕೊಳ್ಳಬೇಕೆ ?

ಅವನು ಹಳ್ಳಕ್ಕೆ ಬೀಳಲೆಂದೇ ತಾನು ಅವನನ್ನು ಹಿಂದೆ ಬಿಟ್ಟು ಮುಂದೆ

ನಡೆಯಲಿಲ್ಲ.

ಅವನು ತನ್ನ ಹೃದಯಕ್ಕಿಟ್ಟ ಕೊಳ್ಳಿಯಿಂದ ಕಂಗಾಲಾಗಿ ಇಂದಿರಾ ನಡೆದಿದ್ದಳು.

ಆದರೂ ತಪ್ಪು ತನ್ನದು.

ತನ್ನನ್ನು ತಾನು ಎಂದಿಗೂ ಕ್ಷಮಿಸುವುದಿಲ್ಲ.

ರಾಯರು ಮಗಳಿಗೆ ಮಲಗಿಕೊಳ್ಳಲು ಹೇಳಿದರು.

"ನಾನು ಇಲ್ಲಿಯೇ ಕುಳಿತುಕೊಂಡಿರುತ್ತೇನೆ. ನೀನು ಮಲಗಿಕೋ ಇಂದಿರಾ."

"ಅವರಿಗೆ ಜ್ಞಾನ ಬರುವವರೆಗೆ ನಾನು ಇಲ್ಲಿಯೇ ಇರುತ್ತೇನಣ್ಣ."

"ನೀನು ಮಲಗಿಕೋಮ್ಮ. ನನಗೆ ನೀನು ಬೇರೆಯಲ್ಲ, ಮೋಹನ ಬೇರೆಯಲ್ಲ."

"ನೀನು ಮೋಹನನನ್ನು ಅಷ್ಟೊಂದು ಪ್ರೀತಿಸುತ್ತಿಯೇನಣ್ಣ ?

ಇಂದಿರೆಯ ಪ್ರಶ್ನೆ ರಾಯರಿಗೆ ವಿಚಿತ್ರವಾಗಿ ತೋರಿತು.

"ನಿನಗೆ ಅವನಲ್ಲಿ ಎಷ್ಟು ಪ್ರೀತಿ ಇದೆಯೋ ಅಷ್ಟೇ ಪ್ರೀತಿ ನನಗಿದೆ. ನಿನ್ನಿಂದ ಅವನು, ನಿನಗೋಸ್ಕರ ಅವನು ನನಗೆ ಪ್ರಿಯನಾದ ವ್ಯಕ್ತಿಯಾಗಿದ್ದಾನೆ."

ಇಂದಿರ ಮಾತನಾಡಲಿಲ್ಲ.

ಅವಳು ಕಣ್ಣುಮುಚ್ಚಿ ಮಲಗಿದ್ದ ಮೋಹನನ ಮುಖವನ್ನು ನೋಡುತ್ತಿದ್ದಳು.

ಎಷ್ಟು ಸುಂದರವಾದ ಮುಖ! ಆ ಮುಖದ ಹಿಂದೆ ಎಷ್ಟು ಸಣ್ಣ ಹೃದಯ!

ಅವನು ತನ್ನನ್ನು ಪ್ರೀತಿಸಲಿಲ್ಲವೆಂದು, ತನ್ನನ್ನು ಮದುವೆಯಾಗುವುದಿಲ್ಲವೆಂದು ಹಾಗೆ ಅಲ್ಲಗಳೆಯಬೇಕೆ ?

ಎಷ್ಟು ಸಣ್ಣ ಬುದ್ಧಿ ತನ್ನದು !

ಅವನಿಗೆ ಅವನು ಮಾಡುತ್ತಿರುವುದು ಸರಿ ಎನಿಸಿರಬಹುದು. ಆದರೆ ತನಗದು ಅಕ್ಷಮ್ಯ ಅಪರಾಧವಾಗಿ ತೋರಬಹುದು.

ಮೋಹನ ಮತ್ತೆ ಮೊದಲಿನಂತಾಗುವವರೆಗೆ ತನಗೆ ನೆಮ್ಮದಿ, ಶಾಂತಿ ಯಾವುದೂ ಇಲ್ಲ.

ಶಿಕ್ಷೆಯಾಗುವುದು ನರಕದಲ್ಲೇ ಏನು?

ಅಪರಾಧಿಗಳಿಗೆ ನ್ಯಾಯಾಲಯದಲ್ಲೇ ಶಿಕ್ಷೆಯಾಗಬೇಕೆ ?

ಅಂತರಂಗದಲ್ಲಿ ನಡೆಯುವ ವಿಪ್ಲವಕ್ಕಿಂತ ಮನುಷ್ಯನಿಗೆ ಬೇರೊಂದು ಶಿಕ್ಷೆ ಇದೆಯೇ ?

"ಮಲಗಿಕೋಮ್ಮ ಇಂದಿರಾ."

"ನನ್ನ ಕೈಲಿ ಆಗೋದಿಲ್ಲ ಅಣ್ಣಾ ಕ್ಷಮಿಸು."

ರಾಯರು ನಿರುಪಾಯರಾಗಿ ಎದ್ದು ಹೋದರು.

ಇರುಳ ದೀಪ ಉರಿಸುತ್ತಾ ಇಂದಿರ ಮೋಹನನ ಬಳಿ ಕುಳಿತಿದ್ದಳು. ರೂಮಿನ ಮತ್ತೊಂದು ಮೂಲೆಯಲ್ಲಿ ಚಾಪೆಯೊಂದರ ಮೇಲೆ ಸಣ್ಣದಾಗಿ ಗೊರಕೆ ಹೊಡೆಯುತ್ತಾ ಪುಟ್ಟಯ್ಯ ಮಲಗಿದ್ದ.

ರಾಯರೂ ನಾಲ್ಕಾರು ಬಾರಿ ಬಂದು ಹೋಗಿದ್ದರು.

ಬೆಳಗಿನ ಜಾವ ಮೂರು ಗಂಟೆಗೆ ಮೋಹನನಿಗೆ ಎಚ್ಚರವಾಯಿತು.

ಮೋಹನ ನರಳುತ್ತಾ ಹೊರಳಿದಾಗ ಕುರ್ಚಿಯ ಮೇಲೆ ಕುಳಿತು ತೂಕಡಿಸುತ್ತಿದ್ದ ಇಂದಿರೆಗೆ ಎಚ್ಚರವಾಯಿತು.

ಇಂದಿರ ಬಾಗಿ ಮೆಲ್ಲನೆ ಕೂಗಿದಳು. "ಮೋಹನ"

ಮೋಹನ ಮೊದಲು ಮಾತನಾಡಲಿಲ್ಲ. ಇಂದಿರ ಮತ್ತೆರಡು ಬಾರಿ ಕೂಗಿದ ಮೇಲೆ ಅವನ ಗಮನ ಅವಳ ಕಡೆ ಹೋಯಿತು.

"ಯಾರು" ಎಂದನಾತ ಕ್ಷೀಣವಾದ ದನಿಯಲ್ಲಿ.

"ನಾನು ಇಂದಿರಾ."

ಅವನಿಗೆ ಎಲ್ಲವೂ ನೆನಪಿಗೆ ಬಂದಿತು. ತಮ್ಮಿಬ್ಬರ ನಡುವೆ ನಡೆದ ಮಾತುಕತೆಗಳನ್ನೂ,ನಂತರ ತಾನು ಬಿದ್ದುದನ್ನೂ ನೆನಪಿಗೆ ತಂದುಕೊಂಡ.

"ಗಾಬರಿಯಾಗಬೇಡಿ. ಡಾಕ್ಟರು ಬಂದು ನೋಡಿಕೊಂಡು ಹೋದರು. ಹೆಚ್ಚಿಗೆ ಪೆಟ್ಟಾಗಿಲ್ಲ"—ಎಂದಳು ಇಂದಿರಾ.

ಮೋಹನ ನರಳಿದ.

"ನಾಳೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಈಗ ಹಾಲು ಕುಡಿದು ಮಲಗಿ. ಕೊಡಲೇ ?"

"ಬೇಡ."

"ಉಪವಾಸವಿರಬೇಡಿ. ಹಣ್ಣು, ಹಾಲು ಕೊಡುತ್ತೇನೆ."

"ಊಹೂಂ. ನಂಗೆ ಬೇಡ. ನಾನು ನಮ್ಮೂರಿಗೆ ಹೋಗುತ್ತೇನೆ. ನನ್ನ ಕಳಿಸಿಬಿಡು."

"ನೀವು ಹುಷಾರಾದ ಕೂಡಲೇ ಹೋಗುವಿರಂತೆ."

"ಬೇಡ. ನನ್ನ ಈಗಲೆ ಕಳಿಸಿ—"ಮೋಹನ ಮೊಂಡು ಹಿಡಿದು ಹೇಳಿದ.

"ಈ ಅರ್ಧ ರಾತ್ರಿಯಲ್ಲಿ ಹೇಗೆ ಹೋಗ್ತೀರಿ?"

"ನಾನು ಹೋಗ್ತಿನಿ"—ಎನ್ನುತ್ತಾ ಮೋಹನ ಏಳಲು ಪ್ರಯತ್ನಿಸಿದ.

"ದಯವಿಟ್ಟು ಮಲಗಿ ಈಗ"—ಎನ್ನುತ್ತಾ ಇಂದಿರ ಮೋಹನನು ಹಿಡಿದು ಮಲಗಿಸಿದಳು. ಅವನ ಹಣೆಯ ಮೇಲೆ ಕೈಯಿರಿಸಿದಳು.

ಜ್ವರದಿಂದ ಅವನ ದೇಹ ಸುಡುತ್ತಿತ್ತು.

ತನ್ನ ಹಣೆಯ ಮೇಲಿದ್ದ ಇಂದಿರೆಯ ತಂಪಾದ ಕೈಯಿನ ಮೇಲೆ ಸುಡುತ್ತಿದ್ದ ತನ್ನ ಕೈಯಿರಿಸಿ ಮೋಹನ 'ಅಮ್ಮಾ' ಎಂದು ನರಳಿದ.

ಇಂದಿರ ತಟ್ಟನೆ ಕೈ ಹಿಂದಕ್ಕೆಳೆದುಕೊಂಡಳು.

ಇಂದಿರ ಎದ್ದು ದೊಡ್ಡ ದೀಪ ಹಾಕಿ, ಫ್ಲಾಸ್ಕಿನಲ್ಲಿರಿಸಿದ್ದ ಹಾಲನ್ನು ಲೋಟಕ್ಕೆ ಬಗ್ಗಿಸಿ ಮೋಹನನ ಬಾಯಿಯ ಹತ್ತಿರ ಹಿಡಿದು

"ಕುಡಿಯಿರಿ"—ಎಂದಳು.

"ನಂಗೆ ಬೇಡ."

"ಏನು ಬೇಕು ನಿಮಗೆ?"

"ನನ್ನ ನಮ್ಮೂರಿಗೆ ಕಳಿಸಿ."

"ಮೋಹನ, ನನ್ನ ಮಾತು ಕೇಳಿ. ಈಗ ರಾತ್ರಿಯಾಗಿದೆ. ಬೆಳಗಾಗುತ್ತಲೆ ನಿಮ್ಮನ್ನು ಊರಿಗೆ ಕಳಿಸುತ್ತೇನೆ

"ಖಂಡಿತವೋ?"

"ಹೂಂ. ಈಗ ಹಾಲು ಕುಡಿಯಿರಿ."

ಮೋಹನ ಸಮಾಧಾನಗೊಂಡು ಇಂದಿರ ಕೊಟ್ಟ ಹಾಲನ್ನು ಮಲಗಿದ್ದಂತೆಯೇ ಕುಡಿದ.

"ಈಗ ನಿದ್ದೆ ಮಾಡಿರಿ."

"ಬೆಳಗ್ಗೆ ನನ್ನ ಕಳಿಸಿಬಿಡಿ."

"ಆಗಲಿ."

"ಆಮೇಲೆ ಕೊಟ್ಟ ಮಾತಿಗೆ ತಪ್ಪಬಾರದು."

ಇಂದಿರ ಜ್ವರದ ಕಾವಿಗೆ ಕೆಂಪೇರಿದ್ದ ಅವನ ಕಣ್ಣುಗಳನ್ನು ನೋಡುತ್ತಾ ಹೇಳಿದಳು.

"ಈ ಜನ್ಮದಲ್ಲಿ ಆ ಗುಣ ನನಗೆ ಬರಲಿಲ್ಲ."

ತಟ್ಟನೆ ಮೋಹನನ ಮುಖ ಕೆಂಪೇರಿ ಬಿಳಿಚಿಕೊಂಡಿತು. ಏನೋ ಮಾತನಾಡುವವನಂತೆ ಬಾಯಿ ತೆರೆದು ಮತ್ತೆ ಮಾತನ್ನು ತನ್ನಲ್ಲಿಯೇ ನುಂಗಿಕೊಂಡ.

ಕ್ಷಣಕಾಲ ಸುಮ್ಮನಿದ್ದು ಮೋಹನ ಹೇಳಿದ.

"ನೀನು ಮಲಗು ಹೋಗು."

"ನನ್ನ ಯೋಗಕ್ಷೇಮದ ಬಗ್ಗೆ ನೀವು ಚಿಂತಿಸಬೇಡಿ."

"ಅರ್ಧ ರಾತ್ರಿ ಮೀರಿರಬೇಕು."

"ಚಿಂತೆಯಿಲ್ಲ. ನೀವು ಮಲಗಿ."

"ಬೆಳಿಗ್ಗೆ ...."

"ಆಗಲಿ. ಬೆಳಿಗ್ಗೆ ನಿಮಗೆ ಊರಿಗೆ ಹೋಗುವುದು ಸಾಧ್ಯವಾದರೆ ಹೋಗುವಿರಂತೆ."

ಮೋಹನ ತುಂಬ ತೃಪ್ತಿಗೊಂಡು ಮಲಗಿ ನಿದ್ರಿಸಿದ.

ಇಂದಿರ ಕುರ್ಚಿಯ ಮೇಲೆ ಕುಳಿತು ಅವನನ್ನೇ ನೋಡುತ್ತಿದ್ದಳು.

ಬೆಳಿಗ್ಗೆ ಆರುಗಂಟೆಯ ಸಮಯದಲ್ಲಿ ರಾಯರು ಎದ್ದು ಬಂದಾಗಲೂ ಇಂದಿರ ಮುನ್ನಿನಂತೆಯೇ ಕುಳಿತಿದ್ದಳು. ರಾಯರು ಮಗಳ ಭುಜ ಹಿಡಿದು ಅಲುಗಿಸಿ "ಇಂದಿರ" ಎಂದರು.

ಇಂದಿರ ತಂದೆಯ ಕಡೆ ನೋಡಿದಳು.

"ಮೋಹನನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು....ನೀನು ಅವನಿಗೆ ಕಾಫಿ ಕೊಟ್ಟು... "

ರಾಯರ ದನಿ ಕೇಳಿ ಮೋಹನ ಎಚ್ಚರಗೊಂಡ.

"ಎಚ್ಚರವಾಯಿತೇ ಮೋಹನರಾವ್. ಈಗ ಆಸ್ಪತ್ರೆಗೆ ಹೋಗಿ ಬರೋಣ."

"ಊಹೂಂ. ನಾನು ಊರಿಗೆ ಹೋಗುತ್ತೇನೆ.

"ಆಸ್ಪತ್ರೆಯಲ್ಲಿ ಡಾಕ್ಟರು ಏನು ಹೇಳುವರೋ ಹಾಗೆ ಮಾಡೋಣ." ಅವರು ಊರಿಗೆ ಹೋಗಲಿ ಎಂದರೆ ಹೋಗುವಿರಂತೆ."

"ನಾನು ಹೋಗಲೇಬೇಕು. ನಾನಿಲ್ಲಿ ಇರಲಾರೆ"––ಎನ್ನುತ್ತಾ ಮೋಹನ್ನ ಇಂದಿರೆಯ ಕಡೆ ನೋಡಿದ.

"ಯಾಕೆ ಇದು ಅನ್ಯರ ಮನೆಯೇ? ನಿಮ್ಮ ಮನೆಯಲ್ಲಿ ನೀವಿರುತ್ತೀರಿ." ಮೋಹನನಿಗೆ ರಾಯರ ಮಾತು ಚುಚ್ಚಿದಂತಾಯಿತು. ಅವನು ಮತ್ತೆ

ಇಂದಿರೆಯ ಕಡೆ ನೋಡಿದ.

"ಅವರನ್ನು ಕಳಿಸಿಕೊಡುವುದು ಸಾಧ್ಯವಾದರೆ ಕಳಿಸಣ್ಣ"–ಎಂದಳು ಇಂದಿರಾ.

"ಇಂದಿರ, ಇದೇನು ಮಾತನಾಡುವೆ ನೀನು ? ಅವರು ಹುಷಾರಾಗುವವರೆಗೆ ಇಲ್ಲಿಂದ ಕದಲುವ ಹಾಗಿಲ್ಲ"

ರಾಯರು ಖಂಡಿತವಾದ ದನಿಯಲ್ಲಿ ಹೇಳಿದರು.

"ಮೈಸೂರು ದೊಡ್ಡ ಊರು. ಅಲ್ಲಿಗಿಂತಲೂ ಇಲ್ಲಿ ಒಳ್ಳೆಯ ವೈದ್ಯರುಗಳಿರುತ್ತಾರೆ—" ಮಗಳು ಮತ್ತೆ ವಾದಿಸಿದಳು.

"ಮೊದಲು ಇಲ್ಲಿಯ ಡಾಕ್ಟರ ಅಭಿಪ್ರಾಯ ಕೇಳಿ ತಿಳಿದುಕೊಳ್ಳೋಣ" —ಎನ್ನುತ್ತಾ ರಾಯರು ಹೋದರು.

ಅಷ್ಟರಲ್ಲಿ ಪುಟ್ಟಯ್ಯ ಗಡಬಡಿಸಿ ಎದ್ದು "ಹೇಗಿದಾರೆ ..." ಎನ್ನುತ್ತಾ ಎದ್ದು ಬಂದ.

"ನಿದ್ದೆ ಮಾಡಿದೆಯಾ ಪುಟ್ಟಯ್ಯ ?"—ಇಂದಿರ ಕೇಳಿದಳು.

"ಇಲ್ಲ ಅಮ್ಮಯ್ಯ. ರಾತ್ರಿ ಒಂದುಗಳಿಗೆ ಸಹಿತ ನನಗೆ ನಿದ್ದೆ ಬರಲಿಲ್ಲ."

ಇಂದಿರ ನಕ್ಕು "ಒಳ್ಳೆಯದಾಯಿತು. ಮೋಹನರಾಯರಿಗೆ ಮುಖ ತೊಳೆದುಕೊಳ್ಳಲು ಬಿಸಿ ನೀರು ತಂದುಕೊಡು" ಎಂದಳು.

"ನಾನೇ ಹೋಗುತ್ತೇನೆ"—ಎನ್ನುತ್ತಾ ಮೋಹನ ಆತುರವಾಗಿ ಎದ್ದು ನಿಲ್ಲಲು ಪ್ರಯತ್ನಿಸಿದ.

ನೆಲದ ಮೇಲೆ ಕಾಲೂರಲು ಅವನಿಂದ ಸಾಧ್ಯವಾಗಲಿಲ್ಲ. ಅವನು ನೋವಿನಿಂದ ನರಳಿ ಹತ್ತಿರದಲ್ಲಿಯೇ ನಿಂತಿದ್ದ ಇಂದಿರೆಯ ಭುಜದ ಮೇಲೆ ಕೈಯೂರಿದ. ಇಂದಿರೆಯ ಭುಜ ಹಿಡಿದಿದ್ದಂತೆಯೇ ಹೆಜ್ಜೆ ಎತ್ತಿಡಲು ಪ್ರಯತ್ನಿಸಿ ಸಾಧ್ಯವಾಗದಿರಲು ಹಾಸಿಗೆಯ ಮೇಲೆ ಕುಳಿತು

"ಇಂದಿರಾ, ಸಧ್ಯಕ್ಕೆ ನನ್ನಿಂದ ನಿಮಗೆ ಬಿಡುಗಡೆಯಿಲ್ಲವೆಂದು ತೋರುತ್ತದೆ"—ಎಂದ.

ಇಂದಿರ ಅವನ ಪ್ರಶ್ನೆಗೆ ಉತ್ತರ ಹೇಳುವ ಬದಲು ಅವನಿಗೆ ಬೆನ್ನು ಮಾಡಿ ಅವನ ಪೆಟ್ಟಿಗೆಯಲ್ಲಿ ಹಲ್ಲುಜ್ಜುವ ಬ್ರಷ್ಷು, ಪೇಸ್ಟನ್ನು ಹುಡುಕತೊಡಗಿದಳು.

"ಅಲ್ಲಿಲ್ಲ. ಅದು ಲೆದರ್ ಬ್ಯಾಗ್‌ನಲ್ಲಿದೆ."

ಇಂದಿರ ಹುಡುಕಿ ಎರಡನ್ನೂ ಮೋಹನನ ಕೈಗೆ ತಂದಿತ್ತಳು.

"ಥ್ಯಾಂಕ್ಯೂ."

ಪುಟ್ಟಯ್ಯ ಬಿಸಿನೀರನ್ನೂ, ಬೇಸಿನ್ನನ್ನೂ ತಂದಿರಿಸಿದ.

ಮುಖ ತೊಳೆದಾದ ಕೂಡಲೇ ಟವಲನ್ನು ಹಿಡಿದು ನಿಂತಿದ್ದ ಇಂದಿರ ಟವಲನ್ನು ಅವನ ಕೈಗೆ ಕೊಟ್ಟಳು.

"ಥ್ಯಾಂಕ್ಸ್."

"ಹೀಗೆ ಎಲ್ಲಾದಕ್ಕೂ ಥ್ಯಾಂಕ್ಸ್ ಹೇಳುತ್ತಾ ಹೋದರೆ ಅದಕ್ಕೆ ಕೊನೆ ಮೊದಲೇ ಇಲ್ಲವಾಗುತ್ತದೆ—"ಎಂದಳು ಇಂದಿರ.

ಗಿರಿ ಕುಣಿದಾಡುತ್ತಾ ಒಳಗೆ ಬಂದ.

ಹೊರಗೆ ಬೆಳಗುತ್ತಿದ್ದ ಬಾಲಸೂರ್ಯ ಮಗುವಾಗಿ ಒಳಗೆ ಬಂದಂತಾಯಿತು.

"ಅಕ್ಕ....ಅಕ್ಕ...." ಎಂದು ತೊದಲಿದ ಗಿರಿ.

ಇಂದಿರ ಗಿರಿಯನ್ನು ಎತ್ತಿಕೊಂಡು ಹೊರಗೆ ಹೊರಟಳು.

"ಇಂದಿರ, ನೀನೂ ನನ್ನ ಜೊತೆ ಆಸ್ಪತ್ರೆಗೆ ಬರ್ತಿಯಾ ?" ಮೋಹನ ಕೂಗಿ ಕೇಳಿದ.

ಇಂದಿರ ಹಿಂತಿರುಗಿ ನೋಡದೆ ಹೊರಗೆ ಹೋಗುತ್ತಾ ಹೇಳಿದಳು.

"ಊಹೂಂ. ನಾನೇಕೆ ?"

ಪುಟ್ಟಯ್ಯ ಮೋಹನನಿಗೆ ಬಟ್ಟೆಗಳನ್ನು ಹಾಕಿದ. ಶರಟು ಹಾಕಿಕೊಳ್ಳಲು ಯತ್ನಿಸಿ ಮೋಹನ ವಿಫಲನಾಗಿದ್ದ. ಎಡಗೈ ಅವನ ಸ್ವಾಧೀನದಲ್ಲಿದ್ದಂತೆ ತೋರಲಿಲ್ಲ.

ರಾಯರು ಆಸ್ಪತ್ರೆಯಿಂದ ಮನೆಗೆ ಬಂದಾಗ ಮಧ್ಯಾಹ್ನ ಹನ್ನೊಂದು ಗಂಟೆಯ ಮೇಲಾಗಿತ್ತು.

ರಾಯರ ಹಿಂದೆಯೇ ಇಂದಿರ ಅವರ ರೂಮಿಗೆ ಹೋದಳು.

"ಎಡಗೈ, ಎಡಗಾಲಿನ ಮೂಳೆ ಮುರಿದಿರಬಹುದೂಂತ ಡಾಕ್ಟರು ಅನುಮಾನ ಮಾಡ್ತಿದಾರೆ. ಇವತ್ತು ಎಕ್ಸ್‌ರೇ ತೆಗೆದಿದಾರೆ. ನಾಳೆ ಯಾವುದೂ ಸರಿಯಾಗಿ ತಿಳಿಯುತ್ತದೆ–" ಎಂದರು ರಾಯರು.

"ಹಾಗಾದರೆ ಈಗ ಏನು ಮಾಡೋದಣ್ಣ ?"

"ಅವನು ಚೆನ್ನಾಗಿ ಹುಷಾರಾಗಿ ಯಾರ ಸಹಾಯವೂ ಇಲ್ಲದೆ ಓಡಾಡುವಂತಾಗುವವರೆಗೆ ಅವನನ್ನು ಇಲ್ಲಿಂದ ಕಳಿಸೋಲ್ಲ. ಅವನೇನು ನಮಗೆ ಹೊರಗಿನವನೇ ?"

"ಅಣ್ಣಾ...."

"ಏನಮ್ಮಾ ?"

"ಅವರು ಊರಿಗೆ ಹೋಗಬೇಕೆಂದು ಹಠ ಮಾಡುತ್ತಿದ್ದಾರೆ. ಅಲ್ಲಿಯೇ ವೈದ್ಯರಿಗೆ...."

"ಇಂದಿರಾ, ಅವನ ತಾಯಿ ತಂದೆ ಏನೆಂದುಕೊಂಡಾರು ? ಸರಿಯಾಗಿದ್ದ ಹುಡುಗ ನಮ್ಮ ಮನೆಗೆ ಬಂದು ಕೈಕಾಲು ಮುರಿದುಕೊಂಡು ಹೋಗುವುದೇ ? ಅದೆಂದಿಗೂ ಸಾಧ್ಯವಿಲ್ಲ, ನನ್ನ ಮನಸ್ಸು ಅದನ್ನು ಒಪ್ಪುವುದಿಲ್ಲ."

"ಆದರೆ ಅವರಿಗೆ ಇಲ್ಲಿರುವುದು ಸ್ವಲ್ಪವೂ ಸಮ್ಮತವಿಲ್ಲಣ್ಣಾ. ಆದುದರಿಂದ...."

"ಈಗ ಅವನು ರೋಗಿ, ರೋಗಿಗಳಮಾತಿಗೆ ಯಾರೂ ಬೆಲೆಕೊಡಬಾರದು"

"ಅಣ್ಣಾ ... ಅಣ್ಣಾ...."

"ಏನಮ್ಮಾ ?"

"ಏನಿಲ್ಲ"-ಎಂದವಳೇ ತಟಕ್ಕನೆ ತಿರುಗಿ ಇಂದಿರ ಹೊರಟು ಹೋದಳು

ಇಂದಿರ ನೇರವಾಗಿ ಮೋಹನನ ಬಳಿಗೆ ಬಂದಳು. ಪುಟ್ಟಯ್ಯ ಮಂಚದ ಮುಂದೆ ಮೇಜನ್ನಿರಿಸಿ ಅವನ ಊಟದ ಸಿದ್ಧತೆಗಳನ್ನು ನಡೆಸಿದ್ದ.

ತಟ್ಟೆ, ಬಟ್ಟಲುಗಳಲ್ಲಿ ಕಲಸಿಟ್ಟಿದ್ದ ಅನ್ನವನ್ನು ಮೋಹನ ಚಮಚದಿಂದ ಊಟಮಾಡುತ್ತಿದ್ದ.

"ನೀನು ಹೋಗು ಪುಟ್ಟಯ್ಯ, ನಾನು ಇಲ್ಲಿಯೆ ಇರುತ್ತೇನೆ. ಬೇಕಾದರೆ ಕರೆಯುತ್ತೇನೆ"-ಎಂದಳು ಇಂದಿರ.

ಪುಟ್ಟಯ್ಯ ಹೊರಗೆ ಹೋದ.

ಮೋಹನನ ಊಟ ಮುಗಿಯುತ್ತಲೇ ಇಂದಿರ ಹೇಳಿದಳು.

"ನಿಮ್ಮನ್ನು ಈ ಸ್ಥಿತಿಯಲ್ಲಿ ಕಳಿಸೋಕೆ ಅಣ್ಣ ಸ್ವಲ್ಪವೂ ಒಪ್ಪುತ್ತಿಲ್ಲ ನಿಮಗೆ ಸಂಪೂರ್ಣ ಗುಣವಾಗುವವರೆಗೆ ಇಲ್ಲಿಂದ ಹೋಗಲಾರಿರಿ ಎಂದು ತೋರುತ್ತದೆ."

"ನನಗೆ ಬೇರೆ ದಾರಿಯೆ ಇಲ್ಲವೆಂದು ತೋರುತ್ತದೆ. ಇರುವ ವಿಷಯವನ್ನು ಇದ್ದಂತೆಯೇ ಯಾಕೆ ಹೇಳಿಬಿಡಬಾರದು ಇಂದಿರಾ ?"

ಅಂತಹ ಸಮಯದಲ್ಲೂ ಇಂದಿರೆಯ ಕಣ್ಣುಗಳು ತುಂಟತನದಿಂದ ಮಿಂಚಿದವು.

"ಆಗ ನಿಮ್ಮ ಇನ್ನೊಂದು ಕೈ ಕಾಲು ಮುರಿಯುತ್ತದೆ."

"ನಾನು ಹೇಡಿ ಇಂದಿರಾ. ನೀನು....ನಿನ್ನ ಯೋಜನೆಯಂತೆ ನೀನಾಗಿಯೇ ನನ್ನನ್ನು ನಿರಾಕರಿಸಿರುವೆ ಎಂದರೆ ?"

"ನೀವು ಈ ಸ್ಥಿತಿಯಲ್ಲಿರುವಾಗ ನಾನು ಹಾಗೆ ಹೇಳಿ ನಿಮ್ಮನ್ನು ನಮ್ಮ ಮನೆಯಿಂದ ಹೊರಗೆ ದಬ್ಬಿಸಲಾರೆ. ಕೊಂಚ ಸಮಾಧಾನ ತಂದುಕೊಳ್ಳಿ."

"ಈಗಾಗಲೇ ನನ್ನ ಮೇಲೆ ನಿಮ್ಮ ಸಾಲದ ಹೊರೆ ಅಧಿಕವಾಗಿದೆ. ಈ ಹೊರೆ ಹೇಗೆ ಇಳಿಸಲಿ ?"

"ಸಾಲ ಮಾಡುವವರು ತಮ್ಮ ಶಕ್ತಿ ಇದ್ದಷ್ಟು ಸಾಲ ಮಾಡಬೇಕು. ತೆಗೆದುಕೊಂಡ ಸಾಲ ತೀರಿಸುವ ಭರವಸೆ, ಆತ್ಮವಿಶ್ವಾಸ ಅವರಿಗಿರಬೇಕು."

"ಈಗ ನಾನೇನು ಮಾಡಲಿ ?"

"ನಾನು ಹೇಳಿದಂತೆ ಮಾಡುವಿರಾ ?"

"ಹೂಂ"—ಎಂದ ಮೋಹನ ನಿರುಪಾಯನಾಗಿ.

"ನಮ್ಮ ಮನೆಗೆ ಯಾವ ಅತಿಥಿ ಬಂದಿದ್ದೂ, ಹೀಗೆ....ನಿಮ್ಮ ಸ್ಥಿತಿಯಲ್ಲಿದ್ದಿದ್ದರೆ ನಾವು ಅವರನ್ನು ಹೋಗಗೊಡುತ್ತಿರಲಿಲ್ಲ. ಆದುದರಿಂದ ನಿಮಗೆ ಹೆಚ್ಚುಗಾರಿಕೆಯಾಗಿ ನಾವು ಏನನ್ನೂ ಮಾಡವುದಿಲ್ಲ. ಎಲ್ಲ ಅತಿಥಿಗಳನ್ನೂ ನೋಡಿಕೊಳ್ಳುವ ಹಾಗೆ ನಿಮ್ಮನ್ನು ನೋಡಿಕೊಳ್ಳುತ್ತೇವೆ. ನಾಲ್ಕು ಜನರಲ್ಲಿ ನೀವೊಬ್ಬರು."

ಇಂದಿರೆಯ ಮಾತು ಕೇಳಿ ಮೋಹನನ ಮನಸ್ಸು ಚುರುಗುಟ್ಟಿತು.

ಅವರ ಮನೆಗೆ ಬರುವ ನಾಲ್ಕು ಜನರಲ್ಲಿ ತಾನೊಬ್ಬನಂತೆ ! ಅವನ ಹೃದಯವನ್ನು ಮೀಟಿದ ನೋವಿನ ಎಳೆಹುಬ್ಬುಗಳನ್ನು ಎಳೆದು ಕೂಡಿಸಿತು.

"ಆಗಬಹುದೇ ?"

ಇಂದಿರೆಯ ದನಿಯಲ್ಲಿ ಅಣಕವಿರಲಿಲ್ಲ, ಬದಲು ಸಹಜತೆಯಿತ್ತು ಕಷ್ಟದಲ್ಲಿರುವ, ಇಕ್ಕಟ್ಟಿನಲ್ಲಿರುವ ಬಂಧುವೊಬ್ಬನಿಗೆ ಮಾರ್ಗದರ್ಶನ ಮಾಡಲಿರುವ ಹಿತಚಿಂತಕನ ಸಹಾನುಭೂತಿಯಿತ್ತು.

"ಆಗಲಿ."

ಇಂದಿರ ಮೇಜಿನ ಹತ್ತಿರ ಬಂದು ತಟ್ಟೆ, ಬಟ್ಟಲುಗಳನ್ನು ಜೋಡಿಸಿಕೊಳ್ಳತೊಡಗಿದಳು.

"ಕೆಲಸದಾಳಿಗೆ ಹೇಳಬಾರದೇ ? ನೀನೆ ಮಾಡಬೇಕೆ ?" –ಮೋಹನ ಕೇಳಿದ.

"ನಾನು ಕೆಲಸ ಮಾಡಿದರೆ ಸವೆಯುವುದಿಲ್ಲ"–ಎನ್ನುತ್ತಾ ಇಂದಿರ

ಹೊರಟಳು.

"ಇಂದಿರಾ .. "

"ಏನು ?"

"ನಾನು ಊರಿಗೆ ಕಾಗದ ಬರೆಯಬೇಕು."

"ಬರೆಯಿರಿ."

"ಏನು ಬರೆಯಲಿ ?"

"ಸಧ್ಯಕ್ಕೆ ನಿಮ್ಮ ದೇಹಸ್ಥಿತಿಯ ವಿಷಯ ಕುರಿತು ಬರೆಯಿರಿ. ಅವರು ತುಂಬಾ ಗಾಬರಿಯಾಗುವಂತೆ ಮಾತ್ರ ಬರೆಯಬೇಡಿರಿ."

"ಆಮೇಲೆ ಪತ್ರವನ್ನು ನೀನು ಸೆನ್ಸಾರ್ ಮಾಡುವೆಯಾ ?"

"ನಿಮಗೆ ಬೇಕಾದರೆ."

"ಹಾಗಾದರೆ ಲೆದರ್ ಕೇಸಿನಲ್ಲಿ ಕಾಗದ, ಪೆನ್ನಿದೆ...."

"ಇವುಗಳನ್ನು ಹೊರಗಿಟ್ಟು ಬರುತ್ತೇನೆ"–ಎಂದು ಹೇಳಿ ಇಂದಿರ ಹೊರಗೆ ಹೋದಳು.

ಐದು ನಿಮಿಷಗಳಲ್ಲಿ ಮತ್ತೆ ಒಳಗೆ ಬಂದು ಮೋಹನ ಕೇಳಿದ ಸಾಮಗ್ರಿಗಳನ್ನು ಅವನಿಗೆ ಒದಗಿಸಿಕೊಟ್ಟು

"ಕಾಗದ ಬರೆದ ಕೂಡಲೇ ಮಲಗಬೇಕು. ನಿಮಗೆ ಬರೆಯುವುದಾಗದಿದ್ದರೆ ನಾನು ಬರೆಯುತ್ತೇನೆ. ನೀವು ಹೇಳಿ. ಕೊನೆಯಲ್ಲಿ ನೀವು ರುಜು ಹಾಕುವಿರಂತೆ" ಎಂದಳು.

"ಆಗಲಿ"–ಎಂದು ಹೇಳಿದ ಮೋಹನ

ಪತ್ರದ ಉತ್ತಲೇಖನ ಮುಗಿಯಿತು. ಮೋಹನ ರುಜು ಹಾಕಿದ.

ಮೋಹನನಿಗೆ ಮಲಗಲು ಹೇಳಿ ಇಂದಿರ ಹೊರಗೆ ಹೋದಳು.

o o o o o

ರಾಯರ ಮತ್ತು ಮೋಹನನ ಕಾಗದ ತಲುಪಿದ ಕೂಡಲೇ ಸುಬ್ಬಣ್ಣನವರು, ಗೌರಮ್ಮನವರು ಕೊಂಚ ಗಾಬರಿಯಾಗಿಯೇ ಮಗನನು ನೋಡಲು ಧಾವಿಸಿ ಬಂದರು.

ಅವರು ಬಂದಾಗ ಮೋಹನ ಮಲಗಿ ನಿದ್ರಿಸುತ್ತಿದ್ದ. ಇಂದಿರ ಅವರನ್ನು ಮರ್ಯಾದೆಯಿಂದ ಬರಮಾಡಿಕೊಂಡಳು

"ಹೇಗಿದ್ದಾನಮ್ಮ ಮೋಹನ ?" ಗೌರಮ್ಮ ಗದ್ಗದ ದನಿಯಿಂದಕೇಳಿದರು.

"ನೀವೇ ನೋಡುವಿರಂತೆ. ಈಗ ನಿದ್ದೆ ಮಾಡುತ್ತಿದ್ದಾರೆ. ಏಳಲಿ"—

ಎಂದಳು ಇಂದಿರ ಶಾಂತವಾಗಿ.

ಮಗನನ್ನು ನೋಡಲು ತವಕಿಸುತ್ತಿದ್ದ ತಾಯಿಗೆ ಕೊಂಚ ನಿರಾಶೆಯಾಯಿತು. ತನ್ನ ಮಗನನ್ನು ನೋಡಲು ಈಕೆಯದೇನು ಅಡ್ಡಿ ?

"ಮಲಗಿದ್ದರೇನಂತೆ ? ಏಳುತ್ತಾನೆ"–ಎಂದರಾಕೆ.

"ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಒದ್ದಾಡಿದರು. ಈಗ ಕೊಂಚ ನಿದ್ದೆ ಹತ್ತಿದೆ. ನೀವು ಸ್ನಾನ ಮುಗಿಸಿ."

ಇಂದಿರೆಯ ದನಿ ನಯವಾಗಿತ್ತು–ರೇಶಿಮೆಯಂತೆ. ಆದರೆ ರೇಶಿಮೆಯಷ್ಟೇ ದೃಢವಾಗಿಯೂ ಇತ್ತು. ಅದನ್ನು ಜಗ್ಗಿ ಕಡಿಯುವುದು ಗೌರಮ್ಮನಿಗೆ ಸಾಧ್ಯವಿರಲಿಲ್ಲ.

ರಾತ್ರೆಯೆಲ್ಲಾ ನಿದ್ದೆ ಬರಲಿಲ್ಲವಂತೆ.

ಅಂದರೆ ಈಕೆ ರಾತ್ರಿಯೆಲ್ಲಾ ಅವನ ಬಳಿಯೆ ಕುಳಿತಿದ್ದಳೇ ?

ಗೌರಮ್ಮ ಇಂದಿರೆಯನ್ನು ಸಂಶಯದಿಂದ ನೋಡಿದರು.

ಗಿರಿಯ ಗುಂಗುರು ಕೂದಲನ್ನು ನಯವಾಗಿ ಬಾಚುತ್ತಿದ್ದ ಇಂದಿರೆಗೆ ಗೌರಮ್ಮನ ಲಕ್ಷವಿದ್ದಂತೆ ತೋರಲಿಲ್ಲ.

ಆಕೆ ಗಿರಿಯನ್ನು ತೋರಿಕೆಗಾಗಿಯಾದರೂ ಸಹ ಮಾತನಾಡಿಸಿರಲಿಲ್ಲ.

'ಇದೊಂದು ಹುಟ್ಟದಿದ್ದರೆ ಪ್ರಪಂಚ ಮುಳುಗಿ ಹೋಗುತ್ತಿತ್ತೇನೋ'—ಎಂದಾಕೆ ಗಂಡನೊಡನೆ ತಿರಸ್ಕಾರವಾಗಿ ಆಡಿದ್ದರು.

"ರಾತ್ರೆ ನಿದ್ದೆ ಯಾಕೆ ಮಾಡಲಿಲ್ಲ ಅವನು ?"

"ಎರಡು ದಿನಗಳ ಹಿಂದೆ ಕೈಗೆ, ಕಾಲಿಗೆ ಪ್ಲಾಸ್ಟರ್ ಹಾಕಿದರು. ಮೈಯೆಲ್ಲಾ ವಿಪರೀತ ಭಾರ, ಹಿಂಸೆ ಎಂದು ಒದ್ದಾಡುತ್ತಿದ್ದರು. ಆ ಭಾರ ಅವರ ದೇಹಕ್ಕೆ ಒಗ್ಗಬೇಕು. ಅಲ್ಲಿಯವರೆವಿಗೆ ಈ ಹಿಂಸೆ ತಪ್ಪಿದ್ದಲ್ಲ.

"ಊಟ, ತಿಂಡಿ ಹೇಗೆ....?"

"ನಾನಿದೀನಿ. ಪುಟ್ಟಯ್ಯ ಇದಾನೆ...." ಇಂದಿರ ಸರಳವಾಗಿ ಹೇಳಿದಳು.

ಅಯ್ಯೋ ದೇವರೇ, ಮದುವೆಗೆ ಮುಂಚೆ ಇವರ ಆಟ ಎಲ್ಲಿಯವರೆಗೆ ಹೋಗಿದೆಯೋ ? ಮದುವೆ ನಿಶ್ಚಯವಾದ ಮಾತ್ರಕ್ಕೆ ಹೀಗೆ....ಇಷ್ಟು ಮುಂದುವರೆಯಬಹುದೇ ?

ಇಂದಿರ ಗಿರಿಯ ತಲೆಯನ್ನು ಬಾಚಿ, ನೆತ್ತಿಯ ಮೇಲೆ ಜಡೆ ಹೆಣೆದು, ಹೂ ಮುಡಿಸಿ, ಹಣೆಗೆ ತಿಲಕವಿಟ್ಟು, ಕೆನ್ನೆಗೆ ಮುದ್ದಿಟ್ಟಳು,

ತನ್ನಿಂದ ಓಡುತ್ತಿದ್ದ ಗಿರಿಯನ್ನು ಮತ್ತೆ ಬಳಿಗೆ ಕರೆದಳು. ಕಣ್ಣಿಗೆ

ಹಚ್ಚುವ ಕಾಡಿಗೆಯನ್ನು ಹೆಚ್ಚಿರೇಖೆ ತುಂಬಾ ಬಳಿದುಕೊಂಡು, ಗಿರಿಯು ಗಲ್ಲವನ್ನೆತ್ತಿ, ಗಲ್ಲದ ತುಂಬಾ ಕಪ್ಪಿನ ಪಟ್ಟೆಯನ್ನೆಳೆದಳು.

ಅದುವರೆವಿಗೆ ಗಿರಿಯನ್ನೇ ನೋಡುತ್ತಿದ್ದ ಗೌರಮ್ಮ ಈಗ ತಟ್ಟನೆ ಬೇರೆ ಕಡೆ ತಿರುಗಿದರು.

ಮೋಹನನಿಗೆ ಎಚ್ಚರವಾಗುವ ವೇಳೆಗೆ ಗೌರಮ್ಮ, ಸುಬ್ಬಣ್ಣನವರ ಸ್ನಾನ, ಊಟ ಮುಗಿದಿತ್ತು.

ಇಂದಿರ ಅವರನ್ನು ಮೋಹನನ ರೂಮಿಗೆ ಕರೆತಂದು

"ನಿಮ್ಮ ತಾಯಿ, ತಂದೆ ಬಂದಿದಾರೆ" ಎಂದು ಹೇಳಿದಳು.

ಮೋಹನ ಎದ್ದು ಕೂರಲು ಪ್ರಯತ್ನಿಸಿದ. ಪುಟ್ಟಯ್ಯ ಮುಂದೆ ಬಂದು ಮೋಹನನಿಗೆ ಆಸರೆಯಾಗಿ ನಿಂತ. ಇಂದಿರ ದಿಂಬುಗಳನ್ನು ಸರಿಪಡಿಸಿದಳು.

ಮೋಹನ ಕುಳಿತುಕೊಂಡ ಮೇಲೆ ಇಂದಿರ, ಪುಟ್ಟಯ್ಯ, ರಾಯರು ಹೊರಗೆ ಹೋದರು.

"ಹೇಗಿದೀಯೋ ಮಗು?"—ಎಂದು ಕೇಳುವಾಗಲೇ ಗೌರಮ್ಮನ ಕಣ್ಣುಗಳಲ್ಲಿ ನೀರಾಡಿತು.

"ಮಾತಿಗೆ ಮುಂಚೆ ಅಳಬೇಡ"—ಎಂದು ಸುಬ್ಬಣ್ಣ ಹೆಂಡತಿಯನ್ನು ಗದರಿಸಿದರು.

"ನೀನೇ ನೋಡಮ್ಮ" ಎಂದ ಮೋಹನ.

ಎಡಗಾಲಿನ ಬೆರಳುಗಳ ಬಳಿ ಪ್ರಾರಂಭವಾಗಿದ್ದ ಪ್ಲಾಸ್ಟರು ತೊಡೆಯ ಬಳಿ ಅಂತ್ಯವನ್ನು ಕಂಡಿತ್ತು. ಎಡಗೈಯಿಗೂ ಅದೇ ರೀತಿಯ ಶೃಂಗಾರವಾಗಿತ್ತು.

"ಹೇಗಾಯಿತು? ಎಲ್ಲಿ ಬಿದ್ದೆ?"—ಎಂದರು ಸುಬ್ಬಣ್ಣ. ಮೋಹನ ಪೂರ್ವೇತಿಹಾಸವನ್ನು ತಿಳಿಸಿದ.

ಗೌರಮ್ಮ ಸುತ್ತಲೂ ನೋಡಿ ದನಿ ತಗ್ಗಿಸಿ ನುಡಿದರು.

"ಅವಳ ಕಾಲ್ಗುಣವೇ ಹಾಗೆಂದು ತೋರುತ್ತದೆ. ನೀನು ಈ ಮನೆಗೆ ಬಂದ ಕೂಡಲೇ ಕೈ ಕಾಲು ಮುರಿದುಕೊಂಡೆ. ನಾವು...."

ತಾಯಿಯ ಮಾತು ಕೇಳಿ ಮೋಹನ ಹುಬ್ಬುಗಂಟಿಕ್ಕಿದ.

"ಏನು ಮಾತಮ್ಮ ನೀನು ಆಡೋದು? ಅವಳ ಕಾಲ್ಗುಣಕ್ಕೂ, ನಾನು ಬಿದ್ದು ಕೈ ಕಾಲು ಮುರಿದುಕೊಳ್ಳುವುದಕ್ಕೂ ಎಲ್ಲಿಯ ಸಂಬಂಧ ? ಈ ಮನೆಗೆ ಬಂದ ಕೂಡಲೇ ನಾನು ಅಮೆರಿಕಾಗೆ ಹೋಗಿಬಂದೆ ಎಂಬುದು ನಿನ್ನ ನೆನಪಿನಲ್ಲಿರಲಿ."

"ಮಹಾ ಯಾರ ಉಪಕಾರಕ್ಕೆ ಕಳಿಸಿದರೊ ? ಅವರ ಮಗಳ ಗಂಡನಿಗೆ ಒಳ್ಳೆಯ ಉದ್ಯೋಗ ಸಿಕ್ಕಲೆಂದು ಸ್ವಾರ್ಥಕ್ಕಾಗಿ ಕಳಿಸಿದರು."

"ಅವರಿಗೆ ಕಳಿಸಲೇಬೇಕೆನ್ನುವುದೇನೂ ಇರಲಿಲ್ಲ."

ಮಾಯಾಂಗನೆ–ಮದುವೆಗೆ ಮುಂಚೆಯೇ ಮಗನಿಗೆ ಮಂಕುಬೂದಿ ಎರಚಿದಾಳೆ ಎಂದುಕೊಂಡರು ಗೌರಮ್ಮ.

"ಇವರ ಮಗಳ ಸೌಂದರ್ಯಕ್ಕೆ ಅವಳನ್ನು ಯಾರು ಮದುವೆ ಮಾಡಿ ಕೊಳ್ಳುತ್ತಿದ್ದರೋ ? ನಿನಗೇನು ದೊರೆಮಗನ ಹಾಗಿದೀಯ. ಮನಸ್ಸು ಮಾಡಿದ್ದರೆ ರತಿಯಂತಹ ಹುಡುಗಿಯನ್ನು ನಿನಗೆ ನಾನು ತರುತ್ತಿದ್ದೆ?"

"ಹಾಗಾದರೆ ಯಾಕೆ ತರಲಿಲ್ಲ ?"––ಮೋಹನ ಕೇಳಿದ.

"ಇವರು ಏನೇನೋ ಆಸೆಯ ಬಲೆ ಒಡ್ಡಿದರು. ಹೀಗೂ ಸರಿ, ಹಾಗೂ ಸರಿ ಎಂದು ನಾನು ಒಪ್ಪಿಕೊಂಡೆ. ಈಗ ಯಾವುದೂ ಸರಿಯಾಗಲಿಲ್ಲ. ನಮ್ಮ ಎಣಿಕೆಯೆಲ್ಲಾ ಹಾಳಾಗಿ ಹೋಯಿತು. ಇನ್ನು ಇಂದಿರ.... ಹೆಸರು ಮಾತ್ರ ಚೆನ್ನಾಗಿದೆ."

"ಅಮ್ಮ, ಪ್ರಯಾಣದ ಆಯಾಸವಾಗಿರಬೇಕು. ಒಂದು ಗಳಿಗೆ ಮಲಗಿ ನಿದ್ದೆ ಮಾಡು. ಆಮೇಲೆ ಬೇಕಾದರೆ ಮಾತನಾಡೋಣ"– ಎಂದ ಮೋಹನ.

ಗೌರಮ್ಮ ಕೊಂಚ ಅಪ್ರತಿಭರಾದರು. ಜೊತೆಗೆ ಸ್ವಲ್ಪ ಸಿಟ್ಟೂ ಬಂತು. ಇಷ್ಟು ವರ್ಷ ಸಾಕಿ ಸಲಹಿದ ತಾವು ಎಲ್ಲೋ ಹೋದರು. ಎರಡು ಕಾಸು ಖರ್ಚು ಮಾಡಿ ಅಮೆರಿಕೆಗೆ ಕಳುಹಿಸಿದ ರಾಯರು, ಇಂದಿರ ಅವನಿಗೆ ಹತ್ತಿರವಾದರು !

"ಈಗಲೇ ಹೀಗಾದರೆ ಮದುವೆಯಾದ ಮೇಲೆ ನನ್ನ ಗತಿಯೇನು?" ಎಂದರು ಗೌರಮ್ಮ.

ಮೋಹನ ನೋವಿನಿಂದ ಮುಖ ಹಿಂಡಿದ. ಮಾತನಾಡಲಿಲ್ಲ ಸುಬ್ಬಣ್ಣ ನವರು ಮತ್ತೆ ಹೆಂಡತಿಯನ್ನು ಗದರಿದರು.

"ಗೌರಿ, ಹುಡುಗ ಮೊದಲೇ ನೊರಗಿದಾನೆ. ಎಲ್ಲಿ ಹೋದರೂ ನಿನ್ನ ರಂಪ ಇದ್ದೇ ಇದೆ. ಮುಂದಿನದನ್ನು ಈಗಿನಿಂದಲೇ ಯಾಕೆ ಯೋಚಿಸು ತ್ತೀಯಾ?"

ತಂದೆಯ ಮಾತಿಗೆ ಮೋಹನ ತಲೆದೂಗಿದ.

ಎರಡು ದಿನವಿದ್ದು ಸುಬ್ಬಣ್ಣ, ಗೌರಮ್ಮನವರು ಹೊರಟರು. ಗೌರಮ್ಮ

ನವರಿಗೇನೋ ಮಗನನ್ನು ಬಿಟ್ಟು ಹೋಗುವ ಮನಸ್ಸಿರಲಿಲ್ಲ. ಆಕೆ ಗಂಡ ನೊಡನೆ ಅಳುದನಿಯಲ್ಲಿ.

"ಅವನನ್ನು ಬಿಟ್ಟು ಹೇಗೆ ಬರಲೀಂದ್ರೆ? ಅವನನ್ನು ನೋಡಿಕೊಂಡು ನಾನು ಇಲ್ಲಿಯೇ ಇರುತ್ತೇನೆ. ಅವನಿಗೆ ಗುಣವಾದ ಕೂಡಲೇ ಅವನನ್ನೂ ಕರೆದುಕೊಂಡು...."

"ನೀನು ಯಾಕೆ ನೋಡಿಕೊಳ್ಳಬೇಕು? ರಾಯರು, ಇಂದಿರ, ಪುಟ್ಟಯ್ಯ ನಿನಗಿಂತ ಚೆನ್ನಾಗಿ ನೋಡಿಕೊಳ್ಳುತ್ತಾರೆ"––ಎಂದರು ಸುಬ್ಬಣ್ಣ.

"ಇಂದಿರೆಗೆ ಗಿರಿಯನ್ನು ಮುದ್ದು ಮಾಡಲು ಸಮಯವಿಲ್ಲ. ಇನು ಮೋಹನ....."

"ಎರಡು ದಿನದಿಂದ ನಾವೂ ನೋಡ್ತಿದೀವಲ್ಲಾ....ಮೋಹನನ ಸೇವೆ ಯಲ್ಲಿ ಅವಳು ಎಷ್ಟು ಶ್ರದ್ಧೆ, ಆಸಕ್ತಿ ವಹಿಸುತ್ತಾಳೆ! ಅವಳ ಹಾಗೆ ಯಾರಿಗೂ ಮಾಡೋಕಾಗೋದಿಲ್ಲ. ಅವಳ ತಮ್ಮನ್ನ ಅವಳು ಮುದ್ದು ಮಾಡಿದರೆ ನಿನಗೇಕೆ ಹೊಟ್ಟೆ ಉರಿ ?"

"ಮುದ್ದಿಗೂ ಒಂದು ಮಿತಿ ಇದೆ. ಇನ್ನೂ ಒಂದೂವರೆ ವರ್ಷವಾಗಿಲ್ಲ. ಆಗಲೇ ಹೇಗಾಡ್ತಿದೆ ಅದು! ಈ ಲೋಕಕ್ಕೆ ಅತಿಶಯವಾದ ಮಗು ಎಂದುಕೊಂಡಿದಾರೆ ತಂದೆ, ಮಗಳು "

"ನೀನು ಮೋಹನನ್ನ ಅತಿಶಯವಾದ ಮಗು ಎಂದುಕೊಂಡಿರುವ ಹಾಗೆ...."

"ಆಗಲೇ ನಿಮ್ಮನ್ನೂ ತನ್ನ ಕಡೆ ಮಾಡಿಕೊಂಡಿದಾಳೆ ಅವಳು. ಅವಳು ನಮ್ಮ ಮನೆಗೆ ಬಂದರೆ ಒಬ್ಬೊಬ್ಬರನ್ನು ಒಂದೊಂದು ದಿಕ್ಕಿಗೆ ಕಳಿಸಿ ಬಿಡುತ್ತಾಳೆ."

"ಅವಳು ನಮ್ಮಲ್ಲಿಗೆ ಯಾಕೆ ಬರುತ್ತಾಳೆ?"

"ಮತ್ತೆ....ಮೋಹನನ ಹೆಂಡತಿಯಾದ ಮೇಲೆ ಇನ್ನೆಲ್ಲಿಗೆಹೋಗ್ತಾಳೆ?"

"ಮೋಹನ ಎಲ್ಲಿಗೆ ಹೋಗ್ತಾನೋ ಅಲ್ಲಿಗೆ ಹೋಗ್ತಾಳೆ. ಈಗಿನಿಂದ ಯಾಕೆ ಸುಮ್ಮನೆ ಮಾತನಾಡಿ ಗಂಟಲು ಒಣಗಿಸಿಕೊಳ್ಳುತ್ತೀಯಾ?"

"ನಾನು ಬರಲೇ ಬೇಕೆ ?"

"ಮೊದಲು ಹೊರಡು"––ಎಂದರು ಸುಬ್ಬಣ್ಣ. ಮಗನೂ ತಂದೆಯ ಮಾತನ್ನು ಅನುಮೋದಿಸಿದ.

"ಅಮ್ಮ, ನಿನ್ನ ದಮ್ಮಯ್ಯ. ನೀನೂ ಹೊರಟುಬಿಡು. ಕೈಕಾಲು

ಮುರಿದುಕೊಂಡವರು ಯಾರೂ ಸಾಯೋದಿಲ್ಲ. ಇಷ್ಟರ ಮೇಲೆ ಹಾಗೇನಾದರೂ ಆಗುವ ಸಂಭವವಿದ್ದರೆ ಇಂದಿರ ಟೆಲಿಗ್ರಾಂ ಕೊಡಿಸುತ್ತಾಳೆ.

ಮಗನನ್ನು ಬಿಟ್ಟು ಹೋಗಬೇಕಲ್ಲಾ ಎಂಬ ದುಃಖಕ್ಕಿಂತಲೂ ಅವನ ಮಾತು ಕೇಳಿ ಕೋಪದಿಂದ ಗೌರಮ್ಮನ ಕಣ್ಣಿನಲ್ಲಿ ನೀರೂರಿತು.

ಆಕೆ ಅಳುತ್ತಲೇ ಹೊರಟುಹೋದರು.

ಪಾಪ! ಮಗನನ್ನು ನೋಡಿ ವ್ಯಥೆಪಡ್ತಿದಾರೆ ಎಂದಿಕೊಂಡಳು ಇಂದಿರ.

ಕೈಕಾಲು ಮುರಿದುಕೊಂಡಿರುವ ಮಗ—ಆ ತಾಯಿಯೆದೆಗೆ ಎಂತಹ ದುಃಖವಾಗುತ್ತಿದೆಯೋ?

ತನಗೆ ಅದರ ಅನುಭವವಿಲ್ಲ. • ಆದರೂ ಗಿರಿ ಎಡವಿದಾಗ, ಅವನ ಕಾಲಿಗೆ ಮುಳ್ಳು ಚುಚ್ಚಿಕೊಂಡಾಗ ಆ ಮುಳ್ಳು ತನ್ನೆದೆಯನ್ನು ಒತ್ತುತ್ತಿರಲಿಲ್ಲವೇ?

ಇಂದಿರ ಅತ್ಯಂತ ವಿಶ್ವಾಸದಿಂದ ಕಂಬನಿಗರೆಯುತ್ತಿದ್ದ ಆ ತಾಯಿಗೆ ಆಶ್ವಾಸನೆ ಕೊಟ್ಟಳು.

"ಚಿಂತಿಸಬೇಡಿ. ನಾನು ನೋಡಿಕೊಳ್ಳುತ್ತೇನೆ."

ಗೌರಮ್ಮನವರಿಗೆ ಅವಳ ಮಾತು ಅಣಕವಾಗಿ ತೋರಿತು. ಆಕೆ ಬದಲು ಹೇಳದೆ ದುಗುಡದಿಂದಲೇ ಹೊರಟರು.

ಆರೋಗ್ಯವಾಗಿದ್ದ ಮೋಹನನಿಗೆ ಯಾವಾಗಲೂ ಮಲಗಿ ಹೊತ್ತು ಕಳೆಯುವುದು ಬೇಸರವಾಯಿತು.

ಕತೆ, ಕಾದಂಬರಿಗಳಲ್ಲಿ ಆಸಕ್ತಿ ಇಲ್ಲದವನು ಈಗ ಎಲ್ಲಿಲ್ಲದ ಆಸಕ್ತಿ ತೋರಲಾರಂಭಿಸಿದ. ಮೋಹನನಿಗಾಗಿ ಇಂದಿರಾ ಚಿಕ್ಕಮಗಳೂರಿನ ಪುಸ್ತಕ ಭಂಡಾರದ ಸದಸ್ಯೆಯಾದಳು.

ಅವನಿಗಾಗಿ ನಾಲ್ಕಾರು ಬಗೆಯ ಮಾಸಪತ್ರಿಕೆಗಳನ್ನು ಮನೆಗೆ ತರಿಸ ತೊಡಗಿದಳು.

ಮೋಹನನಿಗೆ ಓದುವುದೂ ಬೇಸರವಾಯಿತು. ಯಾವಾಗಲೂ ಓದುವುದೆಂದರೆ?

"ನಿಮಗೆ ಓದುವುದು ಅಷ್ಟು ಬೇಸರವಾದರೆ ನಾನು ಓದುತ್ತೇನೆ"—ಎಂದಳು ಇಂದಿರ.

"ಹಾಗೇ ಮಾಡು"—ಎಂದ ಮೋಹನ ಉತ್ಸುಕತೆಯಿಂದ.

ತನಗೆ ಬಿಡುವಾದಾಗ, ಮೋಹನ ಅಪೇಕ್ಷಿಸಿದಾಗ ಇಂದಿರ ಮಂಚದ ಬಳಿ ಕುರ್ಚಿಯನ್ನು ಹಾಕಿಕೊಂಡು ಕತೆ, ಕಾದಂಬರಿಯನ್ನು ಓದುತ್ತಿದ್ದಳು.

ಕೆಲವು ಸನ್ನಿವೇಶಗಳನ್ನು ಓದುವಾಗ ಮೊದಮೊದಲು ಇಂದಿರೆಯ ಮುಖ ಕೆಂಪಾಗುತ್ತಿತ್ತು. ನಂತರ ಯಾವ ಭಾವೋದ್ವೇಗವನ್ನೂ ವ್ಯಕ್ತ ಪಡಿಸದೆ ನಿರ್ವಿಕಾರಚಿತ್ತಳಾಗಿ ಇಂದಿರ ಓದುತ್ತಿದ್ದಳು.

ಇಂದಿರ ಕೆಲವು ಭಾಗಗಳನ್ನು ಓದುವಾಗ ನಾಚಿಕೊಳ್ಳುವುದನ್ನು ನೋಡಿ ಮೋಹನನಿಗೆ ನಗು ಬರುತ್ತಿತ್ತು. ನಾಚಿಕೆಯಿಂದ ಕೆಂಪೇರುತ್ತಿದ್ದ ಅವಳ ಮುಖವನ್ನೇ ದಿಟ್ಟಿಸಿ ನೋಡುತ್ತಾ ಅವನು ತನ್ನಲ್ಲೇ ನಗುತ್ತಿದ್ದ.

ಒಂದು ದಿನ ಇಂದಿರ ಹಾಗೆ ನಾಚಿಕೊಂಡಾಗ ದಿಂಬೊರಗಿ ಕುಳಿತಿದ್ದ ಮೋಹನ ಬಾಗಿ ಅವಳ ಕೈಲಿದ್ದ ಪುಸ್ತಕವನ್ನು ಕಿತ್ತುಕೊಂಡ.

"ಇದೇನು ಹುಡುಗಾಟ !" ಎಂದಳು ಇಂದಿರ.

"ನಿನಗೆ ತುಂಬಾ ಹಿಂಸೆಯಾಗುತ್ತಿರಬಹುದು."

"ಇಲ್ಲವಲ್ಲಾ."

"ಹಾಗಾದರೆ ಮುಖವೇಕೆ ಕೆಂಪಾಗಿದೆ?"

"ಏನಿಲ್ಲ."

"ಕನ್ನಡಿ ನೋಡಿಕೊಂಡರೆ ತಿಳಿದೀತು."

"ಏನೂ ಬೇಕಿಲ್ಲ ಬಿಡಿ. ಮುಂದೆ ಓದುವುದು ನಿಮಗೆ ಬೇಕೋ ಬೇಡವೊ?"

ಮೋಹನ ಬದಲು ಹೇಳಲಿಲ್ಲ. ಅವಳ ಮಾತುಗಳು ಅವನ ಕಿವಿಯ ಮೇಲೆ ಬಿದ್ದಂತೆ ತೋರಲಿಲ್ಲ. ಅವನು ಏನನ್ನೋ ಆಳವಾಗಿ ಯೋಚಿಸು ತ್ತಿದ್ದಂತೆ ತೋರಿತು.

ಇಂದಿರ ಒಂದು ಕ್ಷಣ ಅವನ ಕಡೆ ನೋಡಿ ನಂತರ ಮಂಚದ ಮೇಲೆ ಊರಿ, ಬಾಗಿ ಅವನ ಹತ್ತಿರ ಬಿದ್ದಿದ್ದ ಪುಸ್ತಕವನ್ನು ತೆಗೆದುಕೊಳ್ಳಲು ಯತ್ನಿಸಿದಳು.

ಮೋಹನ ಅವಳ ಕಡೆ ತಿರುಗಿದ.

ತನ್ನ ಮುಖದ ಸಮೀಪಕ್ಕೆ ಬಂದಿದ್ದ ಅವಳ ಮುಖವನ್ನು ನೋಡಿದ. ಅವಳ ಕಣ್ಣುಗಳ ಕಾಂತಿಗೆ ಮೋಹನನ ಕಣ್ಣುಗಳು ಮುಚ್ಚಿಕೊಳ್ಳು ವಂತಾದವು.

ಯಾವುದೋ ಕೋಮಲ ಭಾವನೆಯಿಂದ, ಅಸಹಾಯಕತೆಯಿಂದ, ತನಗೆ ಮೀರಿದ ಶಕ್ತಿಯೊಂದರಿಂದ ಸೆಳೆಯಲ್ಪಟ್ಟವನಂತೆ ವಿವಶನಾಗಿ ಮೋಹನ ಅವಳ ಕೈಹಿಡಿದು "ಇಂದಿರಾ" ಎಂದ.

ಇಂದಿರ ಅವನ ಕಣ್ಣುಗಳನ್ನು ಎದುರಿಸಿದಳು.

ತಿರಸ್ಕಾರ–ಮುಕುಳದ ನೆಳಲ್ಲು, ಬೆಳಕು ಅವಳ ಕಣ್ಣುಗಳಲ್ಲಿ ಆಟವಾಡಿದವು.

"ಏನು ಮೋಹನ ?"––ಎಂದಳು ಶಾಂತಳಾಗಿ.

"ಏನಿಲ್ಲ"––ಎನ್ನುತ್ತಾ ಮೋಹನ ಅವಳ ಕೈ ಬಿಟ್ಟ.

ಇಂದಿರ ಪುಸ್ತಕ ತೆಗೆದುಕೊಂಡು ಮುಂದೆ ಓದತೊಡಗಿದಳು. ಅಂದಿನಿಂದ ಅವಳಿಗೆ ಮೋಹನನ ಎದುರಿಗೆ ಯಾವ ಭಾಗವನ್ನು ಓದುವಾಗಲೂ ನಾಚಿಕೆಯಾಗುತ್ತಿರಲಿಲ್ಲ.

ಆದರೆ ಅವಳಿಗೆ ಬದಲಾಗಿ ಈಗ ಮೋಹನನಿಗೆ ಸಂಕೋಚವಾಗತೊಡಗಿತ್ತು. ರಸಮಯ ಸನ್ನಿವೇಶಗಳು ಬಂದ ಕೂಡಲೇ ಅವನು

"ಸಾಕು ಬಿಡು"––ಎಂದು ಬಿಡುತ್ತಿದ್ದ.

ಇಂದಿರ ಪುಸ್ತಕವನ್ನು ಮುಚ್ಚಿಡುತ್ತಿದ್ದಳು.

ತನ್ನ ಬೇಸರ ನೀಗುವುದಕ್ಕಾಗಿ ಮೋಹನ ಇಂದಿರೆಗೆ ಚದುರಂಗ, ಇಸ್ಪೀಟಿನಾಟಗಳನ್ನು ಕಲಿಸಿಕೊಟ್ಟ. ಬದಲಾಗಿ ಇಂದಿರೆಯಿಂದ ಪಗಡೆ, ಚೌಕಾಭಾರ ಆಡುವುದನ್ನು ತಾನು ಕಲಿತುಕೊಂಡ.

ಒಮ್ಮೊಮ್ಮೆ ಪುಟ್ಟಯ್ಯ, ಗಿರಿ ಅವರ ಆಟದಲ್ಲಿ ಭಾಗವಹಿಸುತ್ತಿದ್ದರು. ಪಗಡೆ ಆಡುವಾಗ ಗಿರಿಯ ಕೈಲಿ ದಾಳ ಉರುಳಿಸಿ ಇಂದಿರ ಅವನ ಪರವಾಗಿ ಕಾಯನ್ನು ತಾನೇ ನಡೆಸುತ್ತಿದ್ದಳು.

ಆದರೆ ಕುಳಿತು ಆಡುವವನೇ ಗಿರಿ ?

ಒಂದು ಕ್ಷಣ ಇಲ್ಲಿ––ಮತ್ತೊಂದು ಕ್ಷಣ ಅಲ್ಲಿ.

"ಅವನನ್ನು ನೆಚ್ಚಿದರೆ ಪ್ರಯೋಜನವಿಲ್ಲ. ಅವನ ಪರವಾಗಿ ನಾನೇ ದಾಳ ಉರುಳಿಸುತ್ತೇನೆ"––ಎನ್ನುತ್ತಿದ್ದಳು, ಇಂದಿರ.

ಸಾಧಾರಣವಾಗಿ ಬೆಳಗಿನ ಹೊತ್ತು ಇಂದಿರ ಮೋಹನನಿಗೆ ಸಿಕ್ಕುತ್ತಿರಲಿಲ್ಲ. ಅಡಿಗೆ ಮನೆಯ ಮೇಲ್ವಿಚಾರಣೆ, ಗಿರಿಯನ್ನು ನೋಡಿಕೊಳ್ಳುವುದರಲ್ಲಿ ಅವಳಿಗೆ ಸ್ವಲ್ಪವೂ ಬಿಡುವಿರುತ್ತಿರಲಿಲ್ಲ.

ಆಗ ಮೋಹನನ ಸೇವೆಗೆ ಪುಟ್ಟಯ್ಯ ಬಂದು ನಿಲ್ಲುತ್ತಿದ್ದ. ಮಧ್ಯಾಹ್ನದ ಊಟವಾಗಿ ಗಿರಿ ಮಲಗಿಕೊಂಡ ಮೇಲೆ ಇಂದಿರೆಗೆ ಬಿಡುವು ಸಿಕ್ಕುತ್ತಿತ್ತು.

ಒಂದು ಮಧ್ಯಾಹ್ನ ಹನ್ನೆರಡು ಗಂಟೆಯವರೆವಿಗೂ ಊಟ ಮಾಡದೆ ಚಂಡಿ ಹಿಡಿದಿದ್ದ ಗಿರಿಯನ್ನು ರಮಿಸಿ ಊಟ ಮಾಡಿಸಿ, ಮಲಗಿಸಿ ಇಂದಿರ ಸುಮಾರು ಒಂದು ಗಂಟೆಯ ವೇಳೆಗೆ ಮೋಹನನ ಕೊಠಡಿಗೆ ಬಂದಳು.

ಎಚ್ಚರವಾಗಿದ್ದು, ತನ್ನಲ್ಲೇ ಬುಸುಗುಟ್ಟುತ್ತಾ ಮೋಹನ ಮಲಗಿದ್ದ.

ಇಂದಿರ ಬರುವ ಸುಳಿವು ತಿಳಿದು ನಿದ್ದೆ ಬಂದವನ ಹಾಗೆ ನಟಿಸಿದ.

ಇಂದಿರ ಹತ್ತಿರ ಬಂದು ನಿಂತಳು. ಮೋಹನನ ಕಣ್ಣು ರೆಪ್ಪೆಗಳು ಆಡುತ್ತಿರುವುದನ್ನು ನೋಡಿ ಅವಳಿಗೆ ನಗು ಬಂತು.

"ನಿದ್ದೆ ಮಾಡ್ತಿದಾರೆ. ಹೋಗೋಣ"–ಎಂದಳು ಇಂದಿರ.

ಅವಳೆಲ್ಲಿ ಹೊರಟು ಹೋಗುವಳೋ ಎಂದು ಹೆದರಿ ಮೋಹನ ಕಣ್ಣು ಬಿಟ್ಟ.

"ಎಚ್ಚರವಾಯಿತೆ ಮೋಹನ ?"

"ಹೂಂ."

"ಊಟ ಆಯಿತೇ?"

"ಪುಟ್ಟಯ್ಯ ಇರುವುದರಿಂದ ನನಗೂ ಕಾಲಕಾಲಕ್ಕೆ ಊಟ ಕಾಫಿ ಆಗುತ್ತಿದೆ."

ಇಂದಿರ ನಸುನಕ್ಕಳು.

"ನನ್ನ ಊಟವಾಯಿತೇ ಇಲ್ಲವೇ ಎಂದು ತಿಳಿಯಲು ನಿನಗೆ ಈಗ ಲಾದರೂ ಸಮಯವಾಯಿತು."

"ಗಿರಿ ರಚ್ಚೆ ಹಿಡಿದಿದ್ದ. ಅವನನ್ನು ಸಮಾಧಾನ...."

"ಯಾವಾಗಲೂ ಗಿರಿ–ಗಿರಿ–ಗಿರಿ. ನಾವೆಲ್ಲ ಸತ್ತು ಹೋದರೂ ಸರಿ."

"ಯಾಕೆ ಇವತ್ತು ಸರಿಯಾಗಿ ಊಟ ಮಾಡಿದ ಹಾಗಿರಲಿಲ್ಲ.""

"ನಿನಗೆ ಹೇಗೆ ಗೊತ್ತು ?

"ಕೆಲಸದ ಹುಡುಗಿ ನಿಮ್ಮ ಊಟದ ತಟ್ಟೆ ತೊಳೆಯಲು ತೆಗೆದುಕೊಂಡು ಹೋಗುತ್ತಿದ್ದಳು. ಬಡಿಸಿದುದು ತಟ್ಟೆಯಲ್ಲಿ ಹಾಗೇ ಇತ್ತು. ಅವರಿಗೆ ಊಟ ತಗೊಂಡು ಹೋಗ್ತಿದೀಯೋ ಅಥವಾ ಅವರಿಂದ ತಟ್ಟೆತರ್‍ತಿದೀಯೋ ಎಂದೆ...."

"ನನಗೆ ಊಟ ಸೇರಲಿಲ್ಲ."

"ಯಾಕೆ?"

"ಗೊತ್ತಿಲ್ಲ"––ಎಂದ ಮೋಹನ ಮೊಟಕಾಗಿ.

"ಜ್ವರ....ಗಿರ...."ಎನ್ನುತ್ತಾ ಇಂದಿರ ಅವನ ಹಣೆಯ ಮೇಲೆ ಕೈಯಿರಿಸಿದಳು.

ಕುದಿಯುತ್ತಿದ್ದ ಮೋಹನನ ಮನಸ್ಸು ಹಾಯೆನಿಸಿತು.

ಸುಡುಬಿಸಿಲಿನಲ್ಲಿ ಬೀಸಿ ಬಂದ ತಂಗಾಳಿ ಅವಳ ಸ್ಪರ್ಶ.

"ಜ್ವರ ಇಲ್ಲವಲ್ಲಾ...." ಎನ್ನುತ್ತಾ ಇಂದಿರ ಕೈ ಹಿಂದಕ್ಕೆ ತೆಗೆದು ಕೊಂಡಳು.

"ತಲೆ ನೋವು ತುಂಬಾ."

ಮೋಹನ ಪುಟ್ಟ ಸುಳ್ಳು ಹೇಳಿದ.

ತನ್ನನ್ನೇ ನೋಡುತ್ತಿದ್ದ ಇಂದಿರೆಯ ಕಣ್ಣುಗಳನ್ನು ತಪ್ಪಿಸಲು ಬೇರೆ ಕಡೆ ನೋಡಿದ.

"ಅಮೃತಾಂಜನ ತಂದುಕೊಡಲೇ ?"

"ಹೂ."

ಇಂದಿರ ಅಮೃತಾಂಜನದ ಡಬ್ಬಿಯನ್ನು ಮೋಹನನ ಕೈಗೆ ಕೊಟ್ಟಳು.

"ಹಚ್ಚಿಕೊಳ್ಳಿ."

ಮೋಹನನಿಗೆ ನಿರಾಶೆಯಾಯಿತು.

"ನನಗೆ ಬೇಡ."

"ಈಗ ಬೇಕೆಂದಿರಿ ?"

"ನನಗೆ ಬೇಡ."

"ದಯವಿಟ್ಟು ಹಚ್ಚಿಕೊಳ್ಳಿ"—ಇಂದಿರಾ ಒತ್ತಾಯಪಡಿಸಿದಳು.

ಮೋಹನ ಮುಚ್ಚಳವನ್ನು ತೆಗೆದು ಮುಲಾಮನ್ನು ಬೆರಳಲ್ಲಿ ತೆಗೆದು ಕೊಂಡು ಹಣೆಯ ಮೇಲೆಲ್ಲ ಹುಚ್ಚುಚ್ಚಾಗಿ ಬಳಿದುಕೊಂಡ.

"ನಿನಗೆ ತೃಪ್ತಿಯಾಯಿತೇ ?—ಎಂದು ಕೇಳಿದನಾತ.

ನಗುವಿನಿಂದ ಇಂದಿರೆಯ ದೇಹ ಕುಲುಕಾಡಿತು. ಆದರೆ ಆಕೆ ಜೋರಾಗಿ ನಗಲಿಲ್ಲ.

"ಕುಂಕುಮದ ಭರಣಿ ತೆಗೆದು ಗಿರಿಯೂ ಹೀಗೆಯೇ ಹಣೆಯ ಮೇಲೆ ಕುಂಕುಮ ಹಚ್ಚಿಕೊಳ್ಳುತ್ತಾನೆ."

ಮತ್ತೆ ಗಿರಿ !

ಮೋಹನನ ಮನಸ್ಸು ಕುದಿಯಿತು. ತನಗೂ, ಅವಳಿಗೂ ಅಡ್ಡ ಬಂದ ಗಿರಿಯ ಮೇಲೆ ಅವನು ವಿಷ ಕಾರಿದ.

ಮೊದಲು ತನಗೂ, ಅವಳ ಆಸ್ತಿಗೂ ನಡುವೆ ಗಿರಿಯಾಗಿ ಬಂದಿದ್ದ.

ಈಗ ಹೂಂ ಈಗ ? ಈಗೇನು ?

ಆಸ್ತಿಯಲ್ಲಿ ಪಾಲುಗಾರಿಕೆ....ಊಹೂಂ ಬೇಕಿಲ್ಲ- ಅದನ್ನಾದರೂ ಹೇಗಾದರೂ ಸಹಿಸಬಹುದು. ಈಗ ಅವಳ ಪ್ರೇಮದಲ್ಲಿ ಅವನದು ಸಿಂಹದಪಾಲು.

ಇದನ್ನು ಹೇಗೆ ಸಹಿಸುವುದು ?

'ನಾನು ಗಿರಿಯನ್ನು ದ್ವೇಷಿಸುತ್ತೇನೆ'—ಎಂದು ಮನಸ್ಸಿನಲ್ಲಿ ಹೇಳಿಕೊಂಡ ಮೋಹನ.

ತಾನಾದರೂ ಹೀಗೇಕೆ ಒದ್ದಾಡಬೇಕು ? ಅವಳ ಮೇಲೆ ತನ್ನದಾದರೂ ಏನು ಅಧಿಕಾರ ? ತನಗೆ ಅವಳು ಯಾರು ? ಅವಳು ತನ್ನ ಬಳಿಯೇ ಇರಲಿ ಎಂದು ಬಯಸಲು ತನಗೇನು ?

ಹತ್ತಿರಬಂದಿದ್ದ ಅಮೃತಕಳಶವನ್ನು ಕಾಲಿನಿಂದ ಸರಿಸಿರಲಿಲ್ಲವೇ ತಾನು?

ತಾನಾಡಿದ ಮಾತನ್ನು ಹಿಂತೆಗೆದುಕೊಂಡರೆ ?

"ಡಬ್ಬಿ ಇಲ್ಲಿ ಕೊಡಿ"—ಇಂದಿರಾ ಮಾತನಾಡಿದಳು.

"ಏನೂ ಬೇಕಿಲ್ಲ"—ಎನ್ನುತ್ತಾ ಮೋಹನ ಡಬ್ಬಿಯನ್ನು ದಿಂಬಿನ ಕೆಳಗೆ ಹಾಕಿ ಅದರ ಮೇಲೆ ತಲೆಯಿಟ್ಟ.

"ಡಬ್ಬಿಯನ್ನು ಬೀರುವಿನಲ್ಲಿರಿಸುತ್ತೇನೆ."

ನಿರಾಸೆಯ ಪರಮಾವಧಿ ಅವನಿಗೀಗ.

"ಆಮೇಲಿಟ್ಟರಾಯಿತು."

"ಯಾವ ಕೆಲಸವನ್ನೂ ಮುಂದೆ ಹಾಕಬಾರದು. ಡಬ್ಬಿ ಕೊಡಿ."

"ಎಲ್ಲಿಟ್ಟೆನೋ ನೆನಪಿಲ್ಲ."

ಇಂದಿರ ಹಿಂತಿರುಗಿದಳು.

ಮೋಹನನಿಗೆ ನಿರಾಶೆಯಿಂದ ಅಳು ಬರುವಂತಾಯಿತು.

'ನಾನು ಇಂದಿರೆಯನ್ನು ದ್ವೇಷಿಸುತ್ತೇನೆ' ಎಂದುಕೊಂಡ ಮೋಹನ ಮನಸ್ಸಿನಲ್ಲಿ.

ರೂಮಿನಲ್ಲಿಯೇ ಇದ್ದ ಬೀರುವಿನ ಬಾಗಿಲು ತೆಗೆದು ಇಂದಿರ ಶುಭ್ರವಾಗಿದ್ದ ಟವಲೊಂದನ್ನು ಕೈಗೆ ತೆಗೆದುಕೊಂಡು ಮತ್ತೆ ಮೋಹನನ ಬಳಿಗೆ ಬಂದಳು. ನಿರಾಶೆಯ ಕತ್ತಲಿನಲ್ಲಿ ಮತ್ತೆ ಆಸೆಯ ಬೆಳಕಿನ ಮಿಂಚುಹುಳು ಹಾರಾಡಿತು.

ಮೋಹನನ ತಲೆಯಬಳಿ ಕುರ್ಚಿಯನ್ನೆಳೆದುಕೊಂಡು ಇಂದಿರ ಕುಳಿತಳು.

ಮೋಹನ ಮುಖ ತಿರುಗಿಸಿದ.

"ಯಾರ ಮೇಲೆ ನಿಮ್ಮ ಕೋಪ ?" ಎನ್ನುತ್ತಾ ಇಂದಿರ ಅವನ ಹಣೆಗೆ ಮೆತ್ತಿಕೊಂಡಿದ್ದ ಅಮೃತಾಂಜನವನ್ನು ಟವಲಿನಿಂದ ಚೆನ್ನಾಗಿ ಒರಸಿದಳು. ದಿಂಬಿನಕೆಳಗೆ ಕೈಹಾಕಿ ಡಬ್ಬಿಯನ್ನು ತೆಗೆದುಕೊಂಡು ಸರಿಯಾದಜಾಗದಲ್ಲಿ

ಅದನ್ನು ಸವರಿದಳು.

"ತಲೆನೋವಿನಲ್ಲೂ ಸುಖವಿದೆ ಎಂದು ನನಗಿವತ್ತು ತಿಳಿಯಿತು."

"ಹೌದೇನು ?"

"ಅಮೃತಾಂಜನ ಯಾರು ಹಚ್ಚುತ್ತಾರೆ ಎನ್ನುವುದನ್ನು ಅವಲಂಬಿಸಿರುತ್ತದೆ ಆ ಸುಖ. ಮಸಲ ಈಗ ಪುಟ್ಟಯ್ಯ ಹಚ್ಚಿದ್ದರೆ...."

"ಎಲ್ಲಿ ಆ ಕಡೆ ತಿರುಗಿ, ಗೋಡೆ ಕಡೆ...."

"ಆ ಕಡೆ ತಿರುಗಿಕೊಂಡರೆ ನನಗೆ ನಿನ್ನ ಮುಖ ಕಾಣಿಸೋದಿಲ್ಲ."

"ನಷ್ಟವೇನಿಲ್ಲ. ತಿರುಗಿ ಮತ್ತೆ...."

ಮೋಹನ ತಿರುಗಿದ. ಇಂದಿರ ಮುಲಾಮು ಬಳಿದು ಎದ್ದು ನಿಂತಳು.

ಹೊರಟುಹೋಗುತ್ತಾಳೆ—ಇನ್ನು ನಾಲ್ಕು ಗಂಟೆಯವರೆವಿಗೆ ಇಲ್ಲಿ ಬರುವುದಿಲ್ಲ—ಏನು ಮಾಡಲಿ ?

ಅವಳನ್ನು ಇಲ್ಲಿಯೇ ಹೇಗೆ ನಿಲ್ಲಿಸಿಕೊಳ್ಳಲಿ ?

"ಇಂದಿರ, ಇವತ್ತು ಕೈ ಏಕೋ ತುಂಬಾ ನೋಯುತ್ತಿದೆ."

ಬಾಗಿಲಿನವರೆವಿಗೆ ಹೋಗಿದ್ದ ಇಂದಿರ ಹಿಂತಿರುಗಿ ಬಂದಳು.

ತನ್ನ ದೇಹಕ್ಕಾಗುತ್ತಿರುವ ಹಿಂಸೆಯನ್ನು ಹೇಳಿಕೊಳ್ಳುವುದರಿಂದ ಮಾತ್ರ ಅವಳನ್ನು ತನ್ನ ಹತ್ತಿರ ನಿಲ್ಲಿಸಿಕೊಳ್ಳುವುದು ಸಾಧ್ಯ.

ಹತ್ತಿರ ನಿಂತು ಇಂದಿರ ಅವನನ್ನು ಪರೀಕ್ಷಿಸುವವಳಂತೆ ನೋಡಿದಳು.

ಕಣ್ಣು ನೋಡಿಯೇ ತನ್ನ ಮನಸ್ಸನ್ನು ಓದುವ ಕೆಟ್ಟ ಹುಡುಗಿ ಇವಳು.

"ನಿಜವಾಗೂ ?"—ಎಂದು ಕೇಳಿದಳವಳು.

"ಹೂಂ. ಆ ನೋವಿನಿಂದ ನನಗೆ ನಿದ್ದೆ ಬರುವ ಹಾಗಿಲ್ಲ."

"ಅದಕ್ಕೆ ನಾನೇನು ಮಾಡಲಿ ?"

"ಏನಾದರೂ ಓದು."

"ತಲೆ ನೋವು ಜಾಸ್ತಿಯಾಗಬಹುದು."

"ಆದರೆ ಅಮೃತಾಂಜನ ಹಚ್ಚಲು ನೀನಿರುವೆ."

"ಇನ್ನುಮೇಲೆ ಅಮೃತಾಂಜನ ನಾನು ಹಚ್ಚೋದಿಲ್ಲ."

"ನನ್ನ ಗತಿ ?"

"ಪುಟ್ಟಯ್ಯ ಹಚ್ಚುತ್ತಾರೆ."

"ಅದಕ್ಕಿಂತ ತಲೆನೋವು ಅನುಭವಿಸುತ್ತೇನೆ."

"ಅದೆಲ್ಲಾ ಆಗೋದಿಲ್ಲ."

"ಬೇಡ, ನಾನೇ ಹಚ್ಚಿಕೊಳ್ಳುತ್ತೇನೆ."
"ಆಗ ಹಚ್ಚಿಕೊಂಡ ಹಾಗೆ"–ಎನ್ನುತ್ತಾ ಇಂದಿರ ನಕ್ಕಳು.
ಅವಳ ನಗುವಿನೆದುರಿಗೆ ಅವನಂತೂ ಅತ್ಯಂತ ದುರ್ಬಲ. ಅವಳ ನಗುವಿನೆದುರಿಗೆ ಅವನ ನಾಲಿಗೆ ಮಾತನಾಡಲಾರದು, ಕಣ್ಣು ಎವೆ ಪಿಳುಕಿಸಲಾರದು.
ಅವಳು ನಗುವಾಗ ಕೆಲಸಮಾಡಲು ಶಕ್ತವಾಗಿದ್ದುದು ಅವನ ಹೃದಯವೊಂದು ಮಾತ್ರ.
ದೇಹಕ್ಕೆ ರಕ್ತವನ್ನು ಸರಬರಾಜು ಮಾಡುವುದರ ಜೊತೆಗೆ ಹೃದಯ ಇನ್ನೂ ಕೆಲವು ಕೆಲಸಗಳನ್ನು ಮಾಡುತ್ತಿತ್ತು.
ಕಣ್ಣಿಗೆ 'ಎವೆ ಪಿಳುಕಿಸಬೇಡ' ಎಂದು ಬುದ್ಧಿ ಹೇಳುತ್ತಿತ್ತು ಹೃದಯ.
ನಾಲಗೆಯಿಂದ ಮಾತುಗಳನ್ನು ಕಳೆದುಕೊಂಡು ತನ್ನಲ್ಲೇ ಅಡಗಿಸಿಟ್ಟುಕೊಳ್ಳುತ್ತಿತ್ತು ಅವನ ಹೃದಯ.
ಅವಳನ್ನು ತನ್ನೆಡೆಗೆ ಸೆಳೆದುಕೊಳ್ಳಲು ತವಕಿಸುತ್ತಿದ್ದ ಕೈಗಳಿಗೆ ಬೇಡಿ ಹಾಕಿ ಹಿಡಿದಿಡುತ್ತಿತ್ತು ಹೃದಯ.
ಅವಳ ನಗುವ ತುಟಿಗಳನ್ನು ಸ್ಪರ್ಶಿಸಬೇಡವೆಂದು ಅವನ ಹೃದಯ ಕೂಗಿ ಹೇಳುತ್ತಿತ್ತು.
ಇಷ್ಟೆಲ್ಲ ಕೆಲಸದ ಜೊತೆಗೆ ಇಡೀ 'ಬೆಳ್ಳಿಮೋಡ'ವನ್ನೇ ವ್ಯಾಪಿಸಿ ನಿಲ್ಲುತ್ತಿತ್ತು ಅವನ ಹೃದಯ. ಮುಳ್ಳಯ್ಯನ ಗಿರಿಯಷ್ಟೇ ಎತ್ತರವಾಗಿ ಬೆಳೆದು ನಿಲ್ಲುತ್ತಿತ್ತು ಅವನ ಹೃದಯ.
ಈ ಭಾವನೆಗಳ ಹಿಂದೆಯೇ ಪಶ್ಚಾತ್ತಾಪದ ಹುಚ್ಚು ಹೊಳೆ ಹರಿದು ಬಂದು ಎಲ್ಲವನ್ನೂ ಕೊಚ್ಚಿಕೊಂಡು ಹೋಗುತ್ತಿತ್ತು.
ಆಗ ತನಗಾಗುತ್ತಿದ್ದ ವೇದನೆ ಎಂತಹದು ?
ಇಷ್ಟಾದರೂ ಅವಳನ್ನು ಮುಟ್ಟಲು ತನ್ನಿಂದ ಸಾಧ್ಯವಾಗಿಲ್ಲ. ತಾನು ಮುಳ್ಳಯ್ಯನ ಗಿರಿಯಷ್ಟು ಬೆಳೆದರೆ ಅವಳು ಮುಗಿಲೆತ್ತರ ಬೆಳೆದು ನಿಲ್ಲುತ್ತಾಳೆ.
ತನ್ನ ಕ್ಷೇತ್ರ ಅತ್ಯಂತ ಚಿಕ್ಕದು. ತನ್ನ ಮನಸ್ಸು ಇಂದಿರೆಯನ್ನು ಮಾತ್ರ ಸುತ್ತುಗಟ್ಟಬಲ್ಲದು.
ಆದರೆ ಅವಳದೋ ?
ಅದರ ಆಳ ತಿಳಿದವರಾರು ?
ಸೌರಭ ಹೊತ್ತ ತಂಗಾಳಿ ತಾನು ಸಂಚರಿಸುವೆಡೆಯಲ್ಲೆಲ್ಲಾ ಯಾರುಸಿಕ್ಕು

ವರೋ ಅವರಿಗೆಲ್ಲಾ ಸೌರಭವನ್ನು ಹಂಚುತ್ತಾ ಹೋಗುತ್ತದೆ. ಆ ಸೌರಭ ವನ್ನು ತಾನು ಹಿಡಿಯಲ್ಲಿ ಹಿಡಿದಿಟ್ಟುಕೊಳ್ಳುವ ಪ್ರಯತ್ನ ಮಾಡಿದರೆ ?

ಕಾಲಿಗೆ ತಾನಾಗಿಯೇ ತೊಡರಿಕೊಂಡಿದ್ದ ಕಲ್ಪವಲ್ಲಿಯನ್ನು ಹಗ್ಗವೆಂದು ಭಾವಿಸಿ ತಾನು ಹಿಂದೆ ತಳ್ಳಿದ್ದು ಸ್ವಲ್ಪ ಅಪರಾಧವೇ ?

"ಇಂದಿರ"–ಮೋಹನ ದೈನ್ಯದಿಂದ ಕೂಗಿದ.

"ಏನು ?"

"ನನಗೇಕೋ ತುಂಬಾ ಬೇಸರವಾಗುತ್ತಿದೆ."

"ಅದಕ್ಕೆ ನಾನೇನು ಮಾಡಲಿ ?"

"ಪಗಡೆಯಾಡೋಣ."

ಇಂದಿರ ಹೋಗಿ ಹಾಸನ್ನು ತಂದು ಕಾಯಿಗಳನ್ನು ಹೂಡಿದಳು. ಇಬ್ಬರೂ ಆಟ ಆಡತೊಡಗಿದರು,

ಆಟದ ಸಂಭ್ರಮದಲ್ಲಿ ಆಕಸ್ಮಾತ್ ಅವನ ಕೈ ಅವಳಿಗೆ ತಗುಲಿದಾಗ ಇಂದಿರ ಹಿಂದೆ ಸರಿಯುತ್ತಿದ್ದಳು.

ಆದರೆ ಅವನ ತಲೆನೋವಿಗೆ ಮುಲಾಮು ಹಚ್ಚುವಾಗ ಆಕೆ ಎಷ್ಟು ಅಸ್ಥೆ ಯಿಂದ ತಲೆಯನ್ನು ತನ್ನೆಡೆಗೆ ಸೆಳೆದುಕೊಂಡು ಅಂಜನ ಹಚ್ಚಿದ್ದಳು !

ತನ್ನ ಹಣೆಯ ಮೇಲಾಡುತ್ತಿದ್ದ ಅವಳ ಕೈ ಉಳಿದ ಸಮಯದಲ್ಲಿ ತನ್ನಿಂದ ತುಂಬಾ ದೂರವಿರುತ್ತಿತ್ತು. ತನ್ನ ಸ್ಪರ್ಶದಿಂದ ಕೈ ಕೊಳೆಯಾಗು ವುದೇನೋ ಎಂಬಂತೆ ಆಗ ವರ್ತಿಸುತ್ತಿದ್ದಳು.

ಅವಳೊಂದು ದೊಡ್ಡ ಸಮಸ್ಯೆ ಅವನಿಗೆ.

ಮೋಹನನಿಗೆ ಆಟದಲ್ಲಿ ಸ್ವಲ್ಪವೂ ಗಮನವಿರುತ್ತಿರಲಿಲ್ಲ. ಇಂದಿರ ಮಾತ್ರ ತದೇಕಚಿತ್ತಳಾಗಿ ಆಟವಾಡುತ್ತಿದ್ದಳು. ಅವಳ ತನ್ಮಯತೆ ನೋಡಿ ಅವನು ಸಿಟ್ಟಾದ.

"ಇಂದಿರ."

"ಏನು ?"

"ನನಗೆ ಆಟ ಬೇಜಾರು."

"ಸರಿ, ಬೇಡ ಬಿಡಿ" ಎಂದು ಹಾಸನ್ನು ತೆಗೆದಿರಿಸಿದಳು ಇಂದಿರ.

"ಇಂದಿರ."

"ಏನು ?"

"ನನಗೆ ತುಂಬಾ ಕಣ್ಣುರಿಯುತ್ತಿದೆ."

ಆಕೆ ನಕ್ಕು ಎದ್ದು ನಿಂತು "ಮಲಗಿ ನಿದ್ರೆ ಮಾಡಿ. ಎಚ್ಚರವಾಗುವ ವೇಳೆಗೆ ಉರಿ ಇರುವುದಿಲ್ಲ"—ಎಂದು ಹೇಳಿ ಹೊರಟಳು.

"ನಿದ್ದೆ ಬರೋದಿಲ್ಲ."

"ಪ್ರಯತ್ನ ಪಡಿ."

"ಸೋತೆ ನಾನು, ನನ್ನ ಪ್ರಯತ್ನದಲ್ಲಿ."

"ತಣ್ಣೀರನ್ನು ಕಣ್ಣಿಗೆ ಎರಚಿಕೊಳ್ಳಿ."

"ನಿನ್ನ ಸಲಹೆಗೆ ತುಂಬಾ ಥ್ಯಾಂಕ್ಸ್."

"ಈ ಥ್ಯಾಂಕ್ಸ್ ಎಂದು ಹೇಳುವುದು ಮರೆತು ಹೋಯಿತೇನೋ ಎಂದು ಕೊಂಡಿದ್ದೆ. ಈಗ ಮತ್ತೆ ಶುರುವಾಯಿತು."

"ನನಗನಿಸುತ್ತದೆ...." ಮೋಹನ ಹಿಂಜರಿದು ಮಾತು ನಿಲ್ಲಿಸಿದ.

"ಹೂಂ, ಹೇಳಿ."

"ನೀನು ಕೋಪಿಸಿಕೊಳ್ಳಬಾರದು."

"ಎಂತೆಂತಹದಕ್ಕೋ ಕೋಪಿಸಿಕೊಳ್ಳದವಳು ಈಗ ಕೋಪ ಮಾಡು ತ್ತೇನೆಯೇ ?"

ಮೋಹನನ ಪಾಲಿಗದು ಚುಚ್ಚು ಮಾತು.

"ನೀನು ನನ್ನೆದುರಿಗೆ ಕುಳಿತಿದ್ದರೆ ನನ್ನ ಕಣ್ಣುರಿ ಹೋಗುತ್ತದೆ."

ಇಂದಿರ ಮೊದಲು ನಕ್ಕಳು. ನಂತರ ಗಾಂಭೀರ್ಯ ತಳೆದು ಅವಳು ಹೇಳಿದಳು.

"ಈಗ ಎರಡೂವರೆ ತಿಂಗಳಿನಿಂದ ನಾನು ನಿಮ್ಮೆದುರಿಗೇ ಇದ್ದೇನೆ. ಆದರೂ ಕಣ್ಣುರಿ ನಿಂತಿಲ್ಲವೇಕೆ ?"

"ಆಗ ಕಣ್ಣುರಿ ಇರಲಿಲ್ಲ. ಅಥವಾ ಒಳಗೇ ಇತ್ತೋ ಏನೋ ?"

"ಅದು ಹೊರಗೆ ಬಂದದ್ದು ಯಾವಾಗ ?"

"ಸುಮಾರು ಹದಿನೈದು ದಿನದಿಂದ."

"ಹಾಗಾದರೆ ನಿಮ್ಮ ಕಣ್ಣಿನಲ್ಲೇನೋ ದೋಷವಿರಬೇಕು. ನೇತ್ರ ವೈದ್ಯರಿಗೆ ಕಣ್ಣು ತೋರಿಸುವಿರಂತೆ. ಈಗ ಮಲಗಿ"–ಎನ್ನುತ್ತಾ ಇಂದಿರಾ ಹತ್ತಿರ ಬಂದಳು.

ಪಗಡೆಯಾಡುವಾಗ ಹಿಂದೆ ಸರಿದಿದ್ದ ಇಂದಿರ ಈಗ ಹತ್ತಿರ ಬಂದು ದಿಂಬುಗಳನ್ನು ಸರಿಮಾಡಿದಳು.

ತನ್ನ ಬಳಿ ಸುಳಿದ ದುಂಡುಗೈಯನ್ನು ಮೋಹನ ಹಿಡಿದುಕೊಂಡ.

ಇಂದಿರ ಚಕಿತಳಾದಳು. ಅಬ್ಬರಿಸಿ ಬರುತ್ತಿದ್ದ ಸಿಟ್ಟನ್ನು ನುಂಗಿ ಶಾಂತವಾದ ದನಿಯಲ್ಲಿ

"ಏನಿದು ಹುಡುಗಾಟ ?" ಎಂದಳು.

"ನನ್ನ ಮನಸ್ಸಿನ ವಿಪ್ಲವ ನಿನಗೆ ತಿಳಿಯುವುದಿಲ್ಲವೇ ಇಂದಿರಾ ?"

"ತಿಳಿಯುತ್ತದೆ."

"ಪರಿಹಾರವೇನು ?"—ಮೋಹನ ಕೇಳಿದ.

"ನಿಮ್ಮನ್ನು ಆದಷ್ಟು ಬೇಗ ಇಲ್ಲಿಂದ ಕಳಿಸಿಬಿಡಬೇಕು."

"ಇಂದಿರ."

"ಹೇಳಿ."

"ಕೈಕಾಲು ಮುರಿದುಕೊಂಡ ಮೂರನೆಯ ದಿವಸವೇ ನೀನು ನನ್ನನ್ನು ಕಳಿಸಿಬಿಡಬೇಕಾಗಿತ್ತು. ಅಥವಾ ನಾನಾದರೂ ಹಠಮಾಡಿ ಹೊರಟುಬಿಡಬೇಕಾಗಿತ್ತು. ನಾನು ಇಲ್ಲಿಯೇ ಉಳಿದು ದೊಡ್ಡ ತಪ್ಪುಮಾಡಿದೆ. ನನ್ನನ್ನು ಇಲ್ಲೇಕೆ ಉಳಿಸಿಕೊಂಡೆ ?"

"ಉಳಿಸಿಕೊಂಡವಳು ನಾನಲ್ಲ."

"ಯಾರು ?"

"ನನ್ನ ತಂದೆ."

"ನಿಜಸ್ಥಿತಿ ಆಗಲೇ ತಿಳಿಸಿಬಿಟ್ಟಿದ್ದರೆ ಅವರು ನನ್ನನ್ನು ಇಲ್ಲಿ ಉಳಿಸಿಕೊಳ್ಳುತ್ತಿರಲಿಲ್ಲ."

"ಈ ಭೂಮಿಯ ಮೇಲೇ ಉಳಿಸುತ್ತಿರಲಿಲ್ಲ."

"ಬೇಡ, ನಿನ್ನ ಮಾತಿನಂತೆಯೇ........"

"ಹೀಗಾಗುತ್ತದೆ ಎಂದು ತಿಳಿದಿದ್ದರೆ ನಾನು ಆ ದಿನವೇ ತಿಳಿಸಿ ನಿಮ್ಮನ್ನು ಕಳಿಸಿಬಿಡುತ್ತಿದ್ದೆ. ನಾನು ಅಷ್ಟೊಂದು ಮುಂದಾಲೋಚವೆ ಮಾಡಲಿಲ್ಲ."

"ಈಗ ಆದುದಾದರೂ ಏನು ಇಂದಿರಾ ? ನ್ಯಾಯವಾಗಿ ಏನಾಗಬೇಕಾಗಿದೆಯೋ ಅದೇ ಆಗಿದೆ."

"ನಿಮಗೇನೂ ತಿಳಿಯುವುದಿಲ್ಲ ಮೋಹನ. ಆಗಬೇಕಾದ ಅನ್ಯಾಯವೆಲ್ಲ ಹಿಂದೆಯೇ ಆಗಿಹೋಯಿತು. ನನ್ನ ಹೃದಯದ ಭಾವನೆಗಳೆಲ್ಲ ಆ ದಿನವೇ ಹತ್ತಿ ಉರಿದುಹೋದವು. ಈಗ ಅಲ್ಲಿ ಏನೇನೂ ಇಲ್ಲ."

"ನಿನ್ನ ಭಾವನೆಗಳು ಉರಿದು ಬೂದಿಯಾದ ಮೇಲೆ ನನ್ನ ಭಾವನೆಗಳು ಮೊಳಕೆಯಾಗತೊಡಗಿದವು. ನನ್ನನ್ನು ಇಲ್ಲಿಯೇ ನಿಲ್ಲಿಸಿಕೊಂಡು ನೀವೆಲ್ಲಾ

ತುಂಬಾ ತಪ್ಪು ಮಾಡಿದಿರಿ."

"ಇಲ್ಲಿ ನಿಲ್ಲುವುದಕ್ಕೂ, ನಿಮ್ಮ ಭಾವನೆ ಕುಡಿಯೊಡೆಯುವುದಕ್ಕೂ ಏನು ಸಂಬಂಧ?"

"ನನ್ನ ಹೃದಯ ಬಂಜರು ಭೂಮಿ. ಅದನ್ನು ಉತ್ತು, ಬಿತ್ತು, ನೀರೆರೆದು, ಪೋಷಿಸಿ ಈಗ ಹೀಗೆ...."

"ನಾನು ಮನಃಪೂರ್ವಕವಾಗಿ ಏನನ್ನೂ ಮಾಡಿಲ್ಲ. ಕೇವಲ ನೀವು ರೋಗಿ—ನಿಮಗೆ ಬೇಗ ಗುಣವಾಗಲಿ ಎಂಬ ಆಶಯವೊಂದರಿಂದ ಮಾತ್ರ ನಾನು ನಿಮ್ಮಲ್ಲಿ ಶ್ರದ್ಧೆ ವಹಿಸಿ ನಿಮ್ಮ ಸೇವೆ ಮಾಡಿದೆ. ಯಾವ ದಿನ ನಿಮಗೆ ಅದರ ಅಗತ್ಯವಿಲ್ಲವೋ ಆ ದಿನ...."

"ನಾನು ಗುಣವಾಗುತ್ತಾ ಬಂದಂತೆ ಅದರ ಅಗತ್ಯ ಕಡಿಮೆಯಾಗುವುದರ ಬದಲು ಹೆಚ್ಚಾಗುತ್ತಿದೆ ಇಂದಿರಾ"—ಮೋಹನ ಹೇಳಿದ.

"ಅದಕ್ಕೆ ನಾನು ಹೊಣೆಯಲ್ಲ."

ಇಂದಿರಾ ತನ್ನ ಕೈ ಬಿಡಿಸಿಕೊಳ್ಳಲು ಯತ್ನಿಸುತ್ತಾ ಹೇಳಿದಳು.

"ನೆನಪಿರಲಿ ಇಂದಿರ. ಒಬ್ಬನ ಜೀವನವನ್ನು ನೀನು ತುಳಿದು ಹಾಕಿದೆಯೆಂಬ ನೆನಪು ನಿನ್ನನ್ನು ಕೊನೆಯವರೆವಿಗೂ ಕುಟುಕುತ್ತಲೇ ಇರುವುದು."

"ಹೃದಯದ ತುಂಬ ಹಬ್ಬಿ ನಿಂತಿದ್ದ ಪ್ರೀತಿಯ ಬಳ್ಳಿಗೆ ಕೊಳ್ಳಿಯಿಟ್ಟು ಉರಿಸಿ, ಅದು ಬೂದಿಯಾದ ಮೇಲೆ ದ್ರಾಕ್ಷಿಗೊಂಚಲು ಸಿಕ್ಕಲಿಲ್ಲವೆಂದರೆ?"

ಮೋಹನ ಆಕೆಯ ಕೈ ಬಿಟ್ಟ.

ಇಂದಿರ ಬಾಗಿಲ ಬಳಿ ನಿಂತು ಹಿಂತಿರುಗಿ ನೋಡಿದಳು. ಮೋಹನ ಶೂನ್ಯ ದೃಷ್ಟಿಯಿಂದ ಎಲ್ಲೋ ನೋಡುತ್ತಾ ಮಲಗಿದ್ದ.

ಅವನ ಬಗ್ಗೆ ಅವಳಿಗೆ ಮರುಕ ಉಕ್ಕಿಬಂತು.

ಇಂದಿರ ಹಿಂತಿರುಗಿ ಬಂದು ಅವನ ಬಳಿ ನಿಂತು ಮೃದುವಾಗಿ ಹೇಳಿದಳು.

"ಮಲಗಿ ಈಗ."

ಅವಳ ನುಡಿ ಕೇಳಿ ಮೋಹನನಲ್ಲಿ ಮತ್ತೆ ಆಸೆ ಪ್ರಜ್ವಲಿಸಿತು.

ಅವನು ಕಣ್ಣು ಮುಚ್ಚಿ ಮಲಗಿ ನಿದ್ರಿಸಿದ.

ಅವಳನ್ನು ಒಲಿಸಿಕೊಳ್ಳಬಲ್ಲೆ ಎಂಬ ಆತ್ಮವಿಶ್ವಾಸ ಅವನಲ್ಲಿ ಮೂಡಿತು.

ಅವನಿಗೆ ಎಚ್ಚರವಾದಾಗ ಗಿರಿ ರೂಮಿನಲ್ಲಿ ಹಾಸಿದ್ದ ಚಾಪೆಯೊಂದರ ಮೇಲೆ ಕುಳಿತಿದ್ದ.

ಅವನ ಕೈಲಿ ಬಣ್ಣದ ಕುದುರೆಯಿತ್ತು.

ಸಮಯ ಕಳೆಯುವ ಸಲುವಾಗಿ ಮೋಹನ ಮಗುವನ್ನು ಮಾತನಾಡಿಸ ತೊಡಗಿದ.

ಯಾವಾಗಲೂ ಅಷ್ಟೇನೂ ಸ್ನೇಹಭಾವ ತೋರದ ಮೋಹನ ಈಗ ತನ್ನನ್ನು ಮಾತನಾಡಿಸುತ್ತಿರುವುದು ಗಿರಿಗೆ ಆಶ್ಚರ್ಯವನ್ನುಂಟುಮಾಡಿತು. ಕೆಲವು ಸಲ ಗಿರಿ ಮೋಹನನ ಸಖ್ಯ ಬಯಸಿ ಅವನ ಬಳಿಗೆ ಬಂದಿದ್ದುಂಟು. ಆದರೆ ಆಗ ಮೋಹನನಿಗೆ ಮಗುವಿನ ಕಡೆ ಕಣ್ಣೆತ್ತಿ ನೋಡುವ ತಾಳ್ಮೆಯೂ ಇರಲಿಲ್ಲ.

"ಗಿರಿ, ಬಾ ಇಲ್ಲಿ."

"ಊಂ."

"ನಿನ್ನ ಆಟದ ಸಾಮಾನೆಲ್ಲಾ ತಗೊಂಡುಬಾ ಇಬ್ಬರೂ ಆಟಆಡೋಣ."

"ಊಂ."

"ಜಾಣಮರಿ. ತಗೊಂಡು ಬಾಮ್ಮ."

ಗಿರಿ ಅನುಮಾನಿಸುತ್ತಾ ಎದ್ದು ನಿಂತ.

"ಕಣ್ಣು ಮುಚ್ಚಿಕೊಳ್ಳುತ್ತೇನೆ. ನಾನು ಮತ್ತೆ ಕಣ್ಣು ಬಿಡುವಷ್ಟರಲ್ಲಿ ಎಲ್ಲ ತರಬೇಕು."

ಗಿರಿ ಉತ್ಸಾಹದಿಂದ ಹೊರಗೆ ಓಡಿದ.

ಮೂಲೆ, ಸಂದಿ, ಬೀರು, ಕಿಟಕಿ ಎಲ್ಲೆಡೆಗಳಲ್ಲೂ ಹರಡಿಕೊಂಡಿದ್ದ ಸಾಮಾನುಗಳನ್ನು ತಂದು ಮೋಹನನ ಹಾಸಿಗೆಯ ಮೇಲೆ ಗಿರಿ ಹರಡಿದ.

"ಇಷ್ಟೇನೇ ಇರೋದು ?"

"ಹುಂ."

"ಮಂಚ ಹತ್ತು."

ಗಿರಿ ಮಂಚ ಹತ್ತಲು ಯತ್ನಿಸಿ ವಿಫಲನಾದ. ಮೋಹನ ತನ್ನ ಬಲಗೈಯನ್ನು ನೀಡಿ ಮಗುವನ್ನು ಹಿಡಿದೆತ್ತಿ ಮಂಚದ ಮೇಲೆ ಕೂರಿಸಿದ.

ತನ್ನ ಎಡಗೈ, ಎಡಗಾಲು ತೋರಿಸಿ "ಅಬು ?" ಎಂದ ಗಿರಿ.

"ಹೂಂ ಡಾಕ್ಟರು ಅಬ್ಬು ಮಾಡಿದಾರೆ."

ಗಿರಿ ಪ್ಲಾಸ್ಟರನ್ನು ತನ್ನ ಕೈಯಿಂದ ಸವರಿದ. ನಂತರ ಕುದುರೆಯಿಂದ ಅದರ ಮೇಲೆ ಹೊಡೆದ.

"ಹಾ !"––ಎಂದು ಮೋಹನ ನೋವನ್ನು ನಟಿಸಿದ. ಹೊತ್ತು ಹೋಗಲು ಮೋಹನ ಗಿರಿಯೊಡನೆ ಮನಸ್ಸಿಲ್ಲದ ಮನಸ್ಸಿನಿಂದ ಆಟವನ್ನು

ಪ್ರಾರಂಭಿಸಿದ್ದ. ಆದರೆ ಕ್ರಮೇಣ ಮಗುವಿನೊಡನೆ ಆಡುವಾಗ ತಾನೂ ಒಂದು ಮಗುವಾದ.

ಗಿರಿಯ ಆಟ, ತೊದಲು ಮಾತು, ಮುಗ್ಧ ಮುಖ, ತುಂಟತನ ಮೋಹನನ ಮನಸ್ಸನ್ನು ಸೂರೆಗೊಂಡವು. ಮೋಹನನ ಆಟದಿಂದ ಗಿರಿ ಸ್ಫೂರ್ತಿಗೊಂಡಂತಿತ್ತು.

ಅವನು ಕೇಕೆ ಹಾಕುತ್ತಾ ಮಂಚದ ಮೇಲೆ ಕುಣಿದಾಡಿದ.

"ಬಬ್ಬ ?" ಎಂದು ಸೂಚಿಸಿದ ಗಿರಿ.

"ಆಗೋಲ್ಲ ಗಿರಿ. ಅಬ್ಬು ಕಾಲು. ನಡೆಯೋಕಾಗೋದಿಲ್ಲ" ಎಂದು ನರಳುತ್ತಾ ಹೇಳಿದ ಮೋಹನ.

"ನಂಗೂ ಅಬು"––ಎಂದ ಗಿರಿ, ತನ್ನ ಮುಖದಲ್ಲೂ ನೋವನ್ನು ಪ್ರದರ್ಶಿಸಲು ಪ್ರಯತ್ನಿಸುತ್ತಾ.

ಮೋಹನನಿಗೆ ಮಗುವಿನ ಮುಖವನ್ನು ನೋಡಿ ನಗು ಬಂತು. ಮುದ್ದು ಉಕ್ಕಿಬಂತು.

ಅವನು ಬಲಗೈಯಿಂದ ಗಿರಿಯನ್ನು ಎಳೆದು ಅವನ ಕೆನ್ನೆಗೆ ಮುದ್ದಿಟ್ಟ.

ಬಾಗಿಲಿನಲ್ಲಿ ನಗುತ್ತಾ ನಿಂತಿದ್ದ ಇಂದಿರೆಯನ್ನು ನೋಡಿ ಮೋಹನ ಗಿರಿಯನ್ನು ದೂರ ಸರಿಸಿದ.

"ಅಕ್ಕ" ಎನ್ನುತ್ತಾ ಗಿರಿ ಮಂಚದಿಂದ ಇಳಿಯುಲು ಪ್ರಯತ್ನಿಸಿದ.

ಮೋಹನ ತಟ್ಟನೆ ಮಗುವನ್ನು ಹಿಡಿದು, ನಂತರ ಎತ್ತಿ ಕೆಳಗೆ ನಿಲ್ಲಿಸಿದ.

ಗಿರಿ ಅಕ್ಕನ ಬಳಿಗೆ ಓಡಿ ಹೋದ.

ಇಂದಿರ ಕಾಫಿ ತಿಂಡಿಯನ್ನು ತಂದು ಮೋಹನನ ಸಮೀಪದಲ್ಲಿದ್ದ ಮೇಜಿನ ಮೇಲಿಟ್ಟಳು.

ತಾನು ಮುದ್ದಿಡುವಾಗ ಇಂದಿರ ನೋಡಿಬಿಟ್ಟಳೋ ಹೇಗೆ ?

"ಎಷ್ಟು ಹೊತ್ತಿನಿಂದ ಬಾಗಿಲಿನಲ್ಲಿ ನಿಂತಿದ್ದೆ ಇಂದಿರಾ?"

"ಇದೇ ತಾನೇ ಬಂದೆ."

"ಹಾಗಾದರೆ .. ನೀನು...."

"ನೀವು ಮಗುವಿಗೆ ಮುದ್ದಿಟ್ಟದ್ದನ್ನು ನಾನು ನೋಡಲಿಲ್ಲ. ಆದರೆ ಅಡಿಗೆ ಮನೆಗೆ ಕೇಳಿಸಿತು."

ಮೋಹನ ಕೆಂಪಾದ.

"ಏನೋ ಆಟದ ಸಂಭ್ರಮ...." ಮೋಹನ ತೊದಲಿದ.

"ಇರಲಿ. ತಿಂಡಿ ತಗೊಳ್ಳಿ."

"ನನಗೆ ಹಸಿವಿಲ್ಲ. ಬೇಡ."

"ದಯವಿಟ್ಟು."

"ಬೇಡ ಇಂದಿರಾ."

"ಊಟ ಸಹ ಸರಿಯಾಗಿ ಮಾಡಲಿಲ್ಲ."

"ನನಗೆ ಹಸಿವಿದ್ದರೆ ನಾನೇ ಮಾಡುತ್ತೇನೆ. ನೀನಾದರೂ ನನ್ನನ್ನು ಇಷ್ಟು ಒತ್ತಾಯಪಡಿಸುವುದೇಕೆ ?"

"ನಮ್ಮ ಅತಿಥಿ ನೀವು. ನೀವು ಇಲ್ಲಿರುವವರೆವಿಗೂ ನಿಮ್ಮನ್ನು ಸರಿಯಾಗಿ ನೋಡಿಕೊಳ್ಳುವುದು ನಮ್ಮ ಕರ್ತವ್ಯ."

ಕರ್ತವ್ಯ ! ಕರ್ತವ್ಯದ ಹೊರತಾಗಿ ಬೇರೆ ಬಗೆಯ ಭಾವನೆಗಳೇನೂ ಅವಳಲ್ಲಿ ಇಲ್ಲವೇ ?

"ನಿನ್ನ ಕರ್ತವ್ಯ ನನಗೆ ಹಿಂಸೆ."

"ನಿಜವಾಗಿ ?"

"ಹೌದು."

"ಹೀಗೆ ಹಠ ಮಾಡಬೇಡಿ ಮೋಹನ. ಮನಸ್ಸಿಗೆ ಎಷ್ಟೇ ಬೇಸರವಾಗಿದ್ದರೂ ದೇಹವನ್ನು ಮಾತ್ರ ದಂಡಿಸಬಾರದು."

"ತಿಂಡಿ ತಂದಿರಿಸುವುದು ನಿನ್ನ ಕರ್ತವ್ಯ. ಆದರೆ ತಿನ್ನುವುದು ಬಿಡುವುದು ನನಗೆ ಸೇರಿದ್ದು."

ಪುಟ್ಟಯ್ಯ ಒಳಗೆ ಬಂದು ಮೋಹನನ ಕೈಗೆ ಎರಡು ಕಾಗದಗಳನ್ನು ಕೊಟ್ಟು ಹೋದ.

ಒಂದು ಕಾಗದ ಮೋಹನನ ತಂದೆಯಿಂದ ಬಂದಿತ್ತು. ಮತ್ತೊಂದು ಕಾಗದ "Stanvac" ಕಂಪೆನಿಯಿಂದ–ಮೋಹನನಿಗೆ ಉದ್ಯೋಗ ದೊರೆತಿರುವುದಾಗಿಯೂ, ಮೊದಲನೇ ತಾರೀಕಿನಿಂದ ನೌಕರಿಗೆ ಸೇರಬೇಕಾಗಿಯೂ ಆರ್ಡರ್ ಬಂದಿತ್ತು.

ಕಾಗದ ಓದಿದ ಕೂಡಲೇ ಮೋಹನನ ಮುಖ ಪೆಚ್ಚಾಯಿತು.

"ಯಾಕೆ, ಏನಾಯಿತು ?"

"ಏನಿಲ್ಲ. ಕೆಲಸ ಸಿಕ್ಕಿದೆ–ನಿಮ್ಮ ತಂದೆಯ ಪರಿಶ್ರಮ ಹಾಗೂ ಪ್ರಭಾವದಿಂದಾಗಿ."

"ಓ"—ಎಂದಳು ಇಂದಿರ.

"ಸೊಗಸಾದ ಸಂಬಳ ಬರುತ್ತದೆ. ನಾನೂರ ಐವತ್ತು ರೂಪಾಯಿ ಒಂದು ತಿಂಗಳಿಗೆ ಬಿಟ್ಟಿ ಮನೆ-ಬಿಟ್ಟಿ ಕಾರು...."

"ಸಂತೋಷ."

"ಆದರೆ ಒಂದನೇ ತಾರೀಖಿನ ಹೊತ್ತಿಗೆ ನನಗೆ ಹೋಗಲು ಆಗುತ್ತದೆಯೋ ಎಂದು ಯೋಚಿಸುತ್ತಿದ್ದೀರಿ."

"ಎರಡು ತಿಂಗಳ ಪ್ಲಾಸ್ಟರ್ ಹಾಕಿಕೊಂಡಿರಿ. ನಂತರ ಪ್ಲಾಸ್ಟರ್ ತೆಗೆದು ಮತ್ತೆ ಎಕ್ಸರೆ ತೆಗೆಸಿ ಆಮೇಲೆ ಯಾವುದನ್ನೂ ಹೇಳುತ್ತೇವೆ—ಎಂದಿದ್ದರು ಡಾಕ್ಟರು. ನಾಳಿದ್ದು ಹೋಗಿ ತೋರಿಸಿ ಬನ್ನಿ. ನಂತರ ಮುಂದಿನ ಯೋಚನೆ ಮಾಡುವಿರಂತೆ."

ತನಗೆ ಅಗಾಧವಾಗಿ ಕಂಡ ವಿಷಯಗಳೆಲ್ಲ ಇಂದಿರೆಗೆ ತೃಣ ಸಮಾನ.

"ಮುಂದೆ ?"

"ಎಲ್ಲವನ್ನೂ ನಾನೇ ಹೇಳಬೇಕೆ ? ಮುಂದೇನು ಮಾಡಬೇಕೆಂದು ನೀವು ಯೋಚಿಸಿ."

"ನನಗೆ ಯೋಚಿಸಲಾಗುತ್ತಿಲ್ಲವೆಂದೇ ನಾನು ನಿನ್ನನ್ನು ಕೇಳುತ್ತಿರುವುದು."

"ನನ್ನನ್ನು ಕೇಳಿದರೆ ಅದು ನಿಮ್ಮ ಯೋಚನೆಯಾಗುವುದಿಲ್ಲ. ನನ್ನ ಯೋಚನೆಯಾಗುತ್ತದೆ."

"ನಿಮ್ಮ ತಂದೆ ಮನೆಯಲ್ಲಿದ್ದಾರೇನು ?"

"ಹೂಂ. ಕರೆಯುತ್ತೇನೆ"—ಎಂದು ಹೇಳಿ ಇಂದಿರ ಹೊರಗೆ ಹೋದಳು.

ಒಳಗೆ ಬಂದ ರಾಯರಿಗೆ ಮೋಹನ ಕಂಪೆನಿಯಿಂದ ಬಂದಿದ್ದ ಕಾಗದವನ್ನು ಕೊಟ್ಟ.

ಕಾಗದವನ್ನು ಓದಿ ರಾಯರು ಸಂತೋಷದಿಂದ ಮುಂದೆ ಬಂದು ಮೋಹನನ ಕೈ ಕುಲುಕಿದರು. ಮೋಹನನ ಹಸ್ತ ತಣ್ಣಗೆ ನಿರ್ಜೀವವಾಗಿತ್ತು.

"ತುಂಬಾ ಸಂತೋಷ ಮೋಹನರಾವ್."

"ಎಲ್ಲಾ ನಿಮ್ಮ ದಯ. ಇದರಲ್ಲಿ ನನ್ನ ಯೋಗ್ಯತೆ ಏನೇನೂ ಇಲ್ಲ."

"ನಾಳಿದ್ದು ಡಾಕ್ಟರಲ್ಲಿಗೆ ಹೋಗಿಬರೋಣ. ಮುಂದಿನ ತಿಂಗಳು ಒಂದನೇ ತಾರೀಖಿನ ಹೊತ್ತಿಗೆ ನಿಮಗೆ ಮುಂಬಯಿಗೆ ಹೋಗಲಾಗದಿದ್ದರೆ, ನಾನು ನನ್ನ ಸ್ನೇಹಿತರಿಗೆ ಪತ್ರ ಬರೆದು ಅವರ ಮುಖಾಂತರ ಹದಿನೈದು ದಿವಸ ಮುಂದೆ ಹಾಕಿಸುತ್ತೇನೆ. ಯಾವುದಕ್ಕೂ ಮೊದಲು ಡಾಕ್ಟರಲ್ಲಿಗೆ ಹೋಗಿ ಬರೋಣ."

"ಆಗಲಿ."

"ನೀವು ಕೆಲಸಕ್ಕೆ ಹೋಗಿ ಸೇರಿಕೊಳ್ಳಿ. ನಾನು ಉಳಿದ ಏರ್ಪಾಡು ಮಾಡುತ್ತೇನೆ. ಇನ್ನು ಎರಡು ತಿಂಗಳು ಒಳ್ಳೆಯ ಲಗ್ನವಿಲ್ಲ. ಆಮೇಲೆ ಸಿಕ್ಕುವ ಶುಭಲಗ್ನದಲ್ಲಿ ಮದುವೆ ನಡೆಯುವಂತೆ ಏರ್ಪಡಿಸುತ್ತೇನೆ."

ಮೋಹನ ಮಾತನಾಡಲಿಲ್ಲ. ಅವನ ಮುಖ ಬಿಳಚಿಕೊಂಡಿತು. ಏನೋ ಮಾತನಾಡಲು ಪ್ರಯತ್ನಿಸಿದ. ಆದರೆ ಮಾತು ಹೊರಡಲಿಲ್ಲ. ಗಂಟಲಿನ ಗಂಟು ಕೆಳಗೆ ಮೇಲಾಡಿತು.

"ಇಂದಿರಾ, ಮೋಹನರಾಯರಿಗೆ ಕೆಲಸ ಸಿಕ್ಕಿದೆ."

"ತಿಳಿಯಿತು ಅಣ್ಣಾ"—ಎನ್ನುತ್ತಾ ಇಂದಿರ ಬಂದಳು.

"ಇನ್ನು ನಾನು ಮಾಡಬೇಕಾದ ಕೆಲಸ ಒಂದು ಮಾತ್ರ ಉಳಿದಿದೆ—ಮದುವೆ" ರಾಯರು ತಮ್ಮ ತಮಾಷೆಗೆ ತಾವೇ ನಕ್ಕರು.

ಇಂದಿರ, ಮೋಹನ ನಗಲಿಲ್ಲ. ಒಬ್ಬರ ಮುಖವನ್ನೊಬ್ಬರು ಪೆಚ್ಚಾಗಿ ನೋಡಿದರು.

ಇಂದಿರ ಸಾವರಿಸಿಕೊಂಡು ಹೇಳಿದಳು. "ಮದುವೆ ಯೋಚನೆ ಈಗಿನಿಂದ ಯಾಕಣ್ಣ? ಮೊದಲು ಎಲ್ಲ ಕೆಲಸವೂ ಸುಸೂತ್ರವಾಗಿ ನಡೆಯಲಿ. ಈಗ ಮದುವೆಗೇನು ಆತುರ?"

"ಹಾಗೆಂದರೆ ಹೇಗಮ್ಮ? ಹೂಂ....ಮೊದಲು ಮೋಹನನಿಗೆ ಗುಣವಾಗಿ ಕೆಲಸಕ್ಕೆ ಸೇರಿಕೊಳ್ಳುವಂತಾಗಲಿ. ಆಮೇಲೆ ಮುಂದಿನ ಮಾತು"—ಎಂದು ಹೇಳಿ ರಾಯರು ಎದ್ದು ಹೋದರು.

ತಟ್ಟೆಯಲ್ಲಿದ್ದ ತಿಂಡಿ, ಲೋಟದಲ್ಲಿದ್ದ ಕಾಫಿ ಹಾಗೆಯೇ ಇರುವುದನ್ನು ನೋಡಿ ಇಂದಿರ

"ಇದೇನು ಅನ್ಯಾಯ?"—ಎಂದಳು.

"ನನಗೆ ಬೇಡ."

"ನೌಕರಿ ಸಿಕ್ಕ ಸಂತೋಷ, ಅಲ್ಲವೆ?"

"ಇದರಲ್ಲಿ ನನ್ನದೇನಿದೆ? ಎಲ್ಲ ನಿಮ್ಮ ತಂದೆಯ ಪ್ರಭಾವ"

"ಅವರ ಪ್ರಭಾವದಿಂದ ಎಷ್ಟೋ ಜನರಿಗೆ ಕೆಲಸ ಸಿಕ್ಕಿದೆ. ನೀವು ಹಾಗೇನೂ ಸಂಕೋಚ ಮಾಡಿಕೊಳ್ಳಬೇಕಾಗಿಲ್ಲ."

"ಆದರೆ ಅಮೆರಿಕೆಗೆ ಹೋಗಿ ಬಂದವನು ನಾನೊಬ್ಬ ಮಾತ್ರ. ಹಣದ ಹೊರೆ, ಉಪಕಾರದ ಹೊರೆ, ಸ್ನೇಹದ ಹೊರೆ—ಇವುಗಳೆಲ್ಲವುಗಳಿಂದಲೂ

ನಾನು ಬಂಧಿತನಾಗಿದ್ದೇನೆ. ನಾನು ಈ ಹೊರೆ ಹೊರಲಾರೆ ಇಂದಿರಾ."

"ಆ ಹೊರೆಯನ್ನು ಇಳಿಸುವ ಸಲುವಾಗಿ ನನ್ನನ್ನು ಮದುವೆಯಾಗಲು ನೀವು ಮತ್ತೆ ಬಯಸಿದರೇನು ?"

ಇಂದಿರ ಕಟುವಾಗಿ ಕೇಳಿದಳು.

ಮೋಹನ ಸ್ವಲ್ಪ ಹೊತ್ತು ಸುಮ್ಮನಿದ್ದು ನಂತರ ನಿಧಾನವಾಗಿ ಹೇಳಿದ.

"ನಿನಗೆ ಈಗ ಎಷ್ಟೇ ಕಟುವಾಗಿ ಮಾತನಾಡಲೂ ಅಧಿಕಾರವಿದೆ ಇಂದಿರ. ನನಗೆ ಮಾತನಾಡಲು ಸಹ ಬಾಯಿಲ್ಲ. ನನ್ನ ಮನಸ್ಸಿನಲ್ಲಿರುವುದನ್ನೆಲ್ಲಾ ಈ ದಿನ ಹೇಳಿಬಿಡುತ್ತೇನೆ.

ಕಾಫಿ ತೋಟದ ಒಡೆಯರೊಬ್ಬರ ಏಕಮಾತ್ರ ಪುತ್ರಿ ನೀನೆಂದೇ ನಾನು ನಿನ್ನನ್ನು ಮದುವೆಯಾಗಲು ಒಪ್ಪಿಕೊಂಡೆ. ನೋಡಿದಕೂಡಲೇ ಆಕರ್ಷಿಸುವ ರೂಪು ನಿನ್ನದಾಗಿರಲಿಲ್ಲ. ನಿನ್ನಿಂದಾಗಿ ನಿಮ್ಮ ತಂದೆಯ ಆಸ್ತಿ ನನಗೆ ಬರುವುದು ಎಂಬ ದುರಾಸೆಯಿಂದ ನಾನು ನಿನ್ನ ಕೈ ಹಿಡಿಯಲು ಒಪ್ಪಿದೆ. ನೀನು ನನ್ನಲ್ಲಿ ಏನನ್ನು ಕಂಡು ಆಕರ್ಷಿತಳಾದೆಯೋ ನನಗೆ ತಿಳಿಯದು.

ನಾನು ಅಳಿಯನಾಗುವೆನೆಂದು ನಿಮ್ಮ ತಂದೆ ಸ್ವಂತ ಖರ್ಚಿನಿಂದ ಹೆಚ್ಚಿನ ವ್ಯಾಸಂಗಕ್ಕೆ ನನ್ನನ್ನು ವಿದೇಶಕ್ಕೆ ಕಳಿಸಿದರು.

ನಿನಗೆ ತಮ್ಮ ಹುಟ್ಟಿದ ಸಮಾಚಾರ ಕೇಳಿ ನನ್ನೆಲ್ಲಾ ಆಸೆಗಳೂ ಮಾಯವಾದವು. ನಿಮ್ಮ ತಂದೆಯ ಆಸ್ತಿಯ ಬಗ್ಗೆ ಮಹದಾಸೆಯನ್ನು ಇರಿಸಿಕೊಂಡಿದ್ದ ನನಗೆ ತುಂಬಾ ನಿರಾಶೆಯಾಯಿತು. ವಿದೇಶದಿಂದಲೇ ನನಗೆ ಪತ್ರ ಬರೆಯುವ ಮನಸ್ಸಾಗಿತ್ತು—ಇಂದಿರೆಯನ್ನು ಮದುವೆಯಾಗಲು ನಾನು ತಯಾರಿಲ್ಲ ಎಂದು. ಆದರೆ ನನ್ನ ಶಿಕ್ಷಣ ಮುಗಿಯಲು ಇನ್ನೂ ಸ್ವಲ್ಪ ಕಾಲವಿತ್ತು. ನನ್ನ ಶಿಕ್ಷಣಕ್ಕೆ ಅಡ್ಡಿಯಾಗಬಾರದೆಂದು ನಾನು ಸುಮ್ಮನಿದ್ದೆ.

ಇಲ್ಲಿಗೆ ಬಂದ ಮೇಲೆ ನನ್ನ ಮನಸ್ಸಿನಲ್ಲಿದ್ದುದನ್ನು ನಿನಗೆ ಹೇಳಿ ನನಗೆ ಬಿಡುಗಡೆಮಾಡುವಂತೆ ಕೇಳಿಕೊಂಡೆ. ನೀನು ನನ್ನನ್ನು ಬಿಡುಗಡೆಮಾಡುವುದಾಗಿ ಒಪ್ಪಿಕೊಂಡೆ. ಅಷ್ಟು ಸುಲಭವಾಗಿ ಬಿಡುಗಡೆಯಾದುದು ನನಗೆ ಆಶ್ಚರ್ಯವನ್ನುಂಟುಮಾಡಿತು. ನೀನು ನನ್ನ ಮಾತಿಗೆ ಒಪ್ಪದೆ ಹಠ ಮಾಡಿದ್ದರೆ, ನನ್ನ ಮೇಲೆ ರೇಗಾಡಿದ್ದರೆ, ಕೋಪದಿಂದ ಉರಿದಿದ್ದರೆ ಈಗಿನ ಸನ್ನಿವೇಶವೇ ಬೇರೆಯಾಗುತ್ತಿತ್ತೇನೋ ? ಆಗಲೇ ನನಗೆನಿಸಿತು—ಎಲ್ಲರಂತಲ್ಲ ನೀನು ಎಂದು.

ನಿನ್ನ ಆಗಿನ ವರ್ತನೆ, ಶಾಂತಿ, ಧೀರಣೆಯನ್ನು ನಾನು ಮನಸ್ಸಿನಲ್ಲಿಯೇ ತುಂಬಾ ಮೆಚ್ಚಿಕೊಂಡೆ.

ನಾನು ಬಿದ್ದು ಕೈಕಾಲು ಮುರಿದು ಇಲ್ಲಿಗೇ ಉಳಿದ ಮೇಲೆ, ಸ್ವಲ್ಪಕಾಲ ನಿನ್ನೊಡನೆ ಕಳೆದ ಮೇಲೆ ನಿನ ಸ್ವಭಾವ, ಗುಣ, ವ್ಯಕ್ತಿತ್ವದ ಪರಿಚಯ ನನಗಾಯಿತು.

ಮೆಚ್ಚುಗೆಯಿಂದ ಸ್ನೇಹ—ಸ್ನೇಹದಿಂದ ಪ್ರೀತಿ.

ನಾನೂ ಮೊದಲು ನನಲ್ಲಾದ ಪರಿವರ್ತನೆಯನ್ನು ಗಮನಿಸಿರಲಿಲ್ಲ. ನಾನು ಗಮನಿಸುವಂತಾದ ಮೇಲೆ ಅದೇ ನನಗೆ ಪ್ರಿಯವಾಯಿತು.

ಅಷ್ಟೇನೂ ಆಕರ್ಷಿಸುವ ಸೌಂದರ್ಯ ನಿನ್ನದಲ್ಲವಾದರೂ ನಿನ್ನ ಗುಣಗಳಿಗೆ, ಮನೋಬಲಕ್ಕೆ, ಸ್ವಭಾವಕ್ಕೆ ನಾನು ಮರುಳಾದೆ.

ಮೊದಲು ನನ್ನ ಭಾವನೆಗಳನ್ನು ಅದುಮಿಡಲು ಯತ್ನಿಸಿದೆ. ನನ್ನ ಭಾವನೆಗಳನ್ನು ನಿನ್ನ ಎದುರಿಗೆ ವ್ಯಕ್ತಪಡಿಸಲು ಮೊದಲು ನನಗೆ ಹೀನಾಯವಾಯಿತು. ಕೊನೆಗೆ—ಆಸ್ತಿಯ ಪ್ರಶ್ನೆ ಹಿಂದಕ್ಕೆ ಸರಿಯಿತು.

ನಿಮ್ಮ ತಂದೆಯಿಂದ ನನಗೆ ಒಂದು ಕುರುಡು ಕಾಸು ದೊರೆಯದಿದ್ದರೂ ಬೇಡ. ನಿಮ್ಮ ತಂದೆ ಗಳಿಸಿರುವುದರಲ್ಲಿ ಅತ್ಯಂತ ಅಮೂಲ್ಯವಾದ ಇಂದಿರಾ ನನಗೆ ಸಿಕ್ಕಿದರೆ ಸಾಕು ಎಂದು ಮನಸ್ಸು ಬಯಸಿತು.

ಉಪಕಾರದ ಹೊರೆ ಇಳಿಸಿಕೊಳ್ಳಲು ನಾನು ನಿನ್ನನ್ನು ಮದುವೆಯಾಗಲು ಬಯಸುತ್ತಿಲ್ಲ ಇಂದಿರಾ. ಆ ಹೊರೆಯನ್ನು ಈ ಜನ್ಮದಲ್ಲಿ ಇಳಿಸುವುದು ಸಾಧ್ಯವಿಲ್ಲ. ನಾನು ಇಳಿಸುವ ಪ್ರಯತ್ನವನ್ನೂ ಮಾಡುವುದಿಲ್ಲ.

ನನ್ನ ವಿದೇಶ ವ್ಯಾಸಂಗಕ್ಕಾಗಿ ನಿಮ್ಮ ತಂದೆ ಮಾಡಿರುವ ಖರ್ಚನ್ನು ಮಾತ್ರ ಹಿಂತಿರುಗಿಸುವ ಯೋಚನೆ ಇದೆ.

“ಉಪಕಾರದ ಹೊರೆ ಇಳಿಸಲು ಮಾತ್ರ ನಾನು ನಿನ್ನನ್ನು ಮದುವೆಯಾಗಬೇಕೆಂದಿಲ್ಲ. ನನ್ನ ಮಾತನ್ನು ನಂಬುವೆಯಾ ?”

ಇಂದಿರ ಪರೀಕ್ಷಿಸುವವಳಂತೆ ಮೋಹನನ ಮುಖ ನೋಡಿದಳು.

ಸುಮಾರು ಎರಡೂವರೆ ತಿಂಗಳಿನಿಂದಲೂ ಬಿಸಲಿನಿಂದಲೂ ದೂರವಾಗಿದ್ದ ಮೋಹನ ಬೆಳ್ಳಗಾಗಿದ್ದ. ಮುಖ ಸೊರಗಿತ್ತು.

ಎಂತಹ ಆಕರ್ಷಕ ಸೌಂದರ್ಯ ಅವನದು ! ಕೈಗೆ, ಕಾಲಿಗೆ ಹಾಕಿದ್ದ ಪ್ಲಾಸ್ಟರು ಸಹಿತ ಅವನಿಗೆ ಏನೋ ಒಂದು ಒಡವೆಯನ್ನು ಹಾಕಿದ ಸೊಬಗನ್ನು ಕೊಟ್ಟಿತ್ತು.

ಬೆರಳುಗಳು ಬೂದಿಯ ರಾಶಿಯನ್ನು ಕೆದಕಿದವು.

ಒಂದು ಕಿಡಿಯಾದರೂ ಇರಬಾರದೇ ?

ನೀಳವಾಗಿ ಉಸಿರೆಳೆದು ಇಂದಿರ ಹೇಳಿದಳು. "ನಂಬುತ್ತೇನೆ."

"ನನ್ನ ಮನಸ್ಸಿನಲ್ಲಿರುವುದನ್ನೆಲ್ಲಾ ನಿನಗೆ ಹೇಳಿದ್ದೇನೆ. ಕ್ಷಮಿಸಲು ಸಾಧ್ಯವಾದರೆ ಕ್ಷಮಿಸು. ಈ ಸಂಸಾರದಲ್ಲಿ ನನಗೆಷ್ಟು ಆತ್ಮೀಯತೆ ಮೂಡಿದೆಯೆಂದರೆ-ಈಗ ಅದನ್ನು ಬಿಟ್ಟು ಹೋಗುವುದು ನನಗೆ ತುಂಬಾ ಕಷ್ಟವಾಗಿದೆ."

"ಕಾಲಕ್ರಮೇಣ ಎಲ್ಲವನ್ನೂ ಮರೆಯಬಹುದು."

"ನಾನೊಂದು ದೊಡ್ಡ ತಪ್ಪು ಮಾಡಿದೆ. ಅದರ ಶಿಕ್ಷೆ ನಾನೇ ಅನುಭವಿಸುತ್ತೇನೆ."

"ಏನು ಶಿಕ್ಷೆ ?"

"ಇಂದಿರ ಕೊನೆಯವರೆವಿಗೆ ನನ್ನ ಪರಕೀಯಳಾಗಿಯೇ ಉಳಿಯುವುದಕ್ಕಿಂತಲೂ ಬೇರೊಂದು ಶಿಕ್ಷೆ ಇದೆಯೇನು ?"

–ಹೀಗೆ ಹೇಳುವಾಗ ಮೋಹನ ನಕ್ಕ.

ನಕ್ಕು ಹೇಳಿದ ಮೋಹನ–

"ಹೃದಯ ದೌರ್ಬಲ್ಯಕ್ಕೆ ಪ್ರೀತಿ ಎಂದು ಮತ್ತೊಂದು ಹೆಸರು. ಸ್ವಭಾವತಃ ದುರ್ಬಲವ್ಯಕ್ತಿ ನಾನು ಇಷ್ಟೊಂದು ಶಕ್ತಿಯುಳ್ಳ 'ದೌರ್ಬಲ್ಯ'ಕ್ಕೆ ನಾನು ಬಲಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ನಾನು ಯಾವ ದೌರ್ಬಲ್ಯಕ್ಕೆ ಬಲಿಯಾಗಿರುವೆನೋ ಅದನ್ನು ನೀನು ಮೆಟ್ಟಿ ನಿಂತಿರುವೆ."

"ಕಾಫಿ ಆರಿಹೋಯಿತು. ಬೇರೆ ತರುತ್ತೇನೆ"–ಎಂದು ಹೇಳಿ ಇಂದಿರ ಒಳಗೆ ಹೋದಳು.

○ ○ ○ ○ ○

ಪ್ಲಾಸ್ಟರನ್ನು ಕಳಚಿದ ಮೇಲೂ ನಾಲ್ಕು ದಿನ ಮೋಹನ 'ಬೆಳ್ಳಿಮೋಡ'ದಲ್ಲಿ ಉಳಿದುಕೊಂಡ.

"ನಾಲ್ಕಾರು ದಿನ ಅವರಿಗೆ ನಡೆದು ಅಭ್ಯಾಸವಾಗಲಿ. ಕೂಡಲೆ ಅವರು ಹೊರಡುವುದು ಬೇಡ"–ಎಂದು ಡಾಕ್ಟರು ಸಲಹೆ ಕೊಟ್ಟಿದ್ದರು.

ನಾಲ್ಕು ದಿನಗಳನ್ನೂ ಅವನು ಗಿರಿಯೊಡನೆ ಆಡುವುದರಲ್ಲಿಯೂ, ಇಂದಿರೆಯೊಡನೆ ಬಯಲು ಜಾಗದಲ್ಲಿ ತಿರುಗಾಡುವುದರಲ್ಲಿಯೂ ಕಳೆದ.

ಮೋಹನ ಮೈಸೂರಿಗೆ ಹೊರಡುವ ಹಿಂದಿನ ಬೆಳಗ್ಗೆ ಇಂದಿರ ತಂದೆಗೆ ತನ್ನ ಮನಸ್ಸಿನಲ್ಲಿದ್ದುದನ್ನು ತಿಳಿಸಿದಳು.

ಮೋಹನ ಸ್ನಾನ ಮಾಡಲು ಹೋದ ಸಂದರ್ಭ ಸಾಧಿಸಿ ಇಂದಿರ ತಂದೆಯೊಡನೆ ಮಾತು ತೆಗೆದಳು.

"ನಾಳೆ ಮೋಹನ ಹೊರಡುತ್ತಾರೆ"—ಎಂದಳು ಇಂದಿರ.

"ಹುಂ. ಇನ್ನು ವರನಾಗಿ ಇಲ್ಲಿಗೆ ಬರುತ್ತಾರೆ."

"ಅಣ್ಣಾ ?"

"ಏನಮ್ಮ ?"

"ಅವರು ವರನಾಗಿ ಇಲ್ಲಿಗೆ ಬರುವುದು ಸಾಧ್ಯವಿಲ್ಲ."

"ಹಾಗೆಂದರೆ ?"

"ನಾನು ಅವರನ್ನು ಮದುವೆಯಾಗಲಾರೆ."

"ಇಂದಿರ !"

"ನನ್ನನ್ನು ಒತ್ತಾಯಪಡಿಸಬೇಡಣ್ಣಾ."

"ಇಂದಿರ, ಎಚ್ಚರವಾಗಿರುವೆಯಾ ?"

"ಹೂಂ. ಈಗ ಜಾಗ್ರತಳಾಗಿರುವಷ್ಟು ನಾನು ಬೇರೆ ಯಾವ ಸಮಯದಲ್ಲೂ ಆಗಿರಲಿಲ್ಲ."

"ಇಷ್ಟೆಲ್ಲಾ ಅವರಿಗೆ ಮಾಡಿ ಅದು ವ್ಯರ್ಥವಾಗಬೇಕೇ ?"

"ಈಗ ಗಿರಿಗೆ ಮಾಡಿದ್ದುದನ್ನು ವ್ಯರ್ಥವೆಂದು ಭಾವಿಸುವೆಯೇನಣ್ಣಾ ?"

"ಇಲ್ಲ. ಆದರೂ ನಾನೆಷ್ಟು ಕಷ್ಟಪಟ್ಟು ಅವನನ್ನು ಮುಂದೆ ತರಲು ..."

"ಮಾವಿನ ಸಸಿ ನೆಡುವವರು ಅದರ ಹಣ್ಣನ್ನು ತಾವೇ ತಿನ್ನಬೇಕೆಂಬ ಬಂಬಲದಿಂದ ನಡೆರುವುದಿಲ್ಲ ಅಣ್ಣಾ. ತನ್ನ ಮಕ್ಕಳು, ಮೊಮ್ಮಕ್ಕಳು ಯಾರಾದರೂ ಸರಿ–ಸಿಹಿಯಾದ ಹಣ್ಣು ತಿನ್ನಲಿ ಎಂಬ ನಿಸ್ವಾರ್ಥ ಬುದ್ಧಿಯಿಂದ ಸಸಿ ನೆಡುತ್ತಾರೆ. ಅವರ ಯಶಸ್ಸು, ಗಳಿಕೆ, ಕೀರ್ತಿಯಲ್ಲಿ ನಾನು ಪಾಲು ಪಡೆಯದಿದ್ದರೇನು ? ಮತ್ತೊಬ್ಬ ಹುಡುಗಿ ಪಾಲು ಪಡೆದು ಸುಖಿಯಾಗುತ್ತಾಳೆ. ನೀನು ಮಾಡಿರುವುದು ಎಂದಿಗೂ ವ್ಯರ್ಥವಾಗುವುದಿಲ್ಲ ಅಣ್ಣಾ. ಮೋಹನ, ಅವರ ಹೆಂಡತಿ, ಅವರ ಮಕ್ಕಳು ನೀನು ನೆಟ್ಟ ಸಸಿಯ ಫಲವನ್ನು ತಿಂದು ಸುಖಿಗಳಾಗುತ್ತಾರೆ."

"ಇಂದಿರ ..."

"ನನ್ನನ್ನು ಬಲವಂತ ಮಾಡಬೇಡ ಅಣ್ಣಾ. ಅವರನ್ನು ಮದುವೆಯಾದರೆ ನಾನು ಸುಖಿಯಾಗಿರುವುದಿಲ್ಲ ಎನಿಸುತ್ತದೆ."

"ಕಾರಣ ?"

"ಮೋಹನ ತುಂಬಾ ದುರ್ಬಲ ವ್ಯಕ್ತಿ. ಆ ಬಗೆಯ ದೌರ್ಬಲ್ಯ ನನಗೆ ಹಿಡಿಸದು. ಅವರನ್ನು ನೋಡಿದರೆ ನನಗೆ ಮರುಕ ಉಕ್ಕಿಬರುತ್ತದೆ. ಆ

ಮರುಕದಲ್ಲಿ ಪ್ರೀತಿಯ ಹನಿಯೇ ಇಲ್ಲ. ಪ್ರೀತಿ ಇದ್ದರೂ—ಅವರನ್ನು ಗಂಡನೆಂದು ಸ್ವೀಕರಿಸುವ—ಮತ್ತೊಂದು ಬಗೆಯ ಪ್ರೀತಿ ನನ್ನಲ್ಲಿಲ್ಲ. ಅವರನ್ನು ನೋಡಿದರೆ ನನಗೆ ಬೆಳೆದ ಗಿರಿಯನ್ನು ನೋಡಿದಂತಾಗುತ್ತದೆ."

"ದುಡುಕಬೇಡ ಇಂದಿರ. ಯೋಚಿಸು."

"ಈಗ್ಗೆ ಸುಮಾರು ಮೂರು ತಿಂಗಳಿನಿಂದಲೂ ಯೋಚಿಸಿದ್ದೇನೆ ಅಣ್ಣ. ಇನ್ನು ನಾನು ಮನಸ್ಸು ಬದಲಾಯಿಸಲಾರೆ."

"ಆದರೆ...."

"ಆದರೇನಣ್ಣ ?"

"ಸುಮಾರು ಮೂರು ತಿಂಗಳಿನಿಂದ ಮೋಹನ ಇಲ್ಲಿದ್ದ. ಮುಂದೆ ಅಳಿಯನಾಗುವವನಿದ್ದ. ಮನೆಯಲ್ಲಿಯೇ ಇದ್ದ ಭಾವೀ ಅಳಿಯ—ಹಾಗೂ ಮಗಳು. ನಿನ್ನ ಹೆಸರಿಗೆ ಕಲಂಕ ಬರದೇ" ಅದರ ಯೋಚನೆ ಮಾಡು ಇಂದಿರಾ."

"ನಾನಂತೂ ನಿಷ್ಕಳಂಕಳು."

"ನಾನೂ ಅದನ್ನು ಒಪ್ಪುತ್ತೇನೆ. ಆದರೆ ಜನ, ಸಮಾಜ, ಮುಂದೆ ನಿನ್ನ ಕೈಹಿಡಿಯಲು ಬರುವ ವ್ಯಕ್ತಿ ಎಲ್ಲರೂ ಒಪ್ಪಿಕೊಳ್ಳಬೇಕಲ್ಲ ?"

"ಜನ, ಸಮಾಜದ ಹೆದರಿಕೆ ನನಗಿಲ್ಲ. ನನ್ನನ್ನು ಸಂಶಯದಿಂದ ನೋಡುವ ವ್ಯಕ್ತಿಯನ್ನು ನಾನು ಮದುವೆಯಾಗುವುದಿಲ್ಲ. ಬದಲು ಹಾಗೆಯೇ ಉಳಿಯುತ್ತೇನೆ."

"ನೀನಾಗಿಯೇ ಮೋಹನನ್ನು ಮದುವೆಯಾಗಲು ಬಯಸಿದ್ದೆ ಇಂದಿರಾ. ಈಗ ಹೀಗೆ ಮನಸ್ಸು ಬದಲಾಯಿಸಲು ಕಾರಣ ?"

"ಮೋಹನನನ್ನು ನನ್ನ ಸರ್ವಸ್ವವೆಂದು ಭಾವಿಸಿದ್ದ ಕಾಲವೂ ಇತ್ತು. ನನ್ನ ಭಾವನೆಯ ಕನ್ನಡಿಗೆ ಅಕಸ್ಮಾತ್ ಬಲವಾದ ಏಟೊಂದು ಬಿತ್ತು. ಕನ್ನಡಿ ಒಡೆದು ಚೂರಾಯಿತು. ಆ ಚೂರುಗಳನ್ನು ಒಂದುಮಾಡಲು ಸಾಧ್ಯವಿಲ್ಲ."

"ನೀನು ಮೋಹನನ್ನು ನಿರಾಕರಿಸಿದರೆ ಸಮಸ್ಯೆ ಪರಿಹಾರವಾಗಲಿಲ್ಲ. ನೀನು ಒಪ್ಪುವ, ನಿನ್ನನ್ನು ನಂಬುವ ತರುಣನೊಬ್ಬ ಸಿಕ್ಕಬೇಕಲ್ಲ ಇಂದಿರಾ?"

"ನಮಗೆ ನಮಗೆ ಸರಿಬರಲಿಲ್ಲ. ಸಂಬಂಧ ತಪ್ಪಿಹೋಯಿತು ಎಂದರಾಯಿತು. ನಾಲ್ಕು ದಿನ ಜನ ಮಾತನಾಡಬಹುದು. ಮಾತನಾಡಲು ಹೊಸ ವಿಷಯವೊಂದು ಸಿಕ್ಕಿದರೆ ಐದನೆಯ ದಿನ ಜನ ಎಲ್ಲವನ್ನೂ ಮರೆಯುತ್ತಾರೆ."

"ನಿನ್ನನ್ನು ಮದುವೆ ಮಾಡಿಕೊಳ್ಳುವಾತ ಎಲ್ಲವನ್ನೂ ಮರೆತು ನಿನ್ನ ಕೈ ಹಿಡಿಯಬೇಕಲ್ಲ ?"

"ನಮ್ಮ ಊರಿನಿಂದ ದೂರವಾಗಿರುವ, ಜನರ ಸಣ್ಣ ಮಾತುಗಳನ್ನು ನಂಬದ, ಕಿವಿಗೊಡದ ವ್ಯಕ್ತಿಯೊಬ್ಬ ಎಂದಿಗೂ ಸಿಕ್ಕಲಾರನೇನಣ್ಣ? ಎಲ್ಲರೂ ಸಣ್ಣ ಮನಸ್ಸಿನವರೇ ಆಗಿರುತ್ತಾರೇನಣ್ಣ ? ನನ್ನ ವಿಷಯ ತಿಳಿಯದೇ ನನ್ನ ಪತಿಯಾಗುವವನಿಗೂ ನಾನಾಗಿಯೇ ಈ ಸಂಗತಿಯನ್ನು ತಿಳಿಸುತ್ತೇನೆ. ಇದರಲ್ಲಿ ಮುಚ್ಚುಮರೆ ಏನಿಲ್ಲ. ನಾವು ಏನಾದರೂ ತಪ್ಪು ಮಾಡಿದ್ದರೆ ಹೆದರಬೇಕು. ಈಗ ಮೋಹನನಿಗೆ ಹೆಣ್ಣು ಕೊಡುವವರು ಹೇಗೆಯೇ ಅಳುಕುತ್ತಾರೇನು ?"

"ಅವನು ಗಂಡಸು, ಬೇರೊಂದು ಹೆಣ್ಣಿನೊಡನೆ ಅವನು ಸಂಪರ್ಕ ವಿಟ್ಟುಕೊಂಡಿರುವನೆಂದು ತಿಳಿದರೂ ಜನ ಅವನಿಗೆ ಹೆಣ್ಣು ಕೊಡುತ್ತಾರೆ. ನೀನು ಯೋಚನೆ ಮಾಡು ಮಗು. ಈಗಲೆ ದುಡುಕಿ ಯಾವುದನ್ನೂ ನಿರ್ಧರಿಸಿಬಿಡಬೇಡ."

"ಇದೊಂದು ವಿಷಯದಲ್ಲಿ ನನ್ನನ್ನು ಕ್ಷಮಿಸಿಬಿಡು. ನಾನು ಒಪ್ಪುವ, ನನ್ನನ್ನು ನಂಬುವ ಹುಡುಗ ಸಿಕ್ಕಿದರೆ ನಾನು ಮದುವೆಯಾಗುತ್ತೇನೆ. ಇಲ್ಲ ದಿದ್ದರೆ ಇಲ್ಲ."

ರಾಯರು ಮುಖ ಚಿಕ್ಕದು ಮಾಡಿಕೊಂಡು ಅಲ್ಲಿಂದ ಏಳುವ ಯತ್ನ ಮಾಡಿದರು.

ಇಂದಿರೆಗೆ ಹೃದಯ ಚುಚ್ಚಿದಂತಾಯಿತು.

"ಅಣ್ಣ, ನಾನು ಸುಖವಾಗಿರುವುದು ನಿನಗೆ ಮುಖ್ಯ ಅಲ್ಲವೇ ?"

"ಹೌದಮ್ಮ."

"ಹಾಗಾದರೆ ನೀನು ನೊಂದುಕೊಳ್ಳಬಾರದು."

ರಾಯರು ಮಾತನಾಡಲಿಲ್ಲ. ಸ್ವಲ್ಪ ಹೊತ್ತು ಸುಮ್ಮನಿದ್ದು ರಾಯರು ಕೇಳಿದರು.

"ಮೋಹನನಿಗೆ ಈ ವಿಷಯ ತಿಳಿದಿದೆಯೇ?"

"ಹೂಂ."

"ಏನೆಂದ ?"

"ಏನೂ ಅನ್ನಲಿಲ್ಲ. ನಿರಾಶೆಗೊಂಡಿದ್ದಾನೆಂದು ಹೇಳಬಹುದು. ಸ್ವಲ್ಪ ದಿನಗಳು ಭಗ್ನಪ್ರೇಮಿಯಂತೆ ವರ್ತಿಸಬಹುದು. ಆನಂತರ ಸರಿಹೋಗುವ ರಿಂಬ ಧೈರ್ಯ ನನಗಿದೆ."

ರಾಯರಿಗೆ ಮುಂದೆ ನಿಲ್ಲಲಾಗಲಿಲ್ಲ.

ಸಂಜೆ ಸೂರ್ಯ ಪಶ್ಚಿಮದಕಡೆ ಇಳಿಯುತೊಡಗಿದ್ದಾಗ ಇಂದಿರ, ಮೋಹನ, ಗಿರಿ ಬಯಲು ಜಾಗದಲ್ಲಿ ತಿರುಗಾಡಿಕೊಂಡು ಬರಲು ಹೊರಟರು.

ಮೋಹನ ತುಂಬಾ ಗಂಭೀರವಾಗಿದ್ದ. ಇಂದಿರೆಯೂ ಹೆಚ್ಚು ಮಾತನಾಡುತ್ತಿರಲಿಲ್ಲ, ಗಿರಿ ಮಾತ್ರ ಎಂದಿನಂತೆ ಉಲ್ಲಾಸವಾಗಿಯೇ ಇದ್ದ.

ಸ್ವಲ್ಪ ದೂರ ನಡೆದು ಹಸಿರು ಹುಲ್ಲಿನ ಮೆತ್ತೆಯ ಮೇಲೆ ಇಬ್ಬರೂ ಕುಳಿತರು. ಅವರಿಗೆ ಸಮೀಪದಲ್ಲಿಯೇ ಗಿರಿ ಚೆಂಡಾಡತೊಡಗಿದ.

"ಇಂದಿರ, ಇನ್ನೊಂದು ಬಾರಿ ಯೋಚಿಸುವೆಯಾ ?"

"ಮೋಹನ, ಬಹುಶಃ ಈ ಜನ್ಮದಲ್ಲಿ ನಮ್ಮಿಬ್ಬರದೂ ಇದೇ ಕಡೆಯ ಭೇಟಿಯಾಗಬಹುದು. ಈಗ ಸ್ವಲ್ಪ ಸಂತೋಷವಾಗಿ ಕಾಲ ಕಳೆಯೋಣ."

"ನಿನ್ನ ಮನಸನ್ನು ಬದಲಾಯಿಸಲು ಸಾಧ್ಯವೇ ಇಲ್ಲವೇ ?"

"ನಿಮಗೂ, ಗಿರಿಗೂ ಏನೇನೂ ವ್ಯತ್ಯಾಸ ಕಾಣೋದಿಲ್ಲ ನನಗೆ. ವಯಸ್ಸಿನಲ್ಲಿ, ಬೆಳವಣಿಗೆಯಲ್ಲಿ ವ್ಯತ್ಯಾಸವಿರಬಹುದು. ಗಿರಿಯನ್ನು ನಾನು ಯಾವ ಭಾವನೆಯಿಂದ ನೋಡುತ್ತೇನೋ ನಿಮ್ಮನ್ನೂ ಅದೇ ದೃಷ್ಟಿಯಿಂದ ನೋಡುತ್ತೇನೆ."

ಮೋಹನನ ಮುಖ ಸಪ್ಪೆಯಾದುದನ್ನು ಕಂಡು ಇಂದಿರ ಅವನಲ್ಲಿ ಗೆಲುವು ಮೂಡಿಸಲು ಹೇಳಿದಳು.

"ನನಗಿಂತಲೂ ಯೋಗ್ಯಳಾದ, ಸುಂದರವಾದ ಹುಡುಗಿಯನ್ನು ಮದುವೆ ಮಾಡಿಕೊಂಡು ಸುಖವಾಗಿರಿ ನೀವು ಎಲ್ಲಿದ್ದರೂ ನಿಮ್ಮ ಹಿತಚಿಂತಕಳೊಬ್ಬಳು ದೂರದಿಂದ ನಿಮ್ಮ ಒಳ್ಳೆಯದನ್ನು ಹಾರಯಿಸುತ್ತಾಳೆ."

"ನೀನು ಇಷ್ಟು ಕಠಿಣಳಾಗಬಲ್ಲೆಯೆಂದು ನಾನು ತಿಳಿದಿರಲಿಲ್ಲ."

"ನಿಮ್ಮ ಮದುವೆಯ ಲಗ್ನ ಪತ್ರಿಕೆ ನನಗೆ ಕಳಿಸಿ. ನಾನು ಎಲ್ಲಿದ್ದರೂ ಬರುತ್ತೇನೆ."

"ನನ್ನ ಹೊಟ್ಟೆ ಉರಿಸೋಕೆ ನೀನೇನೂ ಬರಬೇಡ."

"ನಿಮ್ಮಿಷ್ಟ."

"ಅಂದ ಹಾಗೆ ನಿನ್ನ ಮದುವೆ ಯಾವಾಗ ಇಂದಿರಾ ?"

"ವರನೇ ನಿಶ್ಚಯವಾಗಿಲ್ಲ. ಮದುವೆ ಎಲ್ಲಿಂದ ಬಂತು "?

"ನಿಶ್ಚಯವಾದಾಗ ಆ ಭಾಗ್ಯಶಾಲಿ ಯಾರೆಂದು ತಿಳಿಸು. ನಾನು ಅವನನ್ನು ಅಭಿನಂದಿಸುತ್ತೇನೆ."

"ನಿಜ ಹೇಳಲೇ ಮೋಹನ ? ನಾನು ಮದುವೆಯಾಗಬಾರದೆಂದು

ನಿರ್ಧರಿಸಿದ್ದೇನೆ."

"ಕಾರಣ ?"

"ಮದುವೆ, ಪ್ರೀತಿ, ಸಂಸಾರ ಇತ್ಯಾದಿಗಳಿಗೆ ಅರ್ಥವೇ ಇಲ್ಲವೆಂದು ನಾನು ಭಾವಿಸಿದ್ದೇನೆ. ಹುಡುಗತನದಲ್ಲಿ ನಾನೊಂದು ಕನಸು ಕಂಡಿದ್ದೆ. ಎಳೆಯ ಮನಸ್ಸು ಹೆಣೆದಿದ್ದ ರಂಗುರಂಗಿನ ಕನಸದು ಯಾವುದೋ ಕರಾಳ ಹಸ್ತ ಆ ಕನಸನ್ನು ಒಡೆದು ಹೊಸಗಿ ಹಾಕಿತು."

"ನಿನ್ನ ಭವಿಷ್ಯದ ಗತಿಯೇನು ಇಂದಿರಾ ?"

ಇಂದಿರಾ ಮಾತನಾಡದೆ ಸಮೀಪದಲ್ಲಿ ಆಡುತ್ತಿದ್ದ ಗಿರಿಯನ್ನೂ, ತಮ್ಮ ಮುಂದೆ ಹರಡಿದ್ದ ವಿಶಾಲವಾದ ಕಾಫಿ ತೋಟವನ್ನು ಮೋಹನನಿಗೆ ತೋರಿಸಿದಳು.

"ಗಿರಿ, 'ಬೆಳ್ಳಿಮೋಡ'ವೇ ನಿನಗೆ ಆಸರೆಯೇನು ?"

"'ಬೆಳ್ಳಿಮೋಡ'ವೆಲ್ಲಿಂದ ಬರಬೇಕು ಮೋಹನ ? ಈಗ ಎರಡು ವರ್ಷಗಳ ಹಿಂದೆ ಬದುಕಿನಿಂದ ನಾನು ಪಡೆಯುತ್ತಿದ್ದ, ಪಡೆದಿದ್ದ ನಿರ್ಮಲ, ಮುಗ್ಧ ಆನಂದ ಇನ್ನು ಎಂದೆಂದಿಗೂ ಪಡೆಯಲಾರೆ. ಮುದುಕಿಯ ಪಾಲಿಗೆ ಯೌವನ ಒಂದು ನೆನಪು ಮಾತ್ರ. ನನಗೂ ಹಾಗೆಯೇ ಆ ಎಳೆತನದ ಆಂದನ ಒಂದು ನೆನಪು. ಬೆಳ್ಳಿ ಕರಗಿಹೋಯಿತು. ಇನ್ನು ನನಗುಳಿದಿರುವುದು ಮೋಡ ಮಾತ್ರ"

—ಎನ್ನುತ್ತಾ ಇಂದಿರಾ ವಿಷಾದದಿಂದ ನಕ್ಕಳು.

—0—



# ತ್ರಿವೇಣಿಯವರ ಕೃತಿಗಳು

## ಕಾದಂಬರಿಗಳು

ಹೂವು ಹಣ್ಣು
ಅಪಸ್ವರ
ಸೋತು ಗೆದ್ದವಳು
ಬೆಕ್ಕಿನ ಕಣ್ಣು
ದೂರದ ಬೆಟ್ಟ
ಮೊದಲ ಹೆಜ್ಜೆ
ಕೀಲುಗೊಂಬೆ
ಅಪಜಯ
ಕಂಕಣ
ಮುಚ್ಚಿದ ಬಾಗಿಲು

ಬಾನು ಬೆಳಗಿತು
ಮುಕ್ತಿ
ಹೃದಯಗೀತ
ಅವಳ ಮನೆ
ತಾವರೆಯ ಕೊಳ
ವಸಂತಗಾನ
ಕಾಶೀಯಾತ್ರೆ
ಶರಪಂಜರ
ಹಣ್ಣೆಲೆ ಚಿಗುರಿದಾಗ
ಅವಳ ಮಗಳು

ಬೆಳ್ಳಿಮೋಡ

## ಸಣ್ಣಕತೆಗಳು

ಹೆಂಡತಿಯ ಹೆಸರು
ಎರಡು ಮನಸ್ಸು
ಸಮಸ್ಯೆಯ ಮಗು